ವಿಶ್ವವಾಣಿ

ವಿಶ್ವಾಸವೇ ವಿಶ್ವ

ಕನ್ನಡ ಚಲನಚಿತ್ರ ರಂಗದ ಹಿರಿಯ ನಟಿ ಜಯಮಾಲಾ, ಶ್ರುತಿ ಮತ್ತು ಮಾಳವಿಕಾ ಅವಿನಾಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ದಿ.ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡುವಂತೆ ಮನವಿ ಸಲ್ಲಿಸಿದರು. ಇತ್ತೀಚೆಗೆ ನಿಧನರಾದ ಪಂಚಭಾಷಾ ನಟಿ ಬಿ. ಸರೋಜಾದೇವಿ ಅವರ ಹೆಸರನ್ನು ಅವರು ವಾಸವಿದ್ದ ಮಲ್ಲೇಶ್ವರದ ರಸ್ತೆಗೆ ನಾಮಕರಣ ಮಾಡುವಂತೆಯೂ ಮನವಿ ಮಾಡಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ
ಬೆಂಗಳೂರು ನಗರಾಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ನಗರ ಆಡಳಿತ ನಾಗರಿಕರ ಸಮೀಪಕ್ಕಾಗಿ

ಐದು ನಗರ ಪಾಲಿಕೆಗಳು

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಸೆಪ್ಟೆಂಬರ್ 2, 2025 ರಿಂದ ಹೊಸ ಅಧ್ಯಾಯ ಆರಂಭ

ಬೆಂಗಳೂರು ನಗರದ ನಾಗರಿಕರಿಗೆ ಸಮರ್ಥ ಮತ್ತು ಉತ್ತಮ ಸೇವೆ ನೀಡುವ ಸಲುವಾಗಿ ಐದು ನಗರ ಪಾಲಿಕೆಗಳು ಹಾಗೂ "ಗ್ರೇಟರ್ ಬೆಂಗಳೂರು ಪ್ರಾಧಿಕಾರ" ರಚನೆ.

ನಿಮ್ಮ ಹೊಸ ನಗರ ಪಾಲಿಕೆಗಳ ವಿವರಗಳಿಗೆ ವೆಬ್‌ಸೈಟ್‌ಗೆ ಭೇಟಿ ನೀಡಿ ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ:
https://bbmp.gov.in/KnowYourNewCorporation/index.html

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಐದು ನಗರ ಪಾಲಿಕೆಗಳ ಕಛೇರಿ ವಿಳಾಸ:

ಗ್ರೇಟರ್ ಬೆಂಗಳೂರು ಪ್ರಾಧಿಕಾರ	ಬೆಂಗಳೂರು ಪೂರ್ವ ನಗರ ಪಾಲಿಕೆ	ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಅನೆಕ್ಸ್ - 1 & 2 ಕಟ್ಟಡ (ಪಾಲಿಕೆ ಮುಖ್ಯ ಕಛೇರಿ ಆವರಣ), ನರಸಿಂಹರಾಜ ಚೌಕ, ಹಡ್ಸನ್ ವೃತ್ತ, ಬೆಂಗಳೂರು-560002	ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ (ಮಹದೇವಪುರ ವಲಯ ಆಯುಕ್ತರು ರವರ ಕಛೇರಿ), ಆರ್.ಹೆಚ್.ಬಿ ಕಾಲೋನಿ, ಫೀನಿಕ್ಸ್ ಮಾಲ್ ಎದುರು, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಮಹದೇವಪುರ ಪೋಸ್ಟ್, ಬೆಂಗಳೂರು - 560048.	ಆಯುಕ್ತರು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ (ರಾಜರಾಜೇಶ್ವರಿನಗರ ವಲಯ ಆಯುಕ್ತರು ರವರ ಕಛೇರಿ), 18ನೇ ಅಡ್ಡರಸ್ತೆ, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು - 560098.
ಬೆಂಗಳೂರು ಕೇಂದ್ರ ನಗರ ಪಾಲಿಕೆ	**ಬೆಂಗಳೂರು ದಕ್ಷಿಣ ನಗರ ಪಾಲಿಕೆ**	**ಬೆಂಗಳೂರು ಉತ್ತರ ನಗರ ಪಾಲಿಕೆ**
ಆಯುಕ್ತರು, ಬೆಂಗಳೂರು ಕೇಂದ್ರ ನಗರ ಪಾಲಿಕೆ, 10ನೇ ಮಹಡಿ (ಪೂರ್ವ ವಲಯ ಆಯುಕ್ತರು ರವರ ಕಛೇರಿ), ಬಹುಪಯೋಗಿ - ಪಿ.ಯು.ಕಟ್ಟಡ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001.	ಆಯುಕ್ತರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ (ದಕ್ಷಿಣ ವಲಯ ಆಯುಕ್ತರು ರವರ ಕಛೇರಿ), 9ನೇ ಮುಖ್ಯ ರಸ್ತೆ, 9 ನೇ ಅಡ್ಡ ರಸ್ತೆ, 2 ನೇ ಹಂತ ಜಯನಗರ, ಬೆಂಗಳೂರು - 560011.	ಆಯುಕ್ತರು, ಬೆಂಗಳೂರು ಉತ್ತರ ನಗರ ಪಾಲಿಕೆ (ಯಲಹಂಕ ವಲಯ ಆಯುಕ್ತರು ರವರ ಕಛೇರಿ), ಬ್ಯಾಟರಾಯನಪುರ, ಅಮೃತಹಳ್ಳಿ ಮುಖ್ಯ ರಸ್ತೆ, ಬಳ್ಳಾರಿ ರಸ್ತೆ, ಬೆಂಗಳೂರು - 560092.

ಗ್ರೇಟರ್ ಬೆಂಗಳೂರು - ಸ್ಪಂದಿಸುವ ಬೆಂಗಳೂರು

ವಿದ್ಯಾರ್ಥಿನಿ ಮೇಲೆ ಹಲ್ಲೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಯುವಕರ ಗುಂಪು ನಗರದ ಕಾಲೇಜುವೊಂದರ ವಿದ್ಯಾರ್ಥಿನಿ ಹಲ್ಲೆ ಮೇಲೆ ನಡೆಸಿದೆ. ವಿದ್ಯಾರ್ಥಿನಿ ತ್ರಿಷಾ ಗೌಡ ನೀಡಿದ ದೂರು ಆಧರಿಸಿ ಅಲ್ಬಿನ್, ನವನೀತ್ ಮತ್ತು ಇತರರ ವಿರುದ್ಧ ಸೋಲದೇವನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

AFFIDAVIT

I, PURUSHOTHAM K R, son of Rangswamaiah residing at #887 Sri Ranga Nilaya, Kulume Road, JC extension, Kanakapura, Ramanagar District, Karnataka 562117, 1. I state that my name is entered as PURUSHOTHAM K R in my Aadhaar Card issued by the Unique Identification Authority of India bearing No: 8202 2631 4943. 2. I state that my name is entered as PURUSHOTHAMA in my Passport issued by the Republic of India bearing No: H1283638. 3. I state that my name in my PAN Card bearing No: CWNPP7835H is mentioned as PURUSHOTHAM KR. 4. I submit that the names described in the above records as PURUSHOTHAM KR and PURUSHOTHAMA refer to one and the same person, i.e., myself.

5. I finally declare that my correct name is PURUSHOTHAM K R. The above statements made herein are true and correct to the best of my knowledge and belief.

I, PURUSHOTHAM K R, do hereby verify that the contents of this affidavit are true and correct to the best of my knowledge and belief and nothing material has been concealed therein.

KANTHARAJU S BALL B
Doddamannugudde Dodd, Kasaba (H)
Ramanagara Tq & Dist-562117
Place- KANAKAPURA
Date-02.09.2025

IN THE COURT OF THE THIRD ADDITIONAL DISTRICT JUDGE OF KODAGU AT MADIKERI
RA: 1/2021
Appellant :- Sri M M Abdul Jabbar
-: V/S :-
Respondent:-
Smt Tajunneesa and others
NOTICE TO RESPONDENT NUMBER 4
Sri M M ABDUL KAREEM
70 years, S/o Sri MI Mohammed Ghouse "Rahamath Manzil", Door # G/8. Housing board colony, 3rd cross, Magadi main road Bangaluru.
The appellant has filed this appeal challenging the judgment and decree dated 19.08.2020 passed by the learned Senior Civil Judge Madikeri in OS 8 of 2017.
Take notice that you are required to appear on 22/09/25 at 11.00 AM before this court either personally or through an advocate, failing which the appeal will be proceeded and determined in accordance with law in your absence.
BY ORDER OF THE COURT
CHIEF ADMINISTRATIVE OFFICER
OFFICE OF THE DISTRICT AND SESSIONS JUDGE OF KODAGU, MADIKERI
G. R. Ravishankar B Com, LLB.
Advocate for appellant Madikeri
Madikeri 23.08.2025

ಮನೆ ಖರೀದಿಗೆ ಶೇ.100 ರಷ್ಟು ಸಾಲ ಕೊಡಲು ಒಂದಾದ ಪರ್ವ–ಗೋಲ್ ಸಂಸ್ಥೆಗಳು | ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ

ದುಬೈನಲ್ಲಿ ಮನೆ ಮಾಡುವವರಿಗೊಂದು ಸಿಹಿ ಸುದ್ದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದುಬೈನಲ್ಲಿ ಮನೆ ಖರೀದಿಸುವವರಿಗೆ ಶೇ.100 ರಷ್ಟು ಸಾಲ ಕೊಡಲು ಕನ್ನಡದ ಎರಡು ಕಂಪನಿಗಳು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದೆ. ದುಬೈನಲ್ಲಿ ಕನ್ನಡಿಗರಿಗಾಗಿ ಕನ್ನಡಿ ಗರೇ ಕಟ್ಟಿರುವ ಪರ್ವ ರಿಯಲ್ ಎಸ್ಟೇಟ್ ಕಂಪನಿ ಹಾಗೂ ಬೆಂಗಳೂರಿನ ಗ್ಲೋಬಲ್ ಕಾರ್ಪೋರೇಷನ್ ಈ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿವೆ.

ಪರ್ವ ರಿಯಲ್ ಎಸ್ಟೇಟ್ ಮೂಲಕ ದುಬೈನಲ್ಲಿ ಮನೆ ಖರೀದಿಸಲು ಮುಂದಾಗುವವರಿಗೆ ಸಾಲ ಸೌಲಭ್ಯವನ್ನು ಗೋಲ್ ಕಾರ್ಪೋರೇಷನ್ ಒದಗಿಸುವುದು ಈ ಒಪ್ಪಂದದ ಪ್ರಮುಖ ಅಂಶ. ದುಬೈನಲ್ಲಿ ಯಾವುದೇ ಆಸ್ತಿ ಖರೀದಿಗೆ ಶೇ.100 ರಷ್ಟು ಸಾಲ ಸೌಲಭ್ಯ ಒದಗಿಸುವುದು ಒಪ್ಪಂದದ ಎರಡನೇ ಪ್ರಮುಖಾಂಶ ಎಂದು ಪರ್ವ ರಿಯಲ್ ಎಸ್ಟೇಟ್ ಸಹ ಸಂಸ್ಥಾಪಕ ಶಶಿಧರ್ ನಾಗರಾಜಪ್ಪ ತಿಳಿಸಿದ್ದಾರೆ.

ನಿರ್ಮಾಣ ಹಂತದಲ್ಲಿರುವ ಫ್ಲಾಟ್, ವಿಲ್ಲಾಗಳ ಖರೀದಿಗೆ ಶೇ. 40 ರಷ್ಟು ಹಣವನ್ನು ಮುಂಗಡವಾಗಿ ಕಟ್ಟಬೇಕಾಗುತ್ತದೆ. ಈ ಸಂಪೂರ್ಣ ಮುಂಗಡ ಹಣವನ್ನು ಗೋಲ್ ಕಾರ್ಪೋರೇಷನ್ ಒದಗಿಸಲಿದೆ. ಅಲ್ಲದೇ, ನಿರ್ಮಾಣ ಪೂರ್ಣಗೊಂಡ ಮೇಲೆ ಉಳಿದ ಶೇ. 60 ರಷ್ಟು ಹಣವನ್ನೂ ಸಾಲದ ರೂಪದಲ್ಲಿ ಗೋಲ್ ಕಾರ್ಪೋರೇಷನ್ ಒದಗಿಸಲಿದೆ. ಅಂದರೆ ಆಸ್ತಿಯ ಸಂಪೂರ್ಣ ಮೌಲ್ಯವನ್ನು ಸಾಲದ ರೂಪದಲ್ಲಿಯೇ ದುಬೈನಲ್ಲಿ ಮನೆ ಖರೀದಿಸಬಹುದು. ಇದರೊಂದಿಗೆ ನಿರ್ಮಾಣ ಪೂರ್ಣಗೊಂಡಿರುವ ಮನೆಗಳ ಖರೀದಿಗೆ ಶೇ.100ರಷ್ಟು ಸಾಲವನ್ನೂ ಗೋಲ್ ಕಾರ್ಪೋರೇಷನ್ ಒದಗಿಸಲಿದೆ. ದುಬೈನಲ್ಲಿ ಕನ್ನಡಿಗರಿಗೆ ಇಂತಹ ಸಾಲ ಸೌಲಭ್ಯವನ್ನು ಗೋಲ್ ಕಾರ್ಪೋರೇಷನ್ ಪರ್ವ ರಿಯಲ್ ಎಸ್ಟೇಟ್ ಮೂಲಕ ಮಾತ್ರ ಒದಗಿಸಲಿದೆ ಎಂದೂ ಶಶಿಧರ್ ನಾಗರಾಜಪ್ಪ ವಿವರಿಸಿದ್ದಾರೆ.

ಗೋಲ್ ಕಾರ್ಪೋರೇಷನ್ 15 ವರ್ಷಗಳ ಹಿಂದೆ ಸ್ಥಾಪನೆಯಾಗಿ ಸಕ್ರಿಯವಾಗಿ ಹಣಕಾಸು ಕ್ಷೇತ್ರದಲ್ಲಿ ತೊಡಗಿಸಿಕೊಂಡಿದೆ. ನನಗೆ ಈ ಕ್ಷೇತ್ರದಲ್ಲಿ 20 ವರ್ಷದ ಅನುಭವ ಇದೆ. ಗೋಲ್ ಕಾರ್ಪೋರೇಷನ್ ಭಾರತದ 68 ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಜತೆ ಒಡಂಬಡಿಕೆ ಮಾಡಿಕೊಂಡು ಹಣಕಾಸು ಸೇವೆಯಲ್ಲಿ ತೊಡಗಿದೆ. ಈಗ ಪರ್ವ ಜತೆ ಮಾಡಿಕೊಂಡಿರುವ ಒಪ್ಪಂದ ಸಂಪೂರ್ಣ ಗ್ರಾಹಕ ಸ್ನೇಹಿಯಾಗಿದೆ. ಬ್ಯಾಂಕುಗಳ ಹಣ ಹಾಕಿ, ಗ್ರಾಹಕ ಲಾಭ ಮಾಡಿಕೊಳ್ಳುವ ಯೋಜನೆಯಾಗಿದೆ. ಬ್ಯಾಂಕಿನ ಬಡ್ಡಿಯನ್ನು ದುಬೈನ ಬಾಡಿಗೆ ಆದಾಯ ತುಂಬಿಕೊಡಲಿದೆ. ರಿಯಲ್ ಎಸ್ಟೇಟ್‌ನ ವಾರ್ಷಿಕ ದರ ಏರಿಕೆ ಲಾಭ ಸಂಪೂರ್ಣವಾಗಿ ಹೂಡಿಕೆದಾರರಿಗೆ ದೊರೆಯಲಿದೆ. ಸಾಲ ತುಂಬುವ ಶಕ್ತಿ ತೋರಿಸಿ, ಬ್ಯಾಂಕಿನ ಹಣ ಹಾಕಿ ದುಬೈನಲ್ಲಿ ಆಸ್ತಿ ಮಾಡಬಹುದು ಎಂದು ಗೋಲ್ ಕಾರ್ಪೋರೇಷನ್‌ನ ಸಂಸ್ಥಾಪಕ ಅಧ್ಯಕ್ಷ ಎ.ಆರ್ ನಾಯಕ್ ವಿವರಿಸಿದರು.

ದುಬೈನಲ್ಲಿ ಮನೆ ಖರೀದಿಸುವವರಿಗೆ ಸಾಲ ಕೊಡಲು ಒಪ್ಪಂದ ಮಾಡಿಕೊಂಡ ಪರ್ವ–ಗೋಲ್ ಕಂಪನಿ.

ಬಡ್ಡಿಯ ಪ್ರಮಾಣವೂ ಕಡಿಮೆ

ಭಾರತದಲ್ಲಿ ಮನೆ ಸಾಲದ ಮೇಲಿನ ಬಡ್ಡಿ ಶೇ.7 ರಿಂದ ಶೇ. 9ರವರೆಗೂ ಇದೆ. ದುಬೈನಲ್ಲಿ ಮನೆ ಖರೀದಿಸುವ ಸಾಲಕ್ಕೆ ಗೋಲ್ ಕಾರ್ಪೋರೇಷನ್ ಶೇ. 5 ರಿಂದ ಶೇ. 6 ರಷ್ಟು ಬಡ್ಡಿ ವಿಧಿಸಲಿದೆ. ಭಾರತದಲ್ಲಿ ಮನೆಯ ಬಾಡಿಗೆ ಶೇ.5ರಷ್ಟು ಇದ್ದರೆ, ದುಬೈನಲ್ಲಿ ಶೇ. 8ರಷ್ಟಿದೆ. ಹೀಗಾಗಿ ಜೇಬಿನಿಂದ ಒಂದೂ ಪೈಸೆ ಖರ್ಚು ಮಾಡದೇ ನಮ್ಮ ಕೆಲಸ, ಆದಾಯದ ಗ್ಯಾರಂಟಿ ಮೂಲಕ ದುಬೈನಲ್ಲಿ ಆಸ್ತಿ ಕೊಳ್ಳುವ ಅವಕಾಶವನ್ನು ಪರ್ವ ರಿಯಲ್ ಎಸ್ಟೇಟ್ ಹಾಗೂ ಗೋಲ್ ಕಾರ್ಪೋರೇಷನ್ ಒದಗಿಸಲು ಕೆಲಸ ಆರಂಭಿಸಿವೆ ಎರಡೂ ಕಂಪನಿಗಳು.

ಕನ್ನಡಿಗರಿಗಾಗಿ ಕನ್ನಡಿಗರೇ ಕಟ್ಟಿರುವ ಪರ್ವ ಗ್ರೂಪ್‌ನೊಂದಿಗೆ ಮತ್ತೊಂದು ಕನ್ನಡಿಗರ ಕಂಪನಿ ಗೋಲ್ ಕಾರ್ಪೋರೇಷನ್ ಕೈ ಜೋಡಿಸಿರೋದು ನಮ್ಮ ಶಕ್ತಿ ಹೆಚ್ಚಿಸಿದೆ. ಬೆಂಗಳೂರು ಬೆಲೆಯಲ್ಲೇ ದುಬೈನಲ್ಲಿ ಮನೆ ಕೊಳ್ಳಬಹುದು ಎಂಬ ಘೋಷವಾಕ್ಯದೊಂದಿಗೆ ಹೊರಟಿರುವ ಪರ್ವ ರಿಯಲ್ ಎಸ್ಟೇಟ್ ಜತೆ ಗೋಲ್ ಕಾರ್ಪೋರೇಷನ್ ಸೇರಿಕೊಂಡಿದೆ. ಇದರಿಂದ ಕನ್ನಡಿಗರು ಸ್ವಂತ ದುಡ್ಡಿಲ್ಲದೆಯೂ ದುಬೈನಲ್ಲಿ ಮನೆ ಕೊಳ್ಳಬಹುದು. ಶೇ.100ರಷ್ಟು ಸಾಲದ ಹಣದಲ್ಲೇ ದುಬೈನಲ್ಲಿ ಮನೆ ಮಾಲೀಕರಾಗಬಹುದು.

–ನಿಲೇಶ್, ಸಂಸ್ಥಾಪಕರು, ಪರ್ವ ಗ್ರೂಪ್ಸ್, ದುಬೈ

ವಿಶ್ವ ರೇಬೀಸ್ ದಿನದ ಜಾಗೃತಿ ಅಭಿಯಾನ

ಬೆಂಗಳೂರು: ಸೆಪ್ಟೆಂಬರ್ ತಿಂಗಳಲ್ಲಿ ಹಿಮಾಲಯ ವೆಲ್ನೆಸ್ ಕಂಪನಿಯ ಅನಿಮಲ್ ಹೆಲ್ತ್ ಡಿವಿಷನ್ ವತಿಯಿಂದ ದೇಶಾದ್ಯಂತ ಶಾಲೆಗಳಲ್ಲಿ ಜಾಗೃತಿ ಅಭಿಯಾನಗಳನ್ನು ನಡೆಸುವ ಮೂಲಕ ವಿಶ್ವ ರೇಬೀಸ್ ದಿನವನ್ನು ಆಚರಿಸಲಾಯಿತು.

ನಗರದ ಮಾಕಳಿಯಲ್ಲಿ ಮೂರು ಸರಕಾರಿ ಶಾಲೆಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ರೇಬೀಸ್ ತಡೆಗಟ್ಟುವಿಕೆ ಮತ್ತು ಜವಾಬ್ದಾರಿಯುತ ಸಾಕುಪ್ರಾಣಿಗಳ ಆರೈಕೆಯ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಚಿತ್ರಕಲೆ ಸ್ಪರ್ಧೆ ಮತ್ತು ಜಾಗೃತಿ ಭಾಷಣವನ್ನು ಈ ಚಟುವಟಿಕೆಗಳು ಒಳಗೊಂಡಿದ್ದವು. ಅನಿಮಲ್ ಹೆಲ್ತ್ ಡಿವಿಷನ್ ಭಾರತದ 18 ನಗರಗಳಲ್ಲಿ ಇದೇ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಶಾಲೆಗಳು, ಪಶುವೈದ್ಯರು ಮತ್ತು ಯುವ ಮನಸ್ಸುಗಳನ್ನು ತೊಡಗಿಸಿಕೊಳ್ಳುತ್ತಿದೆ. ಆರೋಗ್ಯಕರ ಭವಿಷ್ಯ ಮತ್ತು ರೇಬೀಸ್–ಮುಕ್ತ ಜಗತ್ತನ್ನು ಸೃಷ್ಟಿಸಲು ಸಾಮೂಹಿಕ ಕ್ರಿಯೆಯ ಮಹತ್ವವನ್ನು ಸಾರುವುದು ಈ ಅಭಿಯಾನದ ಉದ್ದೇಶವಾಗಿದೆ.

ಆರೋಪಿ ಸತ್ಯನಾರಾಯಣ ವರ್ಮಾ ಅರ್ಜಿ ವಜಾ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಗರಣದ ಮೊದಲ ಆರೋಪಿ ಹೈದರಾಬಾದ್‌ನ ಸತ್ಯ ನಾರಾಯಣ ವರ್ಮಾ ಅವರು ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದತಿ ಕೋರಿದ್ದ ಅರ್ಜಿ ಹೈಕೋರ್ಟ್ ವಜಾಗೊಳಿಸಿದೆ.

ಸತ್ಯನಾರಾಯಣ ವರ್ಮಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪ್ರಕಟಿಸಿತು. ಗುರುತರ ಆರೋಪದ ಪ್ರಕರಣಗಳಲ್ಲಿ, ಆರೋಪಿಗಳು ಪೂರ್ಣ ಪ್ರಮಾಣದ ವಿಚಾರಣೆಗೂ ಮುನ್ನವೇ ಹೊಸ ಅಂಶಗಳಿಲ್ಲದ, ಪುನರಾವರ್ತಿತ ಅಂಶಗಳನ್ನೇ ಮುಂದೆ ಮಾಡಿಕೊಂಡು ತಾವು ಸಾಚಾ ಎಂದು ನಿರೂಪಿಸಿಕೊಳ್ಳುವ ಅತ್ಯಾತುರದ ಪ್ರಯತ್ನಗಳಿಗೆ ಸೊಪ್ಪು ಹಾಕಲು ಆಗದು ಎಂಬ ಪೀಠ ಕಟು ಅಭಿಪ್ರಾಯ ವ್ಯಕ್ತಪಡಿಸಿದೆ. ಒಂದು ಅರ್ಜಿಯಲ್ಲಿ ಪರಿಹಾರ ದೊರಕದಿದ್ದರೆ ಬೇರೊಂದು ಅಂಶಗಳನ್ನು ಹುಡುಕಿಕೊಂಡು ಮತ್ತೊಂದು ಹೊಸ ಅರ್ಜಿ ಸಲ್ಲಿಸಿ ರಿಟ್ ವ್ಯಾಪ್ತಿಯ ವಿಶಾಲತೆ ಜಾಲಾಡುವುದು ಸಲ್ಲದ ನಡೆ. ಇಂತಹ ಹೆಜ್ಜೆಗಳಿಂದ ಪ್ರಕರಣದ ವಿಚಾರಣಾ ಗಂಭೀರತೆಗೆ ನಷ್ಟವುಂಟಾಗುತ್ತದೆ ಎಂದು ಪೀಠ ವಿವರಿಸಿದೆ. ಈಗಾಗಲೇ ವಿಚಾರಣಾಧೀನ ಕೋರ್ಟ್‌ಗೆ ಎಸ್‌ಐಟಿ ಆರೋಪ ಪಟ್ಟಿ ಸಲ್ಲಿಸಿದೆ.

ಕನ್ನಡ ಸಂಘ ಬಹ್ರೈನ್‌ಗೆ ನೂತನ ಸಾರಥ್ಯ

ಬೆಂಗಳೂರು/ ಬಹ್ರೈನ್: ಕನ್ನಡ ಸಂಘ ಬಹ್ರೈನ್‌ನ 2025–26ರ ನೂತನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಅಜಿತ್ ಬಂಗೇರ ಚುಕ್ಕಾಣಿ ಹಿಡಿದಿದ್ದಾರೆ. ಬಹ್ರೈನ್‌ನ ಪ್ರತಿಷ್ಠಿತ ಬ್ಯಾಂಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಂಗೇರ ಅವರು ಈ ಮೊದಲು ಗುರು ಸೇವಾ ಸಮಿತಿ, ಬಹ್ರೈನ್ ಬಿಲ್ಲವಾಸ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ನೂತನ ಆಡಳಿತ ಮಂಡಳಿಯು ಇದೇ ಸೆಪ್ಟೆಂಬರ್ 5ರಂದು ನಡೆಯಲಿರುವ ಅದ್ದೂರಿ ಸಮಾರಂಭದಲ್ಲಿ ವಿದ್ಯುಕ್ತವಾಗಿ ಪದಗ್ರಹಣ ಮಾಡಲಿದ್ದು, ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಹ್ರೈನ್ ನ ಮಾಜಿ ಸಂಸದ ಯುಸುಫ್ ಹುಸೈನ್ ಅಲ್ ಹರ್ಮಿ, ಗೌರವಾನ್ವಿತ ಅತಿಥಿಗಳಾಗಿ ಕರ್ನಾಟಕ ವಿಧಾನ ಪರಿಷತ್ ಸಭಾಧ್ಯಕ್ಷ ಬಸವರಾಜ್ ಹೊರಟ್ಟಿ, ಕರ್ನಾಟಕ ಸರಕಾರದ ಸಚಿವರಾದ ದಿನೇಶ್ ಗುಂಡೂರಾವ್, ರಹೀಂ ಖಾನ್ ಮತ್ತು ಎನ್‌ಆರ್‌ಐ ಫೋರಮ್‌ನ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ ಪಾಲ್ಗೊಳ್ಳಲಿದ್ದಾರೆ. ಜಾದೂಗಾರ ಕುದ್ರೋಳಿ ಗಣೇಶ್, ಚಿತ್ರ ಕಲಾವಿದ ದೇವಿಕಿರಣ್ ಕೂಡ ಭಾಗವಹಿಸಲಿದ್ದಾರೆ.

ಕನ್ನಡ ಸಂಘ ಬಹ್ರೈನ್‌ನ 2025–26 ರ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು.

ಉಳಿದ ಪದಾಧಿಕಾರಿಗಳು

ನಿತಿನ್ ಶೆಟ್ಟಿ – ಉಪಾಧ್ಯಕ್ಷರು, ರಾಮಪ್ರಸಾದ್ ಅಮ್ಮೇನಡ್ಕ – ಪ್ರಧಾನ ಕಾರ್ಯದರ್ಶಿ, ಹರಿನಾಥ ಸುವರ್ಣ– ಉಪ ಕಾರ್ಯದರ್ಶಿ, ಈಶ್ವರ ಅಂಚನ್ – ಖಜಾಂಚಿ,ಪುಲಿಕೇಶಿ ಗದಗ ಶರಣಪ್ಪ – ಉಪ ಖಜಾಂಚಿ, ಹರಿಣಿ ಉತ್ತರ್ಷ್ ಶೆಟ್ಟಿ – ಸಾಂಸ್ಕೃತಿಕ ಕಾರ್ಯದರ್ಶಿ, ಹರೀಶ ಗೌಡ – ಉಪ ಸಾಂಸ್ಕೃತಿಕ ಕಾರ್ಯದರ್ಶಿ,ನಿತೇಶ್ ಶೆಟ್ಟಿ – ಕ್ರೀಡಾ ಕಾರ್ಯದರ್ಶಿ,ಪುರುಷೋತ್ತಮ ಜೋಗಿ, ಲೋಕೇಶ್ ಸಮಯ್, ಹರಿಶ್ಚಂದ್ರ ಗೌಡ – ಸಮಿತಿ ಸದಸ್ಯರು,ಪ್ರವೀಣ್ ಶೆಟ್ಟಿ ಕಿನ್ನಿಗೋಳಿ – ಆಂತರಿಕ ಲೆಕ್ಕ ಪರಿಶೋಧಕರು.

ಉದ್ಯಮಿ ಅಪಹರಣ: 6 ಜನರ ಬಂಧನ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರನ್ನು ಅಪಹರಿಸಿ, ಬೆದರಿಕೆ ಹಾಕಿ ಹಣ ಸುಲಿಗೆ ಮಾಡಿದ್ದ ಆರೋಪದ ಹಿನ್ನೆಲೆಯಲ್ಲಿ ರೌಡಿಶೀಟರ್‌ಗಳ ಸಹಿತ ಆರು ಜನ ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ರಾಜೇಶ್ ಅಲಿಯಾಸ್ ಅಪ್ಪಿ, ಸೀನಾ ಅಲಿಯಾಸ್ ಬಾಂಬೆ ಸೀನಾ, ಲೋಕೇಶ್ ಕುಮಾರ್, ನವೀನ್ ಕುಮಾರ್, ಸೋಮಯ್ಯ ಮತ್ತು ಯುಕೇಶ್ ಬಂಧಿತ ಆರೋಪಿಗಳು.

ಕನ್ನಡ ಮಠದ ದೇಗುಲಗಳಿಗೆ ತಸ್ತೀಕ್ ಅರ್ಜಿ: ನೋಟಿಸ್ ಜಾರಿ

ಬೆಂಗಳೂರು: ಕೊಡಗಿನ ಕನ್ನಡ ಮಠದ ವ್ಯಾಪ್ತಿಗೆ ಒಳಪಟ್ಟ ದೇವಸ್ಥಾನಗಳ ದೈನಂದಿನ ಕಾರ್ಯನಿರ್ವಹಣೆಗೆ ತಸ್ತೀಕ್ ಕೋರಿಕೆ ವಿಚಾರದಲ್ಲಿ ತನ್ನ ಆದೇಶ ಪಾಲಿಸುವಲ್ಲಿ ವಿಫಲವಾಗಿರುವ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸಹಿತ ನಾಲ್ವರು ಅಧಿಕಾರಿಗಳಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ತಸ್ತೀಕ್ ವಿಚಾರವಾಗಿ ಹೈಕೋರ್ಟ್ ಹೊರಡಿಸಿದ್ದ ಆದೇಶ ಪಾಲಿಸುವಲ್ಲಿ ನಿರ್ಲಕ್ಷ್ಯ ತೋರಲಾಗಿದೆ ಎಂದು ಆರೋಪಿಸಿ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಹೋಬಳಿಯ ಬೆಟ್ಟಗೇರಿ ಪೋಸ್ಟ್ ವ್ಯಾಪ್ತಿಯಲ್ಲಿರುವ ಕನ್ನಡ ಮಠದ ಪೀಠಾಧಿಪತಿ ಚನ್ನಬಸವ ದೇಶೀಕೇಂದ್ರ ಸ್ವಾಮೀಜಿ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ್ದಾರೆ. ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿಎಂ ಜೋಶಿ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕೆ.ಎ.ಮಹೇಶ್ ಅವರ ವಾದ ಆಲಿಸಿದ ಪೀಠವು ಪ್ರತಿವಾದಿಗಳಾದ ವಿ.ರಶ್ಮಿ, ಮುಜರಾಯಿ ಇಲಾಖೆ ಆಯುಕ್ತ ಎಂ.ವಿ.ವೆಂಕಟೇಶ್, ಕೊಡಗಿನ ಜಿಲ್ಲಾಧಿಕಾರಿ ವೆಂಕಟರಾಜ ಮತ್ತು ವಿರಾಜಪೇಟೆ ತಾಲೂಕು ತಹಸೀಲ್ದಾರ್ ಎಚ್.ಎನ್. ರಾಮಚಂದ್ರ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ನ. 5ಕ್ಕೆ ಮುಂದೂಡಿದೆ. ದೈನಂದಿನ ಪೂಜಾ ಕೈಂಕರ್ಯಗಳ ನಿರ್ವಹಣೆಗೆ ತಸ್ತೀಕ್ ಮೊತ್ತ ನೀಡುವ ಬಗ್ಗೆ ನಿರ್ದೇಶನ ನೀಡುವಂತೆ ಕೋರಿ ಚನ್ನಬಸವ ದೇಶೀಕೇಂದ್ರ ಸ್ವಾಮೀಜಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಎಂಡಿಎಂ ಸಹಿತ ನೈಜೀರಿಯಾ ಪ್ರಜೆಯ ಸೆರೆ | ಜೈಲು ಸೇರಿ ಬಿಡುಗಡೆಯಾಗಿ ಬಂದು ಕೃತ್ಯ

2.30 ಕೋಟಿ ರು.ಮಾದಕ ವಸ್ತು ಜಪ್ತಿ

ಬೆಂಗಳೂರು: ಬ್ಯುಸಿನೆಸ್ ವೀಸಾದಡಿ ಭಾರತಕ್ಕೆ ಬಂದು ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದ ನೈಜೀ ರಿಯನ್ ಪ್ರಜೆಯನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕೋಜಿ ಹೇಡಾಹಾ ಬಂಧಿತ ಆರೋಪಿ. ಈತನಿಂದ 2.30 ಕೋಟಿ ರು. ಮೌಲ್ಯದ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ. ಬಾಗಲೂರಿನ ಸಂತೆ ಸರ್ಕಲ್–ಸಿಎಂಆರ್ ಕಾಲೇಜ್ ನಡುವಿನ ಮಾರ್ಗದಲ್ಲಿ ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದಾಗ ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

2011ರಲ್ಲಿ ಬ್ಯುಸಿನೆಸ್ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ, ನಂತರ ಅಗತ್ಯ ದಾಖಲೆಗಳು ಅಂತ್ಯವಾದ ಬಳಿಕವೂ ಅಕ್ರಮವಾಗಿ ಭಾರತದಲ್ಲಿ ವಾಸವಿದ್ದ. ಅಪರಿಚಿತ ವ್ಯಕ್ತಿಯೋರ್ವನಿಂದ ಎಂಡಿಎಂಎ ಖರೀದಿಸುತ್ತಿದ್ದ ಈತ, ನಗರದ ಹೊರವಲಯದಲ್ಲಿರುವ ಕಾಲೇಜುಗಳ ಸಮೀಪ ಮಾರಾಟ ಮಾಡುತಿದ್ದ. ಈ ಹಿಂದೆಯೂ ಮಾದಕ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದಾಗ ಸಿಸಿಬಿ ಪೊಲೀಸರು ಬಂಧಿಸಿದ್ದರು. ಆದರೆ ಜೈಲಿನಿದ ಹೊರಬಂದ ಬಳಿಕ ಮತ್ತದೇ ಕೃತ್ಯ ಮುಂದುವರೆಸಿದ್ದಾನೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ನಿಯಮ ಉಲ್ಲಂಘಿಸಿ, ವಿದೇಶಿ ಪ್ರಜೆಗಳಿಗೆ ಮನೆ ಬಾಡಿಗೆ

ಅಕ್ರಮವಾಗಿ ವಿದೇಶಿ ಪ್ರಜೆಗಳು ನೆಲೆಸಲು ಮನೆ ಬಾಡಿಗೆಗೆ ನೀಡಿದ್ದ ಮಾಲೀಕನ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಗಸ್ಟ್ 26ರಂದು ಪರಪ್ಪನ ಅಗ್ರಹಾರ ವ್ಯಾಪ್ತಿಯಲ್ಲಿ ಸಿಸಿಬಿಯ ಮಹಿಳಾ ಮತ್ತು ಮಕ್ಕಳ ಸಂರಕ್ಷಣಾ ದಳದ ಅಧಿಕಾರಿಗಳು ದಾಳಿ ನಡೆಸಿ ಅಕ್ರಮವಾಗಿ ವಾಸವಿದ್ದ ಇಬ್ಬರು ಮಹಿಳೆಯರನ್ನು ವಶಕ್ಕೆ ಪಡೆದಿದ್ದಾರೆ. ಈ ವೇಳೆ ವಿದೇಶಿ ಪ್ರಜೆಗಳು ಸ್ಥಳಿಯ ಠಾಣೆಗೆ ಸಲ್ಲಿಸಬೇಕಿರುವ ಸಿ–ಫಾರ್ಮ್ ಮತ್ತಿತರ ದಾಖಲೆಗಳನ್ನು ಸಲ್ಲಿಸದಿರುವುದು ಕಂಡುಬಂದಿದ್ದು ಮನೆ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮನೆಯ ಮಾಲೀಕರು ತಲೆಮರೆಸಿಕೊಂಡಿದ್ದು, ಪತ್ತೆಗೆ ಶೋಧ ಕಾರ್ಯ ಮುಂದುವರೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ಆಫ್ರಿಕನ್ ಪ್ರಜೆಗಳಿಬ್ಬರ ಸೆರೆ

ಮಾದಕ ಪದಾರ್ಥ ಮಾರಾಟದಲ್ಲಿ ತೊಡಗಿದ್ದ ಇಬ್ಬರು ಆರೋಪಿಗಳನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಇತ್ತೀಚಿಗೆ ಬಂಧಿಸಿದ್ದರು. ಆಫ್ರಿಕಾ ಮೂಲದ ಜೋಯಲ್ ಕಾಬೊಂಗ್ ಹಾಗೂ ಆತನ ಸ್ನೇಹಿತೆ ಜೋಯ್ ಸಂಡೆ ಎಂಬಾಕೆಯನ್ನು ಬಂಧಿಸಲಾಗಿದ್ದು, 5 ಕೋಟಿ ರು. ಮೌಲ್ಯದ 2 ಕೆಜಿ 150 ಗ್ರಾಂ ತೂಕದ ಎಂಡಿಎಂಎ ಕ್ರಿಸ್ಟಲ್ಸ್ ವಶಕ್ಕೆ ಪಡೆಯಲಾಗಿದೆ. ಆರೋಪಿ ಜೋಯಲ್ ಕಾಬೊಂಗ್ 12 ವರ್ಷಗಳ ಹಿಂದೆ ಸ್ಟೂಡೆಂಟ್ ವೀಸಾದಡಿ ಭಾರತಕ್ಕೆ ಬಂದಿದ್ದ. ಜೋಯ್ ಸಂಡೆ ಸಹ ಸ್ಟೂಡೆಂಟ್ ವೀಸಾ ಪಡೆದು 3 ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದಳು.

Tracxn

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್
CIN: L72200KA2012PLC065294
ನೋಂ. ಕಚೇರಿ: ನಂ. ಎಲ್–248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6,
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ–560102. ದೂ: +91 90360 90116.
ಇ–ಮೇಲ್: investor.relations@tracxn.com, ವೆಬ್‌ಸೈಟ್ : www.tracxn.com

ಕಂಪನಿಯ 13ನೇ ವಾರ್ಷಿಕ ಮಹಾಸಭೆ ("ಎಜಿಎಂ") ಗೆ ಸಂಬಂಧಿಸಿದಂತೆ ಮಾಹಿತಿ

1. ಈ ಮೂಲಕ ಸದಸ್ಯರಿಗೆ ತಿಳಿಸುವುದೇನೆಂದರೆ, ಕಂಪನಿಯ 13ನೇ ಎಜಿಎಂ ಸೋಮವಾರ, **ಸೆಪ್ಟಂಬರ್ 29, 2025ರ ಸಂಜೆ 5.00 ಗಂಟೆಗೆ (ಭಾ.ಕಾ) ವಿಡಿಯೋ ಕಾನ್ಫರೆನ್ಸಿಂಗ್ ("ವಿಸಿ")/ಇತರೆ ಅಡಿಯೊ ವಿಷುಯಲ್ ಮೀನ್ಸ್ ("ಒಎವಿಎಂ")** ಮೂಲಕ ನಡೆಯಲಿದ್ದು, ಕಂಪನಿ ಕಾಯಿದೆ 2013 ("ಕಾಯಿದೆ") ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ಅದರ ನಿಯಮಗಳು ಹಾಗು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಮತ್ತು ಸೆಬಿ (ಸೂಕ್ತ ಸುತ್ತೋಲೆಗಳು ಎಂದು ಹೇಳಲಾಗುವುದು) ಸೆಕ್ಯುರಿಟೀಸ್ ಆಂಡ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಆಂಡ್ ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣ 2015, (ಲಿಸ್ಟಿಂಗ್ ರೆಗ್ಯುಲೇಷನ್ಸ್) ಇದರ ಸುತ್ತೋಲೆಗಳ ಅನುಸಾರ ಹೊರಡಿಸಿದ ವ್ಯವಹಾರಗಳ ಬಗ್ಗೆ ಅನ್ವಯವಾಗುವ ಎಲ್ಲ ಸುತ್ತೋಲೆಗಳನ್ನು ಓದಿಕೊಂಡಂತೆ 13 ನೇ ಎಜಿಎಂ ನ ಸೂಚನೆಯಂತೆ ಇದನ್ನು ಸದಸ್ಯರಿಗೆ ಪ್ರತ್ಯೇಕವಾಗಿ ಇ–ಮೇಲ್ ಮೂಲಕ ಕಳುಹಿಸಲಾಗುತ್ತದೆ. ಸಭೆಗೆ ವಿಸಿ/ಒಎವಿಎಂ ಸೌಲಭ್ಯದ ಮೂಲಕ ಹಾಜರಾಗುವ ಸದಸ್ಯರನ್ನು ಸೆಕ್ಷನ್ 103 ರ ಕಾಯಿದೆಯಂತೆ ಕೋರಮ್ ಉದ್ದೇಶಕ್ಕಾಗಿ ಲೆಕ್ಕಹಾಕಲಾಗುತ್ತದೆ.

2. ಸೂಕ್ತ ಸುತ್ತೋಲೆಗಳಿಗೆ ಸಂಬಂಧಿಸಿದಂತೆ, ಎಜಿಎಂ ಸೂಚನೆ ಮತ್ತು ಕಂಪನಿಯ ಆರ್ಥಿಕ ವರ್ಷ 2024–25ರ ವಾರ್ಷಿಕ ವರದಿಯನ್ನು ಕಂಪನಿ / ಡೆಪಾಸಿಟರೀಸ್/ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ ಬಳಿ ತಮ್ಮ ಇ–ಮೇಲ್ ಐಡಿ ಗಳನ್ನು 29ನೇ ಆಗಸ್ಟ್, 2025ರ ಶುಕ್ರವಾರದವರೆಗೆ ನೋಂದಾಯಿಸಿರುವ ಎಲ್ಲಾ ಸದಸ್ಯರಿಗೆ ವಿದ್ಯುನ್ಮಾನವಾಗಿ ಕಳುಹಿಸಿಕೊಡಲಾಗುವುದು. ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.tracxn.com ಮತ್ತು ಕ್ರಮವಾಗಿ ಕಂಪನಿಯ ಈಕ್ವಿಟಿ ಷೇರುಗಳು ನೋಂದಾಯಿತವಾದ ಸ್ಟಾಕ್ ಎಕ್ಸ್‌ಚೇಂಜ್ ಅಂದರೆ, ಬಿಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ (ಎನ್‌ಎಸ್‌ಇ) ವೆಬ್‌ಸೈಟ್ www.nseindia.com ಹಾಗೂ ಕಂಪನಿಯಿಂದ ನೇಮಿತವಾದ ಇ–ವೋಟಿಂಗ್ ಮತ್ತು ವಿಸಿ/ಒಎವಿಎಂ ಸೌಲಭ್ಯವನ್ನು ಎಜಿಎಂ ಗೆ ಒದಗಿಸುವ ಏಜೆನ್ಸಿ ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ ("ಎನ್‌ಎಸ್‌ಡಿಎಲ್") www.evoting.nsdl.com ನಲ್ಲಿ ಲಭ್ಯವಿದೆ.
ಮುಂದುವರಿದು, ಸೆಬಿ ಲಿಸ್ಟಿಂಗ್ ರೆಗ್ಯುಲೇಷನ್ಸ್ ನಿಯಂತ್ರಣ 36(1)(ಬಿ) ಅನುಗುಣವಾಗಿ, ವಾರ್ಷಿಕ ವರದಿಯನ್ನು ಪಡೆಯಲು ನಿಖರವಾದ ಮಾರ್ಗ/ಕ್ಯುಆರ್ ಕೋಡ್ ಸೇರಿದಂತೆ ವೆಬ್–ಲಿಂಕ್ ಅನ್ನು ಒದಗಿಸುವ ಪತ್ರವನ್ನು ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ ಕಳುಹಿಸಲಾಗುತ್ತದೆ. ಕಂಪನಿಯ ಸೂಚನೆ ಮತ್ತು ವಾರ್ಷಿಕ ವರದಿಯ ಭೌತಿಕ ಪ್ರತಿಯನ್ನು ಅಗತ್ಯವಿರುವ ಯಾವುದೇ ಸದಸ್ಯರು ಕಂಪನಿಯ compliance-officer@tracxn.com ವಿಳಾಸಕ್ಕೆ ಬರೆಯಬಹುದು.

3. **ಇ–ಮೇಲ್ ವಿಳಾಸ ಮತ್ತು ಬ್ಯಾಂಕ್ ವಿವರಗಳನ್ನು ನೋಂದಾಯಿಸಲು/ ಅಪ್‌ಡೇಟ್ ಮಾಡುವ ವಿಧಾನ**
ಕಂಪನಿಯ ಎಲ್ಲಾ ಷೇರುಗಳು ಡಿಮೆಟೀರಿಯಲೈಸ್ಡ್ ರೂಪದಲ್ಲಿರಬೇಕು. ಇ–ಮತದಾನ ಒದಗಿಸುವ ಪಟ್ಟಿ ಮಾಡಲ್ಪಟ್ಟ ಕಂಪನಿಗಳು ಸೆಬಿ ಸುತ್ತೋಲೆ ದಿನಾಂಕ ಡಿಸೆಂಬರ್ 9, 2020 ರಂತೆ ವ್ಯಕ್ತಿಗತ ಷೇರುದಾರರು ಡೆಪಾಸಿಟರಿಗಳು ಮತ್ತು ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರವರು ನಿರ್ವಹಣೆ ಮಾಡುವ ತಮ್ಮ ಡಿಮ್ಯಾಟ್ ಖಾತೆಯ ಮೂಲಕ ಮತ ಚಲಾಯಿಸಬಹುದು. ಇ–ಮತದಾನ ಸೌಲಭ್ಯ ಬಳಸಿಕೊಳ್ಳಲು ಷೇರುದಾರರು ತಮ್ಮ ಡಿಮ್ಯಾಟ್ ಖಾತೆಯಲ್ಲಿ ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್ ಐಡಿಯನ್ನು ಅಪ್‌ಡೇಟ್ ಮಾಡುವುದು ಅಗತ್ಯವಾಗಿದೆ ಮತ್ತು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್‌ರವರು ನೀಡುವ ಸಲಹೆ ಆಧಾರದಲ್ಲಿ ತಮ್ಮ ಬ್ಯಾಂಕ್ ವಿವರಗಳನ್ನು ನೋಂದಾಯಿಸಬೇಕು/ಅಪ್‌ಡೇಟ್ ಮಾಡಬೇಕು.

4. **ಇ–ವೋಟಿಂಗ್ ಮೂಲಕ ಮತದಾನ ಮತ್ತು ಎಜಿಎಂಗೆ ಹಾಜರಾಗುವ ವಿಧಾನ**
1. ಸದಸ್ಯರಿಗೆ ವ್ಯವಹಾರದ ಮೇಲೆ ತಮ್ಮ ಮತವನ್ನು ಎಜಿಎಂ ಸೂಚನೆಯಲ್ಲಿ ತಿಳಿಸಿದಂತೆ ರಿಮೋಟ್ ಇ–ವೋಟಿಂಗ್ ಮತ್ತು ಎಜಿಎಂ ಸಂದರ್ಭದಲ್ಲಿ ಇ–ವೋಟಿಂಗ್ ಮೂಲಕ ಮತ ಚಲಾಯಿಸಲು ಅವಕಾಶವಿದೆ.
2. ಸದಸ್ಯರಿಗೆ ಇ–ವೋಟಿಂಗ್ ಮೂಲಕ ಮತ ಚಲಾಯಿಸಲು ಲಾಗಿನ್ ವಿವರಗಳನ್ನು ಮೇಲೆ ತಿಳಿಸಿದ ಮಾದರಿಯಲ್ಲಿ ನೋಂದಾಯಿತವಾದ ನಂತರ ಮತದಾನ ಮಾಡಲು ಇ–ಮೇಲ್ ಮೂಲಕ ತಮ್ಮ ಹೆಸರನ್ನು ಯಶಸ್ವಿಯಾಗಿ ನೊಂದಾಯಿಸಿದ ನಂತರ ಲಭ್ಯವಿರುವಂತೆ ನೋಡಿಕೊಳ್ಳಲಾಗುವುದು.
3. ಅದೇ ಲಾಗಿನ್ ವಿವರಗಳನ್ನು ಬಳಸಿಕೊಂಡು ವಿಸಿ/ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಬಹುದು.
4. ಇ–ವೋಟಿಂಗ್ ವಿಧಾನದ ಮೂಲಕ ಮತ ಚಲಾಯಿಸುವ ವಿವರಗಳನ್ನು ಎಜಿಎಂ ಸೂಚನೆಯಲ್ಲಿ ನೀಡಲಾಗಿದೆ. ವಿವರಗಳು ಕಂಪನಿಯ ವೆಬ್‌ಸೈಟ್ www.tracxn.com ಮತ್ತು ಎನ್‌ಎಸ್‌ಡಿಎಲ್ ವೆಬ್‌ಸೈಟ್ www.evoting.nsdl.com ನಲ್ಲಿ ಲಭ್ಯವಿದೆ.
5. ಸದಸ್ಯರು ತಮ್ಮ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು, ಅಥವಾ ತಮ್ಮ ಇ–ಮೇಲ್ ಐಡಿಯನ್ನು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ನೋಂದಾಯಿಸಿಲ್ಲವಾದರೆ ಅಥವಾ ವಿದ್ಯುನ್ಮಾನ ಮಾದರಿಯಲ್ಲಿ ಸೂಚನೆಯನ್ನು ಕಳುಹಿಸಿದ ನಂತರ, ಅಂದರೆ ಕಟ್ ಆಫ್ ದಿನಾಂಕ, ಸೋಮವಾರ 22ನೇ ಸೆಪ್ಟಂಬರ್ 2025ರ ನಂತರ ಕಂಪನಿಯ ಷೇರುಗಳನ್ನು ಹೊಂದಿದ್ದರೆ, ಅಂಥವರು ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಾಗಿ ವಿನಂತಿಯನ್ನು rnt.helpdesk@linkintime.co.in ಅಥವಾ evoting@nsdli.com ಗೆ ಕಳುಹಿಸಬಹುದು. ಆದಾಗ್ಯೂ ಸದಸ್ಯನೊಬ್ಬ ಈಗಾಗಲೇ ನೊಂದಾಯಿತವಾಗಿದ್ದು, ಎಜಿಎಂ ಸಂದರ್ಭದಲ್ಲಿ ರಿಮೋಟ್ ಇ–ವೋಟಿಂಗ್ ಮತ್ತು ಇ–ವೋಟಿಂಗ್‌ಗಾಗಿ ಹಾಲಿ ಇರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಳಸಿ ಮತ ಚಲಾಯಿಸಬಹುದು.

5. **ಸದಸ್ಯರು ಎಜಿಎಂ ಸೂಚನೆಯಲ್ಲಿ ನೀಡಲಾದ ಎಲ್ಲಾ ಮಾಹಿತಿಗಳನ್ನು ಮತ್ತು ನಿರ್ದಿಷ್ಟವಾಗಿ ಎಜಿಎಂಗೆ ಹಾಜರಾಗುವುದು ಇ–ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಮತಚಲಾಯಿಸಲು ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳಲು ಕೋರಲಾಗಿದೆ.**
ಎಂಸಿಎ ಮತ್ತು ಸೆಬಿ ಹೊರಡಿಸಿದ ಸುತ್ತೋಲೆಗಳಿಗೆ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಈ ಸೂಚನೆಯನ್ನು ಕಂಪನಿಯ ಎಲ್ಲಾ ಷೇರುದಾರರ ಮಾಹಿತಿ ಮತ್ತು ಪ್ರಯೋಜನಕ್ಕಾಗಿ ನೀಡಲಾಗುತ್ತಿದೆ.

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/–
ಮೇಘ ತಿಬ್ರೇವಾಲ್
ಕಂಪನಿ ಸೆಕ್ರೆಟರಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟಂಬರ್ 03, 2025

IN THE COURT OF HONORABLE JUDGE SHRI J.I.Patel SIR COURT NO. 11
PUBLIC SUMMONS
IN THE COURT OF COMMERCIAL COURT
AT CITY CIVIL COURT OF AHMEDABAD
COMMERCIAL CIVIL SUIT NO. 231/2023 Exh. 15

Plaintiff :- Odigma Consultancy Solutions Private Limited
Bering CIN U72900KA2011PTC057298
Having its office at - Unit no. 909, Shitiratna, Off CG Road, Ellisbridge, Ahmedabad Gujarat-380006 Through its Authorized representative / Signatory Pankil Jitendrakumar Choksi
V/s.
Defendant:- 1. BLOCK-TAG IT Services Private Limited
Bearing CIN U72900KA2017PTC107809
Having its registered office at
Unit no.16, The Cross Asheervad Colony, Horamavu Kalyan Nagar Post, Bengaluru, Karnataka - 560043
2. Kishore Kumar Ramegowda Director
Block - Tag it Services Pvt. Ltd
Having its registered office at Unit no.16, The Cross Asheervad Colony, Haramavu, Kalyan Nagar Post, Bengaluru, Karnataka 560043
3. Naveen jayarama Reddy Director
Block - Tag it Services Pvt. Ltd
Having its registered office at Unit no.16, The Cross Asheervad Colony, Haramavu, Kalyan Nagar Post, Bengaluru, Karnataka 560043
Suit Valued at Rs. 3,66,000-00

Whereas you the defendants is/are hereby informed that the summons issued against you by this court through bailiff and/or Register post.ad has returned unserved subsequently, and as your current whereabouts are unknown, hence in the consequence court ordered this summons is published.

Whereas Plaintiff above named has instituted a suit relating to a commercial dispute against you and you are hereby summoned to file a written statement within 30 days of the service of the present summons and in case you fail to file the written statement within the said period of 30 days, you shall be allowed to file the written statement on such other days, as may be specified by the court, for reasons to be recorded in writing and on payment of such costs as the court deems fit, but which shall not be later than 120 days from the date of services of summons. On expiry of one hundred and twenty days from the date of services of summons you shall forfeit the right to file the written statement and the court shall not allow the written statement to be taken on record.

You are required to appear in this Court in person, or by a pleader duly instructed, and able to answer all material questions relating to suit, or who shall be accompanied by some person able to answer all such question, on the **30 day of September of 2025** at 11-00 O'Clock in the fore noon, to answer the claim lodged by the applicant seeking interim injunction as prayed and further you are hereby to produce on the said day all documents in your possession or power upon which you base your defense or claim for set-off or counter-claim, and where you rely on any other document whether in your possession or power or not, as evidence in support or you defense or claim for set-off, or counter-claim you shall enter such documents in list to be annexed to the written statement.

Take notice that, in default of your appearance on the day before mentioned the suit will be heard and determined in your absence.
Witness Shri
Ahmadabad aforesaid,
Plaintiff's advocate - Janak Rajpurohit
GIVEN under my hand and the seal of the Court 7th day August of 2025.

C.M.Mahida Prepared by Assistant
Kartik B. Khambhoja Compared by H. O. D.
Court Stamp
H. S. Desai Registrar, Civil Court, Bhadra, Ahmedabad.

ಆಕ್ಸಿಸ್‌ಕೇಡ್ಸ್ ಟೆಕ್ನಾಲಜೀಸ್ ಲಿಮಿಟೆಡ್
ನೋಂದಾಯಿತ ಕಛೇರಿ: ಬ್ಲಾಕ್ ಸಿ, 2ನೇ ಮಹಡಿ, ಕಿರ್ಲೋಸ್ಕರ್ ಬಿಸಿನೆಸ್ ಪಾರ್ಕ್, ಬೆಂಗಳೂರು–560 024, ಕರ್ನಾಟಕ, ಭಾರತ
CIN: L72200KA1990PLC084435 Tel: +91 80 4193 9000 Fax: +91 80 4193 9099
ಇಮೇಲ್: investor.relations@axiscades.in, ವೆಬ್‌ಸೈಟ್ Website: https://axiscades.com/

35ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಇ–ಮತದಾನದ ಮಾಹಿತಿಯ ಸೂಚನೆ

ಕಂಪನಿಯ ಮೂವತ್ತೈದನೇ (35ನೇ) ವಾರ್ಷಿಕ ಸಾಮಾನ್ಯ ಸಭೆ ("ಎಜಿಎಂ") ಅನ್ನು ಸೆಪ್ಟೆಂಬರ್ 24, 2025 ಬುಧವಾರ 11:30 ಎ.ಎಂ. (ಐಎಸ್ಟಿ) ವಿಡಿಯೋ ಕಾನ್ಫರೆನ್ಸ್ ("ವಿಸಿ") / ಇತರ ಆಡಿಯೋ ವಿಷುಯಲ್ ಮೀನ್ಸ್ ("ಒಎವಿಎಂ") ಸೌಲಭ್ಯ ಮೂಲಕ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ, ಎಜಿಎಂ ಪ್ರಕಟಣೆಯಲ್ಲಿ ಸೂಚಿಸಿದಂತೆ ವ್ಯವಹಾರವನ್ನು ನಡೆಸಲು ಸದಸ್ಯರು ಎಜಿಎಂನ ನೋಟಿಸ್‌ನಲ್ಲಿ ಸೂಚಿಸಿರುವಂತೆ ವ್ಯವಹಾರ ನಡೆಸಲು ಮಾತ್ರ ವಿಸಿ / ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಸಾಧ್ಯವಾಗುತ್ತದೆ.

ಕಂಪನಿಯು ಎಜಿಎಂ ಮತ್ತು ವಾರ್ಷಿಕ ವರದಿಯನ್ನು ಸದಸ್ಯರುಗಳಿಗೆ ಇ–ಮೇಲ್ ಮೂಲಕ ಸೆಪ್ಟಂಬರ್ 02, 2025 ರಂದು ಕಳುಹಿಸಿದೆ, ಅವರ ಇ–ಮೇಲ್ ವಿಳಾಸಗಳನ್ನು ಕಂಪನಿ / ಆರ್‌ಟಿಎ / ಡಿಪಾಸಿಟರಿ ಭಾಗವಹಿಸುವವರೊಂದಿಗೆ ನೋಂದಾಯಿಸಲಾಗಿದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ಹೊರಡಿಸಿದ ಸುತ್ತೋಲೆ ಸಂಖ್ಯೆ 09/2024ರ ಸೆಪ್ಟಂಬರ್ 19, 2024 ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 03, 2024. (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ).

ಇದಲ್ಲದೆ, ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ನಿಯಮ 36(1)(b)ಗೆ ಅನುಗುಣವಾಗಿ, ಕಂಪನಿ / ರಿಜಿಸ್ಟ್ರಾರ್ / ಡಿಪಿಗಳಲ್ಲಿ ನೋಂದಾಯಿಸದ ಇ–ಮೇಲ್ ವಿಳಾಸವನ್ನು ಷೇರುದಾರರಿಗೆ ಪತ್ರವನ್ನು ಕಳುಹಿಸಿದೆ, ಕಂಪನಿಯ ವಾರ್ಷಿಕ ವರದಿ 2024–25 ಅನ್ನು ಪ್ರವೇಶಿಸಲು ವೆಬ್‌ಲಿಂಕ್ ಅನ್ನು ಒದಗಿಸಿದೆ.

35ನೇ ಎಜಿಎಂನ ಸೂಚನೆ ಮತ್ತು ವಿವರಣಾತ್ಮಕ ಹೇಳಿಕೆ ಮತ್ತು 2024–25ರ ಆರ್ಥಿಕ ವರ್ಷದ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ https://axiscades.com/ ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ ಬಿಎಸ್‌ಇ ಲಿಮಿಟೆಡ್‌ನಲ್ಲಿ ಲಭ್ಯವಿದೆ ಎಂದು ಸದಸ್ಯರು ಗಮನಿಸಬಹುದು. www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಮತ್ತು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟ್ ("ಕೆಫಿನ್") ವೆಬ್‌ಸೈಟ್‌ನಲ್ಲಿ https://evoting.kfintech.com/public/Downloads.aspx ನಲ್ಲಿ ಲಭ್ಯವಿದೆ.

ಎಜಿಎಂಗೆ ಸೇರ್ಪಡೆಗೊಳ್ಳುವ ಸೂಚನೆಗಳನ್ನು ಎಜಿಎಂನ ಸೂಚನೆಯಲ್ಲಿ ನೀಡಲಾಗಿದೆ. ಕಂಪನಿ ಕಾಯ್ದೆ, 2013ರ ಸೆಕ್ಷನ್ 103ರ ಅಡಿಯಲ್ಲಿ ಕೋರಂ ಅನ್ನು ಲೆಕ್ಕಾಚಾರ ಮಾಡುವ ಉದ್ದೇಶದಿಂದ ವಿಸಿ / ಒಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರನ್ನು ಎಣಿಕೆ ಮಾಡಲಾಗುತ್ತದೆ.

ವಿಸಿ/ಒಎವಿಎಂ ಮೂಲಕ ಸುತ್ತೋಲೆಗಳಿಗೆ ಅನುಸಾರವಾಗಿ ಎಜಿಎಂ ನಡೆಯುವುದರಿಂದ, ಸದಸ್ಯರ ಭೌತಿಕ ಹಾಜರಾತಿಯನ್ನು ವಿನಿಯೋಗಿಸಲಾಗಿದೆ. ಅದರಂತೆ ಸದಸ್ಯರಿಂದ ಪ್ರಾಕ್ಸಿಗಳ ನೇಮಕದ ಸೌಲಭ್ಯವು ಎಜಿಎಂಗೆ ಲಭ್ಯವಿರುವುದಿಲ್ಲ. ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಅನುಸರಣೆಯಲ್ಲಿ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20ರೊಂದಿಗೆ ಕಾಲಕಾಲಕ್ಕೆ ತಿದ್ದುಪಡಿ ಮಾಡಿ ಮತ್ತು ಸೆಬಿಯ ನಿಯಮ 44 (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ಡಿಪಾಸಿಟರಿಗಳು ಮತ್ತು ಕೆಫಿನ್ ಒದಗಿಸಿದ ರಿಮೋಟ್ ಎಲೆಕ್ಟ್ರಾನಿಕ್ ಮತದಾನ ಸೌಲಭ್ಯವನ್ನು (ರಿಮೋಟ್ ಇ–ವೋಟಿಂಗ್) ಬಳಸಿಕೊಂಡು ಎಜಿಎಂನ ಸೂಚನೆಯಲ್ಲಿ ಸೂಚಿಸಲಾದ ಎಲ್ಲಾ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಲು ಸದಸ್ಯರಿಗೆ ಸೌಲಭ್ಯವನ್ನು ಒದಗಿಸಲಾಗಿದೆ. ಹೆಚ್ಚುವರಿಯಾಗಿ, ಕಂಪನಿಯು ಎಜಿಎಂ (ಇ–ವೋಟಿಂಗ್) ಸಮಯದಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ. ರಿಮೋಟ್ ಇ–ವೋಟಿಂಗ್ / ಇ–ವೋಟಿಂಗ್‌ನ ವಿವರವಾದ ಕಾರ್ಯವಿಧಾನವನ್ನು ಎಜಿಎಂನ ಸೂಚನೆಯಲ್ಲಿ ಒದಗಿಸಲಾಗಿದೆ. ಎಲ್ಲಾ ಸದಸ್ಯರಿಗೆ ತಿಳಿಸಲಾಗಿದೆ:

1. ವಿಸಿ / ಒಎವಿಎಂ ಮತ್ತು ಇ–ಮತದಾನದ ಪ್ರಕ್ರಿಯೆಯ ಮೂಲಕ ಭಾಗವಹಿಸುವ ಸೂಚನೆಗಳು, ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಅಥವಾ ಅವರ ಇ–ಮೇಲ್ ವಿಳಾಸವನ್ನು ನೋಂದಾಯಿಸದಿರುವ ವಿಧಾನಗಳು ಸೇರಿದಂತೆ ಇ–ಮತದಾನದ ಮೂಲಕ ಮತ ಚಲಾಯಿಸಬಹುದು 35ನೇ ಎಜಿಎಂ ಪ್ರಕಟಣೆಯ ಭಾಗವಾಗಿ ಒದಗಿಸಲಾಗಿದೆ.
2. ಅರ್ಹತೆ ಪಡೆದ ಸದಸ್ಯರು ಎಜಿಎಂನಲ್ಲಿ ಭಾಗವಹಿಸಲು ಎಜಿಎಂಗೆ ಹಾಜರಾಗಬಹುದು ಅಥವಾ ವೀಕ್ಷಿಸಬಹುದು ಕೆಫಿನ್ ವೆಬ್‌ಸೈಟ್‌ಗೆ ಲಾಗ್ ಇನ್ ಮಾಡುವ ಮೂಲಕ ಎಜಿಎಂನ ಲೈವ್ ವೆಬ್‌ಕಾಸ್ಟ್ https://emeetings.kfintech.com ಅವರ ರಿಮೋಟ್ ಬಳಸುವ ಮೂಲಕ ಇ–ಮತದಾನ ರುಜುವಾತುಗಳು.
3. ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಠೇವಣಿದಾರರು ನಿರ್ವಹಿಸುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಕಟ್–ಆಫ್ ದಿನಾಂಕದಂದು ನೋಂದಾಯಿಸಲ್ಪಟ್ಟ ಸದಸ್ಯರು, ಅಂದರೆ ಸೆಪ್ಟೆಂಬರ್ 17, 2025 ಬುಧವಾರ, ದೂರಸ್ಥ ಇ ಸೌಲಭ್ಯವನ್ನು ಮತ್ತು ಎಜಿಎಂನಲ್ಲಿ ಮತದಾನ ಚಲಾಯಿಸಲು ಮಾತ್ರ ಅರ್ಹರಾಗಿರುತ್ತಾರೆ
4. ದೂರಸ್ಥ ಇ–ಮತದಾನದ ಅವಧಿ 2025ರ ಸೆಪ್ಟೆಂಬರ್ 21ರ ಭಾನುವಾರ ಬೆಳಿಗ್ಗೆ 9.00 ಕ್ಕೆ (ಐಎಸ್ಟಿ) ಪ್ರಾರಂಭವಾಗಲಿದೆ ಮತ್ತು 2025ರ ಸೆಪ್ಟೆಂಬರ್, 23ರ ಮಂಗಳವಾರ, ಸಂಜೆ 5.00 ಕ್ಕೆ ಕೊನೆಗೊಳ್ಳುತ್ತದೆ (ಐಎಸ್ಟಿ) ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯವನ್ನು ಮೀರಿ ಸದಸ್ಯರು ಇಲ್ಲಿ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಸಾಧ್ಯವಾಗುವುದಿಲ್ಲ.
5. ವಾರ್ಷಿಕ ವರದಿಯನ್ನು ರವಾನಿಸಿದ ನಂತರ ಷೇರುಗಳನ್ನು ಸ್ವಾಧೀನಪಡಿಸಿಕೊಂಡ ಅರ್ಹ ಸದಸ್ಯರು ಮತ್ತು ಕಟ್–ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವವರು, ಅಂದರೆ ಸೆಪ್ಟೆಂಬರ್ 17, 2025 ಬುಧವಾರ ನೋಟೀಸ್‌ನಲ್ಲಿ ನಮೂದಿಸಲಾದ ಕಾರ್ಯವಿಧಾನಗಳನ್ನು ಅನುಸರಿಸಿ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಪಡೆಯಬಹುದು.
6. ಎಜಿಎಂ ಗೆ ಮುಂಚಿತವಾಗಿ ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂ ಗೆ ವಿಸಿ / ಒಎವಿಎಂ ಮೂಲಕ ಹಾಜರಾಗಬಹುದು, ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ದೂರಸ್ಥ ಇ–ಮತದಾನದ ಮೂಲಕ ಮತ ಚಲಾಯಿಸದ ಮತ್ತು ವಿಸಿ / ಒಎವಿಎಂ ಮೂಲಕ ಎಜಿಎಂನಲ್ಲಿ ಹಾಜರಿರುವ ಸದಸ್ಯರು ಎಜಿಎಂನಲ್ಲಿ ಇ–ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.
7. ಕಂಪನಿಯು ಕಂಪನಿಯ ಕಾರ್ಯದರ್ಶಿಗಳಾದ ಶ್ರೀ ಪ್ರಮೋದ್ ಎಸ್.ಎಂ. ಅವರನ್ನು ನೇಮಕ ಮಾಡಿದೆ. ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಪರಿಶೀಲಿಸಲು ಬೆಂಗಳೂರಿನ ಕಂಪನಿಯ ಕಾರ್ಯದರ್ಶಿಗಳು ಮೆ॥ ಬಿಎಂಪಿ ಅಂಡ್ ಕಂಪನಿ ಎಲ್‌ಎಲ್‌ಪಿ. ರವರನ್ನು ನೇಮಕ ಮಾಡಿದೆ.
8. ಇಲ್ಲಿಯವರೆಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರು, ತಮ್ಮ ಠೇವಣಿದಾರರ ಮೂಲಕ ಎಲೆಕ್ಟ್ರಾನಿಕ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ಮತ್ತು ಕಂಪನಿಗೆ ಬರೆಯುವ ಮೂಲಕ ಭೌತಿಕ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ. ಖಚಿಂ ಅಂದರೆ, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ ನಂ. 31 & 32, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ನಾನಕ್ರಾಮ್‌ಗುಡಾ, ಗಚಿಬೌಲಿ, ಹೈದರಾಬಾದ್ 500 032.
9. ಇ–ಮತದಾನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಯಿದ್ದಲ್ಲಿ, ಸದಸ್ಯರು ಕೆಫಿನ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸಹಾಯ ಮತ್ತು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು ವಿಭಾಗಕ್ಕೆ ಭೇಟಿ ನೀಡಿ (https://evoting.kfintech.com/public/Faq.aspx). ರಿಮೋಟ್ ಇ–ವೋಟಿಂಗ್ ಅಥವಾ ಷೇರುಗಳಿಗೆ ಸಂಬಂಧಿಸಿದ ಯಾವುದೇ ಇತರ ಪ್ರಶ್ನೆಗಳು / ಕುಂದುಕೊರತೆಗಳ ಸಂದರ್ಭದಲ್ಲಿ, ನೀವು ಶ್ರೀ ರಾಜ್ ಕುಮಾರ್ ಕಾಳೆ, (RIS), ಕೆಫಿನ್, ದೂರವಾಣಿ ಸಂಖ್ಯೆ: 040–67162222 ಅಥವಾ ಟೋಲ್ ಫ್ರೀ ಸಂಖ್ಯೆ 1800–309–4001 ಅಥವಾ ಇಮೇಲ್: evoting@kfintech.com ನಲ್ಲಿ ಸಂಪರ್ಕಿಸಬಹುದು.

ಆಕ್ಸಿಸ್‌ಕೇಡ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/– **ಸೋನಲ್ ದುದಾನಿ,**
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ
ಸದಸ್ಯತ್ವ ಸಂಖ್ಯೆ: A40415

ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟಂಬರ್ 02, 2025

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಟಿ20ಗೆ ಸ್ಟಾರ್ಕ್ ವಿದಾಯ

ಆಸ್ಟ್ರೇಲಿಯಾದ ಅನುಭವಿ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದು, ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಮೇಲೆ ಹೆಚ್ಚು ಗಮನ ಹರಿಸಲು ನಿರ್ಧರಿಸಿದ್ದಾರೆ.

ಸೊಂಪಾದ ಪುಟಗಳು

ಒಡಲ ಮೇಲಿರುವ ಗಾಯಗಳು: ಹಿಂಸೆಯ ರುಜುವಾತಿನ ಸಹಿಗಳು
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಏನೇ ಇರಲಿ, ಬರುವುದೆಲ್ಲವನ್ನೂ ಎದುರಿಸಲೇಬೇಕು
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನೀವು ಮಾಡುವ ಕೆಲಸ ಒಂದೋ ನಿಮಗೆ ಖುಷಿ ನೀಡುತ್ತದೆ, ಇಲ್ಲವೇ ಬೇಸರವನ್ನುಂಟು ಮಾಡುತ್ತದೆ. ನಿಮಗೆ ಹೆಚ್ಚು ಚೇತನವನ್ನು ಕೊಡಬಹುದು, ಇಲ್ಲವೇ ನಿಮಗೆ ಹೆಚ್ಚು ದಣಿವುಂಟು ಮಾಡಬಹುದು. ಯಾವುದು ಬೇಕು ಎಂಬುದನ್ನು ನೀವೇ ಆಯ್ಕೆ ಮಾಡಿಕೊಳ್ಳಬೇಕು.

ವಕ್ರತುಂಡೋಕ್ತಿ

ಹಣ ಮತ್ತು ಸಮಯವನ್ನು ಉಳಿಸಬೇಕು. ಕಾರಣ ನಂತರ ವ್ಯರ್ಥವಾಗಿ ಕಳೆಯಬಹುದು.

ಧರ್ಮಸ್ಥಳದ ವಿರುದ್ಧ ಅಪಪ್ರಚಾರಕ್ಕೆ ವಿದೇಶಿ ಹಣ ಬಳಕೆ ಆರೋಪ | ಫೆಮಾ ಕಾಯ್ದೆಯಡಿ ವಿಚಾರಣೆ
ಒಡನಾಡಿ, ಸಂವಾದ ಎನ್‌ಜಿಒಗಳ ವ್ಯವಹಾರದ ಬಗ್ಗೆ ನಿಗಾ | ಬ್ಯಾಂಕ್ ವಿವರ ನೀಡಲು ಇಡಿ ಸೂಚನೆ

ಬುರುಡೆ ಗ್ಯಾಂಗ್‌ಗೆ ಹಣಕಾಸು ಎನ್‌ಜಿಒ ಮೇಲೆ ಇ.ಡಿ ಕಣ್ಣು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ದಿನಕ್ಕೊಂದು ತಿರುವು ಪಡೆಯುತ್ತಿರುವ ಬುರುಡೆ ಪ್ರಕರಣದಲ್ಲಿ, ಜಾರಿ ನಿರ್ದೇಶನಾಲಯ (ಇಡಿ) ಎಂಟ್ರಿಯಾಗಿದ್ದು, ಬುರುಡೆ ಗ್ಯಾಂಗ್‌ಗೆ 'ಫಂಡ್' ಮಾಡಿದ್ದು ಯಾರೆನ್ನುವ ನಿಟ್ಟಿನಲ್ಲಿ ತನಿಖೆ ಆರಂಭಿಸಿದೆ. ಬುರುಡೆ ಪ್ರಕರಣವನ್ನು ಎನ್‌ಐಎ ಅಥವಾ ಸಿಬಿಐನಿಂದ ತನಿಖೆ ನಡೆಸಬೇಕು ಎಂದು ಬಿಜೆಪಿ ಆಗ್ರಹಿಸುತ್ತಿದೆ. ಆದರೆ ಅದಕ್ಕೂ ಮೊದಲೇ, ಕೆಲವರು ಈ ಪ್ರಕರಣದಲ್ಲಿ ವಿದೇಶಿ ಹಣ ಹೂಡಿಕೆ ಯಾಗಿದೆ ಎನ್ನುವ ದೂರು ನೀಡಿದ್ದರಿಂದ ಇಡಿ ಅಧಿಕೃತ ವಾಗಿ ಪ್ರವೇಶಿಸಿದ್ದು, ಫೆಮಾ ಕಾಯಿದೆಯಡಿ ತನಿಖೆಗೆ ಮುಂದಾಗಿದೆ.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡಲು ಹಾಗೂ ಸುಳ್ಳು ಸುದ್ದಿ ಹಬ್ಬಿಸಲು ಯೂಟ್ಯೂಬರ್‌ಗಳಿಗೆ ವಿದೇಶದಿಂದ ಹಣ ಬಂದಿದೆ. ಮಾಸ್ಕ್ ಮ್ಯಾನ್ ಹಾಗೂ ಗ್ಯಾಂಗ್‌ನ ನಿರ್ವಹಣೆಗೂ ವಿದೇಶಿ ಹಣ ಹೂಡಿಕೆ ಯಾಗಿದೆ. ಆದ್ದರಿಂದ ವಿದೇಶಿ ಹಣ ಹೂಡಿಕೆ ಸಂಬಂಧ ಇಡಿ ತನಿಖೆ ನಡೆಸಬೇಕು ಎಂದು ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಗೃಹ ಸಚಿವ ಅಮಿತ್ ಶಾಗೆ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ, ಇದೀಗ ಅಕ್ರಮ ಹಣ ವಹಿವಾಟಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಮುಂದಾಗಿದೆ.

ಬ್ಯಾಂಕ್ ದಾಖಲೆ ಪರಿಶೀಲನೆ: ಪ್ರಮುಖವಾಗಿ ಈ ಪ್ರಕರಣದಲ್ಲಿ ಬುರುಡೆ ಗ್ಯಾಂಗ್‌ಗೆ ಒಡನಾಡಿ ಹಾಗೂ ಸಂವಾದ ಎನ್ನುವ ಎನ್‌ಜಿಒಗಳು ಹಣ ಸಹಾಯ ಮಾಡಿರುವ ಆರೋಪವಿದೆ. ಆದ್ದರಿಂದ ಈ ಎರಡು ಎನ್‌ಜಿಒಗಳಿಗೆ ಕಳೆದ ಐದು ವರ್ಷದಿಂದ ಯಾವೆಲ್ಲ ಮೂಲದಿಂದ ಹಣ ವರ್ಗಾವಣೆಯಾಗಿದೆ ಎನ್ನುವ ಬಗ್ಗೆ ಇಡಿ ತನಿಖೆ ಆರಂಭಿಸಿದೆ. ಐದು ವರ್ಷದಿಂದ ಯಾವೆಲ್ಲ ಮೂಲದಿಂದ ಹಣ ಬಂದಿದೆ? ವಿದೇಶದಿಂದ ಎಷ್ಟು ಪ್ರಮಾಣದಲ್ಲಿ ಹಣ ಸಂದಾಯವಾಗಿದೆ? ಸಂದಾಯವಾಗಿರುವ ಹಣ ವನ್ನು ಯಾವುದಕ್ಕೆ ಬಳಸಲಾಗಿದೆ ಎನ್ನುವ ಬಗ್ಗೆ ಹುಡುಕಾಟ ಆರಂಭಿಸಿರುವ ಇಡಿ, ಈ ಸಂಬಂಧ ಎಲ್ಲ ಪ್ರಮುಖ ಬ್ಯಾಂಕ್‌ಗಳಿಗೆ ಪತ್ರ ಬರೆದು ಈ ಎರಡು ಸಂಸ್ಥೆಯ ಹೆಸರಲ್ಲಿ ಖಾತೆಗಳ ಹೆಸರಿನ ಮಾಹಿತಿ ಕೇಳಿದ್ದಾರೆ.

ಪರಂ ಭೇಟಿಯಾದ ಮೊಹಂತಿ: ಚಿನ್ನಯ್ಯ ವಿಚಾರಣೆ ದಿನದಿಂದ ದಿನಕ್ಕೆ ತಿರುವು ಪಡೆಯುತ್ತಿದೆ. ಆದ್ದರಿಂದ ಇಡೀ ಪ್ರಕರಣದ ಪ್ರಗತಿಯ ಬಗ್ಗೆ ಮಂಗಳವಾರ ಮತ್ತೆ ಎಸ್‌ಐಟಿಯು ಗೃಹ ಸಚಿವ ಪರಮೇಶ್ವರ ಅವರಿಗೆ ಮಾಹಿತಿ ನೀಡಿದೆ. ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಂತಿ ಮಂಗಳವಾರ ಪರಂಗೆ ತನಿಖೆಯ ಬಗ್ಗೆ ವಿವರಣೆ ನೀಡಿದರು. ಬಂಧಿತ ಆರೋಪಿ ಚಿನ್ನಯ್ಯನ ಜತೆ ಸಭೆ ನಡೆಸಿರುವವರ ಮಾಹಿತಿ ಹಾಗೂ ಎಲ್ಲೆಲ್ಲಿ ಯಾವ ಯಾವ ರೀತಿಯ ಮಾತುಕತೆಗಳಾಗಿವೆ. ಆರೋಪಿ ಚಿನ್ನಯ್ಯ ಎಲ್ಲೆಲ್ಲಿ ಪ್ರವಾಸ ಮಾಡಿದ್ದಾನೆ, ಆತ ರೆಸಾರ್ಟ್ ಹಾಗೂ ಹೋಟೆಲ್‌ಗಳಲ್ಲಿ ಆರ್ಥಿಕ ನೆರವು ನೀಡಿದವರು ಯಾರು? ದೈನಂದಿನ ಖರ್ಚುಗಳನ್ನು ನಿಭಾಯಿಸುತ್ತಿರುವುದು ಹೇಗೆ? ಎಂಬೆಲ್ಲಾ ಮಾಹಿತಿಗಳನ್ನು ಎಸ್‌ಐಟಿ ಕಲೆ ಹಾಕಿದೆ. ಪ್ರಮುಖವಾಗಿ ಪ್ರಕರಣದ ಮೂಲ ಬಿಂದು ಬುರುಡೆಯ ಬಗ್ಗೆ ಎಸ್‌ಐಟಿ ಮಹತ್ವದ ಅಂಶ ಗಳನ್ನು ಪತ್ತೆ ಹಚ್ಚಿದ್ದು, ಅದನ್ನು ಗೃಹ ಸಚಿವರೊಂದಿಗೆ ಹಂಚಿಕೊಂಡಿರುವುದಾಗಿ ತಿಳಿದು ಬಂದಿದೆ.

ಮುಂದಿನ ದಿನಗಳಲ್ಲಿ ಆರೋಪಿಯನ್ನು ಕೇರಳ, ತಮಿಳುನಾಡು, ದೆಹಲಿ ಸೇರಿದಂತೆ ಇನ್ನಿತರ ಪ್ರದೇಶಗಳಿಗೆ ಕರೆದುಕೊಂಡು ಹೋಗಬೇಕಾಗಿದ್ದು, ಅದಕ್ಕೆ ಸಹಕಾರ ನೀಡುವಂತೆ ಗೃಹ ಸಚಿವರಿಗೆ ಎಸ್‌ಐಟಿ ಮುಖ್ಯಸ್ಥರು ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತನಿಖೆಗೆ ಅಭ್ಯಂತರವಿಲ್ಲ: ಪರಂ

ಅಕ್ರಮ ವಿದೇಶಿ ಹಣ ವರ್ಗಾವಣೆಯ ಹಿನ್ನಲೆಯಲ್ಲಿ ಇಡಿ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ, ಜಾರಿ ನಿರ್ದೇಶನಾಲಯ ಫೆಮಾ ಮತ್ತು ಇತರ ಕಾಯಿದೆಗಳಲ್ಲಿ ತನಿಖೆ ಆರಂಭಿಸಿ ಧರ್ಮಸ್ಥಳದ ವಿರುದ್ಧದ ಷಡ್ಯಂತ್ರಕ್ಕೆ ಎನ್‌ಜಿಒ ಹಣ ಬಳಕೆಯಾಗಿರುವ ಬಗ್ಗೆ ವಿಚಾರಣೆ ನಡೆಸುವುದಾದರೆ ನಮ್ಮ ಅಭ್ಯಂತರವಿಲ್ಲ ಎಂದಿದ್ದಾರೆ. ಅವರು ಹಣಕಾಸಿನ ವಿಚಾರಗಳ ಕುರಿತು ತನಿಖೆ ಮಾಡುತ್ತಾರೆ. ಎಸ್‌ಐಟಿ ತನ್ನ ಪಾಲಿನ ಜವಾಬ್ದಾರಿಯನ್ನು ನಿಭಾಯಿಸುತ್ತದೆ. ಚಿನ್ನಯ್ಯ ನಿಯಮ 164ರ ಅಡಿ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಗೆ ಸೀಮಿತವಾಗಿ ಎಸ್‌ಐಟಿ ತನಿಖೆ ನಡೆಸುತ್ತಿದೆ ಎಂದು ಪರಂ ಹೇಳಿದ್ದಾರೆ.

ಸರಿ ದಾರಿಯಲ್ಲಿ ಧರ್ಮಸ್ಥಳದ ಬುರುಡೆ ಪ್ರಕರಣದ ತನಿಖೆ ಸಾಗುತ್ತಿರುವಾಗ ಪ್ರಕರಣವನ್ನು ಎನ್‌ಐಎಗೆ ವಹಿಸುವ ಅಗತ್ಯವಿಲ್ಲ. ಬಿಜೆಪಿಯವರು ಎಸ್‌ಐಟಿ ತನಿಖೆಗೆ ತೊಂದರೆ ಮಾಡುವ ಉದ್ದೇಶ ಹೊಂದಿ ಈ ರೀತಿಯ ಹೇಳಿಕೆ ನೀಡುತ್ತಿರುವ ಸಾಧ್ಯತೆಯಿದೆ.

-**ಡಾ.ಜಿ.ಪರಮೇಶ್ವರ,** ಗೃಹ ಸಚಿವ

ಬಿಜೆಪಿ ಆರೋಪ ಮಾಡಿರುವಂತೆ ಯಾವುದೇ ವಿದೇಶಿ ಹಣದ ಬಗ್ಗೆ ತಮಗೆ ತಿಳಿದಿಲ್ಲ. ಇಡಿ ತನಿಖೆಯಿಂದ ಎಲ್ಲವೂ ಹೊರಬರಲಿ. ಬಿಜೆಪಿಯವರು ಹಣವನ್ನು ಎಲ್ಲಿಂದ ತರುತ್ತಾರೆ? ಅವರಿಗೆ ಯಾರು ಹಣ ನೀಡುತ್ತಿದ್ದಾರೆ? ಪ್ರತಿಯೊಂದು ವಿಷಯವನ್ನು ರಾಜಕೀಯಕ್ಕೆ ಬಳಸಬಾರದು. ಸರಕಾರ ಯಾರನ್ನೂ ರಕ್ಷಿಸುತ್ತಿಲ್ಲ. ಬಿಜೆಪಿಯವರು ರಾಜಕೀಯಕ್ಕಾಗಿ ಹೀಗೆ ಮಾಡುತ್ತಿದ್ದಾರೆ. ಅವರದು ಧರ್ಮಯಾತ್ರೆಯಲ್ಲ ರಾಜಕೀಯ ಯಾತ್ರೆ.

-**ಸಿದ್ದರಾಮಯ್ಯ,** ಮುಖ್ಯಮಂತ್ರಿ

ಅಂತರ್ಯುದ್ಧದ ದೇಶದಲ್ಲಿ ಪ್ರಾಕೃತಿಕ ವಿಕೋಪ
ಕೊಚ್ಚಿಹೋದ ಹಳ್ಳಿ: ವಿಶ್ವಸಂಸ್ಥೆ ನೆರವಿಗೆ ಮೊರೆ

ಸುಡಾನ್: ಭೂ ಕುಸಿತ 1000ಕ್ಕೂ ಹೆಚ್ಚು ಸಾವು

ಖಾರ್ತೂಮ್: ಆಂತರಿಕ ದಂಗೆಗೆ ಸಿಲುಕಿ ಈಗಾಗಲೇ ಬೆಂದು ಹೋಗಿರುವ ಸುಡಾನ್‌ಗೆ ಮತ್ತೊಂದು ಆಘಾತ ಅಪ್ಪಳಿಸಿದೆ. ಆ.31ರಿಂದ ಸೂಡಾನ್‌ನ ಪಶ್ಚಿಮ ಭಾಗದ ಕೆಲ ಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರೀ ಮಳೆಯ ಪರಿಣಾಮ, ತರ್ಸೀನ್ ಹೆಸರಿನ ಇಡೀ ಹಳ್ಳಿಯೇ ನೆಲಸಮವಾಗಿದೆ. 1000 ಮಂದಿ ಮೃತಪಟ್ಟಿದ್ದಾರೆ, ಬದುಕಿರುವುದು ಒಬ್ಬರೇ ವ್ಯಕ್ತಿ ಎಂದು ವರದಿಗಳು ಹೇಳಿವೆ. ಸುಡಾನ್ ಪಶ್ಚಿಮ ಭಾಗದಲ್ಲಿನ ದಾರ್ಫುರ್ ಪ್ರದೇಶದಲ್ಲಿರುವ ಜೆಬೆಲ್ ಮಾರ್ರಾ ಪರ್ವತಶ್ರೇಣಿಯಲ್ಲಿ ಬರುವ ತರ್ಸೀನ್ ಮಳೆಗೆ ತತ್ತರಿಸಿ ಹೋಗಿದೆ. ಧಾರಾಕಾರ ಮಳೆಯ ಪರಿಣಾಮ ಭಾರೀ ಭೂಕುಸಿತ ಸಂಭವಿಸಿ, ಸ್ಥಳೀಯ ಜನರ ಬದುಕು ಸರ್ವನಾಶವಾಗಿದೆ ಎಂದು ವರದಿಗಳು ಹೇಳಿವೆ. ಸುಡಾನ್ ಪಶ್ಚಿಮ ಭಾಗದಲ್ಲಿ ಬಂಡುಕೋರ ಚಟುವಟಿಕೆ ನಡೆಸುತ್ತಿರುವ ಎಸ್‌ಎಲ್‌ಎಂಎ ಎಂಬ ಸಂಘಟನೆ ವಿಶ್ವಸಂಸ್ಥೆಗೆ ಮನವಿ ಮಾಡಿ, ಜನರ ಜೀವನ ಸಹಜಸ್ಥಿತಿಗೆ ತರಲು ನೆರವು ನೀಡಬೇಕು, ಅಂತಾರಾಷ್ಟ್ರೀಯ ಸಮುದಾಯ ನೆರವಿಗೆ ಬರಬೇಕೆಂದು ಕೇಳಿಕೊಂಡಿದೆ. → 4

ಅಫ್ಘನ್ ಭೂಕಂಪ: ಸಾವಿನ ಸಂಖ್ಯೆ 1400ಕ್ಕೆ ಏರಿಕೆ

ಪೂರ್ವ ಅಫ್ಘಾನಿಸ್ತಾನದಲ್ಲಿ ಭಾನುವಾರ ತಡರಾತ್ರಿ, ಸಂಭವಿಸಿದ ಭೂಕಂಪದಲ್ಲಿ ಸಾವಿನ ಸಂಖ್ಯೆ 1,400ನ್ನು ದಾಟಿದೆ, 3 ಸಾವಿರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಜನರ ಬದುಕು ಉಧ್ವಸ್ತವಾಗಿದ್ದು, ನಿರಾಶ್ರಿತರಿಗೆ ನೆರವು ನೀಡುವುದರಲ್ಲಿ ಸರಕಾರಿ ಸಿಬ್ಬಂದಿ ಮಗ್ನವಾಗಿದೆ. ಜನರು ರಾತ್ರಿ ನಿದ್ರಿಸುತ್ತಿದ್ದಾಗ ಭೂಕಂಪ ಸಂಭವಿಸಿದ್ದರಿಂದ, ಅಪಾಯದ ಬಗ್ಗೆ ಅರಿವಿಗೆ ಬಂದಿಲ್ಲ. ಇದು ಸಾವಿನ ಸಂಖ್ಯೆ ಏರಲು ಕಾರಣ ಎನ್ನಲಾಗಿದೆ. ಮಾಮೂಲಿ ವಾಹನಗಳಿಗೆ ಸ್ಥಳಕ್ಕೆ ತಲುಪಲು ಸಾಧ್ಯವಾಗದ ಸ್ಥಿತಿ ಇರುವುದರಿಂದ, ಗಾಯಗೊಂಡವರನ್ನು ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ. ಕುನಾರ್ ಪ್ರಾಂತ್ಯದಲ್ಲಿ ಹೆಚ್ಚಿನ ಮನೆಗಳನ್ನು ಮಣ್ಣಿನ ಇಟ್ಟಿಗೆ ಮತ್ತು ಮರ ಬಳಸಿ ನಿರ್ಮಿಸಲಾಗಿದೆ. ಇವುಗಳೆಲ್ಲ ನಾಮಾವಶೇಷಗೊಂಡಿವೆ. ನೂರ್‌ಗುಲ್‌ನಲ್ಲಿ ಗರಿಷ್ಠ ಹಾನಿ ಸಂಭವಿಸಿದೆ ಎಂದು ವರದಿಗಳು ಹೇಳಿವೆ.

ಗ್ರೇಟರ್ ಬೆಂಗ್ಳೂರಿಗೆ ಆಯುಕ್ತರ ನೇಮಕ

ಬೆಂಗಳೂರು: ಮಂಗಳವಾರದಿಂದ ಗ್ರೇಟರ್ ಬೆಂಗಳೂರು ಆಡಳಿತ ಜಾರಿಯಾಗಿದ್ದು, ಬೆಂಗಳೂರನ್ನು ಐದು ಪಾಲಿಕೆಗಳಾಗಿ ವಿಂಗಡಿಸಿ ಆಡಳಿತ ನಡೆಸಲಾಗುತ್ತದೆ. ಈ ಐದೂ ಭಾಗಗಳಿಗೆ ಆಯುಕ್ತರು ಮತ್ತು ಜಂಟಿ ಆಯುಕ್ತರ ನೇಮಕ ವಾಗಿದೆ. ಬೆಂಗಳೂರು ಕೇಂದ್ರ ಪಾಲಿಕೆ ಆಯುಕ್ತರಾಗಿ ಹಿರಿಯ ಐಎಎಸ್ ಅಧಿಕಾರಿ ರಾಜೇಂದ್ರ ಚೋಳನ್, ಹೆಚ್ಚುವರಿ ಆಯುಕ್ತರಾಗಿ(ಅಭಿವೃದ್ಧಿ) ರಾಹುಲ್ ಶರಣಪ್ಪ ಸಂಕನೂರು, ಪೂರ್ವ ಪಾಲಿಕೆ ಆಯುಕ್ತರಾಗಿ ರಮೇಶ್ ಡಿ.ಎಸ್, ಹೆಚ್ಚುವರಿ ಆಯುಕ್ತರಾಗಿ (ಅಭಿ ವೃದ್ಧಿ) ಲೋಕಂಡೆ ಸ್ನೇಹಲ್ ಸುಧಾಕರ್, ಉತ್ತರ ಪಾಲಿಕೆ ಆಯುಕ್ತರಾಗಿ ಪೊಮ್ಮಲ ಸುನೀಲ್ ಕುಮಾರ್ ನೇಮಕಗೊಂಡಿದ್ದಾರೆ.

ಮೈಸೂರು ರಾಜವಂಶಸ್ಥರ ಆಹ್ವಾನದ ಮೇರೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಮಂಗಳವಾರ ಬೆಳಗ್ಗೆ ಮೈಸೂರು ಅರಮನೆಗೆ ಭೇಟಿ ನೀಡಿದ್ದರು. ಅರಮನೆಯಲ್ಲಿ ಉಪಾಹಾರ ಸ್ವೀಕರಿಸಿದ ರಾಷ್ಟ್ರಪತಿ ಅವರನ್ನು ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಒಡೆಯರ್, ತ್ರಿಷಿಕಾ ಕುಮಾರಿ ಸತ್ಕರಿಸಿದರು.

ಸದ್ಯವೇ ಮೋದಿ ಮಣಿಪುರಕ್ಕೆ ಭೇಟಿ

ದೆಹಲಿ: 2023ರಲ್ಲಿ ಮಣಿಪುರದಲ್ಲಿ ಕುಕಿ-ಮೈತೇಯಿ ಬುಡಕಟ್ಟು ಜನಾಂಗಗಳ ನಡುವೆ ಭಾರೀ ಸಂಘರ್ಷ ನಡೆದ ತರುವಾಯ, ಮೊದಲ ಬಾರಿ ಪ್ರಧಾನಿ ನರೇಂದ್ರ ಮೋದಿ ಮಣಿಪುರಕ್ಕೆ ಭೇಟಿ ನೀಡುವುದು ಬಹುತೇಕ ಖಚಿತವಾಗಿದೆ. ಮೂಲಗಳ ಮಾಹಿತಿಯ ಪ್ರಕಾರ ಮಣಿಪುರ ರಾಜಧಾನಿ ಇಂಫಾಲದ ಕಾಂಗ್ಲಾ ಹಾಗೂ ಚುರಾಚಂದಪುರದ ಶಾಂತಿ ಮೈದಾನಕ್ಕೆ ಮೋದಿ ಭೇಟಿ ನೀಡುವ ನಿರೀಕ್ಷೆಯಿದೆ. ಹೀಗಾಗಿ ಭಾರೀ ಭದ್ರತೆ ನೀಡಲು ಈಗಲೇ ಸಿದ್ಧತೆ ಆರಂಭವಾಗಿದೆ. ಜ್ಯಾಮರ್‌ಗಳ ಅಳವಡಿಕೆ ಮಾಡುವುದು, ವಿಧ್ವಂಸಕ ಕೃತ್ಯಗಳ ತಡಗೆ ಭದ್ರತಾ ಪಡೆಗಳು ಯೋಜನೆ ನಡೆಸಿವೆ ಎಂದು ಹೇಳಲಾಗಿದೆ.

ಇಸ್ರೋದಿಂದ ವಿಕ್ರಮ ಚಿಪ್ ಅಭಿವೃದ್ಧಿ: ಸೆಮಿಕಾನ್‌ಶೃಂಗದಲ್ಲಿ ಅನಾವರಣ

ದೇಶದ ಮೊದಲ ಸ್ವದೇಶಿ ನಿರ್ಮಿತ ಬಿಟ್ ಪ್ರೊಸೆಸರ್ ಚಿಪ್ ಬಿಡುಗಡೆ

ದೆಹಲಿ: ಮೇಕ್ ಇನ್ ಇಂಡಿಯಾ ಯೋಜನೆಯಡಿ ಪೂರ್ಣವಾಗಿ ಭಾರತದಲ್ಲೇ ಸಿದ್ಧಗೊಂಡಿರುವ ಸೆಮಿಕಂಡಕ್ಟರ್ ಚಿಪ್, ವಿಕ್ರಮ್ ಅನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬಿಡುಗಡೆ ಮಾಡಿದ್ದಾರೆ. ದೆಹಲಿಯಲ್ಲಿ ನಡೆದ ಸೆಮಿಕಾನ್ ಇಂಡಿಯಾ- 2025ರ ಉದ್ಘಾಟನಾ ಸಮಾರಂಭದಲ್ಲಿ ಮೋದಿ 32 ಬಿಟ್ ಮೈಕ್ರೋ ಪ್ರೊಸೆಸರ್ ಚಿಪ್ ಅನ್ನು ಬಿಡುಗಡೆ ಮಾಡಿದರು. ಬಾಹ್ಯಾಕಾಶ ನೌಕೆಗಳು, ಕಂಪ್ಯೂಟರ್‌ಗಳು, ಇತರೆ ವಿದ್ಯುನ್ಮಾನ ಸಾಧನಗಳಲ್ಲಿ ಬಳಕೆಯಾಗುವ ಸೆಮಿಕಂಡಕ್ಟರ್‌ಗಳು ಭಾರೀ ಮಹತ್ವ ಹೊಂದಿವೆ. ಸದ್ಯ ಈ ಉದ್ಯಮ ಚೀನಾ ಹಿಡಿತದಲ್ಲಿದೆ. ಇಸ್ರೋ ತನ್ನ ಪ್ರಯೋಗಾಲಯ ದಲ್ಲಿ ಈ ಚಿಪ್ ಅನ್ನು ಸಿದ್ಧಪಡಿಸುವುದರೊಂದಿಗೆ ಆತ್ಮನಿರ್ಭರ ಭಾರತದ ಯೋಜನೆಯಲ್ಲಿ ದೇಶ ದೊಡ್ಡ ಹೆಜ್ಜೆ ಇಟ್ಟಂತಾಗಿದೆ.

ಪ್ರಧಾನಿಗೆ ಹಸ್ತಾಂತರ: ಸೆಮಿಕಾನ್ ಕಾರ್ಯಕ್ರಮದಲ್ಲಿ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ನಾಲ್ಕು ಅನುಮೋದಿತ ಯೋಜನೆಗಳಿಂದ ಮೊದಲ ಮೇಡ್ ಇನ್ ಇಂಡಿಯಾ ಪರೀಕ್ಷಾ ಚಿಪ್‌ಗಳನ್ನು ಪ್ರಧಾನಿ ನರೇಂದ್ರ ಮೋದಿಗೆ ಹಸ್ತಾಂತರಿಸಿದರು.

ಪೊಲೀಸರಿಗೆ ಗುಂಡಿಕ್ಕಿ ಆಪ್ ಶಾಸಕ ಪರಾರಿ

ಚಂಡೀಗಢ: ಪಂಜಾಬ್‌ನ ಆಮ್ ಆದ್ಮಿ ಪಕ್ಷದ ಶಾಸಕ (ಸನೌರ್ ಕ್ಷೇತ್ರ) ಹರ್ಮೀತ್ ಸಿಂಗ್ ಪಠಾಣ್‌ಮಾಜರಾ, ಮಂಗಳವಾರ ಬೆಳಗ್ಗೆ ಪೊಲೀಸರ ಮೇಲೆಯೇ ಗುಂಡುಹಾರಿಸಿ ಪರಾರಿಯಾಗಿ ರಾಷ್ಟ್ರವ್ಯಾಪಿ ಸುದ್ದಿಯಾಗಿದ್ದಾರೆ. ಅತ್ಯಾಚಾರ ಪ್ರಕರಣದಲ್ಲಿ ಮಂಗಳವಾರ ಬಂಧನಕ್ಕೊಳಗಾಗಿದ್ದ ಹರ್ಮೀತ್ ಸಿಂಗ್‌ರನ್ನು, ಪೊಲೀಸರು ಕರ್ನಾಲ್‌ನಲ್ಲಿ ಬಂಧಿಸಿ ಸ್ಥಳೀಯ ಠಾಣೆಗೊಯ್ಯುತ್ತಿದ್ದರು. ಈ ವೇಳೆ ಹರ್ಮೀತ್ ಮತ್ತು ಸಹಚರರು ಪೊಲೀಸರ ವಿರುದ್ಧವೇ ತಿರುಗಿಬಿದ್ದಿದ್ದಾರೆ. ಹರ್ಮೀತ್ ಪಂಜಾಬ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದರು. ಪ್ರವಾಹ ಪರಿಸ್ಥಿತಿಯನ್ನು ಪಂಜಾಬ್ ಸರಕಾರ ನಿಭಾಯಿಸಲು ಪೂರ್ಣ ವಿಫಲವಾಗಿದೆ ಎಂದು ಟೀಕಾ ಪ್ರಹಾರ ನಡೆಸಿದ್ದರು.

ಹಳದಿ ಮಾರ್ಗಕ್ಕೆ ನಾಲ್ಕನೇ ರೈಲು

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಸದ್ಯ ಮೂರು ರೈಲುಗಳು ಮಾತ್ರ ಸಂಚಾರ ನಡೆಸುತ್ತಿದ್ದು, ಸೆಪ್ಟೆಂಬರ್ ಎರಡನೇ ವಾರದಲ್ಲಿ ನಾಲ್ಕನೇ ರೈಲಿನ ಸಂಚಾರವು ಆರಂಭವಾಗಲಿದೆ ಎಂದು ನಮ್ಮ ಮೆಟ್ರೋ ಮೂಲಗಳು ತಿಳಿಸಿದೆ. ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಪ್ರಸ್ತುತ ಮೂರು ರೈಲುಗಳು ಮಾತ್ರ ಸಂಚಾರ ನಡೆಸುತ್ತಿದ್ದು, ಇದರಿಂದಾಗಿ ಪ್ರಯಾಣಿಕರು 25 ನಿಮಿಷಗಳ ಕಾಲ ಕಾಯಬೇಕಾದಂತಹ ಸ್ಥಿತಿಯಿದೆ. ಆದರೆ ಈ ತಿಂಗಳಿನಲ್ಲೇ ನಾಲ್ಕನೇ ರೈಲು ಆಗಮಿಸುವುದರಿಂದ 15 ರಿಂದ 20 ನಿಮಿಷಗಳಿಗೊಮ್ಮೆ ರೈಲು ಸಂಚಾರವು ಆರಂಭವಾಗಲಿದೆ. ಹೊಸ ರೈಲು ಈಗಾಗಲೇ ಕೋಲ್ಕತದಿಂದ ಆಗಮಿಸಿದೆ.

ಲಂಚ ಪ್ರಕರಣ: ಅಧ್ಯಕ್ಷ ರವಿಕುಮಾರ್ ರಾಜೀನಾಮೆಗೆ ಸೂಚನೆ

ಭೋವಿ ನಿಗಮ ಅಧ್ಯಕ್ಷರ ತಲೆದಂಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭೋವಿ ಅಭಿವೃದ್ಧಿ ನಿಗಮದಲ್ಲಿ ಕಮಿಷನ್ ವಸೂಲಿಯ ಆರೋಪದ ಬೆನ್ನಲ್ಲೇ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ರವಿಕುಮಾರ್ ಅವರ ತಲೆದಂಡವಾಗಿದೆ.

ಭೂ ಒಡೆತನ ಯೋಜನೆಯ ಫಲಾನುಭವಿಗಳಿಂದ ಶೇ.40ರಷ್ಟು ಕಮಿಷನ್ ಅನ್ನು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ರವಿಕುಮಾರ್ ಪಡೆದಿದ್ದಾರೆ ಎನ್ನುವ ಆರೋಪವನ್ನು ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೋಮವಾರ ಮಾಡಿದ್ದರು. ಇದರ ಬೆನ್ನಲ್ಲೇ, ಹಣ ಪಡೆಯುತ್ತಿರುವ ವಿಡಿಯೊ ಸಹ ವೈರಲ್ ಆಗಿತ್ತು. ಆದ್ದರಿಂದ ಮುಜುಗರ ತಪ್ಪಿಸಲು ಮುಖ್ಯಮಂತ್ರಿಗಳು ಎಸ್. ರವಿ ಕುಮಾರ್‌ಗೆ ರಾಜೀನಾಮೆ ನೀಡಲು ಸೂಚನೆ ನೀಡಿದ್ದರು. → 4

ಭೋವಿ ಅಭಿವೃದ್ಧಿ ನಿಗಮದಲ್ಲಿ ಫಲಾನುಭವಿಗಳಿಂದ ನೇರ ವಸೂಲಿಗೆ ಇಳಿದಿರುವ ನಿಗಮದ ಅಧ್ಯಕ್ಷ ರವಿಕುಮಾರ್ ಅವರು ಭೂ ಒಡೆತನ ಯೋಜನೆಯಡಿ ಲಂಚ ಕೇಳಿ ಸಿಕ್ಕಿಬಿದ್ದಿರುವ ಪ್ರಕರಣ ಅತ್ಯಂತ ನಾಚಿಕೆಗೇಡಿತನದ್ದು. ದಲಿತ ವಿರೋಧಿ ಕಾಂಗ್ರೆಸ್ ಸರಕಾರ ಈ ಮೊದಲು ವಾಲ್ಮೀಕಿ ನಿಗಮದ ಬ್ಯಾಂಕ್ ಖಾತೆಗಳಿಗೆ ಖನ್ನ ಹಾಕಿತ್ತು, ನಂತರ ಪರಿಶಿಷ್ಟರು, ಶೋಷಿತ ಸಮುದಾಯಗಳ ಕಲ್ಯಾಣಕ್ಕೆ ಮೀಸಲಿಟ್ಟಿರುವ ಹಣವನ್ನೂ ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿತು. ಇದೀಗ ಭೋವಿ ಸಮುದಾಯದ ಅಭಿವೃದ್ಧಿ ನಿಗಮದ ಫಲಾನುಭವಿಗಳಿಂದ ವಸೂಲಿಗಿಳಿದಿರುವುದು ನಿಜಕ್ಕೂ ನಾಡಿಗೆ ದುರಂತದ ದೌರ್ಭಾಗ್ಯ.

- **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಶಾಸಕ ವೀರೇಂದ್ರ ಬೆಂಬಿಡದ ಇ.ಡಿ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ಹಾಗೂ ಅಕ್ರಮ ಹಣ ವರ್ಗಾವಣೆ ಆರೋಪದಲ್ಲಿ ಇಡಿ ವಶದಲ್ಲಿರುವ ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ ಅವರ ಮನೆಗಳ ಮೇಲೆ ಮತ್ತೆ ಇಡಿ ದಾಳಿಯಾಗಿದೆ. ಚಿತ್ರದುರ್ಗ ಹಾಗೂ ಚಳ್ಳಕೆರೆಯಲ್ಲಿರುವ ಸಹೋದರರ ನಿವಾಸ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿರುವ ಇಡಿ ಅಧಿಕಾರಿಗಳು ಮಂಗಳವಾರ ಆರು ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಪವಿತ್ರಾಗೆ ಮತ್ತೆ ಜಾಮೀನು ನಕಾರ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಪವಿತ್ರಾ ಗೌಡ ಸಲ್ಲಿಸಿದ್ದ ಜಾಮೀನು ಅರ್ಜಿ ವಜಾ ಗೊಂಡಿದೆ. ಅರ್ಜಿ ವಿಚಾರಣೆ ನಡೆಸಿದ 57ನೇ ಸೆಷನ್ಸ್ ನ್ಯಾಯಾಲಯ ಪವಿತ್ರಾ ಗೌಡ ಅರ್ಜಿ ಯನ್ನು ವಜಾಗೊಳಿಸಿದೆ.

ಮಹಿಳೆ ಹಾಗೂ ಏಕಪೋಷಕಿ ಆಗಿರುವುದರಿಂದ ಮಗಳ ಆರೈಕೆ ಮಾಡಬೇಕಿದೆ ಎಂಬ ಕಾರಣ ನೀಡಿ ಪವಿತ್ರಾ ಗೌಡ ಸೆಷನ್ ನ್ಯಾಯಾಲಯಕ್ಕೆ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ, ಪವಿತ್ರಾ ಗೌಡ ಅವರ ಮನವಿ ಯನ್ನು ಪರಿಗಣಿಸದ ನ್ಯಾಯಾಲಯ ಜಾಮೀನು ಅರ್ಜಿಯನ್ನು ವಜಾ ಮಾಡಿದೆ.

ದರ್ಶನ್ ಶಿಫ್ಟ್: ಇಂದು ವಿಚಾರಣೆ

ದರ್ಶನ್ ಮತ್ತು ಇತರ ಆರೋಪಿಗಳಾದ ನಾಗರಾಜ್, ಪ್ರದುಷ್, ಜಗದೀಶ್ ಹಾಗೂ ಲಕ್ಷ್ಮಣ್ ಅವರನ್ನು ಬೇರೆ ಕಾರಾಗೃಹಗಳಿಗೆ ವರ್ಗಾವಣೆ ಮಾಡಬೇಕೆಂದು ಕೋರಿ ಸರಕಾರ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಸೆಷನ್ಸ್ ಕೋರ್ಟ್ ಮುಂದೂಡಿದೆ. ಇದೇ ವೇಳೆ ಜೈಲಿನಲ್ಲಿ ಹೆಚ್ಚುವರಿ ಹಾಸಿಗೆ, ದಿಂಬು ಕೋರಿದ ದರ್ಶನ್ ಅರ್ಜಿಯ ವಿಚಾರಣೆಯನ್ನೂ ಕೋರ್ಟ್ ಬುಧವಾರ ಸಂಜೆ 4 ಗಂಟೆಗೆ ಮುಂದೂಡಿದೆ. ದರ್ಶನ್‌ನನ್ನು ಬಳ್ಳಾರಿಗೆ ಶಿಫ್ಟ್ ಮಾಡುವ ಸರಕಾರಿ ವಕೀಲರ ವಾದಕ್ಕೆ ದರ್ಶನ್ ಪರ ವಕೀಲ ಸಂದೀಪ್ ಚೌಟ ಆಕ್ಷೇಪಣೆ ಸಲ್ಲಿಸಿದರು. 5 ಸಾವಿರ ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆಯಾಗಿದ್ದು ಪ್ರಕರಣದಲ್ಲಿ 272 ಸಾಕ್ಷಿಗಳಿದ್ದಾರೆ. ಆರೋಪಿಯನ್ನು ವಿಡಿಯೋ ಕಾನ್ಫರೆನ್ಸ್‌ನಲ್ಲಿ ವಿಚಾರಣೆ ಹೇಗೆ ಮಾಡಲಾಗುತ್ತದೆ ಎಂದು ಅವರು ಪ್ರಶ್ನಿಸಿದರು.

127 ಕೆಜಿ ಅಕ್ರಮ ಚಿನ್ನ ಸಾಗಣೆ ಪ್ರಕರಣದಲ್ಲಿ ನಟಿಗೆ ಶಾಕ್

ನಟಿ ರನ್ಯಾ ರಾವ್‌ಗೆ 102 ಕೋಟಿ ರುಪಾಯಿ ದಂಡ!

ಬೆಂಗಳೂರು: ನಟಿ ರನ್ಯಾ ರಾವ್‌ಗೆ ಡಿಆರ್‌ಐ ಶಾಕ್ ನೀಡಿದ್ದು, 127 ಕೆಜಿ ಚಿನ್ನ ಅಕ್ರಮ ಸಾಗಾಟ ಸಾಬೀತಾದ ಹಿನ್ನೆಲೆಯಲ್ಲಿ ನಟಿಗೆ 102 ಕೋಟಿ ರು. ದಂಡ ವಿಧಿಸಿದೆ. 127 ಕೆಜಿ ಚಿನ್ನ ಅಕ್ರಮ ಸಾಗಾಟ ಮಾಡಿರುವುದು ತನಿಖೆಯಲ್ಲಿ ಸಾಬೀತಾಗಿದೆ. ಡಿಆರ್‌ಐ ತನಿಖೆಯಲ್ಲಿ ಸ್ಫೋಟಕ ಮಾಹಿತಿ ಬಹಿರಂಗವಾಗಿದೆ. ಈ ಹಿನ್ನೆಲೆಯಲ್ಲಿ 102 ಕೋಟಿ ರು. ಪಾವತಿ ಮಾಡುವಂತೆ ರನ್ಯಾ ರಾವ್‌ಗೆ ಡಿಆರ್‌ಐ ಶೋಕಾಸ್ ನೋಟಿಸ್ ನೀಡಿದೆ.

ನಾಲ್ವರು ಆರೋಪಿಗಳಿಗೂ ಡಿಆರ್‌ಐ ಶೋಕಾಸ್ ನೋಟಿಸ್ ನೀಡಿದೆ. ಈಗಾಗಲೇ ಇಡಿ 37 ಕೋಟಿ ರು.ನಷ್ಟು ಆಸ್ತಿ ಜಪ್ತಿ ಮಾಡಿದೆ. ಆಸ್ತಿ ಕಳೆದುಕೊಂಡು ಖಾಲಿ ಕೈಯಾಗಿರುವ ರನ್ಯಾ ರಾವ್‌ಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ದಂಡ ಸಮೇತ 102 ಕೋಟಿ ರು. ಸಂದಾಯ ಮಾಡಲು ನೋಟಿಸ್ ಕೊಡಲಾಗಿದೆ. ಸದ್ಯ ಕಾಫಿಪೋಸಾ ಅಡಿಯಲ್ಲಿ ರನ್ಯಾ ರಾವ್ ಬಂಧನ ಆಗಿದೆ. ಡಿಆರ್‌ಐ ತನಿಖೆಯಲ್ಲಿ ದುಬೈನಿಂದ ಚಿನ್ನ ವಹಿವಾಟು ಮಾಡಿರುವುದು ಸಾಬೀತಾಗಿದೆ.

ತರುಣ್ ಕೊಂಡುರು ರಾಜುಗೆ 62 ಕೋಟಿ ರು. ದಂಡ: ಎ2 ಆರೋಪಿ ತರುಣ್ ಕೊಂಡುರು ರಾಜು 67.6 ಕೆ.ಜಿ ಚಿನ್ನ ಕಳ್ಳಸಾಗಣೆ ದೃಢವಾಗಿದೆ. → 4

ಫನ್‌ತರಂಗ

- ರಘುಪತಿ ಶೃಂಗೇರಿ -

ಸ್ವಂತ ವಿಮಾನ ಖರೀದಿಗೆ ಸರ್ಕಾರ ಚಿಂತನೆ
ಸುದ್ದಿ



ಯೋಜನೆಗೆ ಸಚಿವ ದಿನೇಶ್ ಗುಂಡೂರಾವ್ ಚಾಲನೆ | ಸದ್ಯ ಬೆಂಗಳೂರಿನ ಮೂರು ಆಸ್ಪತ್ರೆಗೆ | ಸೀಮಿತ, ಮುಂದೆ ರಾಜ್ಯಕ್ಕೆ ವಿಸ್ತರಣೆ

ಸರಕಾರಿ ಆಸ್ಪತ್ರೆಗಳಲ್ಲಿ ಇಸ್ಕಾನ್ ರುಚಿಕರ, ಪೌಷ್ಟಿಕ ಆಹಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆರೋಗ್ಯ ಇಲಾಖೆ ಹಾಗೂ ಇಸ್ಕಾನ್ ಸಹಯೋಗದಲ್ಲಿ ನಗರದ ಮೂರು ಪ್ರಮುಖ ಸರಕಾರಿ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗೆ ಪೌಷ್ಟಿಕ ಆಹಾರ ವಿತರಿಸುವ ಹೊಸ ಯೋಜನೆ ಪ್ರಾರಂಭಿಸಲಾಗಿದೆ. ಬೆಂಗಳೂರಿನ ಇಂದಿರಾನಗರದಲ್ಲಿರುವ ಸಿ.ವಿ. ರಾಮನ್ ನಗರ ಜನರಲ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಊಟ ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಸದ್ಯ ಕೆಸಿ ಜನರಲ್ ಆಸ್ಪತ್ರೆ, ಜಯನಗರ ಜನರಲ್ ಆಸ್ಪತ್ರೆ, ಸಿವಿ ರಾಮನ್ ಜನರಲ್ ಆಸ್ಪತ್ರೆಯಲ್ಲಿ ಇಸ್ಕಾನ್ ಊಟ ಸಿಗಲಿದೆ. ಸುಮಾರು 9 ತಿಂಗಳ ಅವಧಿಗೆ ಒಪ್ಪಂದ ಮಾಡಿ ಕೊಳ್ಳಲಾಗಿದೆ. ಅದಕ್ಕಾಗಿ 1.37 ಕೋಟಿ ರುಪಾಯಿ ವೆಚ್ಚವಾಗಲಿದೆ. ಯೋಜನೆಗೆ ಚಾಲನೆ ಬಳಿಕ ದಿನೇಶ್ ಗುಂಡೂರಾವ್ ಮಾತನಾಡಿ, ಮೂರು ಆಸ್ಪತ್ರೆಗಳಲ್ಲಿ ಪ್ರಾಯೋಗಿಕವಾಗಿ ಪೌಷ್ಟಿಕ ಆಹಾರ ವಿತರಣೆ ಮಾಡುತ್ತಿದ್ದೇವೆ. → 4

ವಿಶೇಷ ಯೋಜನೆಗಳು

- ಮಾಮೂಲಿ ಆಹಾರದ ಜತೆ ಚಿಕಿತ್ಸಾ ಆಹಾರ ಪೂರೈಕೆ
- ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ವಿಶೇಷ ಆಹಾರ ವಿತರಣೆ

ಆಹಾರ ಯೋಜನೆ ಮುಖ್ಯಾಂಶಗಳು

- ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ
- ಸಂಜೆ ಮತ್ತೆ ಉಪಾಹಾರ, ರಾತ್ರಿ ಊಟ

ಏನೇನಿರಲಿದೆ?

- ರವೆ ಉಪ್ಪಿಟ್ಟು, ಪೊಂಗಲ್, ಗೋಧಿ ಗಂಜಿ, ರಾಗಿಮುದ್ದೆ, ಚಪಾತಿ, ಅನ್ನ, ಸಾಂಬಾರ್, ಪಲ್ಯ, ಸೋಯಾ, ಹಾಲು, ಹಣ್ಣು, ಮೊಸರು, ಬಿಸ್ಕತ್.

ಪೌಷ್ಟಿಕತೆಯ ಮಾನದಂಡ

- ಸಾಮಾನ್ಯರಿಗೆ 2200 ಕ್ಯಾಲರಿ, 70 ಗ್ರಾಂ ಪ್ರೊಟೀನ್
- ತಾಯಂದಿರು: 2460 ಕ್ಯಾಲರಿ, 69 ಗ್ರಾಂ ಪ್ರೊಟೀನ್
- ಮಕ್ಕಳು: 1300-1400 ಕ್ಯಾಲರಿ, 40 ಗ್ರಾಂ ಪ್ರೊಟೀನ್

ಸಮಾಚಾರ ಸಣ್ಣದಲ್ಲ

ಕುಣಿಯುವ ವೇಳೆ ಕುಸಿದು ಬಿದ್ದು ಸಾವು

ರಾಯಚೂರು: ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಡಿಜೆ ಹಾಡಿಗೆ ಡ್ಯಾನ್ಸ್ ಮಾಡುವಾಗ ಕುಸಿದು ಬಿದ್ದ ಯುವಕನಿಗೆ ಏಕಾಏಕಿ ಫಿಟ್ಸ್ ಕಾಣಿಸಿಕೊಂಡು ಮೃತಪಟ್ಟಿರುವ ಘಟನೆ ನಗರದ ತೀನ್ ಖಂದಿಲ್ ವೃತ್ತದ ಬಳಿ ನಡೆದಿದೆ. ರಾಯಚೂರು ನಗರದ ಮಂಗಳವಾರ ಪೇಟೆಯ ಅಭಿಷೇಕ್ (24) ಮೃತ ಯುವಕ. ಗಣೇಶ ವಿಸರ್ಜನೆಯ ವೇಳೆ ರಾತ್ರಿಯಿಡೀ ಡ್ಯಾನ್ಸ್ ಮಾಡಿ ಅಭಿಷೇಕ್ ಸುಸ್ತಾಗಿ ಕುಸಿದು ಬಿದ್ದಿದ್ದ. ಈ ವೇಳೆ ಆತನಿಗೆ ಫಿಟ್ಸ್ ಕಾಣಿಸಿಕೊಂಡಿತ್ತು. ಕೂಡಲೇ ಆತನನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದ್ರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಅಭಿಷೇಕ್ ಮೃತಪಟ್ಟಿದ್ದಾನೆ. ಸದರ್ ಬಜಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಪೇದೆ, ಜೆಸ್ಕಾಂ ನೌಕರ ಸೇರಿ ಚಿಕ್ಕಮ್ಮನ ಮೇಲೆ ನಿರಂತರ ಅತ್ಯಾಚಾರ

ಯಾದಗಿರಿ: ರಾಜ್ಯದಲ್ಲಿ ಅಸಹ್ಯಕರ ಘಟನೆಯೊಂದು ನಡೆದಿದೆ. ಕಳೆದ 7 ವರ್ಷಗಳಿಂದ ಜೀವ ಬೆದರಿಕೆ ಹಾಕಿ ಚಿಕ್ಕಮ್ಮನ ಮೇಲೆ ಯುವಕರಿಬ್ಬರು ಮೃಗೀಯವಾಗಿ ನಡೆದುಕೊಂಡಿದ್ದಾರೆ. ಪೊಲೀಸ್ ಪೇದೆ ಹಾಗೂ ಜೆಸ್ಕಾಂ ಉದ್ಯೋಗದಲ್ಲಿರುವ ಯುವಕರು ಪದೇ ಪದೇ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಯಾದಗಿರಿ ಜಿಲ್ಲೆಯ ಗುರುಮಿಠಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು ಯಾದಗಿರಿ ಸಂಚಾರಿ ಠಾಣೆ ಕಾನ್ಸ್‌ಟೇಬಲ್ ರಮೇಶ್ ಹಾಗೂ ಆತನ ಸಹೋದರ ಜೆಸ್ಕಾಂ ನೌಕರ ಲಕ್ಷ್ಮಣ್ ಇಬ್ಬರೂ ತಮ್ಮ ಚಿಕ್ಕಪ್ಪನ ಪತ್ನಿ ಚಿಕ್ಕಮ್ಮನ ಮೇಲೆಯೇ ನಿರಂತರವಾಗಿ ಅತ್ಯಾಚಾರವೆಸಗಿದ್ದಾರೆ. ಈ ಬಗ್ಗೆ ಸಂತ್ರಸ್ತ ಮಹಿಳೆ ಯಾದಗಿರಿ ಮಹಿಳಾ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಚಿಕಿತ್ಸೆ ವೇಳೆ ಮಹಿಳೆ ಸಾವು

ಕೊಪ್ಪಳ: ಸಂತಾನಹರಣ ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಾಗಿದ್ದ ತಾಯಿ ಸಾವನ್ನಪ್ಪಿರುವ ಘಟನೆ ಕೊಪ್ಪಳದ ಹಿರೇ ವಂಕಲಕುಂಟ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದಿದೆ. ಮಲ್ಲಮ್ಮ ಕಲ್ಲೂರ್ (23) ಮೃತ. ಮಲ್ಲಮ್ಮ ಅವರಿಗೆ ಮೂವರು ಮಕ್ಕಳಿದ್ದು, ಸಂತಾನಹರಣ ಮಾಡಿಸಿಕೊಳ್ಳಲು ನಿರ್ಧರಿಸಿದ್ದರು.

ರನ್ಯಾ ರಾವ್‌ಗೆ 102 ಕೋಟಿ ರು.ದಂಡ

← ಮೊದಲಪುಟದಿಂದ

ತರುಣ್ ಕೊಂಡುರು ರಾಜುಗೆ 62 ಕೋಟಿ ರು. ದಂಡ ವಿಧಿಸಲಾಗಿದೆ. ಅದೇ ರೀತಿ ಸಾಹಿಲ್ ಜೈನ್ ಮತ್ತು ಭರತ್ ಜೈನ್ ತಲಾ 63.61 ಕೆ.ಜಿ ಚಿನ್ನ ಕಳ್ಳಸಾಗಣೆ ಮಾಡಿರುವುದು ದೃಢವಾಗಿದ್ದು, 53 ಕೋಟಿ ರು. ದಂಡ ಪಾವತಿಗೆ ಸೂಚನೆ ನೀಡಲಾಗಿದೆ. ಜತೆಗೆ ಕ್ರಿಮಿನಲ್ ಪ್ರಕರಣವೂ ಮುಂದುವರಿಯಲಿದೆ. ರನ್ಯಾ ರಾವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಹೈಕೋರ್ಟ್‌ನಲ್ಲಿ ಕಾಫಿಪೋಸಾ ಅರ್ಜಿ ವಿಚಾರಣೆ ನಡೆಯಿತು. ಈ ವೇಳೆ ಕೋರ್ಟ್‌ಗೆ 2,500 ಪುಟಗಳ ದಾಖಲೆಗಳನ್ನ ನೀಡಲಾಗಿದೆ. ಸೆಪ್ಟೆಂಬರ್ 11ಕ್ಕೆ ಮತ್ತೆ ವಿಚಾರಣೆ ನಡೆಯಲಿದೆ.

ರಾಜಕೀಯ ಲಾಭಕ್ಕಾಗಿ ಸಮಾವೇಶ | ಧರ್ಮಸ್ಥಳ ಬುರುಡೆ ಪ್ರಕರಣದ ಸಂಬಂಧ ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಆಕ್ರೋಶ

ವಿಪಕ್ಷ ಆರೋಪವೆಲ್ಲ ಸತ್ಯವೇ: ಸಿಎಂ ಪ್ರಶ್ನೆ

ಮೈಸೂರು: ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ಚಿನ್ನಯ್ಯನನ್ನು ಕರೆದುಕೊಂಡು ಬಂದಿದ್ದೇ ಕಾಂಗ್ರೆಸ್ ಎಂಬ ಬಿಜೆಪಿ ಆರೋಪದ ವಿಚಾರದ ಬಗ್ಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬಿಜೆಪಿ ವಿರುದ್ಧ ಕಿಡಿಕಾರಿದರು.

ಈ ಕುರಿತು ಮೈಸೂರಿನಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಹೇಳಿದ್ದನ್ನೆಲ್ಲಾ ಕೇಳಬೇಕು ಎಂದು ಏನಿಲ್ಲ. ವಿಪಕ್ಷಗಳ ಆರೋಪಗಳೆಲ್ಲಾ ಸತ್ಯವೇ ಎಂದು ಪ್ರಶ್ನಿಸಿದರು.

ಸೌಜನ್ಯ ಕುಟುಂಬಕ್ಕೆ ಬಿಟ್ಟ ವಿಚಾರ: ಸೌಜನ್ಯ ತಾಯಿಯನ್ನು ವಿಜಯೇಂದ್ರ ಭೇಟಿ ಮಾಡಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಸುಪ್ರೀಂಕೋರ್ಟ್‌ಗೆ ಹೋಗುವುದು ಬಿಡುವುದು ಸೌಜನ್ಯ ಕುಟುಂಬಕ್ಕೆ ಬಿಟ್ಟ ವಿಚಾರ. ಒಂದು ಕಡೆ ವೀರೇಂದ್ರ ಹೆಗ್ಗಡೆ ಪರವಾಗಿ ಜೈಕಾರ ಹಾಕುತ್ತಾರೆ. ರಾಜಕೀಯ ಲಾಭಕ್ಕಾಗಿ ಹೀಗೆ ಮಾಡುತ್ತಾರೆ ಎಂದು ಆರೋಪಿಸಿದರು.

ಸೌಜನ್ಯ ಅಪಹರಣವನ್ನು ನೋಡಿದ್ದೇನೆ ಎಂದು ಎಸ್ಐಟಿಗೆ ಮಹಿಳೆ ದೂರು ಕೊಟ್ಟ ವಿಚಾರಕ್ಕೆ ಪ್ರತಿಕ್ರಿಯಿಸಿ, ಕೋರ್ಟ್‌ನಲ್ಲಿ ಆ ಮಹಿಳೆ ಯಾಕೆ ಸಾಕ್ಷಿ ಹೇಳಿಲ್ಲ? ಸಿಬಿಐ ತನಿಖೆ ನಡೆದಾಗ ಯಾಕೆ ಹೇಳಿಲ್ಲ? ಸಾಕ್ಷಿಯನ್ನು ಬಚ್ಚಿಡುವುದು ಸಹ ಒಂದು ಅಪರಾಧ. ಸತ್ಯ ಗೊತ್ತಿರುವುದನ್ನು ಬಚ್ಚಿಡುವುದು ಸಹ ಅಪರಾಧ. ಎಸ್ಐಟಿಗೆ ದೂರು ಕೊಟ್ಟಿರುವ ಮಹಿಳೆ ಒಡನಾಡಿ ಸಂಸ್ಥೆಯಲ್ಲಿ ಎರಡು ವರ್ಷವಿದ್ದರೂ ಎಂದು ಹೇಳಾಗುತ್ತಿದೆ. ಆಕೆ ಯಾವ ಸಂಸ್ಥೆಯಲ್ಲಿದ್ದರೂ ಸಹ ಸಾಕ್ಷಿ ಬಚ್ಚಿಡುವುದು ಅಪರಾಧವಾಗಿದೆ ಎಂದರು.

ಕುಂಕುಮ ಹಾಕಿಕೊಳ್ಳಿ ಎಂದು ಹೇಳಲು ಸಾಧ್ಯವೇ?

ದಸರಾ ಉದ್ಘಾಟನೆ ಮಾಡುತ್ತಿರುವ ಬಾನು ಮುಷ್ತಾಕ್ ಅವರಿಗೆ ವಿರೋಧಿಸುತ್ತಿರುವ ಬಿಜೆಪಿ ನಾಯಕರ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿಕಾರಿದರು. ದಸರಾ ಉದ್ಘಾಟಕರ ಆಯ್ಕೆ ವಿರೋಧಿಸಿ ಚಾಮುಂಡಿ ಚಲೋ ವಿಚಾರದ ಕುರಿತು ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತ್ತೊಂದು ಧರ್ಮದವರನ್ನು ದಸರಾ ಉದ್ಘಾಟನೆಗೆ ಕರೆದು ಕುಂಕುಮ ಹಾಕಿಕೊಳ್ಳಿ ಎಂದು ಹೇಳಲು ಸಾಧ್ಯವೇ? ಎಂದು ಬಿಜೆಪಿ ನಾಯಕರಿಗೆ ಪ್ರಶ್ನಿಸಿದರು.

ಮಿರ್ಜಾ ಇಸ್ಮಾಯಿಲ್ ಅವರನ್ನು ಮಹಾರಾಜರು ಅಂಬಾರಿಯಲ್ಲಿ ಕೂರಿಸಿಕೊಂಡು ಮೆರವಣಿಗೆ ಮಾಡಿದ್ದಾರೆ. ಆಗ ಆರ್‌ಎಸ್‌ಎಸ್‌ನವರು ಎಲ್ಲಿಗೆ ಹೋಗಿದ್ದರು? ಎಂದು ಮರು ಪ್ರಶ್ನೆ ಹಾಕಿದರು. ಅರಿಶಿನ-ಕುಂಕುಮದ ಬಗ್ಗೆ ಮಾತನಾಡಿರುವುದು ನನಗೆ ಗೊತ್ತಿಲ್ಲ. ಬಾನು ಮುಷ್ತಾಕ್ ಕನ್ನಡದ ಬರಹಗಾರ್ತಿ. ಕನ್ನಡದ ಬಗ್ಗೆ ಪ್ರೀತಿ ಅಭಿಮಾನ ಇಲ್ಲದಿದ್ದರೆ ಪುಸ್ತಕಗಳನ್ನು ಬರೆಯಲು ಸಾಧ್ಯವಿಲ್ಲ. ಕುಂಕುಮ ಹಾಕುವುದು ಅವರ ಧರ್ಮದಲ್ಲಿ ಇದೆಯಾ? ಅವರ ಧರ್ಮದಲ್ಲಿ ಫತ್ವಾ ಹೊರಡಿಸಿರುವುದು ಸುಳ್ಳು. ಈ ಬಗ್ಗೆ ಮುಸ್ಲಿಂ ಧರ್ಮಗುರುಗಳು ಸ್ಪಷ್ಟಪಡಿಸಿದ್ದಾರೆ ಎಂದರು.

ಬಿಜೆಪಿಯವರು ಯಾರ ಪರ ಇದ್ದಾರೆ: ಸೌಜನ್ಯ ಕೇಸ್ ಮರು ತನಿಖೆ ಮಾಡುವ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಿಬಿಐ ಯಾರ ಅಧೀನದಲ್ಲಿದೆ. ಕೇಂದ್ರದವರೇ ತನಿಖೆ ಮಾಡಿ ವರದಿ ಕೊಟ್ಟಿದ್ದಾರೆ. ಈಗ ಸುಪ್ರೀಂಕೋರ್ಟ್‌ಗೆ ಹೋಗಿ ಅಂಥ ಹೇಳುತ್ತಿರುವುದು ಯಾರು? ಸೌಜನ್ಯ ಕೇಸ್‌ನಲ್ಲಿ ಯಾರ ಮೇಲೆ ಆರೋಪ ಬಂದಿದೆ. ಹಾಗಾದರೆ ಬಿಜೆಪಿ ಯಾರ ಪರ ಹೇಳಿ. ಒಂದು ಕಡೆ ವೀರೇಂದ್ರ ಹೆಗ್ಗಡೆ ಪರ ಎನ್ನುತ್ತಾರೆ ಮತ್ತೊಂದು ಕಡೆ ಸೌಜನ್ಯ ಪರ ಎನ್ನುತ್ತಾರೆ. ಹಾಗಾದರೆ ಯಾರ ಪರ ಇದ್ದಾರೆ ಬಿಜೆಪಿಯವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಧರ್ಮಸ್ಥಳ ವಿಚಾರ ಕುರಿತು ಎಸ್ಐಟಿ ತನಿಖೆ ನಡೆಯುತ್ತಿದೆ. ನಮ್ಮ ಪೊಲೀಸ್ ಮೇಲೆ ನಂಬಿಕೆ ಇಲ್ವಾ? ವೀರೇಂದ್ರ ಹೆಗ್ಗಡೆ ಅವರೇ ತನಿಖೆಯನ್ನು ಸ್ವಾಗತ ಮಾಡಿದ್ದಾರೆ. ಸತ್ಯ ಹೊರಬರಬೇಕು, ಎಲ್ಲವೂ ಜನರಿಗೆ ಗೊತ್ತಾಗಬೇಕೆಂದು ಹೆಗ್ಗಡೆಯವರೇ ಹೇಳಿದ್ದಾರೆ. ನಾವು ಯಾರು ಸಹ ತನಿಖೆಯಲ್ಲಿ ಮಧ್ಯಪ್ರವೇಶ ಮಾಡುತ್ತಿಲ್ಲ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೈಸೂರು ಅರಮನೆಗೆ ರಾಷ್ಟ್ರಪತಿ ಮುರ್ಮು ಭೇಟಿ

ಮೈಸೂರು: ಕಾರ್ಯಕ್ರಮ ನಿಮಿತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಮೈಸೂರಿಗೆ ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ ಮೊದಲೇ ಪತ್ರ ಬರೆದಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು, ಅರಮನೆಗೆ ಭೇಟಿ ನೀಡಿ ಸತ್ಕಾರ ಸ್ವೀಕರಿಸಬೇಕೆಂದು ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಅರಮನೆಗೆ ಭೇಟಿ ನೀಡಿದ ಇಬ್ಬರೂ ಗಣ್ಯರಿಗೆ ವಿಶೇಷ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಉಪಾಹಾರದ ವೇಳೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಉಪಸ್ಥಿತರಿದ್ದರು.

ಅರಮನೆಯಲ್ಲಿ ಬೆಳ್ಳಿಯ ತಟ್ಟೆಯಲ್ಲಿ ಗಣ್ಯರಿಗೆ ಉಪಾಹಾರ ನೀಡಲಾಯಿತು. ಎಳನೀರು, ಕಿವಿ ಫ್ರೂಟ್, ಪಪ್ಪಾಯಿ ಸೇರಿದಂತೆ ವಿವಿಧ ಹಣ್ಣುಗಳು, ಸಾಂಪ್ರದಾಯಿಕ ಮೈಸೂರು ಭಕ್ಷ್ಯಗಳಾದ ಮೈಸೂರು ಮಸಾಲೆ ದೋಸೆ, ಇಡ್ಲಿ, ಸಾಂಬರ್, ಚಟ್ನಿ, ಶ್ಯಾವಿಗೆ ಉಪ್ಪಿಟ್ಟು, ಮೈಸೂರು ಪಾಕ್, ಗೋಧಿ ಹಾಲ್ಬಾಯಿ ಮತ್ತು ಬಾದಾಮ್ ಹಲ್ವಾ ಅನ್ನು ಅರಮನೆಯ ಸಿಬ್ಬಂದಿ ಉಣಬಡಿಸಿದರು.

ಮೈಸೂರಿನ ಅರಮನೆಗೆ ಮಂಗಳವಾರ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಜಮಾತೆ ಪ್ರಮೋದಾದೇವಿ ಒಡೆಯರ್ ಹಾಗೂ ಸಂಸದ ಯದುವೀರ್ ಒಡೆಯರ್ ಹೂವು ಗುಚ್ಛ ನೀಡಿ ಬರ ಮಾಡಿಕೊಂಡರು.

ಬುರುಡೆ ಪ್ರಕರಣ ಎನ್‌ಐಎಗೆ ನೀಡಲು ಆಗ್ರಹ

ಧರ್ಮಸ್ಥಳ ಯಾತ್ರೆ ಹೊರಟ ಈಶ್ವರಪ್ಪ

ಶಿವಮೊಗ್ಗ: ಹಿಂದೂಗಳ ಧಾರ್ಮಿಕ ಕ್ಷೇತ್ರದ ಬಗ್ಗೆ ಹಾಗೂ ಪುಣ್ಯಕ್ಷೇತ್ರ ಧರ್ಮಸ್ಥಳದ ಬಗ್ಗೆ ನಿರಂತರ ಅಪಪ್ರಚಾರ ಮಾಡುತ್ತಾ, ವೀರೇಂದ್ರ ಹೆಗ್ಗಡೆ ಅವರಿಗೆ ಕೆಟ್ಟ ಹೆಸರು ತರುವ ಹುನ್ನಾರ ನಡೆಯುತ್ತಿದ್ದು, ಅದರ ವಿರುದ್ಧ ರಾಷ್ಟ್ರಭಕ್ತರ ಬಳಗದಿಂದ ಧರ್ಮಸ್ಥಳಕ್ಕೆ ಶಿವಮೊಗ್ಗದಿಂದ ಧರ್ಮರಕ್ಷಾ ಜಾಥಾ ಹಮ್ಮಿಕೊಂಡಿದ್ದೇವೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಧರ್ಮಸ್ಥಳಕ್ಕೆ ಧರ್ಮರಕ್ಷಾ ಜಾಥಾಕ್ಕೆ ಚಾಲನೆ ನೀಡಿ, ಸುದ್ದಿಗಾರರೊಂದಿಗೆ ಮಾತನಾಡಿ, ಧರ್ಮಸ್ಥಳ ದೇವಾಲಯವನ್ನು ನಾವು ಪ್ರಾಣಕೊಟ್ಟಾದರೂ ಉಳಿಸಿಕೊಳ್ಳುತ್ತೇವೆ. ಹಿಂದೂಗಳಿಗೆ ಅದು ಪವಿತ್ರ ಪುಣ್ಯಕ್ಷೇತ್ರವಾಗಿದೆ. ಇದರ ವಿರುದ್ಧ ಷಡ್ಯಂತ್ರ ಮಾಡಿದವರಿಗೆ ದೇಶ-ವಿದೇಶಗಳಿಂದ ಹಣ ಹರಿದು ಬರುತ್ತಿದೆ. ಇದರ ಮೂಲ ಕಂಡುಹಿಡಿದು ಅಪಪ್ರಚಾರ ಮಾಡುವವರಿಗೆ ತಕ್ಕಪಾಠ ಕಲಿಸಲು ಎಸ್‌ಐಟಿ ತನಿಖೆ ಸಾಕಾಗುವುದಿಲ್ಲ. ಇದನ್ನು ಎನ್‌ಐಎಗೆ ವಹಿಸಬೇಕು ಎಂದು ಆಗ್ರಹಿಸಿದರು.

ಸುಮಾರು 250ಕ್ಕೂ ಹೆಚ್ಚು ಕಾರುಗಳಲ್ಲಿ ಮತ್ತು 5 ಟಿಟಿ ವಾಹನಗಳಲ್ಲಿ ರಾಷ್ಟ್ರಭಕ್ತರು ಮತ್ತು ಪುಣ್ಯಕ್ಷೇತ್ರದ ಭಕ್ತರು ಧರ್ಮಸ್ಥಳಕ್ಕೆ ಹೊರಟಿದ್ದೇವೆ. ಧರ್ಮವನ್ನು ಉಳಿಸಲು ಕುತಂತ್ರಿಗಳ ಷಡ್ಯಂತ್ರವನ್ನು ಬಯಲು ಮಾಡಲು ವೀರೇಂದ್ರ ಹೆಗ್ಗಡೆಯವರಿಗೆ ಧೈರ್ಯತುಂಬಿ ನೈತಿಕ ಬೆಂಬಲ ವ್ಯಕ್ತಪಡಿಸಲು ಈ ಯಾತ್ರೆಯನ್ನು ಕೈಗೊಂಡಿದ್ದೇವೆ ಎಂದರು.

ಭೋವಿ ನಿಗಮದ ಅಧ್ಯಕ್ಷ ರವಿಕುಮಾರ್ ಒಬ್ಬರೇ ಅಲ್ಲ, ಇಡೀ ರಾಜ್ಯ ಸರಕಾರವೇ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ತೊಡಗಿಕೊಂಡಿದೆ. ಹಿಂದೆ ಭೋವಿ, ವಾಲ್ಮೀಕಿ ನಿಗಮದ ಅಧಿಕಾರಿ ಪತ್ರ ಬರೆದು ಭ್ರಷ್ಟಾಚಾರದ ಬಗ್ಗೆ ಮಾಹಿತಿ ನೀಡಿ, ಆತ್ಮಹತ್ಯೆ ಮಾಡಿಕೊಂಡಿದ್ದರು. ನಮ್ಮ ಹೋರಾಟದ ಫಲವಾಗಿ ಮೂರು ದಿನಗಳ ಹಿಂದಷ್ಟೇ ಅವರ ಮಗನಿಗೆ ಸರಕಾರಿ ಕೆಲಸ ದೊರಕಿದೆ. ಸರಕಾರಕ್ಕೆ ಮುಂದಿನ ಚುನಾವಣೆಯಲ್ಲಿ ಜನ ತಕ್ಕಪಾಠ ಕಲಿಸುತ್ತಾರೆ.

ಕೆ.ಎಸ್.ಈಶ್ವರಪ್ಪ, ಮಾಜಿ ಡಿಸಿಎಂ

ಧರ್ಮರಕ್ಷಾ ಜಾಥಾಕ್ಕೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಚಾಲನೆ ನೀಡಿದರು.

ಸತ್ತವರ ತಲೆಯ ಮೇಲೆ ಕಾಲಿಟ್ಟು ಆಶೀರ್ವದಿಸುವ ಪದ್ಧತಿ ತಪ್ಪು: ಸಾಣೇಹಳ್ಳಿ ಶ್ರೀ

ಜಂಗಮ ಸ್ವಾಮಿಗಳಲ್ಲಿ ವಿವೇಕ ಕಡಿಮೆ

ಕಲಬುರಗಿ: ಜಂಗಮ ಸ್ವಾಮಿಗಳಲ್ಲಿ ವಿವೇಕದ ಕೊರತೆ ಕಂಡು ಬರುತ್ತಿದೆ. ಕೆಲವರು ವಿವೇಕವಿಲ್ಲದಂತೆ ವರ್ತಿಸುತ್ತಿದ್ದಾರೆ. ಸತ್ತವರ ತಲೆಯ ಮೇಲೆ ಕಾಲಿಟ್ಟು ಆಶೀರ್ವಾದ ಮಾಡುತ್ತಿದ್ದು, ಈ ಪದ್ಧತಿ ಸಂಪೂರ್ಣ ತಪ್ಪು ಎಂದು ಸಾಣೇಹಳ್ಳಿಯ ಡಾ. ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಬಸವ ಸಂಸ್ಕೃತಿ ಅಭಿಯಾನದ ಸಂವಾದ'ದಲ್ಲಿ ಪಾಲ್ಗೊಂಡು ವಿದ್ಯಾರ್ಥಿನಿಯೊಬ್ಬರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇಂತಹ ಅವಿವೇಕದ ಆಚರಣೆಗಳನ್ನು ಸಮಾಜ ಒಟ್ಟಾಗಿ ವಿರೋಧಿಸಿ ತಡೆಯಬೇಕಾಗಿದೆ. ಕೆಲವು ಮಠಗಳು ಸಮಾಜಕ್ಕೆ ಪೂರಕವಾಗಿದ್ದರೆ, ಕೆಲವು ಮಠಗಳು ಮಾರಕವಾಗಿವೆ ಎಂದು ಹೇಳಿದರು.

ಸಮಾಜದಲ್ಲಿ ಯಾವ ಮಠ ಪೂರಕ, ಯಾವ ಮಠ ಮಾರಕ ಎಂಬುದನ್ನು ಭಕ್ತರು ಸ್ವತಃ ಗುರುತಿಸಬೇಕು. ಮಾರಕ ಮಠಗಳಿಗೆ ಹೋಗುವುದನ್ನು ಬಿಟ್ಟು, ಪೂರಕ ಮಠಗಳಿಗೆ ಮಾತ್ರ ಹೋಗಿ ಬೆಂಬಲ ನೀಡುವುದು ಸಮಾಜದ ಜವಾಬ್ದಾರಿ. ವಿವೇಕ, ಸಮಾನತೆ, ಕಾಯಕ ಮತ್ತು ದಾಸೋಹದ ಬದುಕೇ ಬಸವ ತತ್ವದ ಸಾರ. ಅದನ್ನು ಪಾಲಿಸುವ ಮಠಗಳು ಮಾತ್ರ ಸಮಾಜಕ್ಕೆ ದಾರಿದೀಪವಾಗುತ್ತವೆ ಎಂದರು.

ಜಾತಿಗಣತಿ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದು ಹಾಗೂ ಉಪಜಾತಿ ಕಾಲಂನಲ್ಲಿ ತಮ್ಮ ಜಾತಿ ಹೆಸರು ನಮೂದಿಸಬೇಕು ಎಂಬ ನಿರ್ಣಯ ಈಗಾಗಲೇ ಕೈಗೊಳ್ಳಲಾಗಿದೆ ಎಂದು ಸಾಣೇಹಳ್ಳಿ ಡಾ.ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಕಲಬುರಗಿಯಲ್ಲಿ ಮಂಗಳವಾರ ನಡೆದ ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಡಾ. ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೇರಿ ಹಲವರು ಪಾಲ್ಗೊಂಡಿದ್ದರು.

ಲಿಂಗಾಯತ ಧರ್ಮ ವಿಶ್ವಧರ್ಮವಾಗಲಿದೆ. ಬಸವ ತತ್ವ ಮತ್ತು ವಚನ ತತ್ವಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಮತ್ತೆ 12ನೇ ಶತಮಾನದ ಕಲ್ಯಾಣ ನಾಡನ್ನು ಕಟ್ಟಲು ಸಾಧ್ಯ. ಭಕ್ತಿ, ಕಾಯಕ, ದಾಸೋಹ ಹಾಗೂ ಸಮಾನತೆ ತತ್ವವನ್ನು ಪಾಲಿಸಿದಾಗ ನಿಜವಾದ ಸಮೃದ್ಧ ನಾಡು ನಿರ್ಮಾಣವಾಗುತ್ತದೆ. ಲಿಂಗಾಯತ ಧರ್ಮ ವಿಶ್ವಧರ್ಮವಾಗುವ ಕಾಲ ಸನ್ನಿಹಿತವಾಗಿದೆ.

– ಡಾ. ತೋಂಟದ ಸಿದ್ಧರಾಮ ಮಹಾಸ್ವಾಮೀಜಿ

5 ಲಕ್ಷ ರು.ಮೌಲ್ಯದ 50 ಗ್ರಾಂ ಚಿನ್ನದ ಗಟ್ಟಿ ವಶ

ವಿಮಾನ ನಿಲ್ದಾಣದಲ್ಲಿ ಚಿನ್ನ ಕಳವು: ಐವರ ಬಂಧನ

ಮಂಗಳೂರು: ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಂಗಳೂರಿನಿಂದ ಮಹಿಳಾ ಪ್ರಯಾಣಿಕರೊಬ್ಬರ ಬ್ಯಾಗ್ನಿಂದ 56 ಗ್ರಾಂ ತೂಕದ ಚಿನ್ನಾಭರಣವನ್ನು ಕಳವು ಮಾಡಿದ ಪ್ರಕರಣದಲ್ಲಿ ಐವರನ್ನು ಬಜಪೆ ಪೊಲೀಸರು ಬಂಧಿಸಿದ್ದಾರೆ.

ವಿಮಾನ ನಿಲ್ದಾಣದ ಏರ್ ಇಂಡಿಯಾ ಸ್ಯಾಟ್ಸ್ ಕಂಪನಿಯಲ್ಲಿ ಲೋಡರ್ ಅನ್ಲೋಡರ್ ಕೆಲಸ ಮಾಡಿಕೊಂಡಿದ್ದ ಮಂಗಳೂರು ತಾಲೂಕು ಕಂದಾವರದ ನಿವಾಸಿ ನಿತಿನ್, ಮೂಡು ಪೆರಾರದ ನಿವಾಸಿಗಳಾದ ಸದಾನಂದ ಮತ್ತು ರಾಜೇಶ್, ಬಜಪೆ ನಿವಾಸಿ ಪ್ರವೀಣ್ ಫೆರ್ನಾಂಡಿಸ್ ಮತ್ತು ಚಿನ್ನಾಭರಣವನ್ನು ಖರೀದಿ ಮಾಡಿದ್ದ ಮೂಡುಪೆರಾರದ ನಿವಾಸಿ ರವಿರಾಜ್ ಎಂಬವರು ಬಂಧಿತ ಆರೋಪಿಗಳು. ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ಆ.30ರಂದು ಬೆಂಗಳೂರಿನಿಂದ ಮಂಗಳೂರಿಗೆ ಬಂದಿದ್ದ ರಾಜೇಶ್ವರಿ ಎಂಬವರು ನಿಲ್ದಾಣದ ಬ್ಯಾಗೇಜ್ ಬೆಲ್ಟ್ ನಿಂದ ತಮ್ಮ ಲಗೇಜ್ ನ್ನು ಪಡೆದು ಚೆಕ್ ಮಾಡಿದಾಗ 56 ಗ್ರಾಂ ತೂಕದ ಚಿನ್ನಾಭರಣ ಕಳವು ಆಗಿರುವುದು ಕಂಡು ಬಂದಿದೆ. ಈ ಬಗ್ಗೆ ಬಜಪೆ ಠಾಣೆಗೆ ದೂರು ನೀಡಿದ್ದರು.

ತನಿಖೆ ನಡೆಸಿದ ಪೊಲೀಸರು ಲೋಡಿಂಗ್- ಅನ್ಲೋಡಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದವರನ್ನು ವಿಚಾರಣೆಗೆ ಒಳಪಡಿಸಿದಾಗ ಚಿನ್ನಾಭರಣ ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಚಿನ್ನವನ್ನು ರವಿರಾಜ್‌ಗೆ ಮಾರಿರುವುದಾಗಿ ತಿಳಿಸಿದ್ದು, ಅದರಂತೆ ಸುಮಾರು 5 ಲಕ್ಷ ರು. ಮೌಲ್ಯದ 50 ಗ್ರಾಂ ಚಿನ್ನದ ಗಟ್ಟಿಯನ್ನು ವಶಪಡಿಸಿಕೊಳ್ಳಲಾಗಿದೆ. ಕಳವು ಮಾಡಿದ ಚಿನ್ನವನ್ನು ಖರೀದಿಸಿದ ಆರೋಪದ ಹಿನ್ನೆಲೆಯಲ್ಲಿ ರವಿರಾಜ್ ಮೇಲೂ ಪ್ರಕರಣ ದಾಖಲಿಸಲಾಗಿದೆ.

ಹಾಸನ ಜಿಲ್ಲೆಯ ಹೆತ್ತೂರು ಹೋಬಳಿಯ ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರ್ಕಹಳ್ಳಿ ಗ್ರಾಮದಲ್ಲಿ ಆತಂಕ ಉಂಟು ಮಾಡಿದ್ದ 12 ಅಡಿ ಉದ್ದದ ಕಾಳಿಂಗ ಸರ್ಪವನ್ನು ಹಿಡಿದು, ಸುರಕ್ಷಿತವಾಗಿ ಬಿಸ್ಲೆ ರಕ್ಷಿತಾರಣ್ಯಕ್ಕೆ ಬಿಡಲಾಯಿತು. ಕಳೆದ ಶುಕ್ರವಾರದಿಂದ ಈ ಕಾಳಿಂಗ ಸರ್ಪ ಕಾಣಿಸಿಕೊಂಡಿದ್ದು, ಗ್ರಾಮಸ್ಥರು, ಕಾಫಿ ತೋಟಕ್ಕೆ ಹೋಗುವ ಕೂಲಿ ಕಾರ್ಮಿಕರಿಗೆ ಆತಂಕ ಉಂಟಾಗಿತ್ತು. ಉರಗ ತಜ್ಞ ಚಂಗಡಿಹಳ್ಳಿ ರವಿ ಸಹಾಯದಿಂದ ಕಾಳಿಂಗ ಸರ್ಪವನ್ನು ಹಿಡಿಯಲಾಯಿತು.

ಭೋವಿ ನಿಗಮ ಅಧ್ಯಕ್ಷರ ತಲೆದಂಡ

← ಮೊದಲಪುಟದಿಂದ

ಇದರ ಬೆನ್ನಲ್ಲೇ, ರವಿಕುಮಾರ್ ರಾಜೀನಾಮೆ ನೀಡಿದ್ದಾರೆ. ಭೋವಿ ಅಭಿವೃದ್ಧಿ ನಿಗಮದಿಂದ ಸುಮಾರು 15 ಕೋಟಿ ರು. ವೆಚ್ಚದಲ್ಲಿ ಭೂ ಒಡೆತನ ಯೋಜನೆಯನ್ನು ಜಾರಿಗೊಳಿಸಲಾಗಿತ್ತು. ಅದರಲ್ಲಿ 60 ಎಕರೆಯನ್ನು ಖರೀದಿಸಿ, ಫಲಾ ನುಭವಿಗಳಿಗೆ ಹಂಚಿಕೆ ಮಾಡಬೇಕಿತ್ತು. ಆದರೆ ಫಲಾನುಭವಿಗಳಿಂದ ಪ್ರತಿಘಟಕ ವೆಚ್ಚಕ್ಕೂ ಶೇ. 40ರಷ್ಟು ಕಮಿಷನ್ ಅನ್ನು ರವಿ ಕುಮಾರ್ ನಿಗದಿಪಡಿಸಿದ್ದರು. ಬಳಿಕ ಹಣ ಬಿಡುಗಡೆ ವೇಳೆ ಹೆಚ್ಚುವರಿ ವಸೂಲಿ ಮಾಡಿ ದ್ದಾರೆ ಎನ್ನುವ ಆರೋಪ ಕೇಳಿಬಂದಿತ್ತು. ಇದಕ್ಕೆ ಪೂರಕವಾಗಿ ಬಿಡುಗಡೆಯಾಗಿರುವ ಮೂರು ಕೋಟಿ ಅನುದಾನದಲ್ಲಿ ಕಮಿಷನ್ ಪಡೆದು ನಿಗಮದ ಅಧ್ಯಕ್ಷರಿಗೆ ಮಧ್ಯವರ್ತಿಯೊಬ್ಬರು ನೀಡುವಾಗ, ನಡೆದ ಚರ್ಚೆಗಳು ರಹಸ್ಯ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಅವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ಪ್ರಕರಣವನ್ನು ಪ್ರತಿಪಕ್ಷಗಳು ಮತ್ತಷ್ಟು ಗಂಭೀರವಾಗಿ ಪಡೆಯುವ ಮೊದಲೇ, ರಾಜೀನಾಮೆ ಪಡೆಯುವ ಮೂಲಕ ಸರಕಾರಕ್ಕೆ ಆಗುವ ಮುಜುಗರವನ್ನು ತಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ತೀರ್ಮಾನಕ್ಕೆ ಬಂದಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು-2 ರವರ ಕಛೇರಿ, 1ನೇ ಮಹಡಿ,
ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.

ಸಂಖ್ಯೆ:ಉಪ್ರವ್ಯ-2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/20/2025-26 ದಿನಾಂಕ: 02-09-2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು-2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯೂಎಂಎಲ್) ರವರು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ರವರ ಪರವಾಗಿ, ಯೋಜನಾ ನಿರ್ವಹಣಾ ಸಲಹಾ ಕೆಲಸಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ **(https://kppp.karnataka.gov.in)** ಮೂಲಕ ಕೆಲಸಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರಿಗೆ ಒಪ್ಪಂದದ ಪ್ರಧಾನಕ್ಕೆ ಅರ್ಹತೆ ಪಡೆಯಲು ಟೆಂಡರ್‌ದಾರರಿಗೆ ನೀಡುವ ಸೂಚನೆಗಳಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಸಿ-6 ರ ಪ್ರಕಾರ ನಿರ್ದಿಷ್ಟಪಡಿಸಲಾದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಹತಾ ಡಾಕ್ಯೂಮೆಂಟ್‌ಗಳನ್ನು ಅಗತ್ಯ ಮಾಹಿತಿಯೊಂದಿಗೆ / ಡಾಕ್ಯೂಮೆಂಟ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ದಿನಾಂಕ: **20-09-2025 ರಂದು ಸಂಜೆ 4.00 ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸಬೇಕು** ಮತ್ತು ತಾಂತ್ರಿಕ ಬಿಡ್ ಹೊಂದಿರುವ ಮೊದಲ ಫೋಲ್ಡರ್‌ನ್ನು ಇ-ಪೋರ್ಟಲ್ ಮೂಲಕ ದಿನಾಂಕ: **22-09-2025 ರಂದು ಬೆಳಿಗ್ಗೆ 11.30 ಗಂಟೆಯ ನಂತರ ನಿಗದಿತ ಸ್ಥಳದಲ್ಲಿ ಟೆಂಡರ್‌ದಾರರು ಅಥವಾ ಹಾಜರಾಗಲು ಇಚ್ಛಿಸುವವರು ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.** ನಿಗದಿತ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಛೇರಿಯನ್ನು ಮುಚ್ಚಿದಲ್ಲಿ, ಮುಂದಿನ ಕೆಲಸದ ದಿನದಂದು ಅದೇ ಸಮಯ ಮತ್ತು ಸ್ಥಳದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುವುದು. ಯಾವುದೇ ತಿದ್ದುಪಡಿ / ಅನುಬಂಧವನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-2
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/2592/ಅಡ್ವಟೋರ್/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಮ.ಪ ಟೆಂಡರ.ಪ್ರ-21/2025-26/1810 ದಿನಾಂಕ: 29.08.2025

ಮರು ಟೆಂಡರ್ (Call-2) ಪ್ರಕಟಣೆ (ಇ-ಪ್ರಕ್ಯೂರಮೆಂಟ್ ಪದ್ದತಿಯಲ್ಲಿ ಮಾತ್ರ)

ಉಲ್ಲೇಖ: 1) ಈ ಕಚೇರಿ ಪತ್ರ ಸಂಖ್ಯೆ:ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ-21 /2024-25/4134 ದಿನಾಂಕ: 03.02.2025 1) ಈ ಮು.ಇಂ.ಕಚೇರಿ ಪತ್ರ ಸಂಖ್ಯೆ: ತಾ.ಸ-2: ಸ.ಇಂ:13:ಕಾರವಾರ/2025-26/04631 ದಿನಾಂಕ: 14.08.2025

ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2024-25ನೇ ಸಾಲಿನ H/Ac 5054-SH Renewal Appendix-E 2024-25 ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Resurfacing to Karwar Kaiga Ilkal SH-06 Road from Km.34.00 to 40.00 in Karwar Taluka Uttara Kannada District. Under (PWD/2025-26/BD/WORK_INDENT 15856/call-2) ರೂ. 142.37 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 12-09-2025 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 15-09-2025 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 16-09-2025 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18-09-2025 17.00 ಗಂಟೆವರೆಗೆ

ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/ADK/KSMCA/443/25-26 dt.02.09.2025

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com Ph/Fax:0821-2420810

ಈ ಕಛೇರಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂ:12/2025-26 ದಿನಾಂಕ: 30.08.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ 03 ಸಂಖ್ಯೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-1 & ಕೆ.ಡಬ್ಲ್ಯೂ-3ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಅಲ್ಪಾವಾಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) 30.08.2025 ರಿಂದ 06.09.2025ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.84.64 ಲಕ್ಷಗಳು ಹಾಗೂ ಗರಿಷ ಇ.ಎಂ.ಡಿ ರೂ.1,69,290/-ಗಳಾಗಿರುತ್ತದೆ, ಮತ್ತು ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.6.82 ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ರೂ.17,060/-ಗಳಾಗಿರುತ್ತದೆ. ಮುಂದುವರೆದು, ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಕಾಲಮಿತಿ 01 ತಿಂಗಳು. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ, ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿಇಲಾಖೆ,
ಮೈಸೂರು ವಿಭಾಗ, ಮೈಸೂರು.

DIPR/DDMYS/892/KSMCA/486/2025-26

ಸರಕಾರಿ ಆಸ್ಪತ್ರೆಗಳಲ್ಲಿ ಇಸ್ಕಾನ್ ರುಚಿಕರ, ಪೌಷ್ಟಿಕ ಆಹಾರ

← ಮೊದಲಪುಟದಿಂದ

ಇದನ್ನು ಇನ್ನೂ ವಿಸ್ತರಣೆ ಮಾಡೋ ಬಗ್ಗೆ ಚಿಂತನೆ ಆಗುತ್ತಿದೆ. ಐದು ತರದ ಪೌಷ್ಟಿಕ ಆಹಾರ ವಿತರಣೆ ಮಾಡಲಾಗುತ್ತದೆ. ಬಾಣಂತಿಯರಿಗೆ ಒಂದು ಆಹಾರ ಕ್ರಮ, ಥೆರಪಿಸ್ಟ್‌ಗಳಿಗೆ ಒಂದು ಮಾದರಿಯ ಆಹಾರ ಕ್ರಮ, ಮಕ್ಕಳಿಗೆ ಒಂದು ರೀತಿಯ ಆಹಾರ ಕ್ರಮ ಜಾರಿ ಆಗಲಿದೆ. ನಮ್ಮ ಆಸ್ಪತ್ರೆಯಲ್ಲಿ ಪ್ರಾರಂಭ ಆಗಿರುವುದು ನನಗೆ ಬಹಳ ಸಂತೋಷ ಮತ್ತು ತೃಪ್ತಿ ತಂದಿದೆ ಎಂದು ತಿಳಿಸಿದ್ದಾರೆ.

ಮೊಟ್ಟೆ ಕೊಡದಿದ್ದರೂ ಪ್ರೊಟೀನ್ ಕೊಡಬೇಕು. ಇದು ಪ್ರಥಮ ಹಂತದಲ್ಲಿ ಮೂರು ಆಸ್ಪತ್ರೆ. ಎಲ್ಲೆಲ್ಲಿ ಇಸ್ಕಾನ್ ಇದೆಯೋ, ಅಲ್ಲಿಯ ಜಿಲ್ಲಾ ಆಸ್ಪತ್ರೆಗಳಿಗೆ ವಿಸ್ತರಿಸುವುದಕ್ಕೆ ತೀರ್ಮಾನ ಮಾಡುತ್ತೇವೆ. ಬೆಳಗಾವಿ, ಬಳ್ಳಾರಿ, ಧಾರವಾಡ, ಮೈಸೂರು ಹಲವು ಕಡೆ ವಿಸ್ತರಣೆ ಮಾಡುತ್ತೇವೆ. ಕೆ.ಆರ್. ಪುರಂ ಆಸ್ಪತ್ರೆಗೂ ವಿಸ್ತರಣೆಯನ್ನ ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಮೂರು ಆಸ್ಪತ್ರೆಗಳಿಗೆ 9 ತಿಂಗಳಿಗೆ 1.45 ಕೋಟಿ ರು. ಭರಿಸಬೇಕು. ಈ ಮೂರು ಆಸ್ಪತ್ರೆ ಇಸ್ಕಾನ್ ಸುಪರ್ದಿಗೆ ಕೊಟ್ಟಿದ್ದೇವೆ. ಬಾಣಂತಿಯರು, ಗರ್ಭಿಣಿಯರಿಗೆ ಡಯಟ್ ಪ್ಲಾನ್ ಹಾಗೂ ಮಕ್ಕಳಿಗೆ ಪ್ರತ್ಯೇಕ ಡಯಟ್ ಪ್ಲಾನ್ ಇದೆ. ಇದು ಖಂಡಿತ ಯಶಸ್ಸು ಸಿಗುತ್ತದೆ. ಒಂದೇ ತರಹದ ಆಹಾರ ಇರುತ್ತದೆ. ಗುಣಮಟ್ಟ ನೋಡಿಕೊಳ್ಳಲಾಗುತ್ತಿರಲಿಲ್ಲ. ಸಾಕಷ್ಟು ದೂರು ಬರುತ್ತಿತ್ತು. ಇಸ್ಕಾನ್ ಅವರಿಗೆ ಬಹಳಷ್ಟು ಅನುಭವ ಇದೆ. ನಮಗೆ ಖರ್ಚು ಕೂಡ ತುಂಬಾ ಆಗುತ್ತಿರಲಿಲ್ಲ. ಮೊಟ್ಟೆ ಬದಲು ಸೋಯಾ ಚಂಕ್ಸ್ ಕೊಡುತ್ತೇವೆ. ಪೂರ್ತಿ ಜವಾಬ್ದಾರಿ ಇಸ್ಕಾನ್ ಆಗಿರುವುದರಿಂದ ಪೌಷ್ಟಿಕಾಂಶ, ಸ್ವಚ್ಛತೆ ಇರಬೇಕು. ವಿತರಣೆ ಸಲಕರಣೆ ಎಲ್ಲಾ ಇಸ್ಕಾನ್ ಅವರದ್ದೇ. ಇಸ್ಕಾನ್ ಇರುವ ಕಡೆ ಈ ವ್ಯವಸ್ಥೆ ಮುಂದುವರಿಸುತ್ತೇವೆ ಎಂದು ಮಾಹಿತಿ ನೀಡಿದ್ದಾರೆ.

ಇಸ್ಕಾನ್ ತಮ್ಮ ಅಕ್ಷಯಪಾತ್ರ ಯೋಜನೆಯ ಮೂಲಕ ಕಳೆದ 25 ವರ್ಷಗಳಿಂದಲೂ ಸರಕಾರಿ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಿಸುವ ವಿಶಾಲ ಅನುಭವ ಹೊಂದಿದೆ. ಅವರು ಸ್ವಚ್ಛ ವಾತಾವರಣದಲ್ಲಿ ಬೃಹತ್ ಪ್ರಮಾಣದಲ್ಲಿ ಆಹಾರವನ್ನು ತಯಾರಿಸಿ ವಿತರಿಸಲು ಪರಿಣತಿಯನ್ನು ಹೊಂದಿದ್ದು, ರೋಗಿಗಳ ಅಗತ್ಯಕ್ಕೆ ಅನುಗುಣವಾದ ಆಹಾರವನ್ನು ಪೂರೈಸಲು ಸಮರ್ಥರಾಗಿದ್ದಾರೆ. ಆಸ್ಪತ್ರೆಗಳಲ್ಲಿ ದೊರೆಯುವ ಪ್ರತಿಕ್ರಿಯೆಗಳ ಆಧಾರದ ಮೇಲೆ, ಮುಂದಿನ ದಿನಗಳಲ್ಲಿ ಇಸ್ಕಾನ್ ಕೈಗೆತ್ತಿಕೊಳ್ಳಬಹುದಾದ ಇತರ ಜಿಲ್ಲಾ ಆಸ್ಪತ್ರೆಗಳಿಗೂ ಸರಕಾರ ಈ ಸೌಲಭ್ಯ ವಿಸ್ತರಿಸುವ ವಿಚಾರ ಹೊಂದಿದೆ.

-ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆ ಸಚಿವ

ಭೂಕುಸಿತಕ್ಕೆ ಸುಡಾನ್ ಹಳ್ಳಿಯೇ ಸರ್ವನಾಶ

← ಮೊದಲಪುಟದಿಂದ

'ಸಿಟ್ರಸ್ ಹಣ್ಣುಗಳಿಂದ (ನಿಂಬೆ ಜಾತಿಯ ಹಣ್ಣು) ಜನಪ್ರಿಯಗೊಂಡಿರುವ ತರ್ಸಿನ್ ಎಂಬ ಹಳ್ಳಿ ಸಂಪೂರ್ಣ ನೆಲಸಮಗೊಂಡಿದೆ. ಇದಕ್ಕೆ ಸಮೀಪದಲ್ಲಿರುವ ಹಳ್ಳಿಗರು ಸಂಪೂರ್ಣ ಭೀತಿಯಲ್ಲಿದ್ದಾರೆ. ಇದೇ ರೀತಿ ಮಳೆ ಮುಂದುವರಿದರೆ, ತಮ್ಮ ಪರಿಸ್ಥಿತಿ ಭೀಕರವಾಗಬಹುದು ಎಂಬ ಚಿಂತೆಯಲ್ಲಿದ್ದಾರೆ. ಅಪಾಯ ಎದುರಿಸುತ್ತಿರುವ ಇತರೆ ಹಳ್ಳಿಗಳ ಜನರನ್ನು ಸ್ಥಳಾಂತರಿಸಲು ನಿಮ್ಮ ನೆರವು ಬೇಕು' ಎಸ್‌ಎಲ್‌ಎಂಎ ಕೇಳಿಕೊಂಡಿದೆ.

ದಾರುಣ ಸ್ಥಿತಿ: ಭೂಕುಸಿತದಿಂದ ಎಲ್ಲ ಮನೆಗಳು ನೆಲಸಮಗೊಂಡಿವೆ, ಇಡೀ ಹಳ್ಳಿಯೇ ನಾಶವಾಗಿದೆ. ಟನ್‌ಗಟ್ಟಲೆ ಅವಶೇಷಗಳಡಿ ಇಡೀ ಕುಟುಂಬಗಳೇ ಹೂತುಹೋಗಿವೆ. ಆಂತರಿಕ ದಂಗೆ ಕಾರಣಕ್ಕೆ ಜೆಬೆಲ್ ಮಾರ್ರಾ ಪರ್ವತ ಶ್ರೇಣಿಯಲ್ಲಿ ಹಳ್ಳಿಗರು ಆಶ್ರಯ ಪಡೆದಿದ್ದರು. ಅವರೀಗ ಭೂಕುಸಿತಕ್ಕೆ ಸಿಲುಕಿದ್ದಾರೆ!

ಆಂತರಿಕ ಗಲಭೆ ಪೀಡಿತ ದೇಶ: ಸುಡಾನ್ ಆಂತರಿಕ ಗಲಭೆಗಳಿಂದ ಈಗಾಗಲೇ ಭಾರೀ ಹಾನಿಗೊಳಗಾಗಿದೆ. ಒಂದು ಭಾಗವನ್ನು ಅಲ್ಲಿನ ಸೇನೆ ನಿಯಂತ್ರಿಸುತ್ತಿದ್ದರೆ, ಇನ್ನೂ ಕೆಲವು ಪ್ರದೇಶಗಳನ್ನು ರ್‍ಯಾಪಿಡ್ ಸಪೋರ್ಟ್ ಫೋರ್ಸಸ್ (ಆರ್‌ಎಸ್‌ಎಫ್) ಎಂಬ ಅರೆ ಸೇನಾಪಡೆ ನಿಯಂತ್ರಿಸುತ್ತಿದೆ. ಉತ್ತರ ದಾರ್ಫುರ್ ಪ್ರದೇಶ ಆರ್‌ಎಸ್‌ಎಫ್ ನಿಯಂತ್ರಣದಲ್ಲಿದ್ದು ಇಲ್ಲೇ ಭಾರೀ ಭೂಕುಸಿತವಾಗಿರುವುದು. ಈ ಪ್ರದೇಶದ ಜನರ ನೆರವಿಗೆ ಬರುವುದಾಗಿ ಸುಡಾನ್ ಸೇನೆ ಹೇಳಿದೆ. ಕಲಹದ ಕಾರಣ ಲಕ್ಷಾಂತರ ಮಂದಿ ಮನೆ ಕಳೆದುಕೊಂಡು, ಹಸಿವಿನಿಂದ ಒದ್ದಾಡುತ್ತಿದ್ದಾರೆ.

ಸಮಾಚಾರ ಸಣ್ಣದಲ್ಲ

ಧರ್ಮಸ್ಥಳ ವಿರುದ್ಧ ಅಪಪ್ರಚಾರ ಬೇಡ

ರಾಮನಗರ: ಧರ್ಮಸ್ಥಳ ಸಂಸ್ಥೆಯ ಸಮಾಜಸೇವೆ ಜನರಿಗೆ ಗೊತ್ತಿದೆ. ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೆಲಸ ಮಾಡಬಾರದು. ಈ ಪ್ರಕರಣದ ಪಾತ್ರದಾರಿಗಳು ಹಾಗೂ ಸೂತ್ರಧಾರಿಗಳನ್ನು ಕಂಡುಹಿಡಿದು ಸೂಕ್ತ ಶಿಕ್ಷೆ ಕೊಡಿಸಬೇಕು ಎಂದು

ಬೆಂಗಳೂರು ಗ್ರಾಮಾಂತರ ಸಂಸದ ಡಾ.ಮಂಜುನಾಥ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದ ವಿರುದ್ಧ ಅಪಪ್ರಚಾರ ತಡೆಯಬೇಕು. ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನ ಕೂಡಾ ನಡೆಯುತ್ತೆ. ಈ ಅಪಪ್ರಚಾರವನ್ನ ಸರ್ವ ಧರ್ಮಗಳೂ ಖಂಡನೆ ಮಾಡಬೇಕು ಎಂದರು. ಷಡ್ಯಂತ್ರ ಮಾಡಿರುವವರು ತಮಿಳುನಾಡು, ಕೇರಳದವರಿದ್ದಾರೆ. ಹೊರಗಿನವರ ಪಾತ್ರ ಇರುವ ಸಾಧ್ಯತೆ ಕೂಡ ಇದೆ. ಹಾಗಾಗಿ ಇದನ್ನ ಕೇಂದ್ರದ ಒಂದು ಏಜೆನ್ಸಿ ತನಿಖೆ ಮಾಡಬೇಕಿದೆ. ಆ ಭಾಗದ ಸಂಸದರು ಈಗಾಗಲೇ ಕೇಂದ್ರ ಗೃಹ ಸಚಿವರ ಜತೆ ಚರ್ಚೆ ಮಾಡಿದ್ದಾರೆ. ಎಸ್‌ಐಟಿ ತನಿಖೆಯ ವರದಿಯೂ ಬರಲಿ, ಕೇಂದ್ರದ ತನಿಖೆಯೂ ಆಗಲಿ ಎಂದು ತಿಳಿಸಿದರು.

ಮಗು ಕೊಂದು ತಾಯಿ ಆತ್ಮಹತ್ಯೆ

ಬ್ರಹ್ಮಾವರ: ಮಗುವನ್ನು ನೇಣಿಗೆ ಹಾಕಿ ಬಳಿಕ ತಾಯಿ ಆತ್ಮಹತ್ಯೆ ಮಾಡಿಕೊಂಡ ಹೃದಯವಿದ್ರಾವಕ ಘಟನೆ ಬ್ರಹ್ಮಾವರ ಪೊಲೀಸ್ ಠಾಣಾ ವ್ಯಾಪ್ತಿಯ ಕುಂಜಾಲು

ಹೇರಂಜೆ ಕ್ರಾಸ್ ಬಳಿ ನಡೆದಿದೆ. 1 ವರ್ಷ 6 ತಿಂಗಳ ಮಗುವನ್ನು ನೇಣಿಗೆ ಹಾಕಿದ ಸುಷ್ಮಿತಾ (23) ಆತ್ಮಹತ್ಯೆ ಮಾಡಿಕೊಂಡ ತಾಯಿ ಎಂದು ತಿಳಿದು ಬಂದಿದೆ. ನನ್ನ ಸಾವಿಗೆ ನಾನೇ ಕಾರಣ ಎಂಬುದಾಗಿ ಮರಣ ಪತ್ರ ಬರೆದಿಟ್ಟು ಸುಷ್ಮಿತಾ ತನ್ನ ಮಗು ಜೊತೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ತಿಳಿದು ಸ್ಥಳಕ್ಕೆ ಬ್ರಹ್ಮಾವರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಶಂಕಿತ ನಕ್ಸಲ್‌ನ ಬಂಧನ

ರಾಯಚೂರು: ಬಿಹಾರ ಮೂಲದ ಶಂಕಿತ ನಕ್ಸಲ್‌ನನ್ನು ಜಿಲ್ಲಾ ಪೊಲೀಸ್ ಇಲಾಖೆಯ ಸಹಾಯದೊಂದಿಗೆ ಬಿಹಾರ ಪೊಲೀಸರು ನಗರದಲ್ಲಿ ಬಂಧಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಬಿಹಾರ ರಾಜ್ಯದ ಖಗಾರಿಯಾ ಜಿಲ್ಲೆಯ ಪಿಪಾರ ಪಂತ್ ಗ್ರಾಮದ ಮನೋಜ್ ಸಾದಾ ಬಂಧಿತ ಆರೋಪಿಯಾಗಿದ್ದಾನೆ. ಬಂಧಿತ ಮನೋಜ್ ಸಾದಾ ಶಂಕಿತ ನಕ್ಸಲ್ ಎಂದು ಗುರುತಿಸಲಾಗಿದೆ. ಈತ ಕಗಾಡಿಯಾ ಜಿಲ್ಲೆಯಲ್ಲಿ ಕೊಲೆ, ಸುಲಿಗೆ, ಜೀವ ಬೆದರಿಕೆಯಂತಹ ಹಲವು ಪ್ರಕರಣಗಳಲ್ಲಿ ಭಾಗಿಯಾಗಿ ಕಳೆದ ಹತ್ತು ದಿನಗಳ ಹಿಂದೆಯಷ್ಟೇ ರಾಯಚೂರಿಗೆ ಆಗಮಿಸಿ ನಗರದ ಯರಮರಸ್ ಬಳಿಯ ಖಾಸಗಿ ರೈಸ್‌ಮಿಲ್‌ನಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ್ದಾನೆ. ರೈಸ್ ಮಿಲ್‌ನಲ್ಲಿ ಕೆಲಸ ಮಾಡುತ್ತಿರುವ ಕುರಿತು ಮಾಹಿತಿಯನ್ನು ಪಡೆದ ಖಗಾರಿಯಾ ಜಿಲ್ಲೆಯ ಪೊಲೀಸರು ನಗರಕ್ಕೆ ಆಗಮಿಸಿ ಗ್ರಾಮೀಣ ಠಾಣೆಯ ಅಧಿಕಾರಿಗಳ ನೆರವಿನೊಂದಿಗೆ ಆರೋಪಿ ಮನೋಜ್ ಸಾದಾನನ್ನು ಆ.29 ರಂದು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ವಿರಾಮ
ಪ್ರತಿ ಭಾನುವಾರ

ದರ ಸರಳೀಕರಣದಿಂದಾಗುವ ನಷ್ಟದ ಲೆಕ್ಕಾಚಾರ ನೀಡದ ಕೇಂದ್ರ : ಕೃಷ್ಣಭೈರೇಗೌಡ | ರಾಜ್ಯಗಳಿಗೆ ಮತ್ತಷ್ಟು ಹೊರೆಯಾಗಲಿರುವ ಹೊಸ ಪ್ರಸ್ತಾವನೆ | ಜಿಎಸ್‌ಟಿ ಕೌನ್ಸಿಲ್ ಪರಿಹಾರ ನೀಡಲು ಸಚಿವರ ಒತ್ತಾಯ

ಜಿಎಸ್‌ಟಿ ಸರಳೀಕರಣದಿಂದ ರಾಜ್ಯಕ್ಕೆ 15,000 ಕೋಟಿ ನಷ್ಟ

ಬೆಂಗಳೂರು: ಜಿಎಸ್‌ಟಿ ತೆರಿಗೆ ವ್ಯವಸ್ಥೆ ಜಾರಿಯಾದ ನಂತರ ರಾಜ್ಯದ ಆದಾಯದಲ್ಲಿ ವಾರ್ಷಿಕ ಸರಾಸರಿ 70,000 ಕೋಟಿ ರು. ಖೋತಾ ಆಗುತ್ತಿದೆ. ಇದೀಗ ಕೇಂದ್ರ ಸರಕಾರದ ದರ ಸರಳೀಕರಣ ಪ್ರಸ್ತಾವನೆಯಿಂದ ಹೆಚ್ಚುವರಿ 15,000 ಕೋಟಿ ಖೋತಾ ಆಗಲಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಎಂದು ಆತಂಕ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಎಸ್‌ಟಿ ತೆರಿಗೆ ವ್ಯವಸ್ಥೆ ಜಾರಿಯಾಗುವ ಮೊದಲು ರಾಜ್ಯದ ಆದಾಯದ ಪ್ರಗತಿ ವರ್ಷಕ್ಕೆ ಶೇ.13ರಷ್ಟಿತ್ತು. ಆದರೀಗ ಶೇ.11ಕ್ಕೆ ಇಳಿದಿದೆ. ರಾಜ್ಯದ ಆದಾಯ ಹಿಂದಿನ ವೇಗದಲ್ಲೇ ಮುಂದುವರೆದಿದ್ದರೆ 2024-25 ರಲ್ಲಿ ರಾಜ್ಯದ ಆದಾಯ 1,07,846 ಕೋಟಿ ಆಗಬೇಕಿತ್ತು. ಆದರೆ, ವಾಸ್ತವ ಆದಾಯ 77,169 ಕೋಟಿ ಮಾತ್ರ. ಒಂದೇ ವರ್ಷದಲ್ಲಿ ರಾಜ್ಯದ ಆದಾಯ 30,677 ಕೋಟಿ ಆದಾಯ ಖೋತಾ ಆಗಿದೆ ಎಂದರು.

ಇದೀಗ ಕೇಂದ್ರ ಸರಕಾರ ನಮ್ಮ ಮುಂದಿಟ್ಟಿರುವ ಜಿಎಸ್‌ಟಿ ದರ ಸರಳೀಕರಣ ವ್ಯವಸ್ಥೆಯನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಈ ವ್ಯವಸ್ಥೆ ರಾಜ್ಯಗಳ ತೆರಿಗೆ ಆದಾಯವನ್ನು ರಕ್ಷಿಸುವಂತಿರಬೇಕು ಹಾಗೂ ಇದರ ಸಂಪೂರ್ಣ ಲಾಭ ದೇಶದ ಜನಸಾಮಾನ್ಯರಿಗೆ ಸಿಗುವಂತಿರಬೇಕೆ ಹೊರತು ಕೆಲವು ಕಂಪೆನಿಗಳಿಗೆ ಮಾತ್ರ ಲಾಭ ಆಗುವಂತಿರಬಾರದು ಎಂದು ಅಭಿಪ್ರಾಯಪಟ್ಟರು.

ಪ್ರಸ್ತಾವಿತ ಜಿಎಸ್‌ಟಿ ದರ ಸರಳೀಕರಣದಿಂದ ರಾಜ್ಯ ಸರಕಾರಗಳಿಗೆ ಯಾವ ಪ್ರಮಾಣದಲ್ಲಿ ಆದಾಯ ಖೋತಾ ಆಗಬಹುದು ಎಂಬ ಅಂದಾಜಿನ ಕುರಿತು ಕೇಂದ್ರ ಸರಕಾರ ಈವರೆಗೆ ಯಾವುದೇ ಮಾಹಿತಿ ನೀಡಿಲ್ಲ. ಕೆಲವು ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ರಾಜ್ಯಗಳಿಗೆ ಭಾಗಶಃ 85 ಸಾವಿರ ಕೋಟಿಯಿಂದ 2.5 ಲಕ್ಷ ಕೋಟಿ ವರೆಗೆ ನಷ್ಟ ಉಂಟಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಿವೆ. ರಾಜ್ಯ ಸರಕಾರಗಳಿಗೆ ಆದಾಯ ನಷ್ಟ ಉಂಟಾದರೆ ಕೇಂದ್ರ ಸರಕಾರಕ್ಕೂ ನಷ್ಟವಾಗಲಿದೆ. ಹೀಗಾಗಿ ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ಜಿಎಸ್‌ಟಿ ಕೌನ್ಸಿಲ್ ಪರಿಧಿಯಲ್ಲೇ ಪ್ರತಿಯೊಂದು ರಾಜ್ಯಗಳಿಗೂ ಪರಿಹಾರ ನೀಡಲಿ ಎಂದು ಒತ್ತಾಯಿಸಿದರು.

ಕೇಂದ್ರದ ಆದಾಯದಲ್ಲಿ ಜಿಎಸ್‌ಟಿ ಪಾಲು ಕೇವಲ ಶೇ. 28ರಷ್ಟು ಮಾತ್ರ. ಉಳಿದ ಶೇ.72ರಷ್ಟು ಆದಾಯವನ್ನು ಕೇಂದ್ರ ವಿವಿಧ ಮೂಲಗಳಿಂದ ಗಳಿಸುತ್ತದೆ. ನೇರ ತೆರಿಗೆ , ಆದಾಯ ತೆರಿಗೆ, ಕಸ್ಟಮ್ಸ್, ಡೆವಿಡೆಂಟ್ ಹಾಗೂ ವಿವಿಧ ಸೆಸ್‌ಗಳು ಕೇಂದ್ರದ ಆದಾಯದ ಮೂಲ. ಸೆಸ್ ಮೂಲಕವೇ ಕೇಂದ್ರ ಸರಕಾರ ಶೇ.17 ರಿಂದ ಶೇ.20 ರಷ್ಟು ಆದಾಯ ಗಳಿಸುತ್ತದೆ. ಸೆಸ್ ಆದಾಯದಲ್ಲಿ ಒಂದು ರೂಪಾಯಿಯನ್ನೂ ಸಹ ಕೇಂದ್ರ ಸರಕಾರ ರಾಜ್ಯಗಳ ಜತೆ ಹಂಚಿಕೊಳ್ಳುವುದಿಲ್ಲ. ಆದರೆ, ರಾಜ್ಯಗಳ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ.50 ರಷ್ಟು. ಹೀಗಾಗಿ ಅಭಿವೃದ್ಧಿಗಾಗಿ ಹಾಗೂ ಆದಾಯ ಸಂಗ್ರಹಣೆಗೆ ರಾಜ್ಯಗಳು ಜಿಎಸ್‌ಟಿಯನ್ನೇ ನೆಚ್ಚಿಕೊಂಡಿವೆ. ಇಂತಹ ಸಂದರ್ಭದಲ್ಲಿ ರಾಜ್ಯಗಳ ಆದಾಯದ ಶೇ.20ರಷ್ಟು ಆದಾಯ ನಷ್ಟವಾದರೆ ರಾಜ್ಯಗಳ ಆರ್ಥಿಕ ಸ್ವಾಯತ್ತತೆ ಪ್ರಶ್ನಾರ್ಥಕವಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಜಿಎಸ್‌ಟಿ ತೆರಿಗೆ ವ್ಯವಸ್ಥೆಯನ್ನು 2017ರಲ್ಲಿ ಪರಿಚಯಿಸುವಾಗ ಕೇಂದ್ರ ಸರಕಾರ ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ರಾಜ್ಯಗಳಿಗೆ ತೆರಿಗೆ ನಷ್ಟ ಪರಿಹಾರ ನೀಡಬೇಕು ಎಂದು ಹೇಳಿತ್ತು. ಆದರೆ, ಪರಿಹಾರ ವ್ಯವಸ್ಥೆಯನ್ನು 2022ಕ್ಕೆ ತೆಗೆದುಹಾಕಲಾಗಿತ್ತು. ಪರಿಣಾಮ ಬಹುಪಾಲು ರಾಜ್ಯಗಳು ಶೇ.25 ರಷ್ಟು ಆದಾಯ ನಷ್ಟ ಎದುರಿಸಿದ್ದವು. ರಾಜ್ಯಗಳ ಆದಾಯ ಶೇ.25 ರಷ್ಟು ಕುಸಿಯುತ್ತಿದ್ದ ಸಂದರ್ಭದಲ್ಲಿ ಜಿಎಸ್‌ಟಿ ಸ್ಥಿರಗೊಂಡಿದೆ ಎಂದು ನೀವು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಿದ ಸಚಿವ ಕೃಷ್ಣ ಬೈರೇಗೌಡ ಅವರು ಜಿಎಸ್‌ಟಿ ಸರಳೀಕರಣ ವ್ಯವಸ್ಥೆ ಜಾರಿಯಾಗಿ ರಾಜ್ಯಗಳ ಆದಾಯ ಹಾಗೂ ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ಜಿಎಸ್‌ಟಿ ಕೌನ್ಸಿಲ್ ಪರಿಹಾರ ನೀಡಲಿ ಎಂದು ಒತ್ತಾಯಿಸಿದರು.



ಕರ್ನಾಟಕ ದುಡಿಯುತ್ತಿದ್ದರೆ, ನಮ್ಮ ದುಡಿಮೆಯ ಲಾಭವನ್ನು ಬೇರೆ ರಾಜ್ಯಗಳೂ ಸವಿಯುತ್ತಿದೆ. ಇಡೀ ದೇಶಕ್ಕೆ ನಮ್ಮ ರಾಜ್ಯದ ಕೊಡುಗೆ ಅಪಾರ. ಆದರೆ, ನಾವು ಆರ್ಥಿಕ ಸಂಕಷ್ಟಕ್ಕೆ ಒಳಗಾದರೆ ಇಡೀ ದೇಶಕ್ಕೆ ನಷ್ಟವಾಗುತ್ತದೆ. ರಾಜ್ಯಗಳಿಗೆ ಅಧಿಕ ನಷ್ಟವಾದರೆ ಅಂತಿಮವಾಗಿ ಜನ ಸಾಮಾನ್ಯರು ಸಂಕಷ್ಟಕ್ಕೆ ಒಳಗಾಗುತ್ತಾರೆ. ರಾಜ್ಯಗಳ ಸ್ವಾಯತ್ತತೆ ತುಂಬಾ ಮುಖ್ಯವಾದ ವಿಚಾರ. ಪ್ರತಿಯೊಂದು ರಾಜ್ಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸುಸ್ಥಿರ ಆದಾಯ ಅತ್ಯಂತ ಮುಖ್ಯ.

- ಕೃಷ್ಣಭೈರೇಗೌಡ, ಕಂದಾಯ ಸಚಿವ

- ಒಂದೇ ವರ್ಷದಲ್ಲಿ ರಾಜ್ಯದ ಆದಾಯ 30,677 ಕೋಟಿ ಆದಾಯ ಖೋತಾ
- ಜಿಎಸ್‌ಟಿ ದರ ಸರಳೀಕರಣ ವ್ಯವಸ್ಥೆಯಿಂದ ರಾಜ್ಯಗಳ ತೆರಿಗೆ ಆದಾಯ ರಕ್ಷಿಸುವಂತಿರಲಿ
- ರಾಜ್ಯ ಸರಕಾರಗಳಿಗೆ ಆದಾಯ ನಷ್ಟ ಉಂಟಾದರೆ ಕೇಂದ್ರ ಸರಕಾರಕ್ಕೂ ನಷ್ಟ
- ಜಿಎಸ್‌ಟಿ ದರ ಸರಳೀಕರಣ ವ್ಯವಸ್ಥೆ ವಿರುದ್ಧ ಸಚಿವ ಕೃಷ್ಣಬೈರೇಗೌಡ ಕಿಡಿ

ಏಳೆಂಟು ವರ್ಷವಾದರೂ ಅನುಕೂಲವಾಗಿಲ್ಲ

ಜಿಎಸ್‌ಟಿಯನ್ನು ಪರಿಚಯಿಸುವಾಗ ಈ ನೂತನ ತೆರಿಗೆ ವ್ಯವಸ್ಥೆ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎನ್ನಲಾಗಿತ್ತು. ಇದು ನಿಜವಾಗಿದ್ದರೆ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಆದಾಯ ದುಪ್ಪಟ್ಟಾಗಬೇಕಿತ್ತು. ಆದರೆ, ಕಳೆದ 7-8 ವರ್ಷಗಳ ಅನುಭವದಲ್ಲಿ ಈ ಹೇಳಿಕೆ ಸುಳ್ಳು ಎಂದು ಸಾಬೀತಾಗಿದೆ. ಪ್ರತಿ ವರ್ಷವೂ ಎಲ್ಲಾ ರಾಜ್ಯಗಳ ನಿವ್ವಳ ಆದಾಯ ಗಣನೀಯವಾಗಿ ಇಳಿಯುತ್ತಲೇ ಇದೆ. ಜಿಎಸ್‌ಟಿ ಗೆ ಮುನ್ನ ವ್ಯಾಟ್ ಅಡಿಯಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದ ಕಾಲದಲ್ಲಿ ದೇಶದ ಜಿಡಿಪಿಗೆ ವ್ಯಾಟ್ ಕೊಡುಗೆ ಶೇ 6.1 ರಷ್ಟು ಇತ್ತು. ಆದರೆ, ಈಗ ಜಿಎಸ್‌ಟಿ ಜಾರಿಯಾದ ಬಳಿಕ ಈ ಪ್ರಮಾಣ ಈವರೆಗೆ ಶೇ. 6.1 ಕ್ಕೆ ತಲುಪಲಾಗಿಲ್ಲ. ಪ್ರಸ್ತುತ ಜಿಡಿಪಿಗೆ ಜಿಎಸ್‌ಟಿ ಕೊಡುಗೆ ಕೇವಲ ಶೇ. 5.8 ರಷ್ಟು ಮಾತ್ರ. ಒಟ್ಟರೆ ಜಿಎಸ್‌ಟಿಯಿಂದಾಗಿ ರಾಜ್ಯ ಹಾಗೂ ಕೇಂದ್ರಕ್ಕೆ ಆದಾಯ ನಷ್ಟವಾಗುತ್ತಿರುವುದು ಸ್ಪಷ್ಟವಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ವಿವರಿಸಿದರು.

ಮೊದಲೆರಡು ತ್ರೈಮಾಸಿಕದಲ್ಲಿ ನಿರೀಕ್ಷಿತ ಪ್ರಮಾಣಕ್ಕಿಂತ ಹೆಚ್ಚಿನ ಆದಾಯ: ಸಚಿವ ಆರ್.ಬಿ. ತಿಮ್ಮಾಪುರ

ಆರು ತಿಂಗಳಲ್ಲಿ 16,358 ಕೋಟಿ ರು. ಅಬಕಾರಿ ಆದಾಯ

ಬೆಂಗಳೂರು: ರಾಜ್ಯದ ಅಧಿಕ ಅಬಕಾರಿ ಆದಾಯ ಹೆಚ್ಚಾಗಿದ್ದು, ಮೊದಲೆರಡು ತ್ರೈಮಾಸಿಕದಲ್ಲಿ ನಿರೀಕ್ಷಿತ ಪ್ರಮಾಣದ 16,290 ಕೋಟಿ ರು.ಗಿಂತ ಹೆಚ್ಚಾಗಿ 16,358 ಕೋಟಿ ರು.ಬಂದಿದ್ದು, ನಿರೀಕ್ಷೆಗಿಂತ 68.78 ಕೋಟಿ ಆದಾಯ ಹೆಚ್ಚಾಗಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅಬಕಾರಿ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಆರ್.ಬಿ.ತಿಮ್ಮಾಪುರ, ಇಲಾಖೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಸಾಕಷ್ಟು ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ. ತೆರಿಗೆ ಸಂಗ್ರಹಣೆ ಇಲಾಖೆಯಲ್ಲಿ ಮೊದಲ ಬಾರಿಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ. ಇದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿದೆ. ಇಲಾಖೆಯಲ್ಲಿ ಡಿಜಿಟಲ್ ವ್ಯವಸ್ಥೆ ಜಾರಿ ಮಾಡಲಾಗುತ್ತಿದ್ದು, ಆನ್‌ಲೈನ್ ಮೂಲಕ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಭ್ರಷ್ಟಾಚಾರಕ್ಕೆ ಅವಕಾಶ ಸಿಗದಂತೆ ಸಿಎಲ್ 7 ಲೈಸನ್ಸ್ ನೀಡುವ ಹಂತಗಳನ್ನು ಕಡಿತಗೊಳಿಸಲಾಗಿದೆ ಎಂದರು.

ಇಲಾಖೆಯಲ್ಲಿ ದಕ್ಷತೆಯ ಆಡಳಿತ ಜಾರಿ ಮಾಡಬೇಕೆಂಬುದು ನಮ್ಮ ಸರಕಾರದ ಧ್ಯೇಯ. ಆದರೂ ಕೆಲವು ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದು ಕಂಡು ಬಂದಿದ್ದು, ಅಂತಹ ಅಧಿಕಾರಿಗಳ ಕ್ರಮ ಕೈಗೊಳ್ಳಲಾಗಿದೆ. ಎ ವೃಂದದ 31, ಬಿ ವೃಂದದ 20, 43 ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಮೇಲೆ ಶಿಸ್ತು ಕ್ರಮ ಚಾಲ್ತಿಯಲ್ಲಿದೆ. ಇದರ ಜತೆಗೆ ಆಡಳಿತ ಸುಧಾರಣಾ ಆಯೋಗ ನೀಡಿದ ಶಿಫಾರಸುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲಾಗುತ್ತಿದೆ. ಒಟ್ಟು 62 ಶಿಫಾರಸ್ಸುಗಳ ಮೇಲೆ ಆರ್ಥಿಕ ಇಲಾಖೆ ಅಪರ ಮುಖ್ಯಕಾರ್ಯದರ್ಶಿಗಳ ಜೊತೆ ಸಭೆ ನಡೆಸಿ ಶೇ. 95 ಶಿಫಾರಸುಗಳಿಗೆ ಒಪ್ಪಿಗೆ ನೀಡಿ ಕಾರ್ಯರೂಪಕ್ಕೆ ತರಲು ಆದೇಶಿಸಿದ್ದೇನೆ. ಈಗಾಗಲೇ 13 ಶಿಫಾರಸು ಅನುಷ್ಠಾನ ಆಗಿದ್ದು, 49 ಶಿಫಾರಸು ಅನುಷ್ಠಾನದ ಹಂತದಲ್ಲಿವೆ ಎಂದರು.

ಸಭೆಯಲ್ಲಿ ಅಬಕಾರಿ ಆಯುಕ್ತ ವೆಂಕಟೇಶ್, ಅಪರ ಆಯುಕ್ತರಾದ ಮಂಜುನಾಥ್ ಇದ್ದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅಬಕಾರಿ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಆರ್.ಬಿ.ತಿಮ್ಮಾಪುರ ಮಾತನಾಡಿದರು.

ಅಕ್ರಮ ಮದ್ಯ ಸಾಗಣೆ ಮೇಲೆ ಹದ್ದಿನ ಕಣ್ಣು

ಮಹಾರಾಷ್ಟ್ರ, ಗೋವಾ ರಾಜ್ಯಗಳಿಂದ ಅಕ್ರಮ ಮದ್ಯ ಸಾಗಣೆ ಮೇಲೆ ಹದ್ದಿನಕಣ್ಣಿಡಲು ಸೂಚಿಸಲಾಗಿದ್ದು, ಗಡಿ ಚೆಕ್‌ಪೋಸ್ಟ್ ನಲ್ಲಿರುವ ಸಿಬ್ಬಂದಿಯನ್ನು 15 ದಿನಗಳಿಗೊಮ್ಮೆ ಬದಲಿಸುತ್ತಿರುವಂತೆ ಆಯುಕ್ತರಿಗೆ ಸೂಚಿಸಲಾಗಿದೆ. ಸಿಎಚ್ ಪೌಡರ್, ಡ್ರಗ್ಸ್ ನಿಯಂತ್ರಣ ಮಾಡುವ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳು ಸಾಕಷ್ಟು ಕ್ರಮ ವಹಿಸಬೇಕು. ಸಣ್ಣ ಪ್ಯಾಕೇಟ್‌ನಲ್ಲಿ ಸಿಎಚ್ ಪೌಡರ್ ತಂದು, ನೂರಾರು ಲೀಟರ್ ಮದ್ಯ ತಯಾರಿಸುವವರನ್ನು ಪತ್ತೆ ಹಚ್ಚಿ, ಕಠಿಣ ಕ್ರಮ ಕೈಗೊಳ್ಳಬೇಕು. ಯುವಕರ ಆರೋಗ್ಯ, ಭವಿಷ್ಯದ ದೃಷ್ಟಿಯಿಂದ ಡ್ರಗ್ಸ್‌ಗೆ ಕಡಿವಾಣ ಹಾಕಬೇಕು. ಎನ್‌ಡಿಪಿಎಸ್ ಕಾಯಿದೆ ಸಮರ್ಪಕವಾಗಿ, ಮತ್ತಷ್ಟು ಪರಿಣಾಮವಾಗಿ ಜಾರಿಗೊಳಿಸಬೇಕು ಎಂದು ಸಚಿವ ಆರ್.ಬಿ.ತಿಮ್ಮಾಪುರ ಅಧಿಕಾರಿಗಳಿಗೆ ಸೂಚಿಸಿದರು.

ಅವರ ಬ್ರೈನ್ ಮ್ಯಾಪಿಂಗ್ ಮಾಡಿದ್ರೆ ಸತ್ಯ ಗೊತ್ತಾಗುತ್ತೆ ಎಂದ ಶಾಸಕ

ರಾಜಣ್ಣನಿಂದ ಬಿಜೆಪಿಗೆ ಹೋಗಲು ಅರ್ಜಿ

ರಾಮನಗರ: ಕೆ.ಎನ್.ರಾಜಣ್ಣ ಬಿಜೆಪಿಗೆ ಹೋಗಲು ಅರ್ಜಿ ಹಾಕಿದ್ದಾರೆ. ಅವರ ಬ್ರೈನ್ ಮ್ಯಾಪಿಂಗ್ ಮಾಡಿದ್ರೆ ಸತ್ಯ ಗೊತ್ತಾಗುತ್ತದೆ. ಅವರು ಬಿಜೆಪಿಯ ಕೇಂದ್ರ ಹಾಗೂ ರಾಜ್ಯ ನಾಯಕರ ಜತೆ

ಸಂಪರ್ಕದಲ್ಲಿದ್ದಾರೆ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕೆ.ಎನ್. ರಾಜಣ್ಣರನ್ನ ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಲು ಒತ್ತಡ ಹೇರುತ್ತಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದರು. ನನಗಿರುವ ಮಾಹಿತಿ ಪ್ರಕಾರ ಕೆ.ಎನ್.ರಾಜಣ್ಣ ಬಿಜೆಪಿಗೆ ಅರ್ಜಿ ಹಾಕಿದ್ದಾರೆ. ಹೈಕಮಾಂಡ್ ವಿರುದ್ಧ ಮಾತನಾಡಿದ್ದಕ್ಕೆ ಅವರು ವಜಾ ಆಗಿದ್ದಾರೆ. ಹೀಗಾಗಿ ಬೇರೆ ಪಕ್ಷಕ್ಕೆ ಹೋಗುವ ಮುನ್ನ ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ಮಾಡ್ತಿದ್ದಾರೆ. ಈಗೇನೋ ದೆಹಲಿಯಲ್ಲಿ ಸಮಾವೇಶ ಮಾಡ್ತಾರಂತೆ ಮಾಡಲಿ. ಕೆ.ಎನ್.ರಾಜಣ್ಣ ಬಿಜೆಪಿಗೆ ಹೋಗ್ತಿದ್ದಾರೋ? ಇಲ್ವೋ? ಅಂತ ಅವರನ್ನೇ ಕೇಳಿ. ಅವರ ಬ್ರೈನ್ ಮ್ಯಾಪಿಂಗ್ ಮಾಡಿಸಿದ್ರೆ ಎಲ್ಲಾ ಗೊತ್ತಾಗುತ್ತದೆ ಎಂದು ವಾಗ್ದಾಳಿ ನಡೆಸಿದ್ದಾರೆ. ರಾಜಣ್ಣ ಅವರನ್ನ ಸ್ವಾಗತ ಮಾಡ್ತಿರೋದು ಬಿಜೆಪಿ ನಾಯಕರೇ ಅಲ್ವಾ? ರಾಜಣ್ಣ ಈ ಹಿಂದೆ ನನಗೆ ಯಾವ ಪಕ್ಷದ ಅವಶ್ಯಕತೆಯೂ ಇಲ್ಲ ಅಂದಿದ್ದರು. ಈಗ ಯಾರ ಜತೆ ಸಂಪರ್ಕದಲ್ಲಿದ್ದಾರೆ ಅಂತ ಗೊತ್ತಾಗಬೇಕು. ನೂರಕ್ಕೆ ನೂರರಷ್ಟು ಅವರು ಬಿಜೆಪಿಗೆ ಸೇರುತ್ತಾರೆ. ನಮ್ಮ ಸರಕಾರ ಇಲ್ಲ ಅಂದಿದ್ರೆ ಇಷ್ಟೊತ್ತಿಗೆ ಅವರು ಬಿಜೆಪಿ ಸೇರಿರುತ್ತಿದ್ದರು. ಈಗಾಗಲೇ ಒಂದು ಕಾಲು ಅವರು ಬಿಜೆಪಿಯಲ್ಲಿ ಇಟ್ಟಿದ್ದಾರೆ. ಜತೆಗೆ ಬಿಜೆಪಿ ಕೇಂದ್ರ, ರಾಜ್ಯ ನಾಯಕರ ಜತೆ ಸಂಪರ್ಕದಲ್ಲಿದ್ದಾರೆ ಎಂದಿದ್ದಾರೆ.

ಅವರ ಮಾತಿನಿಂದಲೇ ಕೆಟ್ಟಿರೋದು

ಕೆ.ಎನ್.ರಾಜಣ್ಣ ಮಂತ್ರಿಯಾಗಿದ್ದಾಗ ಯಾವ ರೀತಿ ನಡೆದುಕೊಂಡರು ಎಂದು ಎಲ್ಲರಿಗೂ ಗೊತ್ತಿದೆ. ಅವರ ನಡವಳಿಕೆ, ಮಾತು ಯಾವ ರೀತಿಯಿತ್ತು ಎನ್ನೋದು ಕೂಡ ಗೊತ್ತಿದೆ. ಮಾತು ಮನೆ ಕೆಡಿಸ್ತು, ತೂತು ಒಲೆ ಕೆಡಿಸ್ತು ಎನ್ನುವ ಹಾಗೇ ಅವರು ಮಾತಾಡುತ್ತಿದ್ದರು. ಅವರ ಮಾತಿನಿಂದಲೇ ಅವರು ಕೆಟ್ಟಿರೋದು, ಅದರ ಹಿಂದೆ ಯಾರ ಷಡ್ಯಂತ್ರವೂ ಇಲ್ಲ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ತಿಳಿಸಿದ್ದಾರೆ.

ಉತ್ತರ ಕರ್ನಾಟಕಕ್ಕೆ ವಿಶೇಷ ಆದ್ಯತೆ: ಶಿಕ್ಷಣ ಸಚಿವ ಮಧು ಬಂಗಾರಪ್ಪ

800 ಕೆಪಿಎಸ್ ಶಾಲೆಗಳಿಗೆ ಸಿದ್ಧತೆ

ಶಿವಮೊಗ್ಗ: ಅಕ್ಟೋಬರ್‌ನಲ್ಲಿ 800 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲಾಗುವುದು. ಈ ಯೋಜನೆಗೆ ಸಿಎಂ ಸಿದ್ದರಾಮಯ್ಯನವರು

ಶಿವಮೊಗ್ಗದಲ್ಲಿಯೇ ಚಾಲನೆ ನೀಡಲಿದ್ದಾರೆ ಎಂದು ಸಾಕ್ಷರತಾ ಹಾಗೂ ಶಾಲಾ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ 800 ಕೆಪಿಎಸ್ ಶಾಲೆಗಳನ್ನು ತೆರೆಯಲಾಗುವುದು. ಇದರಲ್ಲಿ 500 ಶಾಲೆಗಳನ್ನು ವಿಶ್ವ ಬ್ಯಾಂಕ್ ನೆರವಿನಿಂದ ಪ್ರಾರಂಭಿಸಲಾಗುತ್ತಿದೆ. ಕೆಕೆಆರ್‌ಎಲ್‌ನಿಂದ 200 ಶಾಲೆಗಳು, ಉಳಿದ 100 ಶಾಲೆಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

800 ಕೆಪಿಎಸ್ ಶಾಲೆಯಲ್ಲಿ ಉತ್ತರ ಕರ್ನಾಟಕಕ್ಕೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ಸರಕಾರದ ಜತೆಗೆ ಎಸ್‌ಜಿಒಗಳು ಕೈ ಜೋಡಿಸಲಿವೆ. ಈ ಶಾಲೆಗಳನ್ನು ಮುಂಬರುವ ಅಕ್ಟೋಬರ್‌ನಲ್ಲಿ ಶಿವಮೊಗ್ಗದಿಂದಲೇ ಪ್ರಾರಂಭಿಸಲು ಸಿಎಂ ಅವರನ್ನು ಕರೆಸಲಾಗುತ್ತದೆ. ಇದರ ಜತೆಗೆ ಜಿಲ್ಲೆಯ ಅಭಿವೃದ್ಧಿಕಾಮಗಾರಿಗೂ ಚಾಲನೆ ನೀಡಲಾಗುತ್ತದೆ. ಶರಾವತಿ ಪಂಪ್ಡ್ ಸ್ಟೋರೇಜ್ ವಿಚಾರವನ್ನೂ ಸಿಎಂ ಮಾತನಾಡಲಿದ್ದಾರೆ ಎಂದರು.

ಬಿಜೆಪಿಯಿಂದ ಪ್ರಜಾಪ್ರಭುತ್ವದ ಕೊಲೆ

ಬಿಜೆಪಿಯವರು ಧರ್ಮಸ್ಥಳದ ವಿಚಾರದಲ್ಲಿ ಆತುರವಾಗಿ ಮಾತನಾಡುತ್ತಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿಯವರು ಪ್ರಜ್ವಲ್ ವಿಚಾರದಲ್ಲಿ ಯಾಕೆ ಸಂತ್ರಸ್ತರ ಮನೆಗೆ ಹೋಗುತ್ತಿಲ್ಲ? ಎಂದು ಪ್ರಶ್ನಿಸಿದರು. ಮತ ಕಳವು ಕುರಿತು ನಾವು ಗ್ರಾಮ ಪಂಚಾಯತ್ ಮಟ್ಟಕ್ಕೂ ಕರೆದುಕೊಂಡು ಹೋಗುತ್ತೇವೆ. ಇಂದು ಧರ್ಮ ಧರ್ಮ ಎಂದವರು, ನಾಳೆ ಧರ್ಮವನ್ನೇ ಹಾಳು ಮಾಡುತ್ತಾರೆ. ಹಿಂದೆ ಟ್ರಂಪ್ ಅಂತ ಹೋದವರು ಈಗ ಚೀನಾದ ಪರವಾಗಿ ಹೋಗುತ್ತಿದ್ದಾರೆ. ಮತ ಕಳವು ಮೂಲಕ ಬಿಜೆಪಿಯವರು ಪ್ರಜಾಪ್ರಭುತ್ವವನ್ನು ಕೊಲೆ ಮಾಡುತ್ತಿದ್ದಾರೆ ಎಂದು ಸಚಿವ ಮಧು ಬಂಗಾರಪ್ಪ ಗಂಭೀರ ಆರೋಪ ಮಾಡಿದರು.

ಯಾದಗಿರಿಯಲ್ಲಿ ಮಾಜಿ ಸಚಿವ ಬಾಬುರಾವ್ ಚಿಂಚನಸೂರ ಭವಿಷ್ಯ

ಮುಂದೆ ಖರ್ಗೆ ಪಿಎಂ, ನಾನು ಡಿಸಿಎಂ

ಯಾದಗಿರಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ಪ್ರಧಾನಿಯಾಗಲಿದ್ದು, ನಾನು ಕೂಡಾ 2028ರಲ್ಲಿ ಗೆದ್ದು ಉಪಮುಖ್ಯಮಂತ್ರಿ ಪಟ್ಟಕ್ಕೇರುವೆ ಎಂದು ಮಾಜಿ ಸಚಿವ ಬಾಬುರಾವ್ ಚಿಂಚನಸೂರ ಭವಿಷ್ಯ ನುಡಿದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆಯವರಿಗೆ ಪ್ರಧಾನಿ ಆಗುವ ಯೋಗ ಸಮೀಪ ಬಂದಿದೆ.ಅವರು ನಮ್ಮ ಭಾಗದ ದೊಡ್ಡ ನೇತಾರ, ಪ್ರಧಾನಿಮಂತ್ರಿ ಸಮಾನ ಅನ್ನುವ ದೊಡ್ಡಮಟ್ಟದಲ್ಲಿ ಅವರು ಬೆಳೆದಿದ್ದಾರೆ, ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರು ಇದ್ದಾರೆ. ಇವತ್ತು ಇಂದಿರಾಗಾಂಧಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕುಳಿತ ಸ್ಥಾನದಲ್ಲಿ ಖರ್ಗೆಯವರು ಕುಳಿತಿದ್ದಾರೆ ಎಂದು ಗರ್ವವಿದೆ ಎಂದಿದ್ದಾರೆ .

ಇನ್ನೂ ಜನರೊಂದಿಗಿದ್ದು, 2028ರಲ್ಲಿ ಯುದ್ಧಭೂಮಿಯಲ್ಲಿ ಮತ್ತೇ ಗೆದ್ದು

ಉಪಮುಖ್ಯಮಂತ್ರಿ ಆಗಿ ಬರ್ತಿನಿ ಎಂದು ಅಚಲ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

25 ವರ್ಷ ಎಂಎಲ್‌ಎ ಆಗಿದೀನಿ, 10 ವರ್ಷ ಮಂತ್ರಿಯಾಗಿ ಕ್ಯಾಬಿನೆಟ್ ಸಿನಿಯಾರಿಟಿ ಇದೆ. ನನಗೆ ತಾಯಿ ಇಲ್ಲ, ತಂದೆ ಇಲ್ಲ, ಮಕ್ಕಳೂ ಇಲ್ಲ. ಸಮಾಜ ಸೇವೆ ಬಿಟ್ಟರೆ ಏನೂ ಇಲ್ಲ ಎಂದವರು, ಮಲ್ಲಿಕಾರ್ಜುನ ಖರ್ಗೆ ಅವರ ಮುಖಾಂತರ ನಾನು ಕೋಲಿ ಸಮಾಜವನ್ನು ಎಸ್ಟಿಗೆ ಸೇರಿಸಬೇಕೆಂಬ ಪ್ರತಿಜ್ಞೆ ತೊಟ್ಟಿದ್ದೇನೆ. ಸೂರ್ಯ- ಚಂದ್ರ ಹುಟ್ಟೋದು ಎಷ್ಟು ಸತ್ಯವೋ, ಮಲ್ಲಿಕಾರ್ಜುನ ಖರ್ಗೆಯವರ ಮುಖಾಂತರ ಕೋಲಿ ಸಮಾಜವನ್ನು ಎಸ್ಟಿಗೆ ಸೇರಿಸುವುದು ಅಷ್ಟೇ ಸತ್ಯ ಶಪಥ ಮಾಡಿದರು.

ಬಾಗಲಕೋಟೆ ಡಿಸಿ ಕಚೇರಿ ವಸ್ತುಗಳು ಜಪ್ತಿ

ಬಾಗಲಕೋಟೆ: ಭೂಸ್ವಾಧೀನ ಮಾಡಿಕೊಂಡ ಜಮೀನಿಗೆ ಪರಿಹಾರ ನೀಡದಿರುವುದಕ್ಕೆ ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿಯಲ್ಲಿನ ವಸ್ತುಗಳನ್ನು ಮಂಗಳವಾರ ಜಪ್ತಿ ಮಾಡಲಾಗಿದೆ.

ಬಾಗಲಕೋಟೆ ಪಟ್ಟಣ ಪ್ರಾಧಿಕಾರ (ಬಿಟಿಡಿಎ) ನವನಗರ ಯುನಿಟ್-3ರ ಅಭಿವೃದ್ಧಿ ಸಂಬಂಧ ರೈತರ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಇಲ್ಲಿಯವರೆಗೆ ಭೂಸ್ವಾಧೀನದ ಪರಿಹಾರ ನೀಡದಿರುವ ಕಾರಣ 5ನೇ ಹೆಚ್ಚುವರಿ ನ್ಯಾಯಾಲಯ ಆದೇಶ ನೀಡಿದೆ.

ರೇವಣಸಿದ್ದಯ್ಯ ಮಠಪತಿ, ಬಸವರಾಜ ಮಠಪತಿ, ಕೃಷ್ಣಾ ಜೀರಗಾಳ ಎಂಬ ರೈತರ ಅಂದಾಜು 170 ಕೋಟಿ ರು. ಪರಿಹಾರಕ್ಕೆ 5ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ರೈತರು ದೂರು ದಾಖಲಿಸಿದ್ದರು. ವಿಚಾರಣೆ ನಡೆಸಿದ ಕೋರ್ಟ್ ಪರಿಹಾರ ಕೊಡಬೇಕು ಎಂದು ಆದೇಶಿಸಿತ್ತು. ಕೋರ್ಟ್ ಆದೇಶವಿದ್ದರೂ ಜಿಲ್ಲಾಡಳಿತ ಹಣವನ್ನು ನೀಡದ್ದಕ್ಕೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.



ಬಾಗಲಕೋಟೆಯ ಜಿಲ್ಲಾಧಿಕಾರಿಗಳ ಕಚೇರಿಯ ವಸ್ತುಗಳನ್ನು ಜಪ್ತಿ ಮಾಡಿರುವುದು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ : ಬೋಗಾದಿ, ಮೈಸೂರು

ಸಮಸ್ಯೆಯೇನು..?

- ಜಿ ಸ್ಕ್ವಾಯರ್ ಲೇಔಟ್‌ನ ಮುಂಭಾಗದಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಹೆಬ್ಬಾಗಿಲು ತೆರವುಗೊಳಿಸುವ ಬಗ್ಗೆ.
- **ಪರಿಹಾರ:** ಮೈಸೂರು ತಾಲೂಕಿನ ಬೋಗಾದಿ ಗ್ರಾಮದಲ್ಲಿ ಜಿಸ್ಕ್ವಾಯರ್ ಲೇಔಟ್‌ನ ಮುಂಭಾಗದಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಹೆಬ್ಬಾಗಿಲಿನ ಪಿಲ್ಲರ್‌ಗಾಗಿ ನಿರ್ಮಿಸಿರುವ ಹಳ್ಳವನ್ನು ಮುಚ್ಚಿಸಿದ್ದು ಅಕ್ಕಪಕ್ಕದ ಬಡಾವಣೆ ನಿವಾಸಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
03.09.2025
ಬುಧವಾರದ ಅತಿಥಿ

ಡಾ. ರಾಘವೇಂದ್ರ ಡಿ.ಎಸ್
ವಿಷಯ
ಹಿರಿಯರಿಗೆ ಕಿವಿಮಾತು
vishwavani.news

ಸುಬುಧೇಂದ್ರ ತೀರ್ಥ ಸ್ವಾಮೀಜಿಗಳಿಂದ ಚಾಲನೆ | ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಸ್ವಚ್ಛತಾ ಕಾರ್ಯ

ಸಾವಿರಾರು ಜನರಿಂದ ಮಂತ್ರಾಲಯದಲ್ಲಿ ಸ್ವಚ್ಛತೆ

ವಿಶ್ವವಾಣಿ ಸುದ್ದಿಮನೆ ಮಂತ್ರಾಲಯ

ಸ್ವಚ್ಛತೆ ಎಂಬುವುದು ಆರೋಗ್ಯಕ್ಕೆ, ಪ್ರಗತಿಗೆ, ಸಂಸ್ಕೃತಿಗೆ ಪ್ರತೀಕವಾಗಿದೆ ಎಂದು ಮಂತ್ರಾಲಯ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿಗಳು ತಿಳಿಸಿದರು.

ಮಂತ್ರಾಲಯದ ಶ್ರೀ ಗುರು ರಾಘವೇಂದ್ರ ಮಠದ ಆವರಣದಲ್ಲಿ 'ಸ್ವಚ್ಛ ಸುಂದರ ಮಂತ್ರಾಲಯ' ಅಭಿಯಾನಕ್ಕೆ ಮಾರ್ಗದರ್ಶನ ನೀಡಿ, ಕರಸೇವಕರಿಗೆ ಸ್ವಚ್ಛತಾ ಸಾಮಾಗ್ರಿಗಳನ್ನು ವಿತರಿಸಿ, ಸ್ವತಃ ತಾವೇ ಸ್ವಚ್ಛತೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನೆ, ಊರು, ಕೇರಿ ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದರು.

ವಿದೇಶಗಳಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡುತ್ತಿದ್ದು, ಅದೇ ಉದ್ದೇಶದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಮ್ಮ ದೇಶದಲ್ಲಿಯೂ ಸ್ವಚ್ಛ ಭಾರತ ಅಭಿಯಾನ ಮಾಡಿದ್ದಾರೆ. ಈ ಪರಿಕಲ್ಪನೆಗೆ ದೇಶಾದ್ಯಂತ ಉತ್ತಮ ಪ್ರತಿಕ್ರಿಯೆ ದೊರೆತಿದೆ ಎಂದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಸಮಾಜ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಲಿಂಬಾವಳಿ ಅವರು ಉತ್ತಮ ನಾಯಕರಾಗಿ ಇಡೀ ದೇಶದಲ್ಲೇ ಗುರುತಿಸಿಕೊಂಡಿದ್ದಾರೆ. ಪಕ್ಷ ತಮಗೆ ನೀಡಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ರಾಜಕೀಯ, ಸಾಮಾಜಿ, ಧಾರ್ಮಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಖಜಾಂಚಿ ಸುಬ್ಬಣ್ಣ, ನಗರ ಮಂಡಲ ಅಧ್ಯಕ್ಷ ಶ್ರೀಧರ್ ರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಪಿಳ್ಳಪ್ಪ, ಪ್ರ.ಕಾರ್ಯದರ್ಶಿ ರಾಜೇಶ್, ಮಾಜಿ ಅಧ್ಯಕ್ಷರಾದ ಮನೋಹರ್ ರೆಡ್ಡಿ, ನಟರಾಜ್, ಪುಷ್ಪ ಮಂಜುನಾಥ್, ಕಣ್ಣೂರು ಪಂಚಾಯಿತಿ ಅಧ್ಯಕ್ಷ ಅಶೋಕ್, ಬಿದರಹಳ್ಳಿ ಪಂಚಾಯಿತಿ ಮಾಜಿ ಅಧ್ಯಕ್ಷ ರಾಜೇಶ್, ಕಣ್ಣೂರು ವಾರ್ಡ್ ಅಧ್ಯಕ್ಷ ಮಹೇಶ್, ಮುಖಂಡರಾದ ಜ್ಯೋತಿಪುರ ವೇಣು, ದೊಡ್ಡಗುಬ್ಬಿ ಮಾರುತಿ, ಮಹೇಂದ್ರ ಮೋದಿ, ವರ್ತೂರು ಶ್ರೀಧರ್, ಹಗದೂರು ಶ್ರೀನಿವಾಸ್, ಬೊಮ್ಮನಹಳ್ಳಿ ಮುನಿರಾಜು, ಕೆ.ವಿ.ನಾಗರಾಜ್, ಕೊಡತಿ ಅಶೋಕ್ ಮತ್ತಿತರರಿದ್ದರು.

ಮಂತ್ರಾಲಯದ ಶ್ರೀ ಗುರು ರಾಘವೇಂದ್ರ ಮಠದ ಆವರಣದಲ್ಲಿ 'ಸ್ವಚ್ಛ ಸುಂದರ ಮಂತ್ರಾಲಯ' ಅಭಿಯಾನವನ್ನು ಮಂತ್ರಾಲಯ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿಗಳು ಉದ್ಘಾಟಿಸಿದರು. ಮಾಜಿ ಸಚಿವ ಅರವಿಂದ ಲಿಂಬಾವಳಿ ಸೇರಿ ಮತ್ತಿತರರಿದ್ದರು.

ಸ್ವಚ್ಛ ಮಂತ್ರಾಲಯ ಸುಂದರ ಮಂತ್ರಾಲಯ ಅಭಿಯಾನಕ್ಕೆ ಮಹದೇವಪುರ ಕ್ಷೇತ್ರದಿಂದ ಸಾವಿರಾರು ಮಂದಿ ಆಗಮಿಸಿದ್ದು ನನಗೆ ಸಂತಸ ತಂದಿದೆ. ಎರಡು ವರ್ಷದ ಹಿಂದೆ ನೋಡಿದ ಮಂತ್ರಾಲಯಕ್ಕೂ ಇಂದಿನ ಮಂತ್ರಾಲಯಕ್ಕೂ ತುಂಬಾ ವ್ಯತ್ಯಾಸಗಳಾಗಿದೆ. ಶ್ರೀಗಳ ವಿಶೇಷ ಕಾಳಜಿಯಿಂದ ಮಂತ್ರಾಲಯ ಅಭಿವೃದ್ಧಿ ಆಗಿದೆ.

-ಅರವಿಂದ ಲಿಂಬಾವಳಿ, ಮಾಜಿ ಸಚಿವ

ಮಂತ್ರಾಲಯ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಸ್ವಯಂ ಸೇವಕರು.

ಗೋಶಾಲೆ, ನದಿತೀರ ಸ್ವಚ್ಛತೆ

ಬೆಂಗಳೂರಿನ ಮಹದೇವಪುರದಿಂದ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಸಾವಿರಾರು ಮಂದಿ ಮಂತ್ರಾಲಯರ ರಾಯರ ಮಠದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು. ಮಠದ ಗೋಶಾಲೆ, ತುಂಗಭದ್ರಾ ನದಿತೀರ, ಕಲ್ಯಾಣಿ, ಸಾರ್ವಜನಿಕ ಗಾರ್ಡನ್, ಪಾಕಶಾಲೆ, ಪ್ರಮುಖ ಬೀದಿಗಳು, ಪ್ರಸಾದ ವಿತರಣೆ ಕೇಂದ್ರ, ವಿವಿಧ ಸ್ಥಳಗಳಲ್ಲಿ ಕಸ ಸ್ವಚ್ಛಗೊಳಿಸುವ ಕಾರ್ಯ ನಡೆಯಿತು.

ವಿಶ್ವವಾಣಿ

ಸಂಪಾದಕೀಯ

ತೆಳುವಾಗುತ್ತಿದೆಯೇ ಭಾವತಂತು?

ಬೇರೊಬ್ಬ ಮಹಿಳೆಯ ಜತೆಗಿನ ಗಂಡನ ಅನೈತಿಕ ಸಂಬಂಧವನ್ನು ಪ್ರಶ್ನಿಸಿದ್ದಕ್ಕೆ ಆತ ತನ್ನ ಹೆಂಡತಿಯನ್ನೇ ಕೊಲೆಮಾಡಿದ ಘಟನೆ ದಾವಣಗೆರೆ ಜಿಲ್ಲೆಯಲ್ಲಿ ನಡೆದಿದೆ. ಇನ್ನೊಂದೆಡೆ, ಗಂಡನಿಗಿದ್ದ ಅನೈತಿಕ ಸಂಬಂಧವನ್ನು ಪ್ರಶ್ನಿಸಿದ್ದಕ್ಕೆ ತನಗೆ ಕಿರುಕುಳ ನೀಡಿದ ಎಂಬ ಕಾರಣಕ್ಕೆ ಹೆಂಡತಿಯು ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ಘಟನೆ ಬೆಂಗಳೂರಿನ ಬಾಗಲಗುಂಟೆ ಪ್ರದೇಶದ ವ್ಯಾಪ್ತಿಯಲ್ಲಿ ನಡೆದಿದೆ. ಮತ್ತೊಂದೆಡೆ, ಇಬ್ಬರು ಹೆಂಡತಿಯರ ಗಂಡನೊಬ್ಬ ಅದು ಸಾಲದೆಂಬಂತೆ 26ರ ಹರೆಯದ ವಿಧವೆಯೊಬ್ಬಳ ಜತೆ 'ಲಿವ್-ಇನ್' ಬಾಂಧವ್ಯದಲ್ಲಿದ್ದು, ಕೊನೆಗೆ ಆ ಯುವತಿ ಬೇರೊಬ್ಬರೊಂದಿಗೆ ಸಲುಗೆ ಬೆಳೆಸಿರುವುದನ್ನು ಕಂಡು ಪೆಟ್ರೋಲ್ ಎರಚಿ, ಬೆಂಕಿಹಚ್ಚಿ ಸಾಯಿಸಿದ ಘಟನೆ ಬೆಂಗಳೂರಿನ ಆನೇಕಲ್ ಬಳಿ ನಡೆದಿದೆ. ಮೇಲಿನ ಮೂರೂ ದುರ್ಘಟನೆಗಳನ್ನು ಅವಲೋಕಿಸಿದರೆ, ಅವಕ್ಕೆ ಮೂಲವಾಗಿದ್ದು 'ಅನೈತಿಕ ಸಂಬಂಧ' ಎಂಬುದು ಸ್ಪಷ್ಟಗೋಚರ. ವಿವಾಹವಾಗಿದ್ದೂ ಅನೈತಿಕ ಸಂಬಂಧ ಹೊಂದುವಷ್ಟರ ಮಟ್ಟಿಗಿನ ಧಾರ್ಷ್ಟ್ಯವನ್ನು ತೋರುವುದು ಒಂದು ತೆರನಾದ ಎಡವುವಿಕೆಯಾದರೆ, ಅದನ್ನು ಸಮರ್ಥಿಸಿಕೊಳ್ಳುವ ಕಸರತ್ತು ಎಂಬಂತೆ ಇಂಥ ಘನಘೋರ ಕೃತ್ಯಗಳಿಗೂ ಮುಂದಾಗುವಷ್ಟರ ಮಟ್ಟಿಗೆ ನಮ್ಮ ಸಮಾಜದ ಕೆಲವರಲ್ಲಿ ನೈತಿಕ ಅಧಃಪತನ ಕಂಡುಬರುತ್ತಿದೆ. ಇಲ್ಲಿ ದೂಷಿಸಬೇಕಾದ್ದು ಯಾರನ್ನು? ಎಂಬುದು ಯಕ್ಷಪ್ರಶ್ನೆ. ಜತೆಗೆ, ಕಲ್ಪಿಸಿಕೊಳ್ಳಲಿಕ್ಕೂ ಕಷ್ಟವಾಗುವ 'ಮತ್ತೊಬ್ಬರನ್ನು ಕೊಲೆ ಮಾಡುವಂಥ' ಕೃತ್ಯದಲ್ಲೂ ತೊಡಗುವಷ್ಟರ ಮಟ್ಟಿಗೆ ಇಂಥ ಅನೈತಿಕ ಬಾಂಧವ್ಯಗಳು ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಹಾಳುಮಾಡುತ್ತವೆಯೆಂದರೆ ಮತ್ತು ಅಂಥ ಪ್ರಕರಣಗಳು ದಿನಗಳೆದಂತೆ ಹೆಚ್ಚಾಗುತ್ತಿರುವುದನ್ನು ನೋಡಿದರೆ, ಇದನ್ನು 'ಕ್ಷಣಾರ್ಧದ ದುಡುಕು' ಎನ್ನಲಾಗದು. 'ಜೈಲಿಗೆ ಹೋದರೂ ಪರವಾಗಿಲ್ಲ, ನಿನಗೊಂದು ಗತಿ ಕಾಣಿಸುವೆ' ಎಂಬಂಥ ಮಾತುಗಳನ್ನು ಸಾಕಷ್ಟು ವರ್ಷಗಳ ಹಿಂದೆ ಜಗಳಗಳ ಸಂದರ್ಭದಲ್ಲಿ 'ಬಾಯಿಮಾತಾಗಿ' ಕೇಳುತ್ತಿದ್ದ ಜನರಿಂದು, ಅದನ್ನು 'ಕೃತ್ಯವಾಗಿ' ನೋಡುವ ಘಟ್ಟಕ್ಕೆ ಸಾಕ್ಷಿಯಾಗಿದ್ದಾರೆ. ಇದು, ದಿನಗಳೆದಂತೆ ಮಾನವ ಸಂಬಂಧದಲ್ಲಿನ 'ಭಾವತಂತು' ತೆಳುವಾಗುತ್ತಿರುವುದರ ದ್ಯೋತಕವೇ? ಮನೋವಿಜ್ಞಾನಿಗಳು ಮತ್ತು ಸಮಾಜವಿಜ್ಞಾನ ಪರಿಣತರೇ ಇದನ್ನು ವ್ಯಾಖ್ಯಾನಿಸಬೇಕು...

ಸೊಂಪಾದಕೀಯ

ಒಂದು ಜಾಮೀನಿನ ಕಥೆ

ಇದು ಸಾಕಷ್ಟು ಹಿಂದಿನ ಕಥೆ. ಅದೇನೋ ಅಂತಾರಲ್ಲ, ದೇವರು ಕೊಟ್ರೂ ಪೂಜಾರಿ ಕೊಡ್ಲಿಲ್ಲ ಅಂತ. ಅಂಥ ಕಥೆ ಇದು. ಪಾಪ, ಜೈಲರ್‌ಗಳು ಮಾಡಿದ ತಪ್ಪಿನಿಂದ ತಪ್ಪೇ ಮಾಡದೇ ಜೈಲಲ್ಲಿ ಕೊಳೆಯಬೇಕಾದ ಪರಿಸ್ಥಿತಿ ಗುಜರಾತ್‌ನ ಚಂದನ್ ಠಾಕೂರ್ ಎಂಬಾತನದ್ದು. ಈತ ಕೊಲೆ ಪ್ರಕರಣವೊಂದರಲ್ಲಿ ತಗಾಲಾಕಿಕೊಂಡಿದ್ದ. ಕೋರ್ಟು ಶಿಕ್ಷೆಯನ್ನು ಅಮಾನತು ಮಾಡಿ ಈತನಿಗೆ 2020ರಲ್ಲೇ ಜಾಮೀನು ಕೊಟ್ಟಿತ್ತು. ಆದರೆ ಕೋರ್ಟು ಇ-ಮೇಲಲ್ಲಿ ಕಳಿಸಿದ ಆರ್ಡರ್ ಅನ್ನು ಜೈಲಲ್ಲಿರೋರು ನೋಡಿರಲಿಲ್ಲವಂತೆ. ಹಾಗಾಗಿ ಈತ ಪಾಪ ತನಗಿನ್ನೂ ಜಾಮೀನು ಸಿಕ್ಕಿಲ್ಲ ಅಂದುಕೊಂಡೇ ಕತ್ತಲ ಕೋಣೆಯಲ್ಲಿ ಕೂತಿದ್ದ. 'ಕತ್ಲಲ್ಲಿ ಕೂತಿದ್ದ ಈತನಿಗೆ ಜಾಮೀನು ಕೊಡಿಸೋಕೆ ಯಾವತ್ತು ಹೋಗ್ಬಾರ್ದು ರೀ' ಅಂತ ಯಾರೂ ಈತನ ಸಂಪರ್ಕಕ್ಕೆ ಬಂದಿರಲಿಲ್ಲ. 3 ವರ್ಷದ ನಂತರ ಮತ್ತೆ ಕೋರ್ಟಿಗೆ ಜಾಮೀನಿಗಾಗಿ ಅರ್ಜಿ ಹಾಕಿದಾಗ, 'ಅಯ್ಯೋ, ನಿಂಗೆ ಎಷ್ಟ್ ಸಲನಯ್ಯಾ ಜಾಮೀನು ಕೊಡಿಸೋದು?' ಅಂತ ಕೋರ್ಟು ಪ್ರಶ್ನೆ ಹಾಕಿತಂತೆ. ಅದಕ್ಕೆ ಕಾರಣ ಕೋರ್ಟಿನ ರೆಕಾರ್ಡುಗಳ ಪ್ರಕಾರ ಈತ 2020ರಲ್ಲೇ ಬಿಡುಗಡೆ ಆಗಿದ್ದ. ಹೀಗಾಗಿ ಕೋರ್ಟು, ಇ-ಮೇಲಲ್ಲಿ ಆರ್ಡರ್ ಕಳಿಸಿದ್ರೂ, ಕಣ್ಣೆತ್ತಿ ನೋಡದ ಜೈಲರ್‌ಗೆ 1 ಲಕ್ಷ ರುಪಾಯಿ ದಂಡ ವಿಧಿಸಿತು. ಪಾಪ, ಜೈಲಲ್ಲಿ ಇಂಟರ್ನೆಟ್ ಇರಲಿಲ್ಲವೋ ಏನೋ, ಒಟ್ಟಿನಲ್ಲಿ ಆ ಜೈಲರ್ ಒಂದು ಲಕ್ಷ ದಂಡ ಪೀಕುವಂತಾಯಿತು. ಅನ್ಯಾಯವಾಗಿ 3 ವರ್ಷ ಜೈಲಲ್ಲಿ ಕಳೆದಿದ್ದಕ್ಕೆ ಬರೀ ಒಂದು ಲಕ್ಷನಾ ಅಂತ ಚಂದನ್ ಠಾಕೂರ್ ಪ್ರಶ್ನೆ ಮಾಡಲಿಲ್ಲ. ಆದರೂ 3 ವರ್ಷ ಶಿಕ್ಷೆ ಆಗಿರುವ ಆರೋಪಿಯೊಬ್ಬ ಒಂದು ಲಕ್ಷ ಹಣ ಕೊಟ್ರೆ ಅವನನ್ನು ಹಂಗೇ ಬಿಟ್ಟುಬಿಡುತ್ತದಾ ನಮ್ಮ ಕಾನೂನು ವ್ಯವಸ್ಥೆ ಅನ್ನೋದು ಕೇಳಬೇಕಾದ ಪ್ರಶ್ನೆ ಬಿಡಿ. ಆದರೂ ಇಂಥ ಗಂಭೀರ ವಿಷಯಗಳಲ್ಲಿ ಇಷ್ಟೊಂದು ನಿರ್ಲಕ್ಷ್ಯ ತೋರಿಸಿದ ಇಂಥ ಜೈಲರ್‌ಗಳನ್ನು ನೋಡಿದಾಗ ಸಿಟ್ಟು ಬರೋದು ಸಹಜ. ಮೊದಲೇ ನಮ್ಮ ದೇಶದ ಕೋರ್ಟುಗಳಲ್ಲಿ ಕೇಸುಗಳು ಇತ್ಯರ್ಥ ಆಗೋದು ವಿಳಂಬ. ಅಂಥದ್ರಲ್ಲಿ ಕೋರ್ಟು ತೀರ್ಪು ಕೊಟ್ರೂ, ಅದನ್ನು ಜೈಲರ್‌ಗಳು ನೋಡೇ ಇಲ್ಲ ಅಂದ್ರೆ, ಹೆಂಗೆ? ಒಟ್ಟಿನಲ್ಲಿ ಈ ಸುದ್ದಿ ಕೇಳಿ, 'ನಮ್ಮ ರಜನಿಕಾಂತ್ ಅವರಂಥ ಜೈಲರ್ ಇದ್ದಿದ್ರೆ ಇಂಥ ಅನಾಹುತ ಆಗ್ತಾ ಇರಲಿಲ್ಲ ಬಿಡಿ' ಅಂತ ಜೈಲಿನಲ್ಲಿದ್ದ ಮಿಕ್ಕ ಕೈದಿಗಳು ಲೊಚಗುಟ್ಟಿದರಂತೆ!

ಸಂಪಾದಕರ ಸದ್ಯಶೋಧನೆ

ಸುರಕ್ಷತೆಗೆ ಮೊದಲ ಆದ್ಯತೆ

ವಿಮಾನ ಮತ್ತು ವಿಮಾನಯಾನದಲ್ಲಿ ಯಾವತ್ತೂ ಸುಧಾರಣೆಗೆ ಒಳಗಾಗುವುದು ಭದ್ರತೆ ಮತ್ತು ಸುರಕ್ಷತೆಯೊಂದೇ. ಈ ಎರಡು ವಿಷಯಗಳಲ್ಲಿ ಯಾವ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ. ಒಂದು ಸಣ್ಣ ಸುಧಾರಣೆಗೆ ಅವಕಾಶವಿದ್ದರೂ, ಅದನ್ನು ನಿರ್ಲಕ್ಷಿಸುವುದಿಲ್ಲ. ಅಮೆರಿಕದ ವಿಮಾನಯಾನ ಕಂಪನಿಗಳು ತಮ್ಮ ಹೊಸ ವಿಮಾನಗಳಲ್ಲಿ ಈಗ ಎರಡನೇ ಗೇಟ್ (ಸೆಕೆಂಡರಿ ಕಾಕ್‌ಪಿಟ್ ಬ್ಯಾರಿಯರ್) ಅಳವಡಿಸುವುದನ್ನು ಕಡ್ಡಾಯ ಮಾಡಲಾಗಿದೆ. ಈ ವೈಶಿಷ್ಟ್ಯದ ಮುಖ್ಯ ಉದ್ದೇಶ ವಿಮಾನದ ಕಾಕ್‌ಪಿಟ್‌ಗೆ ಹೆಚ್ಚಿನ ಭದ್ರತೆ ನೀಡುವುದು. ಸೌತ್‌ವೆಸ್ಟ್ ಏರ್‌ಲೈನ್ಸ್‌ಗೆ ಸೇರಿದ ಹೊಸ ಬೋಯಿಂಗ್ 737 ಮ್ಯಾಕ್ಸ್ 8 ವಿಮಾನವು ಈ ಹೆಚ್ಚುವರಿ ಭದ್ರತಾ ವೈಶಿಷ್ಟ್ಯದೊಂದಿಗೆ ಇತ್ತೀಚೆಗೆ ಹಾರಾಟ ಆರಂಭಿಸಿದೆ. ಅಮೆರಿಕ ಸರಕಾರವು ಈ ನಿಯಮವನ್ನು ಜಾರಿಗೆ ತರಲು 2026ರ ಗಡುವು ನೀಡಿದ್ದರೂ, ಸೌತ್‌ವೆಸ್ಟ್ ಏರ್‌ಲೈನ್ಸ್ ಮುಂಚಿತವಾಗಿಯೇ ಇದನ್ನು ಅಳವಡಿಸಿ, ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಹಾಗಾದರೆ ಈ ಹೊಸ ಭದ್ರತಾ ವೈಶಿಷ್ಟ್ಯ ಏನು? ಸದ್ಯಕ್ಕೆ ವಿಮಾನಗಳಲ್ಲಿ ಕಾಕ್‌ಪಿಟ್‌ಗೆ ಪ್ರವೇಶಿಸಲು ಒಂದು ಬಾಗಿಲು ಇರುತ್ತದೆ, ಇದನ್ನು ವಿಮಾನದ ಸಿಬ್ಬಂದಿ ಮಾತ್ರ ಪ್ರವೇಶಿಸಬಹುದು. ಈ ಹೊಸ ನಿಯಮದ ಪ್ರಕಾರ, ಈ ಬಾಗಿಲಿನ ಹಿಂಭಾಗದಲ್ಲಿ ಇನ್ನೊಂದು 'ಸೆಕೆಂಡರಿ ಕಾಕ್‌ಪಿಟ್ ಬ್ಯಾರಿಯರ್' ಅಂದರೆ ಎರಡನೇ ಗೇಟ್ ಅಥವಾ ಎರಡನೇ ತಡೆದ್ವಾರವನ್ನು ಅಳವಡಿಸಬೇಕು. ಪೈಲಟ್‌ಗಳು ತಮ್ಮ ಪ್ರಮುಖ ಬಾಗಿಲನ್ನು ತೆರೆದು ಶೌಚಾಲಯಕ್ಕೆ ಅಥವಾ ಇನ್ನಿತರ ಕಾರ್ಯಗಳಿಗೆ ಹೊರ ಬಂದಾಗ, ಪ್ರಯಾಣಿಕರು ಅಥವಾ ಬೇರೆ ಯಾರಾದರೂ ಕಾಕ್‌ಪಿಟ್ ಪ್ರವೇಶಿಸುವುದನ್ನು ತಡೆಯುವುದು ಇದರ ಮುಖ್ಯ ಉದ್ದೇಶ. ಈ ಎರಡನೇ ಗೇಟ್ ಮುಚ್ಚಿರುವುದರಿಂದ ಪೈಲಟ್‌ಗಳು ಹೊರಗೆ ಬಂದಾಗಲೂ ಕಾಕ್‌ಪಿಟ್ ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ. ಈ ಸುರಕ್ಷತಾ ಕ್ರಮವನ್ನು 2001ರ ಸೆಪ್ಟೆಂಬರ್ 11ರ ದಾಳಿಯ ನಂತರ ವಿಮಾನಯಾನ ಭದ್ರತೆಯನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿತ್ತು. ಆದರೆ, ಈ ಹೊಸ ನಿಯಮವನ್ನು ಜಾರಿಗೆ ತರಲು ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (FAA) ಹಲವು ವರ್ಷಗಳ ನಂತರ ನಿರ್ಧರಿಸಿತು. ಹಾಗಾದರೆ ಇದು ಕೇವಲ ಸುರಕ್ಷತೆಗಾಗಿ ಮಾತ್ರವೇ? ಇದು ಕೇವಲ ಸುರಕ್ಷತೆಯ ವಿಷಯವಾಗಿರದೇ ಹಲವಾರು ಅಭಿಪ್ರಾಯಗಳಿಗೆ ಕಾರಣವಾಗಿದೆ. ವಿಮಾನಯಾನದಲ್ಲಿ ಸುರಕ್ಷತೆಗೆ ಮೊದಲ ಆದ್ಯತೆ. ಈ ಎರಡನೇ ತಡೆದ್ವಾರ ಹೈಜಾಕ್ ಅಥವಾ ಇತರ ದುಷ್ಕೃತ್ಯಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ವೇಳೆ ಯಾರಾದರೂ ಬಲವಂತವಾಗಿ ಕಾಕ್‌ಪಿಟ್ ಪ್ರವೇಶಿಸಲು ಪ್ರಯತ್ನಿಸಿದರೆ, ಈ ಹೆಚ್ಚುವರಿ ಭದ್ರತಾ ತಡೆದ್ವಾರ ಭದ್ರತಾ ಸಿಬ್ಬಂದಿಗೆ ಕೂಡಲೇ ಕ್ರಮ ತೆಗೆದುಕೊಳ್ಳಲು ಅವಕಾಶ ನೀಡುತ್ತದೆ. ವಿಮಾನಯಾನ ಕಂಪನಿಗಳು ಈ ಹೊಸ ವೈಶಿಷ್ಟ್ಯವನ್ನು ಅಳವಡಿಸಲು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದು ವಿಮಾನದ ಒಳಾಂಗಣ ವಿನ್ಯಾಸ ಮತ್ತು ನಿರ್ವಹಣಾ ವೆಚ್ಚವನ್ನು ಹೆಚ್ಚಿಸಬಹುದು. ಅಲ್ಲದೇ, ಇದರಿಂದ ಸಿಬ್ಬಂದಿಗೆ ಕೆಲವೊಮ್ಮೆ ಅನಾನುಕೂಲ ಉಂಟಾಗಬಹುದು. ವಿಮಾನಗಳಲ್ಲಿ ಈಗಾಗಲೇ ಇರುವ ನಿಯಮಗಳು ಮತ್ತು ಭದ್ರತಾ ವ್ಯವಸ್ಥೆಗಳು ಸಾಕಷ್ಟು ಸುರಕ್ಷಿತವಾಗಿವೆ. ಹೀಗಿರುವಾಗ ಈ ಹೆಚ್ಚುವರಿ ವೈಶಿಷ್ಟ್ಯದ ಅವಶ್ಯಕತೆ ಇದೆಯೇ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಈ ರೀತಿಯ ಕಟ್ಟುನಿಟ್ಟಿನ ಕ್ರಮಗಳು ವಿಮಾನ ಪ್ರಯಾಣವನ್ನು ಅತಿಯಾಗಿ ನಿಯಂತ್ರಣಕ್ಕೆ ಒಳಪಡಿಸುತ್ತವೆ ಎಂದು ವಾದಿಸುವವರೂ ಇದ್ದಾರೆ. ಒಟ್ಟಾರೆಯಾಗಿ, ಸೌತ್‌ವೆಸ್ಟ್ ಏರ್‌ಲೈನ್ಸ್ ಈ ಹೊಸ ವೈಶಿಷ್ಟ್ಯವನ್ನು ಅಳವಡಿಸಿಕೊಳ್ಳುವ ಮೂಲಕ ವಿಮಾನ ಪ್ರಯಾಣದಲ್ಲಿ ಸುರಕ್ಷತೆಗೆ ಮತ್ತಷ್ಟು ಆದ್ಯತೆ ನೀಡಿದೆ. ಇದು ಇತರ ಕಂಪನಿಗಳಿಗೂ ಮಾದರಿಯಾಗಿದ್ದು, ಭವಿಷ್ಯದಲ್ಲಿ ಎಲ್ಲ ಹೊಸ ವಿಮಾನಗಳಲ್ಲಿ ಈ ವ್ಯವಸ್ಥೆ ಇರಲಿದೆ. ಸುರಕ್ಷತೆ ದೃಷ್ಟಿಯಿಂದ ಒಂದು ವಿಮಾನಯಾನ ಸಂಸ್ಥೆ ಕ್ರಮ ಕೈಗೊಂಡರೆ ಉಳಿದವು ಹಿಂದೇಟು ಹಾಕುವುದಿಲ್ಲ. ಹೀಗಾಗಿ ಈ ತಡೆದ್ವಾರ ಮುಂಬರುವ ವಿಮಾನಗಳಲ್ಲಿ ಅಳವಡಿಕೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಒಡಲ ಮೇಲಿರುವ ಗಾಯಗಳು: ಹಿಂಸೆಯ ರುಜುವಾತಿನ ಸಹಿಗಳು

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ರೋಮ್ ನಗರ. ಕ್ರಿ.ಪೂ. 44, ಮಾರ್ಚ್ 15. ಜೂಲಿಯಸ್ ಸೀಸರ್ ರೋಮ್ ಸಾಮ್ರಾಜ್ಯದ ಸರ್ವಾಧಿಕಾರಿಯಾಗಿದ್ದ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನಿಟ್ಟು, ಅದರಂತೆ ರಾಜ್ಯಭಾರವನ್ನು ಮಾಡುತ್ತಿದ್ದ ರೋಮನ್ನರಿಗೆ, ಸೀಸರ್ ನುಂಗಲಾಗದ ತುತ್ತಾಗಿ ಪರಿಣಮಿಸಿದ್ದ. ಅಂದು ರೋಮಿನ 'ಕ್ಯೂರಿಯ ದಿ ಪಾಂಪಿಯೊ'ದಲ್ಲಿ ಸಭೆಯನ್ನು ಆಯೋಜಿಸಿದ್ದರು. ಆ ಸಭೆಯಲ್ಲಿ ಮಾರ್ಕಸ್ ಜೂನಿಯಸ್ ಬ್ರೂಟಸ್, ಗೈಸ್ ಕೇಸಿಯಸ್ ಲಾಂಜಿನಸ್, ಡೆಸಿಮಸ್ ಜೂನಿಯಸ್ ಬ್ರೂಟಸ್ ಆಲ್ಬಿನಸ್ ಮುಂತಾದ ಪ್ರಮುಖರನ್ನೊಳಗೊಂಡ 60-70 ಸೆನೆಟರುಗಳು (ನಮ್ಮ ಸಂಸದರು ಇದ್ದ ಹಾಗೆ) ಸೇರಿದ್ದರು. ಇವರು ತಮ್ಮನ್ನು ತಾವು 'ವಿಮೋಚಕರು' (ಲಿಬರೇಟರ್ಸ್) ಎಂದು ಕರೆದುಕೊಳ್ಳುತ್ತಿದ್ದರು.

ಸೀಸರನ ಹೆಂಡತಿ ಕ್ಯಾಲ್ಪೂರ್ನಿಯ. ಹಿಂದಿನ ರಾತ್ರಿ ಅವಳಿಗೆ ವಿಪರೀತ ಕೆಟ್ಟ ಕನಸುಗಳು, ನಿದ್ರೆಯೇ ಬಂದಿರಲಿಲ್ಲ. ಬೆಳಗಿನ ಜಾವ ಸೀಸರ್ ಸೆನೆಟ್‌ಗೆ ಹೊರಟಾಗ ಅವನನ್ನು ತಡೆದಳು. 'ಏನೋ ಅನಾಹುತ ಸಂಭವಿಸುವ ಹಾಗಿದೆ. ಇಂದು ನೀವು ಹೊರಗೆ ಹೋಗಬೇಡಿ' ಎಂದು ಪರಿಪರಿಯಾಗಿ ಬೇಡಿಕೊಂಡಳು. ಆದರೆ ವೀರಾಧಿವೀರನಾದ ಸೀಸರ್ ಹೆಂಡತಿಯ ಎಚ್ಚರಿಕೆ ಹಾಗೂ ಪ್ರಾರ್ಥನೆಯನ್ನು ಸಾರಾಸಗಟಾಗಿ ತಿರಸ್ಕರಿಸಿ ಪ್ಯಾಂಪಿಯೋ ಕಡೆ ಹೊರಟ.

ಸೀಸರ್ ಪ್ಯಾಂಪಿಯೋಗೆ ಬರುವ ಮೊದಲೇ ಎಲ್ಲ ಸೆನೆಟರ್‌ಗಳು ಸೇರಿದ್ದರು. ಲ್ಯೂಸಿಯಸ್ ಟಿಲ್ಲಿಯಸ್ ಸಿಂಬರ್ ಎಂಬ ಸೆನೆಟರ್, ಒಂದು ಬಿನ್ನವತ್ತಳೆಯನ್ನು ಹಿಡಿದು ಸೀಸರನ ಬಳಿಗೆ ಬಂದ, ಅದನ್ನು ನೀಡುವವನಂತೆ ಸೀಸರನನ್ನು ಸಮೀಪಿಸಿದ. ಹತ್ತಿರಕ್ಕೆ ಬಂದವನೇ ಮನವಿ ಪತ್ರವನ್ನು ಸೀಸರನ ಕೈಗೆ ನೀಡುವ ಬದಲು ನೆಲಕ್ಕೆಸೆದು ಸೀಸರನ ಟೋಗವನ್ನು (ಒಂದು ಬಟ್ಟೆಯಿಂದ ತಯಾರಿಸಿದ ಉದ್ದನೆಯ ನಿಲುವಂಗಿ) ಹಿಡಿದು ಕೆಳಕ್ಕೆ ಎಳೆದ. ಇದು ಅವರ ಪೂರ್ವನಿರ್ಧಾರಿತ ಸೂಚನೆಯಾಗಿತ್ತು. ಕೂಡಲೆ ಪಬ್ಲಿಯಸ್ ಸರ್ವಿಲಿಯಸ್ ಕ್ಯಾಸ್ಕ ತನ್ನ ಚೂರಿಯನ್ನು ಹೊರತೆಗೆದ, ಹಾರಿ ಸೀಸರನ ಕುತ್ತಿಗೆಗೆ ಚುಚ್ಚಿದ. ತಕ್ಷಣವೇ ಅಲ್ಲಿದ್ದ ಎಲ್ಲರೂ ತಮ್ಮ ತಮ್ಮ ಎರಡಲುಗಿನ ಚೂರಿಗಳನ್ನು ಹೊರತೆಗೆದು ಸೀಸರನ ಮೇಲೆ ಮುಗಿಬಿದ್ದರು. ಸೀಸರನ ದೇಹದ ಮೇಲೆ ಕಂಡಕಂಡಲ್ಲಿ ಚುಚ್ಚಿದರು. ಸೀಸರನ ಆತ್ಮೀಯ ಮಿತ್ರನಾಗಿದ್ದ ಬ್ರೂಟಸ್ ಸಹ ತನ್ನ ಚೂರಿಯಿಂದ ಸೀಸರನ ತೊಂಡೆ ಸಂದಿಯ ಬಳಿ ಚುಚ್ಚಿದ. ಸೀಸರ್ ಅಲ್ಲೇ ಕುಸಿದುಬಿದ್ದು ಜೀವವನ್ನು ಬಿಟ್ಟ.

ಜೂಲಿಯಸ್ ಸೀಸರನ ವೈದ್ಯ ಆಂಟಿಸ್ಟಿಯಸ್. ಇವನು ಸೀಸರನ ಮರಣೋತ್ತರ ಶವಪರೀಕ್ಷೆಯನ್ನು ನಡೆಸಿದ. ಸೀಸರನ ದೇಹದ ಮೇಲೆ ಒಟ್ಟು 23 ತಿವಿದ ಗಾಯಗಳಿರುವುದನ್ನು ದಾಖಲಿಸಿದ. ಆ 23 ತಿವಿತಗಳಲ್ಲಿ ಯಾವ ತಿವಿತವು ಸೀಸರನ ಸಾವಿಗೆ ಕಾರಣವಾಗಿರಬಹುದು ಎಂದು ತಾರ್ಕಿಕವಾಗಿ ಯೋಚಿಸಿದ. ಪ್ರತಿಯೊಂದು ಗಾಯದ ಆಳ, ವಿಸ್ತಾರ ಹಾಗೂ ಮಾಡಿರುವ ಹಾನಿಯನ್ನು ಗಮನಿಸಿದ. ಅವುಗಳಲ್ಲಿ ಒಂದೇ ಒಂದು ಗಾಯವು ಮಾತ್ರ ಸೀಸರನ ಸಾವಿಗೆ ಕಾರಣವಾಗಿದೆ ಎನ್ನುವ ತೀರ್ಮಾನಕ್ಕೆ ಬಂದ. ಎಡ ಭುಜಫಲಕಾಸ್ತಿ (ಲೆಫ್ಟ್ ಸ್ಕ್ಯಾಪುಲ) ಕೆಳಗೆ ಹಾದುಹೋಗಿದ್ದ ಚೂರಿಯ ತಿವಿತವು ನೇರವಾಗಿ ಸೀಸರನ ಹೃದಯದ ಮಹಾಧಮನಿಯನ್ನು (ಅಯೋರ್ಟ) ಛೇದಿಸಿತ್ತು. ಮಹಾಧಮನಿಯು ಛೇದನವಾದರೆ ನಿಮಿಷದಲ್ಲಿ ಇಡೀ ದೇಹದ ರಕ್ತವು ಸೋರಿಹೋಗುತ್ತದೆ. ಹಾಗಾಗಿ ಸೀಸರ್ ಈ ಮಾರಣಾಂತಿಕ ತಿವಿತದ ತಕ್ಷಣವೇ ಕುಸಿದು ಮರಣಿಸಿದ. ಆದರೆ ಯಾರ ಚೂರಿಯು ಸೀಸರನ ಸಾವಿಗೆ ಕಾರಣವಾಯಿತು ಎನ್ನುವುದು ಪತ್ತೆಯಾಗಲಿಲ್ಲ.

ಸೀಸರನ ಆತ್ಮೀಯ ಗೆಳೆಯನಾಗಿದ್ದ ಬ್ರೂಟಸ್ ತಿವಿಯಲು ಬಂದಾಗ 'ಯೂ ಟು ಬ್ರೂಟಸ್' ಎಂದು ಉದ್ಗಾರವನ್ನು ತೆಗೆಯುತ್ತಾ ಸೀಸರ್ ಮರಣಿಸಿದ ಎನ್ನುವ ಮಾತಿದೆ. ಈ ಮಾತನ್ನು ಸೀಸರನ ಬಾಯಿಂದ ಆಡಿಸಿದವನು ವಿಲಿಯಂ ಷೇಕ್ಸ್‌ಪಿಯರ್. ಸೀಸರನಿಗೆ ಮಾತನಾಡಲು ಅವಕಾಶವೇ ಇಲ್ಲದಂತೆ ಎಲ್ಲ ಸೆನೆಟರುಗಳು ಮುಗಿಬಿದ್ದಿದ್ದರು. ಈ ಬಗ್ಗೆ ಸ್ಯೂಟೋನಿಯಸ್, ಅಪಿಯಾನ್ ಮತ್ತು ಪ್ಲುಟಾರ್ಕ್ ಎಂಬ ಇತಿಹಾಸಕಾರರು ದಾಖಲಿಸಿದ್ದಾರೆ. ಹಾಗಾಗಿ 'ಬ್ರೂಟಸ್ ಸೀಸರನನ್ನು ತಿವಿದು ಕೊಂದ' ಎಂಬ ಹೇಳಿಕೆಯಲ್ಲಿ ಯಾವುದೇ ಹುರುಳಿಲ್ಲ.

ಆಂಟಿಸ್ಟಿಯಸ್, ಜಗತ್ತಿನ ಮೊತ್ತ ಮೊದಲ ದಾಖಲಿತ ಮರಣೋತ್ತರ ಶವಪರೀಕ್ಷೆಯನ್ನು ನಡೆಸಿದ. ಒಟ್ಟು ಗಾಯಗಳ ಸಂಖ್ಯೆಯನ್ನು ಲೆಕ್ಕ ಹಾಕಿ, ಯಾವ ಗಾಯವು ಹೇಗೆ ಸೀಸರನ ಸಾವಿಗೆ ಕಾರಣವಾಯಿತು ಎಂದು ವಿವರಿಸಿದ. ಜತೆಗೆ ಬ್ರೂಟಸನ ತಿವಿತ ಸೀಸರನ ಸಾವಿಗೆ ಕಾರಣವಲ್ಲ ಎನ್ನುವುದನ್ನೂ ನಿರೂಪಿಸಿದ.

ಭಾರತ: ಗಾಯಗಳ ಕ್ರಮಬದ್ಧ ಅಧ್ಯಯನವನ್ನು ಮಾಡುವ ಅಗತ್ಯವನ್ನು ಆಯುರ್ವೇದವು ಸ್ಪಷ್ಟವಾಗಿ ವಿವರಿಸಿದೆ. ಸುಮಾರು ಕ್ರಿ.ಪೂ.600ರಲ್ಲಿ ರಚನೆಯಾಗಿರಬಹುದಾದ ಸುಶ್ರುತ ಸಂಹಿತೆಯು, ಒಂದು ಸಾವಿನ ಪ್ರಕರಣವನ್ನು ವಿಶ್ಲೇಷಿಸಬೇಕಾದ ಅಗತ್ಯವನ್ನು ಎತ್ತಿ ಹೇಳುತ್ತದೆ. ರಾಜನು ಕೇಳಬಹುದಾದ ಈ ಕೆಳಕಂಡ ಪ್ರಶ್ನೆಗಳಿಗೆ ವೈದ್ಯರು ಉತ್ತರವನ್ನು ಕೊಡಬೇಕಾಗುತ್ತದೆ.

1. ಸಾವು ಸಹಜವಾಗಿ ಆಗಿದೆಯೇ ಅಥವಾ ಅಸಹಜವಾಗಿ ಆಗಿದೆಯೇ?
2. ಅಸಹಜ ಸಾವಿಗೆ ಕಾರಣವೇನು? ಗಾಯಗಳು? ವಿಷಪ್ರಾಶನ? ವಿಷಪ್ರಾಣಿಗಳು? ಇತರೆ?
3. ಗಾಯಗಳು ಹೇಗೆ ಆದವು? ಆಯುಧಗಳಿಂದಲೇ? ಪ್ರಾಣಿಗಳಿಂದಲೇ?
4. ಇದೊಂದು ಕೊಲೆಯೆ? ಆತ್ಮಹತ್ಯೆಯೆ? ಅಪಘಾತವೇ?

ಸುಶ್ರುತ ಸಂಹಿತೆಯ ಶರೀರ ಸ್ಥಾನ 8.12ರಲ್ಲಿ ಪ್ರಾಥಮಿಕವಾಗಿ ಆರು ನಮೂನೆಯ ಗಾಯಗಳಾಗುವ ಸಾಧ್ಯತೆಯನ್ನು ವರ್ಣಿಸುತ್ತದೆ. 'ಷಟ್ ವಿದ್ಯಂತೆ ಭಗ್ನ-ಛಿನ್ನ-ಪ್ರಚ್ಛನ್ನ-ವಿದ್ಧ-ಕ್ಷತ-ಭಿನ್ನಾಃ।' ಎನ್ನುವ ಸಾಲು 'ಮುರಿದ, ಛೇದಿಸಿದ, ಕತ್ತರಿಸಿದ, ಗುಪ್ತವಾಗಿರುವ, ಇರಿದ/ಚುಚ್ಚಿದ, ಬಗೆದ' ಎಂದು ಆರು ಬಗೆಯ ಗಾಯಗಳನ್ನು ಗುರುತಿಸಿ ವರ್ಗೀಕರಿಸುತ್ತದೆ. ಯಾವ ಆಯುಧದಿಂದ ಹಲ್ಲೆಯನ್ನು ಮಾಡಲಾಗಿದೆಯೋ, ಆ ಆಯುಧದ ವಿವರಗಳೆಲ್ಲ ಗಾಯದಲ್ಲಿ ಪ್ರತಿಬಿಂಬಿತವಾಗಿರುತ್ತವೆ. ಹಾಗಾಗಿ ಗಾಯದ ಅಂಚು, ಉದ್ದ, ಅಗಲ, ಆಳ, ಆಯುಧ ಪ್ರಯೋಗದ ದಿಕ್ಕು ಇತ್ಯಾದಿಗಳನ್ನು ಗಮನಿಸಿ ಯಾವ ಯಾವ ಆಯುಧಗಳನ್ನು ಪ್ರಯೋಗಿಸಿ ಕೊಲೆಯನ್ನು ಮಾಡಲಾಗಿದೆ ಎನ್ನುವುದನ್ನು ಗುರುತಿಸಲು ಕಲಿಸುತ್ತದೆ. ಇವುಗಳ ಜತೆಗೆ ಸಾವು ಹಠಾತ್ತನೇ ಸಂಭವಿಸಿತ್ತೇ ಅಥವಾ ಸಾಕಷ್ಟು ನರಳಿದ ನಂತರ ಸಾವು ಬಂದಿತೆ ಎನ್ನುವುದನ್ನು ವಿವರಿಸಬೇಕು ಎನ್ನುತ್ತದೆ. ಮೈಮೇಲೆ ಕಾಣುವ ಯಾವುದೇ ಗಾಯಗಳು ಇರದಿದ್ದಲ್ಲಿ, ಉಸಿರು ಕಟ್ಟಿಸುವುದರ ಮೂಲಕ ಸಾವು ಸಂಭವಿಸಿದೆಯೇ ಅಥವಾ ವಿಷಪ್ರಾಶನದಿಂದ ಸಾವುಂಟಾಯಿತೇ ಎನ್ನುವುದನ್ನು ವಿವರಿಸಬೇಕಾಗಿತ್ತು. ಅದಕ್ಕಾಗಿ ನಾನಾ ವಿಷಪ್ರಾಶನಗಳ ಬಗ್ಗೆ ಬೆಳಕನ್ನು ಚೆಲ್ಲುವ 'ಅಗದತಂತ್ರ' ಎಂಬ ಪ್ರತ್ಯೇಕ ವಿಭಾಗವನ್ನು ಆಯುರ್ವೇದವು ಬೋಧಿಸುತ್ತಿತ್ತು.

ಕೌಟಿಲ್ಯನ ಅರ್ಥಶಾಸ್ತ್ರವು (ಕ್ರಿ.ಪೂ.300) ಶವಾಧ್ಯಯನ, ಮರಣ ಸಂಭವಿಸಿದ ಸ್ಥಳದ ಮಹಜರು, ಸಂಬಂಧಿಸಿದ ವ್ಯಕ್ತಿಗಳ ವಿಚಾರಣೆ ಹಾಗೂ ಅಗತ್ಯ ಬಿದ್ದರೆ ಗೂಢಚಾರರ ಮೂಲಕ ರಹಸ್ಯವಾಗಿ ಮಾಹಿತಿಯನ್ನು ಸಂಗ್ರಹಿಸುವ ಕ್ರಮವನ್ನು ವಿವರಿಸುತ್ತದೆ. ಮನುಸ್ಮೃತಿ (ಕ್ರಿ.ಪೂ.100) ಹಾಗೂ ನಾರದ ಸ್ಮೃತಿಗಳು (ಕ್ರಿ.ಪೂ.100) ಸಹ ಅಸಹಜ ಸಾವಿನ ಕಾರಣವನ್ನು ತಿಳಿಯಲು ಅಧ್ಯಯನವನ್ನು ಮಾಡಬೇಕು ಎಂದು ಹೇಳುತ್ತವೆ. ವಿದೇಶಗಳಲ್ಲಿ ಬೆರಳಚ್ಚಿನ ಮೂಲಕ ವ್ಯಕ್ತಿಯನ್ನು ಗುರುತಿಸುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಹೆಬ್ಬೆಟ್ಟಿನ ಅಚ್ಚನ್ನು ಗುರುತನ್ನಾಗಿ ಭಾರತದಲ್ಲಿ ಬಳಸುತ್ತಿದ್ದರು. ಅಕ್ಷರಜ್ಞಾನವಿಲ್ಲದವರು ತಮ್ಮ ಒಪ್ಪಿಗೆಯನ್ನು ಸೂಚಿಸಲು ಬೆರಳಚ್ಚನ್ನು ಇಂದಿಗೂ ಬಳಸುತ್ತಾರೆ ಎನ್ನುವುದನ್ನು ನಾವು ಸಾಂದರ್ಭಿಕವಾಗಿ ನೆನಪಿಸಿಕೊಳ್ಳಬಹುದು. ಹಾಗೆಯೇ ಬೆರಳಚ್ಚುಗಳ ವೈಜ್ಞಾನಿಕ ಅಧ್ಯಯನವೂ ಬ್ರಿಟಿಷರ ಕಾಲದ ಬಂಗಾಳದಲ್ಲಿ ನಡೆಯಿತು ಎನ್ನುವ ದಾಖಲೆಯನ್ನು ಸ್ಮರಿಸಿಕೊಳ್ಳಬಹುದು.

ಆಂಬ್ರಾಯಿಸ್ ಪ್ಯಾರೆ: ಪಾಶ್ಚಾತ್ಯ ಜಗತ್ತಿನಲ್ಲಿ ಗಾಯಗಳ ಬಗ್ಗೆ ಮೊದಲಬಾರಿಗೆ ಕ್ರಮಬದ್ಧವಾದ ಅಧ್ಯಯನವನ್ನು ಮಾಡಿದವನು ಫ್ರಾನ್ಸ್ ದೇಶದ ಕ್ಷೌರಿಕ-ಶಸ್ತ್ರವೈದ್ಯ ಆಂಬ್ರಾಯಿಸ್ ಪ್ಯಾರೆ (1510-1590). ಇವನು ಗಾಯಗಳ ವರ್ಗೀಕರಣವನ್ನು ಮಾಡಿ ಅದನ್ನು ಕ್ರಮಬದ್ಧವಾಗಿ ದಾಖಲಿಸಿದ. ಪ್ಯಾರೆ ಕಾಲಕ್ಕೆ ಸಾಂಪ್ರದಾಯಿಕ ಗಾಯಗಳ ಅಧ್ಯಯನದ ಜತೆಯಲ್ಲಿ ಬಂದೂಕಿನ ಗುಂಡಿನಿಂದಾಗುವ ಗಾಯಗಳು ಸೇರಿಕೊಂಡಿದ್ದವು. ಪ್ಯಾರೆ ಯುದ್ಧರಂಗದಲ್ಲಿ ಗಾಯಾಳು ಯೋಧರ ಸೇವೆಯಲ್ಲಿ ತೊಡಗಿದ್ದ. ಅಂದಿನ ದಿನಗಳಲ್ಲಿ ಒಂದು ನಂಬಿಕೆಯಿತ್ತು. ಬಂದೂಕಿನ ಗುಂಡುಗಳಲ್ಲಿರುವ ಸಿಡಿಮದ್ದು ವಿಷಮಯವಾಗಿರುತ್ತವೆ. ಗುಂಡು ಶರೀರಕ್ಕೆ ತಾಗಿದ ಕೂಡಲೇ, ಗುಂಡಿನಲ್ಲಿರುವ ವಿಷವು ದೇಹದಾದ್ಯಂತ ಪಸರಿಸಿ ಯೋಧರನ್ನು ಕೊಲ್ಲುತ್ತದೆ ಎನ್ನುವುದು ಆ ನಂಬಿಕೆಯ ಸಾರಾಂಶವಾಗಿತ್ತು. ಆಗ ವಿಷ ಪ್ರಭಾವವನ್ನು ಕಡಿಮೆ ಮಾಡಲು ಕುದಿಯುವ ಎಣ್ಣೆಯನ್ನು ಗಾಯದ ಮೇಲೆ ಸುರಿಯುತ್ತಿದ್ದರು. ಒಂದು ಕಡೆ ಗುಂಡಿನಿಂದಾದ ತೂರು

ಗಾಯ, ಮತ್ತೊಂದು ಕಡೆ ಕಾದ ಎಣ್ಣೆಯಿಂದಾದ ಸುಟ್ಟ ಗಾಯ-ಎರಡೂ ಸೇರಿಕೊಂಡು ಸೈನಿಕರನ್ನು ತ್ವರಿತವಾಗಿ ಕೊಲ್ಲುತ್ತಿದ್ದವು. ಇದನ್ನು ಕಂಡ ಪ್ಯಾರೆಗೆ ಬೇಸರವಾಯಿತು. ಒಂದು ದಿನ ಅವನ ಶಿಬಿರದಲ್ಲಿ ಎಣ್ಣೆಯ ಕೊರತೆಯುಂಟಾಯಿತು. ಆಗ ಅವನು ಗಾಯಗಳನ್ನು ಸ್ವಚ್ಛಗೊಳಿಸಿದ. ಮೊಟ್ಟೆಯ ಹಳದಿ ಭಾಗಕ್ಕೆ ಗುಲಾಬಿ ತೈಲವನ್ನು ಬೆರೆಸಿದ. ಈ ಮಿಶ್ರಣಕ್ಕೆ ಟರ್ಪೆಂಟೈನ್ ಹಾಕಿ ತನ್ನದೇ ಆದ ಹೊಸ ನಮೂನೆಯ ಔಷಧವನ್ನು ಸೃಜಿಸಿ ಗಾಯಕ್ಕೆ ಲೇಪಿಸಿದ. ಇದರಿಂದ ಗುಂಡಿನ ಗಾಯದ ನೋವು ಕಡಿಮೆಯಾಯಿತು. ಜತೆಗೆ ಆ ಯೋಧನು ಸಾಯದೇ ಬೇಗ ಚೇತರಿಸಿಕೊಂಡ. ಹಾಗಾಗಿ ಅವನು 'ಗುಂಡಿನ ಗಾಯಗಳು ನಂಜುಕಾರಕವಲ್ಲ; ಅವು ಚಿಮ್ಮುವ ಗುಂಡಿನಿಂದ ಆಗಿರುವ ಭೌತಿಕ ಗಾಯಗಳು ಮಾತ್ರ' ಎಂದು ಘೋಷಿಸಿದ. ಹೀಗೆ ಪ್ಯಾರೆ, ಗುಂಡಿನಿಂದಾದ ಗಾಯಗಳ ಬಗ್ಗೆ ಮಧ್ಯಯುಗದಲ್ಲಿನ ಒಂದು ದೊಡ್ಡ ಮೌಢ್ಯವನ್ನು ನಿವಾರಿಸಿದ.

ಯುದ್ಧಗಳಲ್ಲಿ ಆಗುತ್ತಿದ್ದ ವಿವಿಧ ನಮೂನೆಯ ಗಾಯಗಳನ್ನು ಪ್ಯಾರೆ ವರ್ಗೀಕರಿಸಿದ. ಯುರೋಪಿನಲ್ಲಿ ಈ ರೀತಿಯ ವರ್ಗೀಕರಣವನ್ನು ಮೊದಲಬಾರಿಗೆ ಪ್ಯಾರೆ ಮಾಡಿದ:

ಸೀಳು ಆಯುಧ (ಕಟಿಂಗ್ ವೆಪನ್): ಸೀಳು ಗಾಯವನ್ನು ಉಂಟುಮಾಡುವ ಖಡ್ಗವೇ ಮುಂತಾದ ಆಯುಧಗಳಿಂದ ಗಾಯಗಳ ಅಂಚು ನೇರವಾಗಿ, ನಯವಾಗಿ ಹಾಗೂ ತಿದ್ದಿತೀಡಿದಂತೆ ಇರುತ್ತವೆ.

ಇರಿಯುವ ಆಯುಧ (ಪಿಯರ್ಸಿಂಗ್ ವೆಪನ್): ಇರಿವ ಗಾಯ ಅಥವಾ ಚುಚ್ಚು ಗಾಯಕ್ಕೆ ಭರ್ಜಿಯಂಥ ಆಯುಧಗಳು ಕಾರಣವಾಗಿರುತ್ತವೆ. ಗಾಯದ ಹೊರವ್ಯಾಪ್ತಿ ಕಿರಿದಾಗಿರುತ್ತದೆ, ಆದರೆ ಗಾಯದ ಒಳವ್ಯಾಪ್ತಿ ಆಳವಾಗಿರುತ್ತದೆ.

ಮೊಂಡು ಆಯುಧಗಳು (ಬ್ಲಂಟ್ ವೆಪನ್ಸ್): ಅಂದರೆ ದೊಣ್ಣೆ, ಗದೆ, ದಂಡ, ಒನಕೆ, ಕಬ್ಬಿಣದ ಸರಳು ಅಥವಾ ಕಲ್ಲುಗಳನ್ನು ಆಕ್ರಮಣದಲ್ಲಿ ಬಳಸಿದಾಗ ಮೂಗೇಟು ಬೀಳುತ್ತವೆ, ಜಜ್ಜು ಗಾಯಗಳಾಗುತ್ತವೆ ಇಲ್ಲವೇ ಛಿದ್ರಗಾಯಗಳಾಗುತ್ತವೆ. ಇಂಥ ಗಾಯಗಳ ಅಂಚು ಹರಿದು ಛಿದ್ರವಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ನ್ಯಾಯಾಲಯವು ಯಾವುದೇ ಅಸಹಜ ಮರಣವು ಸಂಭವಿಸಿದರೆ ಪ್ಯಾರೆಗೆ ಹೇಳಿಕಳುಹಿಸುತ್ತಿತ್ತು. ಸಂಭವಿಸಿರುವ ಅಸಹಜ ಮರಣಕ್ಕೆ ಕಾರಣವನ್ನು ಪ್ಯಾರೆ ಓರ್ವ ತಜ್ಞನಾಗಿ ನ್ಯಾಯಾಲಯಕ್ಕೆ ಸಮಗ್ರವಾಗಿ ವಿವರಿಸುತ್ತಿದ್ದ. ಆಗ ನ್ಯಾಯಾಲಯವು ನಿಗದಿತ ಅಸಹಜ ಸಾವು ಕೊಲೆಯೋ, ಆತ್ಮಹತ್ಯೆಯೋ ಅಥವಾ ಅಪಘಾತದಿಂದ ಸಂಭವಿಸಿದೆಯೋ ಎನ್ನುವ ನಿರ್ಣಯಕ್ಕೆ ಸುಲಭವಾಗಿ ಬರುತ್ತಿತ್ತು.

ಇಂದಿನ ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ ಗಾಯಗಳಿಗೆ ಸಂಬಂಧಿಸಿದಂತೆ ನಡೆಸುವ ಎಲ್ಲ ರೀತಿಯ ಅಧ್ಯಯನ ಮತ್ತು ಚಿಕಿತ್ಸೆಗಳಿಗೆ ಮೂಲವೇ ಪ್ಯಾರೆಯ ಸಂಶೋಧನೆ ಹಾಗೂ ಅಧ್ಯಯನದ ಜ್ಞಾನ. ಗಾಯಗಳು ಕೇವಲ ಗಾಯಗಳಲ್ಲ. ಅವು ಹಿಂಸೆ ನಡೆದುದರ ಬಗ್ಗೆ ಸಾಕ್ಷ್ಯವನ್ನು ನುಡಿಯುವ ಜೈವಿಕ ಸಹಿಗಳು (ಬಯಲಾಜಿಕಲ್ ಸಿಗ್ನೇಚರ್ಸ್ ಆಫ್ ವಯಲೆನ್ಸ್) ಎಂದ.

ತಂದೂರ್ ಮರ್ಡರ್ ಕೇಸ್: ಸುಶೀಲ್ ಶರ್ಮ ಎಂಬಾತ ದಿಲ್ಲಿಯಲ್ಲಿನ ಓರ್ವ ರಾಜಕೀಯ ಯುವನಾಯಕ. ಆತನ ಮಡದಿ ನೈನಾ ಸಾಹ್ನಿ. ಆಕೆ ಅನೈತಿಕ ಸಂಬಂಧದಲ್ಲಿ ನಿರತಳಾಗಿದ್ದಾಳೆ ಎಂದು ಸುಶೀಲ್ ಶರ್ಮನಿಗೆ ಗುಮಾನಿ. ಒಂದು ರಾತ್ರಿ ಇಬ್ಬರಿಗೂ ಮಾತಿಗೆ ಮಾತು ಬೆಳೆಯಿತು. ಕೂಡಲೇ ಶರ್ಮ ತನ್ನ ಬಳಿಯಿದ್ದ ಪರವಾನಗಿಯುಳ್ಳ ರಿವಾಲ್ವರಿನಿಂದ ಎರಡು ಸಲ ಗುಂಡನ್ನು ಹಾರಿಸಿದ. ನೈನಾ ಸ್ಥಳದಲ್ಲಿಯೇ ಸತ್ತಳು. ಆಕೆಯ ಶವವನ್ನು ಕಾರಿನಲ್ಲಿ ಹಾಕಿಕೊಂಡು ತನ್ನ 'ಬಗಿಯಾ ಬಾರ್ಬಿಕ್ಯು' ರೆಸ್ಟೋರೆಂಟಿಗೆ ಬಂದ. ಅಲ್ಲಿ ತಂದೂರ್ ಒಲೆಯಿತ್ತು. ರೆಸ್ಟೋರೆಂಟಿನ ಮ್ಯಾನೇಜರ್ ಕೇಶವ ಕುಮಾರ್ ಸಹಾಯದಿಂದ ಆಕೆಯ ದೇಹವನ್ನು ತಂದೂರ್ ಒಲೆಯಲ್ಲಿ ಹಾಕಿ ಸುಟ್ಟ. ಒಲೆಯಿಂದ ಜ್ವಾಲೆಗಳು ಮೇಲೇರಿದವು. ಎಲ್ಲೆಡೆ ದಟ್ಟ ಹೊಗೆ ಆವರಿಸಿತು. ಗಸ್ತಿನಲ್ಲಿದ್ದ ಒಬ್ಬ ಪೊಲೀಸ್ ಪೇದೆಯು ಈ ಹೊಗೆಯನ್ನು ನೋಡಿ ಸ್ಥಳಕ್ಕೆ ಬಂದ. ಅವನಿಗೆ ಮನುಷ್ಯನ ದೇಹವನ್ನು ಸುಡುತ್ತಿರುವುದು ತಿಳಿಯಿತು. ಕೂಡಲೇ ಸಹವರ್ತಿ ಪೊಲೀಸರನ್ನು ಕರೆಯಿಸಿದ.

ಸುಶೀಲ್ ಶರ್ಮ ರಾಜಕೀಯವಾಗಿ ಪ್ರಬಲನಾಗಿದ್ದ. ಮರಣೋತ್ತರ ಶವಪರೀಕ್ಷೆಯ ಫಲಿತಾಂಶವನ್ನು ಬದಲಾಯಿಸಿದ. ತನ್ನ ಹೆಂಡತಿಯ ಕೊಲೆಯ ಆರೋಪದಿಂದ ಬಿಡುಗಡೆಯನ್ನು ಪಡೆದ. ಆದರೆ ಓರ್ವ ಹಿರಿಯ ಪೊಲೀಸ್ ಅಧಿಕಾರಿಗೆ ಗುಮಾನಿ ಬಂದಿತು. ಅವರು ಕೂಡಲೇ ನ್ಯಾಯಾಲಯದ ಮೊರೆಹೋದರು. ನ್ಯಾಯಾಲಯವು ಎರಡನೆಯ ಬಾರಿ ಶವಪರೀಕ್ಷೆಯನ್ನು ನಡೆಸಲು ಅನುಮತಿಯನ್ನು ನೀಡಿತು. ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಡಾ. ಟಿ.ಡಿ. ಡೋಗ್ರ ಅವರ ನೇತೃತ್ವದಲ್ಲಿ ಮೂವರು ತಜ್ಞರ ಸಮಿತಿಯನ್ನು ನೇಮಿಸಿತು. ತಜ್ಞರು ನೈನಾಳ ರುಂಡವನ್ನು ಮರು ಅಧ್ಯಯನ ಮಾಡಿದರು. ಒಂದು ಗುಂಡು ತಲೆಯ ಮೂಲಕ ಹಾದುಹೋಗಿದ್ದರೆ, ಮತ್ತೊಂದು ಗುಂಡು ಕುತ್ತಿಗೆಯ ಮೂಲಕ ಒಳಹೊಕ್ಕಿತ್ತು. ಈ ಎರಡು ಗುಂಡುಗಳ ಕಾರಣ ನೈನಾ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಳು. ಗುಂಡುಗಳನ್ನು ಹೊರತೆಗೆದರು. ಅವನ್ನು ಶರ್ಮನ 0.32 ಬೋರ್ ರಿವಾಲ್ವರಿನ ಗುಂಡುಗಳ ಜತೆ ಹೋಲಿಸಿದರು. ಅವು ಶರ್ಮನ ರಿವಾಲ್ವರಿನಿಂದ ಬಂದ ಗುಂಡುಗಳೇ ಎಂದು ರುಜುವಾಯಿತು. ದೇಹವನ್ನು ಸುಟ್ಟಿದ್ದರೂ, ತಲೆ ಹಾಗೂ ಕುತ್ತಿಗೆಯಲ್ಲಿ ಆಗಿದ್ದ ಗಾಯಗಳ ಸ್ವರೂಪ ಹಾಗೂ ಗುಂಡುಗಳ ಆಧಾರದ ಮೇಲೆ ಶರ್ಮನೇ ಕೊಲೆಗಾರ ಎನ್ನುವುದು ರುಜುವಾತಾಯಿತು. ನೈನಾಳ ಅಪರಾಧಿ ಚಾಪೆ ಕೆಳಗೆ ತೂರಿದರೆ, ವಿಜ್ಞಾನವು ರಂಗೋಲಿ ಕೆಳಗೆ ತೂರಿ ಅಪರಾಧಿಯನ್ನು ಹಿಡಿಯಿತು.

ಹೀಗೆ ಅಪರಾಧಿಯನ್ನು ನಿಖರವಾಗಿ ಪತ್ತೆ ಹಚ್ಚುವಷ್ಟು ಸಶಕ್ತವಾಗಿ ಬೆಳೆದಿದೆ ವಿಜ್ಞಾನ...

ಬೆನ್ನುಹುರಿಯ ಗಾಯದ ಗಂಭೀರತೆಯನ್ನು ನಿರ್ಲಕ್ಷಿಸುವಂತಿಲ್ಲ

ವೈದ್ಯಲೋಕ

ಡಾ.ಎ.ಜಯಕುಮಾರ ಶೆಟ್ಟಿ
vveditoped@gmail.com

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ, ಜಗತ್ತಿನ 15 ಮಿಲಿಯನ್‌ಗಿಂತಲೂ ಹೆಚ್ಚು ಜನರು ಬೆನ್ನುಹುರಿಯ ಆಘಾತ ಅಥವಾ ಗಾಯದೊಂದಿಗೇ ದಿನದೂಡುತ್ತಿದ್ದಾರೆ. ಪ್ರತಿ ವರ್ಷವೂ ಈ ಯಾದಿಗೆ ಹೊಸಬರ ಸೇರ್ಪಡೆ ಆಗುತ್ತಲೇ ಇರುವುದು ಆತಂಕದ ಸಂಗತಿ.

ಭಾರತದಲ್ಲಿ ಈಗಾಗಲೇ ಸುಮಾರು 15 ಲಕ್ಷ ಮಂದಿ ಬೆನ್ನುಹುರಿಯ ಗಾಯದಿಂದ ಬಳಲುತ್ತಿದ್ದು, ಪ್ರತಿ ವರ್ಷವೂ ಹೊಸದಾಗಿ 20,000ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. 16ರಿಂದ 30ರವರೆಗಿನ ವಯೋಮಾನದವರು ಕೂಡ ಈ ಸಮಸ್ಯೆಗೆ ಒಳಗಾಗುತ್ತಿರುವುದು, ಅವರಲ್ಲಿ ಗ್ರಾಮೀಣ ಜನರು ಮತ್ತು ಅಕ್ಷರಜ್ಞಾನ ಇಲ್ಲದವರ ಸಂಖ್ಯೆಯೇ ಹೆಚ್ಚಾಗಿರುವುದು ದುಃಖಕರ ಸಂಗತಿ. ಇದು ಸಮಾಜದ ಜೀವಂತಿಕೆಯೇ ಕುಸಿಯುತ್ತಿರುವುದರ ಮುನ್ಸೂಚನೆಯಲ್ಲವೇ? ಭಾರತದಲ್ಲಿ ಕಾಣಬರುವ ಬೆನ್ನುಹುರಿ ಗಾಯದ ಸಮಸ್ಯೆಗೆ ರಸ್ತೆ ಅಪಘಾತಗಳು (ಶೇ.45ರಷ್ಟು) ಮತ್ತು ಎತ್ತರದಿಂದ ಬೀಳುವಿಕೆ (ಶೇ.39ರಷ್ಟು) ಪ್ರಮುಖ ಕಾರಣಗಳಾಗಿವೆ ಎನ್ನಲಾಗುತ್ತದೆ.

ಬೆನ್ನುಹುರಿಯ ಗಾಯ (Spinal Cord Injury-SCI) ಎಂದರೆ ಬೆನ್ನುಹುರಿಯ ನರಮೂಲಕ್ಕೆ ಸಂಭವಿಸುವ ಗಾಯ. ಈ ಗಾಯದ ಪರಿಣಾಮವಾಗಿ ದೇಹದ ಕೆಲವು ಭಾಗಗಳಲ್ಲಿ ಚಲನೆಯ ಚಟುವಟಿಕೆಗಳು ಮತ್ತು ಸಂವೇದನೆಗಳು ಸಂಪೂರ್ಣವಾಗಿ ಅಥವಾ ಭಾಗಶಃ ನಷ್ಟವಾಗಬಹುದು. ಬೆನ್ನುಹುರಿಯ ಆಘಾತ ಉಂಟಾದಾಗ ವ್ಯಕ್ತಿಯು ಸಾಮಾನ್ಯವಾಗಿ ತೀವ್ರ ದೈಹಿಕ ಅಂಗವೈಕಲ್ಯಕ್ಕೆ ತುತ್ತಾಗಿ ಮಾನಸಿಕ ಆಘಾತಕ್ಕೆ ಒಳಗಾಗುತ್ತಾನೆ. ಈ ಸಮಸ್ಯೆಯು ವಿನಾಶಕಾರಿಯಾಗಿದ್ದು, ದೈಹಿಕ, ಮಾನಸಿಕ, ಸಾಮಾಜಿಕ ಮುಂತಾದ ನೆಲೆಗಳಲ್ಲಿ ರೋಗಿಯ ಜೀವನದ ಮೇಲೆ ಪರಿಣಾಮವನ್ನು ಬೀರುತ್ತದೆ ಹಾಗೂ ಆತನ ಕುಟುಂಬದ ಆರ್ಥಿಕ ಹೊರೆಯನ್ನೂ ಹೆಚ್ಚಿಸುತ್ತದೆ.

ಪ್ರತಿ ವರ್ಷದ ಸೆಪ್ಟೆಂಬರ್ 5ರಂದು 'ವಿಶ್ವ ಬೆನ್ನುಹುರಿ ಗಾಯದ ದಿನ'ವಾಗಿ 2016ರಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಇದು ಬೆನ್ನುಹುರಿಯ ಗಾಯದ ಅಪಾಯಗಳನ್ನು ತಡೆಯುವ ಮತ್ತು ಈ ಗಾಯದಿಂದ ಒದಗುವ ವೈಕಲ್ಯದ ತೀವ್ರತೆಯನ್ನು ಗುರುತಿಸಿ ಅದರ ಗಂಭೀರತೆಯ ಬಗ್ಗೆ ಬೆಳಕು ಚೆಲ್ಲುವ ದಿನವಾಗಿದೆ. ಏಕೆಂದರೆ, ಈ ಗಾಯದಿಂದ ಒದಗುವ ನೋವು, ಅದಕ್ಕೆ ಒಳಗಾಗುವ ವ್ಯಕ್ತಿಗಷ್ಟೇ ಸೀಮಿತವಾಗುವುದಿಲ್ಲ; ಆತನ ಕುಟುಂಬ, ಆತ್ಮೀಯರು, ಅವಲಂಬಿತರು ಹೀಗೆ ಎಲ್ಲರ ಮೇಲೂ ಅದು ಪರಿಣಾಮವನ್ನು ಬೀರುತ್ತದೆ. ಬೆನ್ನುಹುರಿಯ ಗಾಯಕ್ಕೆ ಒಳಗಾದವರು ದೈಹಿಕವಾಗಿ ಮಾತ್ರವಲ್ಲದೆ, ಮಾನಸಿಕ, ಆರ್ಥಿಕ, ಸಾಮಾಜಿಕವಾಗಿಯೂ ಕುಸಿಯುತ್ತಾರೆ. ಕೆಲಸ-ಕಾರ್ಯ ಇಲ್ಲದಿರುವುದು, ಸಮಾಜದ ನಿರಾಕರಣೆ, ಆತ್ಮವಿಶ್ವಾಸದ ಕೊರತೆ ಮುಂತಾದ ಅಂಶಗಳು ಇವರನ್ನು ಹತಾಶರನ್ನಾಗಿಸಬಹುದು. ಇಂಥ ಸಂದರ್ಭಗಳಲ್ಲಿ ಸಮಗ್ರ ಪುನರ್ವಸತಿ ಸೌಲಭ್ಯ ಇಲ್ಲದಿರುವುದು ಮತ್ತೊಂದು ದೊಡ್ಡ ಆಘಾತವಾಗಿ ಪರಿಣಮಿಸುತ್ತದೆ.

ಬೆನ್ನುಹುರಿಯ ಗಾಯದ ಸಮಸ್ಯೆಯಿಂದ ಬಳಲುತ್ತಿರುವವರು, ದೈಹಿಕ ಸ್ಥಿತಿಗತಿಯಲ್ಲಿ ವ್ಯತ್ಯಯವಾದವರಷ್ಟೇ; ಅವರ ಅಂತರ್ಗತ ಶಕ್ತಿ, ಸಾಮರ್ಥ್ಯ, ಪ್ರತಿಭೆ ಮುಂತಾದವನ್ನು ನಮ್ಮ ಸಮಾಜವು ಬೆಂಬಲಿಸಿದರೆ ಅವರು ಉತ್ತಮ ಜೀವನವನ್ನು ನಡೆಸಬಹುದು. ಇದಕ್ಕೆ ಬೇಕಾಗಿರುವುದು- ಪುನರ್ವಸತಿ ವ್ಯವಸ್ಥೆ, ಜನಜಾಗೃತಿ ಮತ್ತು ಸಾಮಾಜಿಕ ಬೆಂಬಲ. ಸಮರ್ಥ ಪುನರ್ವಸತಿ ಕೇಂದ್ರಗಳು, ಸಮುದಾಯದ ಬೆಂಬಲ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಇಂಥವರ ಬದುಕಿನ ಮರುಪ್ರಾರಂಭಕ್ಕೆ ನೆರವಾಗಬಲ್ಲವು.

ಸಂರಕ್ಷಣೆಗೆ ಮಹತ್ವವಿದೆ: ವ್ಯಕ್ತಿಯೊಬ್ಬನು ಬೀಳುವಿಕೆ ಅಥವಾ ನೆಲಕ್ಕೆ ಅಪ್ಪಳಿಸುವಿಕೆಯನ್ನು ತಡೆಯಲು ಸಾಧ್ಯವಾಗುವುದಾದರೆ ಬೆನ್ನುಹುರಿಯ ರಕ್ಷಣೆಯಾದಂತೆ. ಮಾತ್ರವಲ್ಲದೆ ತನ್ನ ಕನಸುಗಳು, ಆಕಾಂಕ್ಷೆಗಳು ಮತ್ತು ಬದುಕನ್ನು ಸಂಪೂರ್ಣವಾಗಿ ಅನುಭವಿಸುವ ಆತನ ಸಾಮರ್ಥ್ಯ ಇವುಗಳ ಸಂರಕ್ಷಣೆಯೂ ಆಗುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಬೀಳುವಿಕೆ/ಅಪ್ಪಳಿಸುವಿಕೆ ಹಾಗೂ ಬೆನ್ನುಹುರಿಯ ಗಾಯದ ನಡುವಿನ ಸಂಬಂಧದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಈ ಅಪಾಯಗಳನ್ನು ತಡೆಗಟ್ಟುವ ಮತ್ತು ಅರಿವು ಮೂಡಿಸುವ ನಿಟ್ಟಿನಲ್ಲಿ ಸಮುದಾಯ ಮಟ್ಟದಲ್ಲಿ ಅಭಿಯಾನಗಳನ್ನು ನಡೆಸಬೇಕಾದ ಅಗತ್ಯವಿದೆ. ಬೀಳುವಿಕೆಯನ್ನು ತಡೆಯಲು ಮನೆ, ಕೆಲಸದ ಸ್ಥಳ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಸುರಕ್ಷಿತ ವಿನ್ಯಾಸ ಮತ್ತು ರಕ್ಷಣಾತ್ಮಕ ಕ್ರಮಗಳ ಅಳವಡಿಕೆಗೆ ಉತ್ತೇಜಿಸಬೇಕಾಗಿದೆ. ಬೆನ್ನುಹುರಿಯ ಗಾಯದ ಸಮಸ್ಯೆ ಇರುವವರಿಗೆ ಮತ್ತು ಅವರ ಆರೈಕೆದಾರರಿಗೆ, ಬೀಳುವಿಕೆ ತಡೆಯಲು ಅಗತ್ಯವಾದ ಉಪಕರಣಗಳನ್ನು ಒದಗಿಸಿ, ಅಗತ್ಯ ತರಬೇತಿಯನ್ನು ನೀಡುವ ಮೂಲಕ ಅವರಿಗೆ ಶಕ್ತಿ ನೀಡಬೇಕಾದ್ದು ಇಂದಿನ ಅಗತ್ಯವಾಗಿದೆ.

ಬೆನ್ನುಹುರಿಯ ಗಾಯದ ರೋಗಿಗಳಿಗೆ ನಿರಂತರ ಆರೈಕೆಯ ಅಗತ್ಯವಿರುತ್ತದೆ. ಏಕೆಂದರೆ, ವೈದ್ಯಕೀಯ ಚಿಕಿತ್ಸೆ/ಆರೈಕೆಯಿಂದ ಬಿಡುಗಡೆ ದೊರೆತ ನಂತರ ಅವರು ಅಲ್ಪಾವಧಿ ಅಥವಾ ದೀರ್ಘಾವಧಿಯ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಬೆನ್ನುಹುರಿಯ ಗಾಯದಂಥ ಸಮಸ್ಯೆಯ ಬಗೆಗಿನ ಅರಿವಿನ ಕೊರತೆಯಿಂದಾಗಿ ರೋಗಿಗಳು ಮತ್ತು ಅವರ ಕುಟುಂಬಿಕರು ಕೂಡ ತಮ್ಮ ಜೀವನಶೈಲಿಯಲ್ಲಿನ ಹಠಾತ್ ಬದಲಾವಣೆಗೆ ಸಾಕ್ಷಿಯಾಗಬೇಕಾಗುತ್ತದೆ ಮತ್ತು ಈ ಬದಲಾವಣೆಯನ್ನು ಸ್ವೀಕರಿಸಲು ಅವರು ದೀರ್ಘ ಸಮಯವನ್ನು ತೆಗೆದುಕೊಳ್ಳಬಹುದು. ಇನ್ನು ರೋಗಿಗಳ ಪುನರ್ವಸತಿಯೂ ಒಂದು ಸುದೀರ್ಘ ಮತ್ತು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಇದು ಗಾಯವು ಕಾಣಿಸಿಕೊಂಡ ನಂತರದ ಕೆಲವೇ ಸಮಯದಲ್ಲಿ ಪ್ರಾರಂಭವಾಗುತ್ತದೆ ಮತ್ತು ಜೀವಿತಾವಧಿಯಲ್ಲಿ ಇದಕ್ಕೆ ಬಹುವಿಭಾಗೀಯ ತಂಡದ ಆರೈಕೆಯ ಅಗತ್ಯವಿರುತ್ತದೆ.

ಸೂಕ್ತ ಸಾಧನಗಳು ಅಗತ್ಯ: ಪ್ರಸ್ತುತ ಲಭ್ಯವಿರುವ ವೈದ್ಯಕೀಯ ಉಪಕರಣಗಳು, ಬೆನ್ನುಹುರಿಯ ಗಾಯದ ಸಮಸ್ಯೆಗೊಳಗಾದ ವ್ಯಕ್ತಿಯ ಜೀವನವನ್ನು ಸುಗಮಗೊಳಿಸಬಲ್ಲವು; ಆದರೆ ಅವುಗಳ ಲಭ್ಯತೆ ಮತ್ತು ವೆಚ್ಚವೇ ಇಂಥವರಿಗೆ ತಡೆಗೋಡೆಯಾಗಿ ಪರಿಣಮಿಸಿಬಿಡುತ್ತವೆ. ಹೆಚ್ಚಿನ ಉಪಕರಣಗಳು ನಗರದ ಪರಿಸರಕ್ಕೆ ಸೂಕ್ತವಾಗಿದ್ದು, ಒರಟು/ಕಚ್ಚಾ ಭೂಪ್ರದೇಶಗಳನ್ನು ಹೊಂದಿರುವ ಗ್ರಾಮೀಣ ಪರಿಸರಕ್ಕೆ ಸೂಕ್ತವಾಗಿಲ್ಲ. ಸಾಲದೆಂಬಂತೆ, ರೋಗಿಯ ಅಗತ್ಯತೆಯನ್ನು ಪರಿಗಣಿಸದೆಯೇ ಇಂಥ ಕೆಲವು ಉಪಕರಣಗಳನ್ನು ಶಿಫಾರಸು ಮಾಡುವ ಅಭ್ಯಾಸವೂ ಕೆಲವರಲ್ಲಿದೆ. ಖರೀದಿಗೆ ರೋಗಿಯ ಬಳಿ ಸಾಕಷ್ಟು ಹಣ ಇಲ್ಲದಿದ್ದಲ್ಲಿ, ನಿರ್ದಿಷ್ಟ ಗುಣಮಟ್ಟ ಮತ್ತು ಗಾತ್ರದ ಸಾಧನವೇ ಎಲ್ಲರಿಗೂ ಸರಿಹೊಂದುತ್ತದೆ ಎಂಬ ಮನೋಭಾವವು ಇಂಥ ಶಿಫಾರಸುದಾರರಲ್ಲಿ ಸಾಮಾನ್ಯವಾಗಿರುತ್ತದೆ ಎನ್ನಲಡ್ಡಿಯಿಲ್ಲ. ಅಂತಿಮವಾಗಿ ಇದು ನಕಾರಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ.



ಬೆನ್ನುಹುರಿಯ ಗಾಯದ ಸಮಸ್ಯೆಯಿರುವ ರೋಗಿಗಳಲ್ಲಿ ಹೆಚ್ಚಿನವರು ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇಲ್ಲದವರು. ಇಂಥವರು ದುಬಾರಿ ವೈದ್ಯಕೀಯ ಸಾಧನಗಳನ್ನು ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಇಂಥ ರೋಗಿಗಳಿಗೆ ತಕ್ಕನಾದ ಮತ್ತು ಸ್ಥಳೀಯ ಪರಿಸರಕ್ಕೆ ಸರಿಹೊಂದುವಂಥ ಸಾಧನಗಳನ್ನು ರೂಪಿಸುವ ಅಥವಾ ಲಭ್ಯವಿರುವ ಸಾಧನಗಳಲ್ಲಿ ಒಂದಿಷ್ಟು ಸುಧಾರಣೆ ಮಾಡುವ ಅಗತ್ಯವಿದೆ. ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಮುಂತಾದ ಸಂದರ್ಭಗಳಲ್ಲಿ ಸರಕಾರದ ವತಿಯಿಂದ ಮತ್ತು ಸರಕಾರೇತರ ಸಂಸ್ಥೆಗಳಿಂದ (ಎನ್‌ಜಿಒಗಳಿಂದ) ಒಂದಿಷ್ಟು ವೈದ್ಯಕೀಯ ಸಾಧನಗಳ ವಿತರಣೆಯಾಗುವುದು ವಾಡಿಕೆ; ಆದರೆ ರೋಗಿಯ ಅಗತ್ಯಗಳನ್ನು ಅರಿಯದೆಯೇ ಈ ಸಾಧನಗಳನ್ನು ವಿತರಿಸುವುದರಿಂದ ಅವು ಕೆಲವರಿಗೆ ಪ್ರಯೋಜನಕ್ಕೆ ಬರದಿರುವ ಸಾಧ್ಯತೆಗಳೂ ಇವೆ.

ಸಮಾನತೆಯ ದೃಷ್ಟಿ ಬೇಕು: ದಿವ್ಯಾಂಗರಿಗೆ ಬೇಕಿರುವುದು ಸಹಾನುಭೂತಿಯಲ್ಲ, ಸಮಾನತೆಯ ದೃಷ್ಟಿಕೋನ. ಯಾವುದೇ ವೈಕಲ್ಯಕ್ಕೆ ಒಳಗಾದವರು ಪರರ ಬೆಂಬಲವನ್ನಷ್ಟೇ ಅಲ್ಲದೆ, ಸಮಾನ ಅವಕಾಶ, ಗೌರವವನ್ನೂ ಬಯಸುತ್ತಾರೆ. ತಮ್ಮ ಸ್ವಾಭಿಮಾನಕ್ಕೆ ಮತ್ತು ಆತ್ಮವಿಶ್ವಾಸಕ್ಕೆ ಧಕ್ಕೆಯಾಗುವುದನ್ನು ಇವರು ಸಹಿಸುವುದಿಲ್ಲ. ಆದ್ದರಿಂದ, ಬೆನ್ನುಹುರಿಯ ಗಾಯದಿಂದ ಬಳಲುತ್ತಿರುವವರನ್ನು ಸಮಾಜವು ದುರ್ಬಲರೆಂದೋ, ನಿಷ್ಪ್ರಯೋಜಕರೆಂದೋ ಪರಿಗಣಿಸುವ ಬದಲು, ಅವರಲ್ಲಿ ಕೆನೆಗಟ್ಟಿರುವ ಪ್ರತಿಭೆ, ಆತ್ಮವಿಶ್ವಾಸ, ಸಾಮರ್ಥ್ಯ ಮತ್ತು ಸಾಧನೆಯ ಉತ್ಸಾಹ ಮುಂತಾದ ಅಂಶಗಳತ್ತ ಗಮನ ಹರಿಸಬೇಕು. ನೆನಪಿರಲಿ, ಬೆನ್ನುಹುರಿಯ ಗಾಯದಿಂದ ಬಳಲುತ್ತಿರುವವರದು ಮೂಲಭೂತವಾಗಿ ಸಹಾನುಭೂತಿಯ ಕಥೆಗಳಲ್ಲ, ಅವು ಪ್ರೇರಣೆಯ ಕಥೆಗಳು...

ಮರೆತ ಹಕ್ಕುಗಳು, ಅಗತ್ಯಗಳು: 21 ಬಗೆಯ ವೈಕಲ್ಯಗಳಲ್ಲಿ ಬೆನ್ನುಹುರಿಯ ಗಾಯವನ್ನು ಇನ್ನೂ ಪ್ರತ್ಯೇಕ ವೈಕಲ್ಯವಾಗಿ ಪರಿಗಣಿಸಲಾಗುತ್ತಿಲ್ಲ. ಇತರ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ದಿವ್ಯಾಂಗರಿಗೆ ದೊರೆಯುವ ಮಾಸಾಶನ ಬಹಳ ಕಡಿಮೆ ಮೊತ್ತದ್ದಾಗಿದೆ. ಶೇ.75ಕ್ಕಿಂತ ಹೆಚ್ಚು ದಿವ್ಯಾಂಗರು ಪಡೆಯುವ 1400 ರುಪಾಯಿ ಮಾಸಾಶನವು ಅವರ ವೈದ್ಯಕೀಯ ಅಗತ್ಯಗಳ ನಿರ್ವಹಣೆಗೂ ಸಾಲದಾಗಿದೆ. ಬೆನ್ನುಹುರಿಯ ಗಾಯದ ಕಾರಣದಿಂದಾಗಿ ಸಂಪೂರ್ಣವಾಗಿ ಆರೈಕೆದಾರರನ್ನು ಅವಲಂಬಿಸಿರುವವರ ನಿದರ್ಶನಗಳಲ್ಲಿ, ಅಂಥ ಆರೈಕೆದಾರರಿಗೆ ಭತ್ಯೆ ನೀಡಬೇಕಾದ ಅಗತ್ಯವಿದೆ. ಸರಕಾರಗಳು ಇಂಥ ಸಮಸ್ಯೆ ಉಳ್ಳವರಿಗಾಗಿ ಪುನಶ್ಚೇತನ ಕೇಂದ್ರಗಳನ್ನು ಪ್ರಾರಂಭಿಸಬೇಕಿದೆ ಮತ್ತು ಈಗಾಗಲೇ ಈ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳಿಗೆ ಒತ್ತಾಸೆಯಾಗಿ ನಿಲ್ಲಬೇಕಿದೆ.

ಇದು ಬದುಕಿನ ಅಂತ್ಯವಲ್ಲ: ವೈಕಲ್ಯವೆಂದರೆ ಅಸಮರ್ಥತೆ ಅಥವಾ ಬಲಹೀನತೆ ಎಂದು ಒಂದೇ ಗುಕ್ಕಿಗೆ ನಿರ್ಧರಿಸಿಬಿಡುವುದು ಸಲ್ಲ. ಅದು ದೈಹಿಕ ಅಥವಾ ಮಾನಸಿಕ ವ್ಯತ್ಯಯ, ಅಷ್ಟೇ. ಅಂಗವೈಕಲ್ಯವು ದುರಂತವಲ್ಲ, ಅದು ಬದಲಾವಣೆಗೆ ಇಂಬುಕೊಡುವ ಒಂದು ಅಂಶ. ಬದಲಾವಣೆಯ ನಿರ್ಧಾರ ಕೈಗೊಳ್ಳಲು, ಹೊಸಹಾದಿ ಹಿಡಿದು ನಿಂತು ಬದುಕಿಗೆ ಹೊಸ ಅರ್ಥ ನೀಡಲು ಎದುರಾದ ಒಂದು ಅವಕಾಶ ಎಂದು ಪರಿಭಾವಿಸಬೇಕು. ವೈಕಲ್ಯವಿರುವವರದ್ದು ಮುಗಿದ ಬದುಕು ಎಂದು ನೋಡುವುದು ನಮ್ಮ ಸಮಾಜದ ಹಳೆಯ ಮತ್ತು ತಪ್ಪಾದ ದೃಷ್ಟಿಕೋನ. ವಿವಿಧ ತೆರನಾದ ವೈಕಲ್ಯವಿರುವ ಅನೇಕ ವ್ಯಕ್ತಿಗಳು ಇಂದು ಕಲೆ, ಕ್ರೀಡೆ, ಶಿಕ್ಷಣ, ಉದ್ಯಮ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆಗಳನ್ನು ಮಾಡುತ್ತಿದ್ದಾರೆ. ತಮ್ಮ ವೈಕಲ್ಯವನ್ನು ಹಿನ್ನಡೆ ಅಥವಾ ನ್ಯೂನತೆ ಎಂದು ಭಾವಿಸದೆ, ಶಕ್ತಿಯ ರೂಪವಾಗಿ ಬಳಸಿಕೊಂಡು ಸಮಾಜಕ್ಕೆ ಪ್ರೇರಣಾದಾಯಿಯಾಗಿದ್ದಾರೆ.

ಮಿಕ್ಕವರ ಪಾತ್ರವೇನು?: ದಿವ್ಯಾಂಗ ವ್ಯಕ್ತಿಗಳಿಗೆ ಸಹಾಯಹಸ್ತ ನೀಡುವುದು ಕೇವಲ 'ದಯೆಯ ಚಟುವಟಿಕೆ' ಆಗಿರಬಾರದು; ಅದು ಸಮಾನ ಅವಕಾಶ ಮತ್ತು ಗೌರವದ ಹಕ್ಕಿನ ಪ್ರಕ್ರಿಯೂ ಆಗಬೇಕು. ಶಿಕ್ಷಣ, ಉದ್ಯೋಗ, ಸಾರಿಗೆ, ಆರೋಗ್ಯ ಸೇವೆ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಈ ಸಮಾನತೆ ಪ್ರತಿಬಿಂಬಿಸಬೇಕು. ದಿವ್ಯಾಂಗರಿಗೆ ಅಗತ್ಯವಿರುವ ಸಹಾಯಧನ, ಸೌಲಭ್ಯಗಳು, ತಾಂತ್ರಿಕ ನೆರವು, ಪುನಶ್ಚೇತನ ಕೇಂದ್ರಗಳ ವ್ಯವಸ್ಥೆ ಮುಂತಾದವುಗಳ ಕಡೆಗೆ ಸಾಮಾಜಿಕ ನೆಲೆಯಲ್ಲಿ, ಸರಕಾರಿ ಮಟ್ಟದಲ್ಲೂ ಸಂಬಂಧಪಟ್ಟವರು ಗಮನಹರಿಸಬೇಕು. ಸಮಾಜದಲ್ಲಿ ಎಲ್ಲರಂತೆ ಅವರಿಗೂ ಸ್ಥಾನಮಾನವನ್ನು ಕಲ್ಪಿಸುವ ನಿಟ್ಟಿನಲ್ಲಿ ಗಂಭೀರ ಚಿಂತನೆಯಾಗಬೇಕು. ಬೆನ್ನುಹುರಿಯ ಗಾಯದ ಕುರಿತಾದ ಅರಿವಿನ ಕೊರತೆಯನ್ನು ನೀಗಲು ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ.

(ಲೇಖಕರು ನಿವೃತ್ತ ಪ್ರಾಂಶುಪಾಲರು)

ಭಟ್ಟರ್ ಸ್ಕಾಚ್

- **ಪೂರ್ಣಯ್ಯ, ಮೈಸೂರು**
ಮೊದಲಿಗೆ 'ನಾ ನಿನ್ನ ಮರೆಯ ಲಾರೆ' ಅಂದ್ಲು. ಮದುವೆಯಾದ ಹೊಸತರಲ್ಲಿ 'ನಾ ನಿನ್ನ ಬಿಡಲಾರೆ' ಅಂದ್ಲು. ಈಗ ಏನಂತಾಳೋ, ಭಟ್ರೇ?
- **'ನನ್ನ ನೀನು ಗೆಲ್ಲಲಾರೆ'!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ಗಣಪತಿಯ ಜತೆಗಿನ ಇಲಿಯನ್ನು ನೋಡಿದಾಗ ಏನು ನೆನಪಾಗುತ್ತದೆ?
- **ಸಾಣೇಹಳ್ಳಿ ಶ್ರೀಗಳು !**

- **ಶ್ರೀಕರ ಉಪಾಧ್ಯ, ಗುಬ್ಬಿ**
ಭಟ್ರೇ, ಹಣ ಮಾಡಲು ವಿದ್ಯೆ ಬೇಕಿಲ್ಲ ಅಂತಾರಲ್ಲ?
- **ಹಣ ಮಾಡುವ ವಿದ್ಯೆ ಗೊತ್ತಿದ್ದರೆ ಸಾಕು!**

- **ಎಂ.ಕೆ.ಪಾಟೀಲ, ಬೆಳಗಾವಿ**
ಭಟ್ರೇ, ಜೀವನದಲ್ಲಿ ಪುಸ್ತಕವನ್ನೇ ಓದಬಾರದು ಎಂದು ನಿರ್ಧರಿಸಿದ್ದೇನೆ, ಆಗಬಹುದಾ?
- **ಪ್ರತಿಪಕ್ಷ ನಾಯಕ ಆಶೋಕ ಅವರೇ ನಿನಗೆ ಆದರ್ಶ ಅಂತ ಅಂದುಕೊಂಡಾರು!**

- **ಜಿ.ಎಲ್.ತ್ಯಾಗರಾಜ, ನಾಪೋಕ್ಲು**
ಭಟ್ರೇ, ಪ್ರತಾಪಸಿಂಹನನ್ನು ಎಲ್ಲರೂ ಖಳನಾಯಕನಂತೆ ನೋಡುತ್ತಿದ್ದಾರಲ್ಲ?
- **ಖಳನಾಯಕನನ್ನಾಗಿಸಲು ವಿಫಲ ಪ್ರಯತ್ನ ಮಾಡುತ್ತಿದ್ದಾರೆ!**

- **ಜಿ.ಗೌಡ, (ಇಮೇಲ್ ಮೂಲಕ)**
ಭಟ್ರೇ, ಹೆಂಡತಿ ಜತೆ ರಾಜಿ ಮಾಡಿಕೊಳ್ಳುವುದು ಹೇಗೆ ?
- **ನಾನು ತಪ್ಪು ಎಂದು ಒಪ್ಪಿಕೊಳ್ಳಿ, ಆಕೆ ಅದು ಸರಿ ಎಂದು ಹೇಳುತ್ತಾಳೆ!**

- **ಮೃತ್ಯುಂಜಯ ಪಾಟೀಲ, ಬೈಲಹೊಂಗಲ**
ಸರ್, ದಾಂಪತ್ಯ ಅಂದ್ರೆ ವರ್ಕ್‌ ಶಾಪ್ ಇದ್ದಂತೆ ಎಂದು ಅನುಭವಿಗಳು ಹೇಳಿರುವುದೇಕೆ?
- **ದಾಂಪತ್ಯದಲ್ಲಿ ಗಂಡ ವರ್ಕ್ ಮಾಡ್ತಾನೆ, ಹೆಂಡತಿ ಶಾಪ್ ಮಾಡ್ತಾಳಲ್ಲ!**

- **ಜೀವನ ಕುದರಿ, ಧಾರವಾಡ**
ಸರ್, ಮೊನ್ನೆಯ ವಿಧಾನಸಭಾ ಅಧಿವೇಶನದಿಂದ ಏನನ್ನು ಸಾಧಿಸಿದಂತಾಯ್ತು?
- **ಸರಕಾರಿ ಹಣ ಖರ್ಚು ಮಾಡಿದ್ದೂ ಸಾಧನೆ ಎಂಬುದನ್ನು ಅರ್ಥಮಾಡಿಕೊಳ್ಳುವ ತನಕ ಈ ಪ್ರಶ್ನೆ ಏಳುತ್ತಲೇ ಇರುತ್ತದೆ!**

- **ಸತೀಶ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ರೂಪದರ್ಶಿಯರೆಲ್ಲ ಯಾಕೆ ಅಷ್ಟೊಂದು ತೆಳ್ಳಗೆ ಇರ್ತಾರೆ?
- **ದಪ್ಪವಿದ್ದವರೆಲ್ಲ ರೂಪ 'ದರ್ಶಿನಿ'!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲ್ಬುರ್ಗಿ**
ಭಟ್ರೇ, ಮಲ್ಲಿಕಾರ್ಜುನ ಖರ್ಗೆಯವರು ಇನ್ನೂ ಶೋಷಿತ ವರ್ಗದಲ್ಲೇ ಇದ್ದಾರಾ?
- **ಅವರದು ಶೋಷಿತ ವರ್ಗವಾದರೆ ನನ್ನನ್ನೂ ಆ ವರ್ಗಕ್ಕೇ ಸೇರಿಸಿಬಿಡ್ರಪ್ಪ!**

ಏನೇ ಇರಲಿ, ಬರುವುದೆಲ್ಲವನ್ನೂ ಎದುರಿಸಲೇಬೇಕು

ಯುದ್ಧ, ಅಂತರ್ಯುದ್ಧ, ಪ್ರತಿಭಟನೆ, ಶೀತಲ ಸಮರ ಏನೇ ಇರಲಿ ಅಂತಿಮವಾಗಿ ನೋವುಣ್ಣುವವರು ಆಯಾ ದೇಶಗಳ ಶ್ರೀಸಾಮಾನ್ಯರು. ಇಂದಿನ ಜಾಗತಿಕ ವಿದ್ಯಮಾನಕ್ಕೆ ಅನ್ವಯಿಸುವುದಾದರೆ ದೊಡ್ಡವರ ಜಗಳದಲ್ಲಿ ನಮ್ಮಂತಹ ಜನಸಾಮಾನ್ಯರು ಬದುಕು ಏರುಪೇರಾಗುತ್ತಿದೆ.

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com
kaayarga@gmail.com

ಇಡೀ ಜಗತ್ತು ತಾನು ಹೇಳಿದಂತೆ ಕೇಳಬೇಕೆಂಬ ಹುಂಬತನವಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಧೋರಣೆಯಿಂದ ಭಾರತ ಮಾತ್ರವಲ್ಲ ಇಡೀ ಜಗತ್ತು ಇಂದು ಸಂಕಷ್ಟಕ್ಕೆ ಸಿಲುಕಿದೆ. ದೀರ್ಘಾವಧಿಯಲ್ಲಿ ಇದರ ಪರಿಣಾಮ ಏನಾಗುತ್ತದೋ ಗೊತ್ತಿಲ್ಲ. ಆದರೆ ಸದ್ಯಕ್ಕೆ ವಿಶ್ವದ ಬಹುತೇಕ ರಾಷ್ಟ್ರಗಳು 'ಟ್ರಂಪಾಘಾತ' ಎದುರಿಸುತ್ತಿವೆ. ತಾನು ಇಡೀ ದೇಶದ ಉದ್ಧಾರಕನೆಂದು ಬಿಂಬಿಸಿಕೊಳ್ಳುವ ನಾಯಕರ ಕೈಗೆ ಪರಮಾಧಿಕಾರ ಸಿಕ್ಕರೆ, ಅವರು ಯಾವ ಮಟ್ಟಕ್ಕೆ ಹೋಗಬಲ್ಲರು ಎನ್ನುವುದಕ್ಕೆ ಟ್ರಂಪ್ ಇತ್ತೀಚಿನ ಉದಾಹರಣೆ.

ಇತಿಹಾಸದಲ್ಲಿ ಹಿಟ್ಲರ್, ಮುಸಲೋನಿಯಂತಹ ಅನೇಕ ನಾಯಕರನ್ನು ನಾವು ನೋಡಿದ್ದೇವೆ. ಅವರು ಮಾಡಿದ ತಪ್ಪಿಗೆ ಇಡೀ ಜಗತ್ತು ಅನುಭವಿಸಿದ ಸಂಕಷ್ಟವನ್ನು ಕೇಳಿದ್ದೇವೆ. ಟ್ರಂಪ್ ವರ್ತನೆ ಗಮನಿಸಿದರೆ ಅವರು ಯಾವ ಮಟ್ಟಕ್ಕೂ ಇಳಿಯಬಲ್ಲರು ಎನ್ನುವುದು ಸ್ಪಷ್ಟವಾಗಿದೆ. ಕೇವಲ ಏಳೆಂಟು ತಿಂಗಳ ಹಿಂದೆ, ಭಾರತ ಪರಮಾಪ್ತ ರಾಷ್ಟ್ರ, ಪ್ರಧಾನಿ ನರೇಂದ್ರ ಮೋದಿ ಆತ್ಮೀಯ ಗೆಳೆಯ ಎಂದು ಹೇಳಿಕೊಂಡಿದ್ದ ಟ್ರಂಪ್ ಇಂದು ಭಾರತವನ್ನು ಕೊಳಕು ಭಾಷೆಯಲ್ಲಿ ನಿಂದಿಸಲು ಮುಂದಾಗಿದ್ದಾರೆ.

ಈ ಹಿಂದೆ ಜೋ ಬೈಡನ್ ಎದುರು ಚುನಾವಣೆಗೆ ನಿಂತು ಸೋತಾಗ ಟ್ರಂಪ್ ನಡೆದುಕೊಂಡ ರೀತಿಯನ್ನು ಗಮನಿಸಿದವರಿಗೆ ಅವರ ನಡೆ ವಿಚಿತ್ರ ಎನಿಸದು. ಆದರೆ ಮಿತ್ರ ರಾಷ್ಟ್ರವೊಂದನ್ನು ಏಕಾಏಕಿ ದೂರ ಮಾಡಿ, ಇಲ್ಲ ಸಲ್ಲದ ಆರೋಪಗಳನ್ನು ಹೊರಿಸುವುದು ರಾಷ್ಟ್ರವೊಂದರ ಮುಖ್ಯಸ್ಥರು ಮಾಡುವ ಕೆಲಸವಲ್ಲ. ಅದರಲ್ಲೂ ಇತರ ದೇಶಗಳ ಸಾರ್ವಭೌಮತ್ವವನ್ನು ಕಿಂಚಿತ್ತೂ ಗೌರವಿಸದೆ, ಅಧೀನ ರಾಷ್ಟ್ರಗಳ ರೀತಿಯಲ್ಲಿ ನಡೆದುಕೊಳ್ಳುವ ಟ್ರಂಪ್ ಅವರ ನಡೆಯೇ ಅತಿರೇಕದ್ದು.

ತಾನು ಅಧಿಕಾರಕ್ಕೆ ಬಂದ ಕೂಡಲೇ ಇಡೀ ವಿಶ್ವದಲ್ಲಿ ಶಾಂತಿ ಸ್ಥಾಪಿಸುತ್ತೇನೆ. ಇಸ್ರೇಲ್-ಪ್ಯಾಲೆಸ್ತೀನ್, ರಷ್ಯಾ-ಉಕ್ರೇನ್ ಸಮರವನ್ನು ನೂರು ದಿನಗಳ ಒಳಗೆ ನಿಲ್ಲಿಸುವುದಾಗಿ ಹೇಳಿದ್ದ ಟ್ರಂಪ್‌ಗೆ ಇದಾವುದೂ ಸಾಧ್ಯವಾಗಿಲ್ಲ. ಈಗ ಈ ಯುದ್ಧದಲ್ಲಿ ಅಮೆರಿಕವೇ ಪರೋಕ್ಷವಾಗಿ ಭಾಗಿಯಾಗಿದೆ. ಇರಾನ್ ಮೇಲಿನ ಇಸ್ರೇಲ್ ದಾಳಿ ಅಮೆರಿಕದ ಕುಮ್ಮಕ್ಕಿನಿಂದಲೇ ನಡೆದಿರುವುದು ಜಗತ್ತಿಗೆ ಗೊತ್ತಿರುವ ವಿಚಾರ. ಇರಾನ್ ಮೇಲೆ ನೇರ ವೈಮಾನಿಕ ದಾಳಿಗೆ ಆದೇಶಿಸಿದ ಟ್ರಂಪ್, ಇದೀಗ ಈ ಯುದ್ಧವನ್ನು ತಾವೇ ನಿಲ್ಲಿಸಿದ್ದಾಗಿ ಹೇಳಿಕೊಳ್ಳುತ್ತಿದ್ದಾರೆ.

ಇಸ್ರೇಲ್ ಮತ್ತು ಹಮಾಸ್ ಹಾಗೂ ಭಾರತ-ಪಾಕಿಸ್ತಾನ ನಡುವಣ ಯುದ್ಧವನ್ನು ತಾನೇ ನಿಲ್ಲಿಸಿದ್ದಾಗಿ ಪದೇಪದೆ ಹೇಳಿಕೊಳ್ಳುವ ಟ್ರಂಪ್ ಮಾತಿನ ಹಿಂದೆ ನೊಬೆಲ್ ಶಾಂತಿ ಪ್ರಶಸ್ತಿ ಪಡೆದೇ ತೀರಬೇಕೆಂಬ ಹಪಾಹಪಿ ಇರುವುದು ಈಹ ಜಗಜ್ಜಾಹೀರಾಗಿದೆ. ಪಾಕಿಸ್ತಾನದ ಮಿಲಿಟರಿ ಮುಖ್ಯಸ್ಥನನ್ನು ಎರಡೆರಡು ಬಾರಿ ಅಮೆರಿಕಕ್ಕೆ ಕರೆಸಿಕೊಂಡ ಟ್ರಂಪ್, ಆತನ ಕೈಯಲ್ಲಿ ಬಹುಪರಾಕು ಹೇಳಿಸಿ, ನೊಬೆಲ್ ಪ್ರಶಸ್ತಿಗೂ ಶಿಫಾರಸು ಮಾಡಿಸುವ ಮಟ್ಟಕ್ಕೆ ಇಳಿದ ಅಧ್ಯಕ್ಷ ಇನ್ನಾವ ಮಟ್ಟಕ್ಕೂ ಇಳಿಯಬಲ್ಲ ಎನ್ನುವುದು ಸ್ಪಷ್ಟ.

ಭಾರತದ ಮೇಲಿನ ಟ್ರಂಪ್ ದ್ವೇಷವೂ ಇಲ್ಲಿಂದಲೇ ಆರಂಭವಾಗಿತ್ತೆನ್ನುವುದು ಗಮನಾರ್ಹ. ಒಂದು ವೇಳೆ ಪಾಕ್ ಜತೆಗಿನ ಯುದ್ಧ ವಿರಾಮಕ್ಕೆ ಟ್ರಂಪ್ ಕಾರಣ ಎಂದು ಭಾರತ ಹೇಳಿದ್ದರೆ ಸಂಬಂಧ ಈ ಮಟ್ಟಕ್ಕೆ ಹದಗೆಡುತ್ತಿರಲಿಲ್ಲವೇನೋ? ಆದರೆ ಟ್ರಂಪ್ ಹೇಳಿಕೆಯನ್ನು ಭಾರತ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿಯೇ ನಿರಾಕರಿಸಿದ್ದು ಟ್ರಂಪ್ ಪಿತ್ತ ನೆತ್ತಿಗೇರಲು ಕಾರಣವಾಗಿದೆ. ಅಂದರೆ ಟ್ರಂಪ್‌ಗೆ ತಮ್ಮ ದೇಶದ ಹಿತಾಸಕ್ತಿಗಿಂತಲೂ ತನ್ನ ವೈಯಕ್ತಿಕ ಪ್ರತಿಷ್ಠೆ ಮುಖ್ಯವಾಗಿದೆ. ಇದಕ್ಕಾಗಿ ಆತ ಯಾವ ದಾರಿಯನ್ನು ಹಿಡಿಯಲೂ ಸಿದ್ಧರಿದ್ದಾರೆ. ಟ್ರಂಪ್ ಅವರ ಈ ವರ್ತನೆಯೇ ಭಾರತದ ಮಟ್ಟಿಗೆ ಆತಂಕದ ವಿಚಾರ.

ಬಗ್ಗೆ ಎಳ್ಳಷ್ಟೂ ಅರಿವಿಲ್ಲದ ಅಧಿಕಾರಿಯನ್ನು ಭಾರತದ ಹೊಸ ರಾಯಭಾರಿಯನ್ನು ನೇಮಿಸಿದ್ದಾರೆ. ಭಾರತಕ್ಕೆ ಮದ್ದರೆಯುವುದೊಂದೇ ಸದ್ಯಕ್ಕೆ ಟ್ರಂಪ್ ಮುಂದಿನ ಏಕೈಕ ಗುರಿ.

ಆರಂಭದಲ್ಲಿ ಅಮೆರಿಕ ಸರಕುಗಳಿಗೆ ಭಾರತ ಸುಂಕ ವಿನಾಯಿತಿ ನೀಡಿಲ್ಲವೆಂದು ಹೇಳಿ ಆಕ್ರೋಶ ವ್ಯಕ್ತಪಡಿಸುತ್ತಿದ್ದ ಟ್ರಂಪ್, ಇದೀಗ ರಷ್ಯಾ-ಉಕ್ರೇನ್ ಯುದ್ಧಕ್ಕೂ ಭಾರತವೇ ಕಾರಣ ಎಂದು ಹೇಳತೊಡಗಿದೆ. ಭಾರತವನ್ನು ಕೆಣಕಲು ನಾನಾ ದಾರಿಗಳನ್ನು ಕಂಡುಕೊಳ್ಳತೊಡಗಿದೆ. ರಷ್ಯಾದ ತೈಲ ಆಮದಿನಿಂದ ಭಾರತದ 'ಬ್ರಾಹ್ಮಣರು' ಶ್ರೀಮಂತರಾಗುತ್ತಿದ್ದಾರೆ ಎಂದು ದೂರುವ ಮೂಲಕ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರೋ ಇನ್ನೊಂದು ಹೆಜ್ಜೆ ಮುಂದೆ ಸಾಗಿದ್ದಾರೆ. ಭಾರತದಲ್ಲಿ ಈ ಹೇಳಿಕೆ ನಗೆಪಾಟಲಿಗೀಡಾದರೂ ಇದರಲ್ಲಿ ಜಾತಿ ವ್ಯವಸ್ಥೆಯನ್ನು ಪ್ರಸ್ತಾಪಿಸಿ ಭಾರತೀಯರೊಳಗೆ ಜಗಳ ತಂದಿಡುವ ಹುನ್ನಾರವಿದೆ.

ಇದು ಹಿಂದೆ ಬ್ರಿಟಿಷರು ಅನುಸರಿಸುತ್ತಿದ್ದ ವಿಭಜಿಸಿ ಆಳುವ ನೀತಿ. ದೇಶವೊಂದರ ಆಂತರಿಕ ಭಿನ್ನಾಭಿಪ್ರಾಯಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಇಲ್ಲವೇ ಅಲ್ಲಿ ಆಂತರಿಕ ಅಶಾಂತಿ ಸೃಷ್ಟಿಸುವ ಕೆಲಸವನ್ನು ಅಮೆರಿಕ ಶೀತಲ ಸಮರದ ಹಿಂದಿನ ದಿನಗಳಿಂದಲೂ ಮಾಡಿಕೊಂಡು ಬಂದಿದೆ. ತನ್ನ ಅಣತಿಯಂತೆ ನಡೆದುಕೊಳ್ಳದ ರಾಷ್ಟ್ರಗಳಲ್ಲಿ ಅಶಾಂತಿ ಹರಡಲು ಅಮೆರಿಕದ ಬಳಿ ನಾನಾ ಯೋಜನೆಗಳಿವೆ. ನಮ್ಮ ನೆರೆಯ ಪಾಕಿಸ್ತಾನ,

ಒಮ್ಮಿಂದೊಮ್ಮೆಗೇ ಭಾರತ ವಿರೋಧಿಯಾಗಿ ಬದಲಾದ ಟ್ರಂಪ್ ಸುಂಕಾಸ್ತ್ರದ ಮೂಲಕ ಭಾರತವನ್ನು ತನ್ನ ದಾರಿಗೆ ತರಬಹುದು ಎಂದು ಭಾವಿಸಿದ್ದರು. ಅಮೆರಿಕದ ಆಗ್ರಹಕ್ಕೆ ಗುರಿಯಾದ ಇರಾಕ್, ಇರಾನ್, ಪಾಕಿಸ್ತಾನ ಮೊದಲಾದ ಏಷ್ಯಾದ ರಾಷ್ಟ್ರಗಳು ಮತ್ತು ಆಫ್ರಿಕಾದ ರಾಷ್ಟ್ರಗಳು ಕೊನೆಗೆ ವಿಧಿ ಇಲ್ಲದೆ ಅಮೆರಿಕದ ಷರತ್ತಿನಂತೆ ನಡೆದುಕೊಂಡ ಉದಾಹರಣೆಗಳಿವೆ. ಇದೇ ಮಾದರಿಯಲ್ಲಿ ಭಾರತದ ಮೇಲೆ ಶೇ.50ರಷ್ಟು ಪ್ರತಿ ಸುಂಕ ವಿಧಿಸಿದ್ದಾರೆ. ಆದರೆ ಈ ನಿರ್ಧಾರಕ್ಕೆ ಭಾರತ ಬಗ್ಗುವುದಿಲ್ಲ ಎಂದು ತಿಳಿದ ಬಳಿಕ ತಮ್ಮ ಹಿಂಬಾಲಕ ಅಧಿಕಾರಿಗಳ ಮೂಲಕ ಭಾರತವನ್ನು ಹೀಗಳೆಯಲು ಮುಂದಾಗಿದ್ದಾರೆ. ರಾಜತಾಂತ್ರಿಕತೆಯ

ಅಫ್ಘಾನಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾಗಳಲ್ಲಿ ಈ ನೀತಿ ಯಶಸ್ವಿಯೂ ಆಗಿದೆ. ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಸರಕಾರದ ಪದಚ್ಯುತಿ ಹಿಂದೆ ಅಮೆರಿಕದ ಕೈವಾಡವಿರುವುದು ಈಗ ಜಗತ್ತಿಗೇ ಗೊತ್ತಿರುವ ಸಂಗತಿ. ಅಲ್ಲಿ ಸೇನಾ ನೆಲೆಗೆ ಅವಕಾಶ ಮಾಡಿಕೊಡದ ಬಗ್ಗೆ ಅಮೆರಿಕ ಸಿಟ್ಟಾಗಿತ್ತು. ಪಾಶ್ಚಾತ್ಯ ಚಿಂತನೆಯ ಹಾಲಿ ಉಸ್ತುವಾರಿ ಮೊಹಮ್ಮದ್ ಯೂನುಸ್ ಅಮೆರಿಕದ ಪಿತೂರಿಗೆ ದಾಳವಾದರು.

ಆದರೆ ಅದೃಷ್ಟವಶಾತ್, ಭಾರತದ ಪ್ರಜಾಪ್ರಭುತ್ವದ ತಳಹದಿ ಗಟ್ಟಿಯಾಗಿದೆ. ಇಲ್ಲಿನ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನದ ಹೊರತಾಗಿಯೂ ಅಮೆರಿಕದ ಹುನ್ನಾರ ಸಫಲವಾಗಿಲ್ಲ. ಅಲ್ಲಿನ ಪ್ರತಿಯೊಂದು ಸರಕಾರವೂ ಭಾರತದ ವಿಷಯದಲ್ಲಿ ಸಾಮ-ದಾನ-ದಂಡ-ಭೇದ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. 1971ರ ಬಾಂಗ್ಲಾ ವಿಮೋಚನಾ ಸಮರದ ವೇಳೆ ಅಮೆರಿಕ ಬಂಗಾಳ ಕೊಲ್ಲಿಗೆ ಯುದ್ಧ ನೌಕೆ ಕಳುಹಿಸಲು ಮುಂದಾಗಿದ್ದನ್ನು ನಾವು ಮರೆಯುವಂತಿಲ್ಲ. ಇತ್ತೀಚೆಗೆ ನಡೆದ ಯುದ್ಧದಲ್ಲೂ ಭಾರತದ ಪರ ಎನ್ನುತ್ತಲೇ ದೊಡ್ಡಣ್ಣ ಪಾಕಿಸ್ತಾನಕ್ಕೆ ಬೆಂಬಲ ಸೂಚಿಸಿದ್ದು ಗೊತ್ತಿರುವ ಸಂಗತಿ.

ಚೀನಾದಲ್ಲಿ ನಡೆದ ಶಾಂಘೈ ಶೃಂಗ ಸಭೆಯಲ್ಲಿ ರಷ್ಯಾ ಮತ್ತು ಚೀನಾದ ಅಧ್ಯಕ್ಷರ ಜತೆ ಪ್ರಧಾನಿ ಮೋದಿ ವೇದಿಕೆ ಹಂಚಿಕೊಂಡ ಬಳಿಕ ಅಮೆರಿಕದ ಭಾಷೆ ಇನ್ನಷ್ಟು ವ್ಯಗ್ರವಾಗಿದೆ. ಟ್ರಂಪ್ ಅವರ ವ್ಯಾಪಾರ ಸಲಹೆಗಾರ ನವರೋ, ಪ್ರಧಾನಿ ಮೋದಿ ಅವರು ವಿಶ್ವದ ಇಬ್ಬರು ದೊಡ್ಡ ಸರ್ವಾಧಿಕಾರಿಗಳೊಂದಿಗೆ ವೇದಿಕೆಯನ್ನು ಹಂಚಿಕೊಂಡಿರುವುದು ನಾಚಿಕೆಗೇಡಿನ ಸಂಗತಿ ಎಂದು ಟೀಕಿಸಿದ್ದಾರೆ. ಈ ಹಿಂದೆ ಬ್ರಿಕ್ಸ್ ಸಮಾವೇಶದಲ್ಲಿ ಭಾರತ ಭಾಗಿಯಾದ ಬಗ್ಗೆಯೂ ಟ್ರಂಪ್ ಆಕ್ರೋಶ ವ್ಯಕ್ತಪಡಿಸಿದ್ದರು. ಶಾಂಘೈ ಸಮಾವೇಶದಲ್ಲಿ ಭಾರತ, ರಷ್ಯಾ ಮತ್ತು ಚೀನಾ ಮತ್ತೆ ಒಂದಾಗಿವೆ. ವಿಶ್ವದ ಮೂರು ಅಗ್ರಮಾನ್ಯ ರಾಷ್ಟ್ರಗಳು ಒಂದಾಗಿ ನಿಂತರ ತನ್ನ ಬೇಳೆ ಬೇಯದು ಎನ್ನುವುದು ಟ್ರಂಪ್‌ಗೆ ಚೆನ್ನಾಗಿ ಗೊತ್ತು. ಇದಕ್ಕಾಗಿ ತನ್ನ ಬತ್ತಳಿಕೆಯಲ್ಲಿರುವ ಎಲ್ಲ ಅಸ್ತ್ರಗಳನ್ನು ಬಳಸಲು ಅಮೆರಿಕ ಮುಂದಾಗುವುದು ಖಚಿತ. ಭಾರತ ಈಗ ಈ ಎಲ್ಲವನ್ನೂ ಎದುರಿಸಲು ಸಜ್ಜಾಗಬೇಕಿದೆ.

ಅಮೆರಿಕದ ಹಾಲಿ- ಮಾಜಿ ಅಧಿಕಾರಿ ವರ್ಗದಲ್ಲಿ ಈಗಲೂ ಭಾರತದ ಜತೆ ಸಂಬಂಧ ಕಾಯ್ದುಕೊಳ್ಳಬೇಕೆಂಬ ಕಾಳಜಿ ಇದೆ. ಭಾರತೀಯ ಅಮೆರಿಕನ್ ಆಗಿದ್ದುಕೊಂಡು ಅಮೆರಿಕದ ಅಧ್ಯಕ್ಷರ ಸಂಪುಟದಲ್ಲಿ ಮೊದಲ ಬಾರಿಗೆ ಸಚಿವೆಯಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಹೊಂದಿರುವ ನಿಕ್ಕಿ ರಾಂಧವ ಹ್ಯಾಲೆ ಚೀನಾವನ್ನು ಎದುರಿಸಬೇಕಾದರೆ ಭಾರತ ಸದಾ ನಮ್ಮ ಜತೆಗಿರಬೇಕೆಂದು ಈಗಲೂ ಪ್ರತಿಪಾದಿಸುತ್ತಿದ್ದಾರೆ. ಆದರೆ ಟ್ರಂಪ್ ಇಂತಹ ಮಾತುಗಳಿಗೆ ಕಿವುಡಾಗಿದ್ದಾರೆ. ಭಾರತ ವಿರೋಧಿ ನಿಲುವನ್ನು ಟೀಕಿಸಿದ ಮಾಜಿ ಎನ್‌ಎಸ್‌ಎ ಮುಖ್ಯಸ್ಥ ಜಾನ್ ಬಾಲ್ಟನ್ ಮನೆಗೆ ಎಫ್‌ಬಿಐ ಮೂಲಕ ದಾಳಿ ಮಾಡಿಸಿದ್ದಾರೆ. ಭಾರತ ಕುರಿತ ಟ್ರಂಪ್ ಅವರ ನಿಲುವಿನಲ್ಲಿ ಅಮೆರಿಕದ ಹಿತಾಸಕ್ತಿಗಿಂತ ವೈಯಕ್ತಿಕ ಸೇಡಿನ ಅಂಶವೇ ಎದ್ದು ಕಾಣುತ್ತಿದೆ.

ಜಿದ್ದಿಗೆ ಬಿದ್ದ ಟ್ರಂಪ್ ಭಾರತದ ಮೇಲೆ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲು ಮುಂದಾಗುವುದು ಖಚಿತ. ಅಮೆರಿಕದ ಸುಂಕ ನೀತಿಯಿಂದ ಮೊದಲು ಏಟು ಬಿದ್ದಿರುವುದು ರುಪಾಯಿ ಮೇಲೆ. ಇದರಿಂದ ಡಾಲರ್‌ನಲ್ಲಿ ವ್ಯವಹರಿಸುವ ಭಾರತದ ಆಮದುದಾರರಿಗೆ ಕಷ್ಟವಾಗಲಿದೆ. ರುಪಾಯಿ ಕುಸಿತದ ಬೆನ್ನಿಗೇ ಚಿನ್ನದ ಧಾರಣೆಯೂ ಏರಿಕೆ ಕಂಡಿದೆ. ಚಿನ್ನ ನಮ್ಮಲ್ಲಿ ಜನಸಾಮಾನ್ಯರಿಗೂ ಅಗತ್ಯ ವಸ್ತು. 10 ಗ್ರಾಮಿಗೆ 1 ಲಕ್ಷ ರು.ಗಳ ಗಡಿ ದಾಟಿರುವ ಚಿನ್ನ ಇನ್ನು ಬಡವರ ಪಾಲಿಗೆ ಗಗನ ಕುಸುಮವಾಗಬಹುದು. ಯುದ್ಧ, ಅಂತರ್ಯುದ್ಧ, ಪ್ರತಿಭಟನೆ, ಶೀತಲ ಸಮರ ಏನೇ ಇರಲಿ ಅಂತಿಮವಾಗಿ ನೋವುಣ್ಣುವವರು ಆಯಾ ದೇಶಗಳ ಶ್ರೀಸಾಮಾನ್ಯರು. ಇಂದಿನ ಜಾಗತಿಕ ವಿದ್ಯಮಾನಕ್ಕೆ ಅನ್ವಯಿಸುವುದಾದರೆ ದೊಡ್ಡವರ ಜಗಳದಲ್ಲಿ ನಮ್ಮಂತಹ ಜನಸಾಮಾನ್ಯರು ಬದುಕು ಏರುಪೇರಾಗುತ್ತಿದೆ. ಏನೇ ಇರಲಿ, ಬರುವುದೆಲ್ಲವನ್ನೂ ಎದುರಿಸಲೇಬೇಕು.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಕಂಠೀರವ ಸ್ಟುಡಿಯೋ ರಸ್ತೆಯಲ್ಲಿ ಬಸ್ ಅನ್ನು 'ನಡುರಸ್ತೆ'ಯಲ್ಲೇ ನಿಲುಗಡೆ ಮಾಡಿ, ಗಲಾಟೆ ಮಾಡಿಕೊಂಡ ಇಬ್ಬರು ಬಿಎಂಟಿಸಿ ಚಾಲಕರು: ಸುದ್ದಿ
- **ಹಾಗೆ 'ನಡುರಸ್ತೆ'ಯಲ್ಲೇ ಬಸ್ ನಿಲ್ಲಿಸಿ ಗಲಾಟೆ ಮಾಡುವಾಗ ಅವರು ಪರಸ್ಪರರಿಗೆ ಬಳಸಿದ ಭಾಷೆಯು 'ನಡುಗನ್ನಡ'ವಾಗಿತ್ತೇ ಎಂಬ ಬಗ್ಗೆ ಯುಟ್ಯೂಬರ್‌ಗಳು ತನಿಖೆ ನಡೆಸಿ ವರದಿ ಮಾಡಬೇಕಿದೆ!**

- 'ಶ್ರವಣ' ಸಾಧನಗಳ ದೇಶಿ ಉತ್ಪಾದನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ: ಸುದ್ದಿ
- **ಸಂಬಂಧಪಟ್ಟವರು ಈ 'ಕರೆ'ಯನ್ನು 'ಕಿವಿಗೆ' ಹಾಕಿಕೊಳ್ಳಲಿ ಎಂಬುದು ಸಹೃದಯಿಗಳ ಕೋರಿಕೆ!**

- ರಾಮನಗರ ಜಿಲ್ಲಾ ಕಾರಾಗೃಹದಲ್ಲಿ ಕೈದಿಗಳ ನಡುವೆ ಮಾರಾಮಾರಿ; 23 ಮಂದಿ ವಿರುದ್ಧ ಎಫ್‌ಐಆರ್: ಸುದ್ದಿ
- **ಛೇ! ಹೊಡೆದಾಡಿಕೊಂಡರು ಅಂತ ಅವರನ್ನು ಒದ್ದು 'ಹೊರಗೆ ಹಾಕೋಕ್ಕೆ' ಆಗಲ್ಲ ನೋಡಿ... ಎಂಥಾ ಇಕ್ಕಟ್ಟಿನ ಪರಿಸ್ಥಿತಿ!**

- 'ಬುರುಡೆ'ಯಾಟ ಬಗೆದಷ್ಟೂ ಬಯಲು, 'ಬುರುಡೆ' ರಹಸ್ಯ ಬಾಯಿಬಿಟ್ಟ 'ಮಾಸ್ಕ್ ಮ್ಯಾನ್' ಚಿನ್ನಯ್ಯ: ಸುದ್ದಿ
- **ಅಬ್ಬಾ! ಬರೀ ಒಂದು 'ಬುರುಡೆ' ಇಟ್ಕೊಂಡೇ ಎಷ್ಟೊಂದು 'ಬಯಲಾಟ' ಆಡಿಬಿಟ್ಟ ಅಲ್ವಾ ಈ ಮಹಾಶಯ?!**

- ಉದ್ಯಾನನಗರಿ ಬೆಂಗಳೂರಿನಲ್ಲಿ ಭಾರಿ ಮಳೆ; ವಾಹನ ಸವಾರರ ಪರದಾಟ: ಸುದ್ದಿ
- **'ಬೆಂಗಳೂರಿನಲ್ಲಿ ಭಾರಿ ಮಳೆ' ಅಂತ ಹೇಳಿದ್ರೆ ಸಾಕಿತ್ತು. ಯಾಕಂದ್ರೆ 'ವಾಹನ ಸವಾರರ ಪರದಾಟ' ಅನ್ನೋ ಸಾಲು 'Understood'!!**

- ಭಯೋತ್ಪಾದನೆ ವಿರುದ್ಧ ನಿರ್ಣಯ, ಭಾರತಕ್ಕೆ ಸದಸ್ಯ ರಾಷ್ಟ್ರಗಳ ಬೆಂಬಲ. ಶಾಂಘೈ ಶೃಂಗಸಭೆಯಲ್ಲಿ ಪಾಕಿಸ್ತಾನಕ್ಕೆ ಮಾತಿನ ಚಾಟಿಯೇಟು: ಸುದ್ದಿ
- **ಅಯ್ಯೋ ಶಿವನೇ! 'ಆಪರೇಷನ್ ಸಿಂದೂರ' ಕಾರ್ಯಾಚರಣೆ ವೇಳೆ ಭಾರತವು ತನ್ನ ಬುಡಕ್ಕೆ ಹಾಕಿದ ಬರೆಯನ್ನೇ ಆ ಪಾಕಿಸ್ತಾನ ಇನ್ನೂ ವಾಸಿಮಾಡಿಕೊಂಡಿಲ್ಲ. ಹೀಗಿರೋವಾಗ, ಪಾಪ ಅದಕ್ಕೆ ಮತ್ತೆ ಚಾಟಿ ಬೀಸಿ 'ಅಬ್ಬು' ಮಾಡಿಬಿಟ್ರಾ...?!!**

- ಮೆಟ್ರೋ 'ಹಳದಿ ಮಾರ್ಗ'ದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಳ: ಸುದ್ದಿ
- **ಹಾಗಂತ ಅವರನ್ನು 'ಹಳದಿ ಕಣ್ಣು'ಗಳಿಂದ ನೋಡುವುದು ಬೇಡ..!**

- ಭಾರತ-ರಷ್ಯಾ ಮೈತ್ರಿಯ 'ಬಲವರ್ಧನೆ': ಸುದ್ದಿ
- **ಈ ಸುದ್ದಿಶೀರ್ಷಿಕೆ ನೋಡಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಉರಿವರ್ಧನೆ' ಆಗಿದೆಯಂತೆ!**

- ಚೀನಾದ ರಾಜಧಾನಿ ಬೀಜಿಂಗ್‌ನಿಂದ 135 ಕಿ.ಮೀ. ದೂರದ ಶೃಂಗಸಭೆಯ ಸ್ಥಳ ಟಿಯಾಂಜಿನ್‌ಗೆ ಜತೆಯಾಗಿ ಒಂದೇ ಕಾರಿನಲ್ಲಿ ಪಯಣಿಸಿದ ಭಾರತದ ಪ್ರಧಾನಿ ಮೋದಿ ಮತ್ತು ರಷ್ಯಾ ಅಧ್ಯಕ್ಷ ಪುಟಿನ್: ಸುದ್ದಿ
- **ಮಾರ್ಗಮಧ್ಯದಲ್ಲಿ ರಸ್ತೆಬದಿಯಲ್ಲಿ ನಿಂತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆ ಕಾರಿಗೆ ಕೈ ಅಡ್ಡಹಾಕಿ, "ನಾನೂ ಬತ್ತೀನಿ, ನನ್ನೂ ಕಕ್ಕೊಂಡ್ ಹೋಗಿ, ನನ್ನೂ ಆಟಕ್ಕೆ ಸೇರಿಸ್ಕೊಳ್ಳಿ... ಪ್ಲೀಶ್...." ಎಂದು ಎಷ್ಟು ಗೋಗರೆದರೂ, ಅವರನ್ನು ಕಾರಿಗೆ ಹತ್ತಿಸಿಕೊಳ್ಳಲಿಲ್ಲವಂತೆ!!**



ಮಾಹಿತಿ ಹಕ್ಕು ಕಾಯಿದೆ ಎಂದರೆ ಭ್ರಷ್ಟರಿಗೆ ಭಯವೇಕೆ...?

ಮಾಹಿತಿ ಹಕ್ಕು ಕಾಯಿದೆಯು ತನಿಖಾ ಪತ್ರಿಕೋದ್ಯಮಕ್ಕೆ ಹೆಚ್ಚಿನ ಬಲ ತಂದುಕೊಟ್ಟಿತು. ಭ್ರಷ್ಟಾಚಾರಿಗಳಿಗೆ, ಸಮಾಜದ್ರೋಹಿಗಳಿಗೆ ಆರ್‌ಟಿಐ ಕಾರ್ಯಕರ್ತರು ಸಿಂಹಸ್ವಪ್ನರಾದರು. ಪರಿಣಾಮವಾಗಿ ಭ್ರಷ್ಟಾಚಾರದ ಹಲವು ನಿದರ್ಶನಗಳು ಬಯಲಾದವು. ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಬಂದ ತನಿಖಾ ವರದಿಗಳಿಗೆ, ಮಾಹಿತಿ ಹಕ್ಕು ಕಾಯಿದೆಯ ಮೂಲಕ ಪಡೆದ ಮಾಹಿತಿಗಳೇ ಆಧಾರವಾಗಿದ್ದವು. ಹಾಗಾಗಿ ಇಂಥ ಅಗತ್ಯ ಮಾಹಿತಿಗಳನ್ನು ಕೇಳುವುದು ಕಾರ್ಯಕರ್ತರ ಹಕ್ಕಾಗಿದೆ.

ವಿಚಾರ ವೇದಿಕೆ
ಮರಿಲಿಂಗಗೌಡ ಮಾಲಿಪಾಟೀಲ್
vveditoped@gmail.com

ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ) ಎಂಬುದು ಒಂದು ಕಾನೂನು ಮಾತ್ರವಲ್ಲ, ಅದು ಪ್ರಜಾಪ್ರಭುತ್ವದ ಪ್ರಾಣವೂ ಹೌದು. ಇದರ ಸರಿಯಾದ ಬಳಕೆಯು ಭ್ರಷ್ಟಾಚಾರವನ್ನು ಕಡಿಮೆ ಮಾಡುತ್ತದೆ, ಸಮಾಜದಲ್ಲಿ ನ್ಯಾಯವನ್ನು ಸ್ಥಾಪಿಸುತ್ತದೆ, ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆಯನ್ನು ತರುತ್ತದೆ. ಪ್ರಜಾಪ್ರಭುತ್ವವನ್ನು ಬಲಪಡಿಸಲು, ಜನರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಮತ್ತು ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಲು ಮಾಹಿತಿ ಹಕ್ಕು ಕಾಯಿದೆಯು ಒಂದು 'ಎಂದೂ ಆರದ ದೀಪ'ವಾಗಿದೆ.

ಇಂಥ ಒಂದು ಒಳ್ಳೆಯ, ಸಮಾಜಪರ, ಭ್ರಷ್ಟವಿರೋಧಿ ಕಾಯಿದೆಯನ್ನು ಹಳ್ಳ ಹಿಡಿಸುವ ಯೋಜನೆಗೆ ಅಂಕುರಾರ್ಪಣ ಆದಂತೆ ಕಾಣಿಸುತ್ತಿದೆ. ಮಾಹಿತಿ ಹಕ್ಕು ಕಾರ್ಯಕರ್ತರ ಬಗ್ಗೆ ವಿಧಾನಸೌಧದಲ್ಲಿ ಇತ್ತೀಚೆಗೆ ಅಪಸ್ವರ ಕೇಳಿಬಂದಿತ್ತು. "ಆರ್‌ಟಿಐ ಕಾರ್ಯಕರ್ತರು ಬ್ಲ್ಯಾಕ್‌ಮೇಲರ್‌ಗಳು, ಬೆದರಿಕೆ ಹಾಕ್ತಾರೆ" ಎಂಬರ್ಥದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳರು ಆರೋಪಿಸಿದರು. 26 ಮಂದಿ ಮಾಹಿತಿ ಹಕ್ಕು ಕಾರ್ಯಕರ್ತರುಗಳನ್ನು ಕಪ್ಪುಪಟ್ಟಿಗೆ ಸೇರಿಸಿರುವುದಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲರು ಮಾಹಿತಿ ನೀಡಿದರು. ಆರ್‌ಟಿಐ ಕಾರ್ಯಕರ್ತರು ಇದ್ದಕ್ಕಿದ್ದಂತೆ ಬ್ಲಾಕ್‌ಮೇಲರ್‌ಗಳಾಗಿದ್ದು ಹೇಗೆ? ಕಾಯಿದೆಯನ್ನು ಅವರು ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬ ಭಾವನೆ ಬಂದಿದ್ದು ಹೇಗೆ? ಇವರು ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುತ್ತಾರೆ ಎನ್ನುವುದು ಸತ್ಯವೇ ಆಗಿದ್ದರೆ ಅಧಿಕಾರಿಗಳು ದೂರು ಕೊಡಬಹುದಿತ್ತಲ್ಲ?! ಮಾಹಿತಿ ಹಕ್ಕು ಕಾರ್ಯಕರ್ತರ ವಿರುದ್ಧ ಇಲ್ಲಿಯವರೆಗೆ ಎಷ್ಟು ದೂರುಗಳು ದಾಖಲಾಗಿವೆ? ಅಧಿಕಾರಿಗಳು ಬ್ಲ್ಯಾಕ್‌ಮೇಲ್‌ಗೆ ಒಳಗಾಗುವ ಅನಿವಾರ್ಯತೆಯಾದರೂ ಏನಿತ್ತು? ಕಾರ್ಯಕರ್ತರನ್ನು ಕರೆದು ಅಧಿಕಾರಿಗಳು ಮಾತುಕತೆ ನಡೆಸುವುದು ಯಾಕೆ? ಅದು ಸೆಟ್ಲ್‌ಮೆಂಟ್‌ಗಾಗಿ ಎಂದು ಭಾವಿಸಿದರೆ ತಪ್ಪೇ?

ಈ ಬಗ್ಗೆ ಚರ್ಚಿಸಲು ಸರಕಾರ ಮುಕ್ತ ಮನಸ್ಸು ಹೊಂದಿರುವುದಾಗಿ ಸದನಕ್ಕೆ ತಿಳಿಸಿದ ಸಚಿವ ಎಚ್.ಕೆ.ಪಾಟೀಲರು, "ಕಾರ್ಯಕರ್ತರು ಕಿರುಕುಳ ಕೊಡುತ್ತಿದ್ದರೆ, ಅವರಿಂದ ಕಾನೂನಿನ ದುರುಪಯೋಗ ಆಗುತ್ತಿದ್ದರೆ ಈ ಬಗ್ಗೆ ತಿದ್ದುಪಡಿ ತರುವ ಬಗ್ಗೆ ಸರಕಾರ ಚರ್ಚಿಸಲು ಸಿದ್ಧ" ಎಂದರು. "ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರು ಇಷ್ಟೇ ಸಂಖ್ಯೆಯ ಅರ್ಜಿ ಸಲ್ಲಿಸಬಹುದು ಎನ್ನುವಂತೆ ಮಿತಿಹಾಕಬೇಕಿದೆ" ಎಂದು ಬಿಜೆಪಿಯ ಸುನೀಲ್ ಕುಮಾರ್ ಸೂಚಿಸಿದರೆ, ಅಧಿಕಾರಿಗಳನ್ನು ಗುರಿಯಾಗಿಸಿ ಕಾಯಿದೆಯ ದುರುಪಯೋಗಪಡಿಸಿಕೊಳ್ಳುವ ಕಾರ್ಯಕರ್ತರ ಮೇಲೆ ಸರಕಾರ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಲು ಬಯಸಿರುವುದಾಗಿ ಕಾಂಗ್ರೆಸ್ ಶಾಸಕ ಮಹಾಂತೇಶ್ ಕೌಜಲಗಿ ಹೇಳಿದರು. ಒಟ್ಟಿನಲ್ಲಿ ಸದನದ ಕಲಾಪದ ಬಹಳ ಸಮಯವನ್ನು ಮಾಹಿತಿ ಹಕ್ಕು ಕಾಯ್ದೆ ಸಂಬಂಧಿತ ಚರ್ಚೆ ಆಕ್ರಮಿಸಿತು.

ಕಾಯಿದೆಯ ಹಿನ್ನೆಲೆ: 1970ರ ದಶಕದಲ್ಲಿ, ರೈತರು ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ, ರಾಜಸ್ಥಾನದ 'ಮಜ್ದೂರ್ ಕಿಸಾನ್ ಶಕ್ತಿ ಸಂಘಟನಾ' (ಎಂಕೆಎಸ್‌ಎಸ್) ಹೋರಾಟವನ್ನು ಆರಂಭಿಸಿತು. 'ಸರಕಾರದ ಹಣವನ್ನು ಎಲ್ಲಿ ಖರ್ಚುಮಾಡುತ್ತಿದ್ದಾರೆ?' ಎಂಬ ಪ್ರಶ್ನೆಯಿಂದಲೇ ಮಾಹಿತಿ ಹಕ್ಕಿನ ಚಳವಳಿ ಹುಟ್ಟಿಕೊಂಡಿತು. ಭಾರತೀಯ ಸಂವಿಧಾನದ 19(1)(ಎ) ಕಲಂ 'ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಖಾತ್ರಿಪಡಿಸುತ್ತದೆ. ಮಾಹಿತಿಯನ್ನು ತಿಳಿಯುವ ಹಕ್ಕು ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವೇ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪುಗಳಲ್ಲಿ ಘೋಷಿಸಿತು. ಕೊನೆಗೆ, 2005ರ ಅಕ್ಟೋಬರ್ 12ರಂದು ಮಾಹಿತಿ ಹಕ್ಕು ಕಾಯಿದೆ ಜಾರಿಗೆ ಬಂತು. ಇದರಿಂದಾಗಿ ಪ್ರತಿಯೊಬ್ಬ ಭಾರತೀಯ ನಾಗರಿಕನಿಗೂ ಸರಕಾರದ ಯಾವುದೇ ಸಾರ್ವಜನಿಕ ಮಾಹಿತಿಯನ್ನು ಕೇಳುವ ಕಾನೂನುಬದ್ಧ ಹಕ್ಕು ದೊರಕಿತು.

ಮಾಹಿತಿ ಹಕ್ಕು ಕಾಯಿದೆಯಿಂದಾಗಿ ಆಡಳಿತದಲ್ಲಿ ಪಾರದರ್ಶಕತೆ ಮೂಡುತ್ತದೆ, ಅಧಿಕಾರಿಗಳು ಜನರಿಗೆ ಉತ್ತರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಭ್ರಷ್ಟಾಚಾರದ ನಿಯಂತ್ರಣವಾಗುತ್ತದೆ. ಆರ್‌ಟಿಐ ನೆರವಿನಿಂದಾಗಿ ಹಲವಾರು ಹಗರಣಗಳು ಬೆಳಕಿಗೆ ಬಂದಿವೆ. ಆರ್‌ಟಿಐನಿಂದಾಗಿ ಸಾಮಾನ್ಯ ನಾಗರಿಕರೂ ತಮ್ಮ ಹಕ್ಕನ್ನು ಸಾಧಿಸಲು ಸಾಧ್ಯ, ದಾಖಲೆಗಳನ್ನು ಪಡೆದು ನ್ಯಾಯಾಲಯದಲ್ಲಿ ಹೋರಾಡಿ ನ್ಯಾಯ ಪಡೆಯಲು ಸಾಧ್ಯ. ಪರಿಸರ, ಮಹಿಳಾ ಹಕ್ಕು, ಕಾರ್ಮಿಕ ಹಕ್ಕು ಚಳವಳಿಗಳಿಗೆ ಮಾಹಿತಿ ಹಕ್ಕು ಕಾಯಿದೆಯ ಮೂಲಕ ಬೆಂಬಲ ದೊರೆಯುತ್ತದೆ. ಇಷ್ಟೇ ಅಲ್ಲದೆ ಸರಕಾರವು ಜನರ ಮುಂದೆ ಉತ್ತರಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಮಾಹಿತಿ ಪಡೆಯುವ ಹಕ್ಕು ಎಲ್ಲರಿಗೂ ಸಮಾನವಾಗಿ ದೊರೆಯುವುದರಿಂದ, ಸರಕಾರದ ಯೋಜನೆಗಳು ಜನರಿಗೆ ತಲುಪುತ್ತಿವೆಯೇ ಎಂದು ಪರಿಶೀಲನೆ ಮಾಡುವುದು ಸಾಧ್ಯ. ಆಡಳಿತ ಸುಧಾರಣೆಗೂ ನೆರವಾಗುವ ಮಾಹಿತಿ ಹಕ್ಕು ಕಾಯಿದೆಯು, ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡುವಂತೆ ಒತ್ತಡ ಹೇರುತ್ತದೆ.

ಮಾಹಿತಿ ಕೇಳುವುದು ತಪ್ಪಾ?: 2005ರಲ್ಲಿ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಕಾಂಗ್ರೆಸ್ ಪಕ್ಷವು ತಂದಿದ್ದ ಮಾಹಿತಿ ಹಕ್ಕು ಕಾಯಿದೆಯು ಪ್ರಜಾಪ್ರಭುತ್ವವನ್ನು ಬಲಪಡಿಸಿದ ಒಂದು ಸಾಧನ ಎಂದು ಖಚಿತವಾಗಿ ಹೇಳಬಹುದು. ಈ ಕಾಯಿದೆ ತನ್ನ ಪ್ರಭಾವವನ್ನು ತೋರುತ್ತಿದ್ದಂತೆ ಭ್ರಷ್ಟರು ಪತರಗುಟ್ಟತೊಡಗಿದರು. "ಇದನ್ನೆಲ್ಲಾ ನಾವು ಹೇಳಬೇಕಾ?" ಎಂದು ಮಾಹಿತಿ ನೀಡಲು ನಿರಾಕರಿಸಿದ ಅವರಿಗೆ, ಕಾಯಿದೆಯ ಬಗ್ಗೆ ಅರಿವಾದಾಗ 'ಮಾಹಿತಿ ನೀಡಲೇಬೇಕು' ಎಂಬುದು ತಿಳಿಯಿತು. ಸಾರ್ವಜನಿಕರ ತೆರಿಗೆ ಹಣವನ್ನು ಭ್ರಷ್ಟಾಚಾರಿಗಳು ನುಂಗಿ ನೀರು ಕುಡಿಯುತ್ತಿದ್ದುದಕ್ಕೆ ಕಡಿವಾಣ ಹಾಕಿದ್ದೇ ಮಾಹಿತಿ ಹಕ್ಕು ಕಾಯಿದೆ. ಇದರಿಂದಾಗಿ ಭ್ರಷ್ಟಾಚಾರಕ್ಕೆ ಆಸ್ಪದವಿಲ್ಲದಂತಾಗಿ, ಉಸಿರುಗಟ್ಟಿಸಿಕೊಂಡಿದ್ದವರು ಅದ್ಯಾವ ಲಾಬಿ ಮಾಡಿದರೋ ತಿಳಿಯದು, ಮಾಹಿತಿ ಹಕ್ಕು ಕಾರ್ಯಕರ್ತರ ವಿರುದ್ಧವಾಗಿ ಈಗ ಸದನದಲ್ಲಿ ಸುದ್ದಿಯಾಗಿದೆ.

ಅರ್ಜಿಗಳ ಹೆಚ್ಚಳಕ್ಕೆ ಕಾರಣ: ಮಾಹಿತಿ ಹಕ್ಕು ಕಾರ್ಯಕರ್ತರು ಹೆಚ್ಚೆಚ್ಚು ಅರ್ಜಿ ಸಲ್ಲಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇದೇ ವಿಚಾರಕ್ಕೆ ಶಾಸಕರು ಕೂಡ ದನಿಯೆತ್ತಿದ್ದಾರೆ. ಆದರೆ, ಇದಕ್ಕೆ ಕಾರಣವೇನು ಎಂದು ಹುಡುಕಹೊರಟರೆ, 'ಮಾಹಿತಿ ಆಯೋಗದ ಆಯುಕ್ತರು ನೀಡಿರುವ ಆದೇಶವೇ ಇದಕ್ಕೆ ಕಾರಣ' ಎಂಬ ಉತ್ತರ ಸಿಗುತ್ತಿದೆ. ಹೌದು, 'ಪ್ರಕರಣ



ವೊಂದಕ್ಕೆ ಸಂಬಂಧಿಸಿ ಅರ್ಜಿ ಸಲ್ಲಿಸುವವರು ಒಂದು ಅರ್ಜಿಗೆ ಒಂದೇ ಪ್ರಶ್ನೆಯನ್ನು ಕೇಳಬೇಕು; ಬೇರೆ ಬೇರೆ ಪ್ರಶ್ನೆಗಳಿದ್ದರೆ ಬೇರೆ ಅರ್ಜಿ ಸಲ್ಲಿಸಬೇಕು' ಎಂಬುದಾಗಿ ಮಾಹಿತಿ ಆಯೋಗದ ಆಯುಕ್ತರು ಆದೇಶ ನೀಡಿದ್ದಾರೆ. ಹೀಗಾಗಿ ಅರ್ಜಿದಾರರು ಹೆಚ್ಚೆಚ್ಚು ಅರ್ಜಿ ಸಲ್ಲಿಸುವಂತಾಗುತ್ತಿದೆ. ಉದಾಹರಣೆಗೆ, ಹಿಂದೆಲ್ಲಾ ಕಾಮಗಾರಿಯೊಂದರ ಬಗ್ಗೆ ಮಾಹಿತಿ ಬೇಕೆಂದರೆ, ಎಲ್ಲ ಪ್ರಶ್ನೆಗಳನ್ನೂ ಒಳಗೊಂಡ ಒಂದು ಅರ್ಜಿಯನ್ನು ಸಲ್ಲಿಸಿದರೆ ಸಾಕಿತ್ತು. ಆದರೆ ಈಗ, ಒಂದು ಕಾಮಗಾರಿಯ ಆದೇಶ, ಎಂ.ಬಿ., ಎಸ್ಟಿಮೇಟ್, ಬಿಲ್, ಬಿಒಕ್ಯೂ, ಟೆಕ್ನಿಕಲ್ ಇವ್ಯಾಲ್ಯುಯೇಷನ್ ಹೀಗೆ ಪ್ರತಿ ಮಾಹಿತಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾಗಿದೆ. ಮಾಹಿತಿ ಹಕ್ಕು ಕಾರ್ಯಕರ್ತರಿಗೆ ಇಂಥ ಅನಿವಾರ್ಯ ಪರಿಸ್ಥಿತಿಯನ್ನು ಒಡ್ಡಿರುವುದು ಸ್ವತಃ ಆಯೋಗವೇ. ಹೀಗಾಗಿ, ಆಯೋಗದ ಆದೇಶವನ್ನು ಯಥಾವತ್ತಾಗಿ ಪಾಲಿಸುವ ಅಧಿಕಾರಿಗಳು, ಒಂದೇ ಅರ್ಜಿಯಲ್ಲಿ ಹಲವು ಮಾಹಿತಿಯನ್ನು ಕೇಳಿದಾಗ, ಆಯೋಗದ ಆದೇಶವನ್ನು ಉಲ್ಲಂಘಿಸಿ ಜಾರಿಕೊಳ್ಳುತ್ತಿದ್ದಾರೆ. ಈ ಪರಿಪಾಠವೂ ಅರ್ಜಿಗಳ ಸಂಖ್ಯೆಯಲ್ಲಿನ ಹೆಚ್ಚಳಕ್ಕೆ ಕಾರಣ ಎಂಬುದು ಬಹುತೇಕರಿಗೆ ತಿಳಿದಿಲ್ಲ!

ತನಿಖಾ ಪತ್ರಿಕೋದ್ಯಮದ ಅಸ್ತ್ರ: ಮಾಹಿತಿ ಹಕ್ಕು ಕಾಯಿದೆಯು ತನಿಖಾ ಪತ್ರಿಕೋದ್ಯಮಕ್ಕೆ ಹೆಚ್ಚಿನ ಬಲ ತಂದುಕೊಟ್ಟಿತು. ಭ್ರಷ್ಟಾಚಾರಿಗಳಿಗೆ, ಸಮಾಜದ್ರೋಹಿಗಳಿಗೆ ಆರ್‌ಟಿಐ ಕಾರ್ಯಕರ್ತರು ಸಿಂಹಸ್ವಪ್ನರಾದರು. ಇಂಥ ಕೆಲವು ಕಾರ್ಯಕರ್ತರ ಮೇಲೆ ದಾಳಿಗಳೂ ನಡೆದವು; ಆದರೆ ಅವು ಕಾರ್ಯಕರ್ತರ ಧೈರ್ಯವನ್ನು ಕುಗ್ಗಿಸಲಿಲ್ಲ. ಪರಿಣಾಮವಾಗಿ ಭ್ರಷ್ಟಾಚಾರದ ಹಲವು ನಿದರ್ಶನಗಳು ಬಯಲಾದವು. ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಬಂದ ತನಿಖಾ ವರದಿಗಳಿಗೆ, ಮಾಹಿತಿ ಹಕ್ಕು ಕಾಯಿದೆಯ ಮೂಲಕ ಪಡೆದ ಮಾಹಿತಿಗಳೇ ಆಧಾರವಾಗಿದ್ದವು. ಹಾಗಾಗಿ ಇಂಥ ಅಗತ್ಯ ಮಾಹಿತಿಗಳನ್ನು ಕೇಳುವುದು ಕಾರ್ಯಕರ್ತರ ಹಕ್ಕಾಗಿದೆ. ಅರವಿಂದ ಕೇಜ್ರಿವಾಲರು ದೆಹಲಿಯ ಮುಖ್ಯಮಂತ್ರಿಯಾಗಲು ಕಾರಣವಾದದ್ದೇ ಮಾಹಿತಿ ಹಕ್ಕು ಕಾಯ್ದೆ ಎಂಬುದನ್ನು ಮರೆಯಲಾಗದು.

ಆದರೆ ಮಾಹಿತಿಯನ್ನು ಕೇಳುವುದೇ ತಪ್ಪಾಗಿದ್ದರೆ, ಸರಕಾರವೇ ಅಗತ್ಯ ಮಾಹಿತಿಗಳನ್ನು ಪ್ರಕಟಿಸಲಿ, ಅವನ್ನು ವೆಬ್‌ಸೈಟ್‌ಗಳಲ್ಲಿ ಹಾಕಲಿ. ಎಲ್ಲಾ ಕಾಮಗಾರಿಗಳ ವಿವರ, ಅವಕ್ಕೆ ಬಿಡುಗಡೆಯಾ ಗಿರುವ ಹಣ, ಗುತ್ತಿಗೆದಾರರ ವಿವರ, ಎಸ್ಟಿಮೇಟ್, ಎಂ.ಬಿ. ಹೀಗೆ ವಿವಿಧ ಮಾಹಿತಿಗಳನ್ನು 3 ತಿಂಗಳಿಗೊಮ್ಮೆ 'ಪಬ್ಲಿಕ್ ಡೊಮೈನ್'ಗೆ ಬಿಡುತ್ತಿದ್ದರೆ ಆಗ ಯಾರು ತಾನೇ ಮಾಹಿತಿ ಕೇಳುತ್ತಾರೆ?

ಅವ್ಯವಹಾರ ತಿಳಿಯುವುದು ಹೇಗೆ?: ಹಾಗೆ ನೋಡಿದರೆ, ಎಷ್ಟೋ ಮಂದಿ ಮಾಹಿತಿ ಹಕ್ಕು ಕಾರ್ಯಕರ್ತರು ಹಲವು ಶಾಸಕರೊಂದಿಗೆ ಮಧುರ ಬಾಂಧವ್ಯವನ್ನು ಹೊಂದಿದ್ದಾರೆ. ಎಲ್ಲ ಪಕ್ಷಗಳಲ್ಲಿಯೂ 'ಆರ್‌ಟಿಐ ವಿಂಗ್' ಇದೆ. ಆದರೆ ಸಮಾಜದಲ್ಲಿ ಭ್ರಷ್ಟಾಚಾರವು ಹಾಸುಹೊಕ್ಕಾಗಿದೆ ಎಂಬುದು 'ಓಪನ್ ಸೀಕ್ರೆಟ್'. ವಿರೋಧಿಗಳ ಭ್ರಷ್ಟಾಚಾರವನ್ನು ಬಯಲಿಗೆಳೆಯುವುದರಲ್ಲಿ ಎಲ್ಲರಿಗೂ ಆಸಕ್ತಿ ಇದೆ; ಆದರೆ ಅದು ತಮ್ಮ ಬುಡಕ್ಕೆ ಸಂಚಕಾರ ತರುತ್ತದೆ ಎಂದಾದರೆ ಆ ಕಾಯಿದೆ ಇವರಿಗೆ ಬೇಡ! ಎಷ್ಟೋ ಬಾರಿ ಕೆಲ ಶಾಸಕರೇ, ನಿರ್ದಿಷ್ಟ ಗುತ್ತಿಗೆದಾರರ ಬಗ್ಗೆ ಮಾಹಿತಿ ಹಕ್ಕು ಕಾರ್ಯಕರ್ತರಿಗೆ ಸೂಚನೆ ನೀಡಿ, ಮಾಹಿತಿ ಕೇಳಿಸುತ್ತಾರೆ ಎಂಬ ವದಂತಿಗಳಿವೆ. ವೃತ್ತಿವೈಷಮ್ಯದ ಕಾರಣಕ್ಕೆ ಬಿಬಿಎಂಪಿಯ ಕೆಲ ಎಂಜಿನಿಯರುಗಳೇ ಮಾಹಿತಿ ಹಕ್ಕು ಕಾರ್ಯಕರ್ತರನ್ನು ಛೂಬಿಡುವುದೂ ಇದೆಯಂತೆ. ಇದು ಸತ್ಯ ಎನಿಸುತ್ತದೆ. ಇಲ್ಲವಾದರೆ, ಎಲ್ಲೋ ಇರುವ ಮಾಹಿತಿ ಹಕ್ಕು ಕಾರ್ಯಕರ್ತರಿಗೆ ಆಡಳಿತದ ಒಳಹಂತಗಳಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ತಿಳಿಯುವುದಾದರೂ ಹೇಗೆ?!

ಅಷ್ಟಕ್ಕೂ, ಮಾಹಿತಿ ಹಕ್ಕು ಕಾರ್ಯಕರ್ತರು ಹೊರಗೆಳೆಯುವುದು ಅವ್ಯವಹಾರಗಳನ್ನು ತಾನೇ? ಅದರಿಂದ ಸಮಾಜಕ್ಕೆ ಒಳ್ಳೆಯದೇ ತಾನೇ? ಮಾಹಿತಿ ಹಕ್ಕು ಕಾಯಿದೆಯಿಂದಾಗಿ ಭ್ರಷ್ಟರು ಭಯಗೊಂಡಿರುವುದು ಸತ್ಯವಲ್ಲವೇ? ಈ ಕಾಯಿದೆ ಬಂದ ನಂತರ ಭ್ರಷ್ಟರ ಸಂಖ್ಯೆ ಕಡಿಮೆಯಾಗಿರುವುದೂ ಅಷ್ಟೇ ಸತ್ಯವಲ್ಲವೇ?

ಇಷ್ಟವಿಲ್ಲದಿದ್ದರೆ ಬಿಡಿ: ಮಾಹಿತಿ ಹಕ್ಕು ಕಾಯಿದೆಯು ಅಷ್ಟೊಂದು ನೋವು ಕೊಡುತ್ತದೆ ಎಂದಾದರೆ ಅದನ್ನು ತೆಗೆದುಬಿಡಿ. ಮಾಹಿತಿ ಹಕ್ಕು ಕಾರ್ಯಕರ್ತನೊಬ್ಬ ಮಾಹಿತಿಯನ್ನು ಕೇಳುವುದು ಅಪರಾಧವಾಗಿದ್ದರೆ ಅಂಥ ಕಾಯಿದೆ ಯಾಕಾದರೂ ಇರಬೇಕು? ★ಸಮಾಜ ಏನಾದರೆ ನಮಗೇನು? ಸಮಾಜದಲ್ಲಿ ಭ್ರಷ್ಟಾಚಾರ ತಾಂಡವವಾಡಿದರೆ ಯಾರಿಗೇನು ಕಷ್ಟ? ಎಂಬ ಭಾವನೆ ಇರುವವರು ಈ ಕಾಯಿದೆಯನ್ನು ರದ್ದು ಮಾಡಲು ಯತ್ನಿಸುತ್ತಿದ್ದಾರೆ★. ಅದಕ್ಕೆ ಬೆಂಬಲ ಸಿಗಬಹುದು.

ಆರ್‌ಟಿಐ ಕಾರ್ಯಕರ್ತರನ್ನು ವಿರೋಧಿಸುವ ಬದಲು, ಈ ಕಾಯಿದೆಯ ಸಮರ್ಥ ಬಳಕೆಗೆ ಅಧಿಕಾರಿಗಳಿಗೆ ತರಬೇತಿ ನೀಡಬೇಕು. ಕಾರ್ಯಕರ್ತರು ಯವ ಮಾಹಿತಿ ಕೇಳಿದ್ದಾರೆ ಎಂದು ಅರ್ಥಮಾಡಿಕೊಂಡು ಸರಿಯಾಗಿ ಮಾಹಿತಿ ನೀಡಿ ಕಳುಹಿಸುವುದು ಒಂದು ಜವಾಬ್ದಾರಿ. ಏನಾದರೂ ಕುಂಟುನೆಪ ಹೇಳಿ ಮಾಹಿತಿ ನೀಡದೆ ಬರಿಗೈಲಿ ಕಳುಹಿಸಿದರೆ, ಆ ಕಾರ್ಯಕರ್ತ ಮತ್ತೆ ಬರುತ್ತಾನೆ ಎನ್ನುವುದು ನೆನಪಿರಲಿ.

ಮಾಹಿತಿ ಹಕ್ಕು ಕಾರ್ಯಕರ್ತರೂ ಸ್ವಲ್ಪ ಯೋಚಿಸಬೇಕು. ತಾವು ಯಾವ ಮಾಹಿತಿ ಕೇಳಬೇಕು, ಯಾವುದನ್ನು ಕೇಳಬಾರದು ಎಂಬುದು ಅವರಿಗೆ ಅರಿವಿರಬೇಕು. ಅಧಿಕಾರಿಗಳನ್ನು ಬೆದರಿಸುವ ಉದ್ದೇಶವಿಟ್ಟುಕೊಂಡು ಅನವಶ್ಯಕ ಮಾಹಿತಿಯನ್ನು ಕೇಳುವ ಚಾಳಿಯನ್ನು ಕೈಬಿಡಬೇಕು. ಅಧಿಕಾರಿಯು ಅಕ್ರಮ ಎಸಗಿದ್ದ ಸುಳಿವು ಸಿಕ್ಕಿದರೆ, ಆ ಅಕ್ರಮವನ್ನು ಬಯಲಿಗೆಳೆಯಬಲ್ಲಂಥ ಮಾಹಿತಿಯನ್ನಷ್ಟೇ ಕೇಳಬೇಕು. ಬಡಪಾಯಿಯೊಬ್ಬ ತನ್ನ ಜೀವಮಾನದ ಉಳಿತಾಯವನ್ನೆಲ್ಲಾ ಸುರಿದು ಒಂದು ಸಣ್ಣ ಸೈಟಿನಲ್ಲಿ ಮನೆ ಕಟ್ಟಿಸುವಾಗ ಆತನಿಗೆ ಕಿರುಕುಳ ನೀಡಬಾರದು. ಆತ ಕಾನೂನನ್ನು ಅತಿಕ್ರಮಿಸಿದ್ದರೆ ಆತನಿಗೆ ತಿಳಿವಳಿಕೆ ನೀಡಿ ಸರಿದಾರಿಯಲ್ಲಿ ನಡೆಸಬೇಕೇ ಹೊರತು, ಕಾನೂನಿನ ಬಲದಿಂದ ಆತನಿಗೆ ಕಾಟ ಕೊಡಬಾರದು. 'ಜನರಿಂದ ಜನರಿಗಾಗಿ ಜನರ ಆಡಳಿತ' ಎಂಬುದು ಪ್ರಜಾಪ್ರಭುತ್ವದ ಅಡಿಪಾಯ. ಆದರೆ ಜನರ ಹಣ ಹೇಗೆ ಬಳಕೆಯಾಗುತ್ತಿದೆ, ಅಧಿಕಾರಿಗಳು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದರ ಬಗ್ಗೆ ತಿಳಿಯುವ ಅವಕಾಶವೇ ಇಲ್ಲದಿದ್ದರೆ ಅಂಥ ಪ್ರಜಾಪ್ರಭುತ್ವವು ನಿರರ್ಥಕವೆನಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ಮಾಹಿತಿ ಹಕ್ಕು ಕಾಯಿದೆಯು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿದೆ ಎನ್ನುವಂತಿಲ್ಲ, ಆದರೆ ಅದಕ್ಕೆ ಒಂದು ಮಟ್ಟಿಗಿನ ಕಡಿವಾಣ ಹಾಕಿರುವುದಂತೂ ಹೌದು. ಅಷ್ಟರಮಟ್ಟಿಗೆ ಈ ಕಾಯಿದೆ ಯಶಸ್ವಿಯಾಗಿದೆ. ಆದರೆ, ಈ ಕಾಯಿದೆಯ ಬಲದಿಂದ ಆಗುವ ಸಣ್ಣ ಪುಟ್ಟ ಲೋಪಗಳನ್ನೇ ದೊಡ್ಡದಾಗಿ ಬಿಂಬಿಸಿ, ಕಾಯಿದೆಯನ್ನೇ ರದ್ದುಮಾಡಲು ಹೊರಟರೆ ಅದು ಖಂಡಿತವಾಗಿಯೂ ಸಮಾಜವಿರೋಧಿ ಕೆಲಸವೆನಿಸಿಕೊಳ್ಳುತ್ತದೆ.

(ಲೇಖಕರು ಸಾಮಾಜಿಕ ಹೋರಾಟಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:239

ಸಮಾಚಾರ ಸಣ್ಣದಲ್ಲ

ಹಕ್ಕಿ ಡಿಕ್ಕಿ: ಇಂಡಿಗೊ ವಿಮಾನ ವಾಪಸ್

ನಾಗುರ: ಹಕ್ಕಿ ಡಿಕ್ಕಿಯಾದ ಪರಿಣಾಮ ಕೋಲ್ಕತ್ತಗೆ ಹೊರಟಿದ್ದ ಇಂಡಿಗೊ ವಿಮಾನ ನಾಗ್ಪುರ ವಿಮಾನ ನಿಲ್ದಾಣಕ್ಕೆ ವಾಪಸಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನದಲ್ಲಿ 160-165 ಪ್ರಯಾಣಿಕರಿದ್ದರು. ಅವರ ಸುರಕ್ಷತೆಗಾಗಿ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದೇವೆ, ಜತೆಗೆ ವಿಮಾನ ಹಾರಾಟವನ್ನು ರದ್ದುಗೊಳಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 6ಇ-812 ಇಂಡಿಗೊ ವಿಮಾನ ಮಂಗಳವಾರ ಬೆಳಗ್ಗೆ ಕೋಲ್ಕತ್ತಾಗೆ ಹೊರಟಿತ್ತು, ಟೇಕ್ ಆಫ್ ಆಗುತ್ತಿದ್ದಂತೆ ಹಕ್ಕಿಯೊಂದು ಡಿಕ್ಕಿ ಹೊಡೆದಿದೆ. ಮುಂಜಾಗೃತಾ ಕ್ರಮವಾಗಿ ಪೈಲಟ್ ವಿಮಾನವನ್ನು ನಾಗುರಕ್ಕೆ ವಾಪಸ್ ತಂದಿದ್ದು, ಸುರಕ್ಷಿತವಾಗಿ ಲ್ಯಾಂಡ್ ಮಾಡಿದ್ದಾರೆ. ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದು ಇಂಡಿಗೊ ವಕ್ತಾರರು ತಿಳಿಸಿದ್ದಾರೆ.

ಬಿಆರ್‌ಎಸ್ ಪಕ್ಷದಿಂದ ಕವಿತಾ ಅಮಾನತು

ಹೈದರಾಬಾದ್: ಪಕ್ಷ ವಿರೋಧಿ ಚಟುವಟಿಕೆಗಳಿಗಳಲ್ಲಿ ಭಾಗಿಯಾಗಿದ್ದಕ್ಕಾಗಿ ಬಿಆರ್‌ಎಸ್ ಮಂಗಳವಾರ ತನ್ನ ಎಂಎಲ್‌ಸಿ ಕೆ. ಕವಿತಾ ಅವರನ್ನು

ಪಕ್ಷದಿಂದ ಅಮಾನತುಗೊಳಿಸಿದೆ. ಕವಿತಾ ಅವರ ತಂದೆ ಮತ್ತು ಬಿಆರ್‌ಎಸ್ ಅಧ್ಯಕ್ಷ ಕೆ. ಚಂದ್ರಶೇಖರ್ ರಾವ್ ಅವರು ತಕ್ಷಣದಿಂದ ಜಾರಿಗೆ ಬರುವಂತೆ ಕವಿತಾ ಅವರನ್ನು ಅಮಾನತುಗೊಳಿಸಲು ನಿರ್ಧರಿಸಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಟಿ ರವೀಂದರ್ ರಾವ್ ಮತ್ತು ಮತ್ತೋರ್ವ ಪ್ರಧಾನ ಕಾರ್ಯದರ್ಶಿ ಮಾಧ್ಯಮಗಳಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕವಿತಾ ಅವರ ನಡವಳಿಕೆ ಮತ್ತು ಪಕ್ಷ ವಿರೋಧಿ ಚಟುವಟಿಕೆಗಳು ಬಿಆರ್‌ಎಸ್‌ಗೆ ಹಾನಿಯನ್ನುಂಟುಮಾಡುತ್ತಿದ್ದು, ಪಕ್ಷದ ನಾಯಕತ್ವವು ಇದನ್ನು ಗಂಭೀರವಾಗಿ ಪರಿಗಣಿಸಿದೆ ಎಂದು ಅವರು ಹೇಳಿದ್ದಾರೆ.

ಮಣಿಪುರ ಭೇಟಿ: ಮೋದಿಗೆ ಪ್ರಶ್ನೆ

ದೆಹಲಿ: ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 13ರಂದು ಭೇಟಿ ನೀಡುವ ಸಾಧ್ಯತೆಯ

ವರದಿ ಬರುತ್ತಿರುವ ಹಿನ್ನೆಲೆಯಲ್ಲ ಕಾಂಗ್ರೆಸ್ ಪಕ್ಷವು ಪ್ರಧಾನಿ ಮೋದಿ ವಿರುದ್ಧ ಕಿಡಿಕಾರಿದ್ದು, ಮಣಿಪುರಕ್ಕೆ ಭೇಟಿ ನೀಡಲು ಇದೀಗ ಧೈರ್ಯ ಬಂದಿದೆಯೇ? ಎಂದು ವ್ಯಂಗ್ಯವಾಡಿದೆ. ಕಳೆದ ಎರಡು ವರ್ಷ ಗಳಿಂದ ವಿದೇಶ ಸೇರಿದಂತೆ ಅಸ್ಸಾಂ, ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಲು ಸಾಧ್ಯವಾಗುವ ಮೋದಿಗೆ ಮಣಿಪುರಕ್ಕೆ ಭೇಟಿ ನೀಡಲು ಸಾಧ್ಯವಾಗಿರಲಿಲ್ಲವೇ? ಹಿಂಸಾಚಾರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲು ಸಮಯ ಅಥವಾ ಒಲವು ಹೊಂದಿರಲಿಲ್ಲವೇ? ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಎಕ್ಸ್‌ನಲ್ಲಿ ಟೀಕಿಸಿದ್ದಾರೆ.

ಕರುಣೇಶ್ ಬಜಾಜ್ ಎಬಿಸಿ ಅಧ್ಯಕ್ಷ

ದೆಹಲಿ: ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಷನ್ (ಎಬಿಸಿ) ಸಂಸ್ಥೆಯ 2025-26ನೇ ಸಾಲಿನ ಅಧ್ಯಕ್ಷರಾಗಿ ಐಟಿಸಿ ಲಿಮಿಟೆಡ್‌ನ ಮಾರುಕಟ್ಟೆ ಮತ್ತು ರಫ್ತು

ವಿಭಾಗದ ಉಪಾಧ್ಯಕ್ಷರಾಗಿರುವ ಕರುಣೇಶ್ ಬಜಾಜ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 25ಕ್ಕಿಂತಲೂ ಅಧಿಕ ವರ್ಷಗಳಿಂದ ಐಟಿಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರುಣೇಶ್ ಅವರು ಮಾರುಕಟ್ಟೆ ವಿಭಾಗದ ಪ್ರಧಾನ ವ್ಯವ ಸ್ಥಾಪಕ, ವಿವಿಧ ವಿಭಾಗಗಳ ಮುಖ್ಯಸ್ಥರು ಸೇರಿ ದಂತೆ ಹಲವು ಹಿರಿಯ ಹುದ್ದೆಗಳನ್ನು ನಿರ್ವಹಿ ಸಿದ್ದಾರೆ. ಅದಕ್ಕೂ ಮೊದಲು ಭಾರತಿ ರಿಟೇಲ್ ಲಿಮಿಟೆಡ್‌ನ ಮುಖ್ಯಸ್ಥರಾಗಿಯೂ ಕಾರ್ಯನಿರ್ವ ಹಿಸಿದ್ದರು. ಬೆನೆಟ್, ಕೋಲ್‌ಮನ್ ಆ್ಯಂಡ್ ಕಂಪನಿ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಮುದ್ರಣ ವಿಭಾಗ) ಮೋಹಿತ್ ಜೈನ್ ಅವರು ಉಪಾಧ್ಯಕ್ಷರಾಗಿ, ಆದಿಲ್ ಕಾಸದ್ ಅವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ವ್ಯಾಪಾರಿಗಳ ಹೊರೆ ತಗ್ಗಲಿದೆ: ನಿರ್ಮಲಾ

ಚೆನ್ನೈ: ಮುಂದಿನ ತಲೆಮಾರಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು ಆರ್ಥಿಕತೆಯನ್ನು ಮುಕ್ತ ಮತ್ತು ಪಾರದರ್ಶಕವಾಗಿಸುತ್ತದೆ.

ಮುಖ್ಯವಾಗಿ ಸಣ್ಣ ವ್ಯಾಪಾರಿಗಳ ಮೇಲಿನ ಹೊರೆಯನ್ನು ತಗ್ಗಿಸುತ್ತದೆ ಎಂದು ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರು ಜಿಎಸ್‌ಟಿ ಮಂಡಳಿ ಸಭೆಯ ಮುನ್ನಾದಿನವಾದ ಮಂಗಳವಾರ ಹೇಳಿದರು. ಕುಂಭಕೋಣಂನ ಸಿಟಿ ಯೂನಿಯನ್ ಬ್ಯಾಂಕ್‌ನ 120ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 2047ರ ವಿಕಸಿತ ಭಾರತದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಬ್ಯಾಂಕ್‌ಗಳು ಸಾಲ ಸೌಕರ್ಯ ವಿಸ್ತರಣೆಯಷ್ಟೇ ಅಲ್ಲದೆ, ಮೂಲ ಸೌಕರ್ಯ ಅಭಿವೃದ್ಧಿಗೂ ಆದ್ಯತೆ ನೀಡಬೇಕು. ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಹಣಕಾಸಿನ ಖಾತರಿ ನೀಡಬೇಕು, ಔಪಚಾರಿಕ ಬ್ಯಾಂಕಿಂಗ್ ವ್ಯವಸ್ಥೆಗೆ ಒಳಪಡದವರನ್ನು ತನ್ನ ವ್ಯಾಪ್ತಿಗೆ ತರಬೇಕು ಎಂದು ಸಲಹೆ ನೀಡಿದರು.

ಸೆಮಿಕಾನ್ ಇಂಡಿಯಾ 3ನೇ ಆವೃತ್ತಿ ಮೋದಿಯಿಂದ ಉದ್ಘಾಟನೆ | ಪ್ರಧಾನಿಗೆ ಚಿಪ್ ಹಸ್ತಾಂತರ

ಸೆಮಿಕಂಡಕ್ಟರ್: ಭಾರತ ದಾಪುಗಾಲು

ದೆಹಲಿ: ಜಗತ್ತಿನ ಒಂದು ಟ್ರಿಲಿಯನ್ ಡಾಲರ್ ಮೌಲ್ಯದ ಸೆಮಿಕಂಡಕ್ಟರ್ ಉದ್ಯಮದಲ್ಲಿ ಭಾರತವು ಗಮನಾರ್ಹ ಪಾಲನ್ನು ಹೊಂದಲಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

'ಸೆಮಿಕಾನ್ ಇಂಡಿಯಾ-2025ರ ಮೂರನೇ ಆವೃತ್ತಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಹದಿನೆಂಟು ಶತಕೋಟಿ ಡಾಲರ್‌ಗಳಿಗೂ ಹೆಚ್ಚು ಹೂಡಿಕೆಯನ್ನು ಒಳಗೊಂಡ ಒಟ್ಟು ಹತ್ತು ಸೆಮಿಕಂಡಕ್ಟರ್ ಯೋಜನೆಗಳು, ಅಂದರೆ 1.5 ಲಕ್ಷ ಕೋಟಿ ರು.ಗಿಂತಲೂ ಅಧಿಕ ಕಾರ್ಯರೂಪ ಹಂತದಲ್ಲಿವೆ ಎಂದರು. ಜಾಗತಿಕ ಸೆಮಿಕಂಡಕ್ಟರ್ ಮಾರುಕಟ್ಟೆ ಈಗಾಗಲೇ 600 ಬಿಲಿಯನ್ ಡಾಲರ್ ತಲುಪಿದೆ. ಮುಂಬರುವ ವರ್ಷ ಗಳಲ್ಲಿ, ಇದು 1 ಟ್ರಿಲಿಯನ್ ಡಾಲರ್‌ಗೂ ಅಧಿಕವಾಗುವ ನಿರೀಕ್ಷೆಯಿದೆ. ಭಾರತ ಸೆಮಿಕಂಡಕ್ಟರ್ ವಲಯದಲ್ಲಿ ಮುನ್ನಡೆಯುತ್ತಿರುವುದರಿಂದ ಗಮನಾರ್ಹ ಪಾಲನ್ನು ಹೊಂದುತ್ತದೆ ಎಂದು ಮೋದಿ ಹೇಳಿದರು. ಇಸ್ರೋದ ಸೆಮಿಕಂಡಕ್ಟರ್ ಪ್ರಯೋಗಾಲಯವು ಅಭಿವೃದ್ಧಿಪಡಿಸಿದ ವಿಕ್ರಮ್ ಚಿಪ್, ಭಾರತದ ಮೊದಲ ಸಂಪೂರ್ಣ ಮೇಕ್-ಇನ್-ಇಂಡಿಯಾ 32-ಬಿಟ್ ಮೈಕ್ರೋಪ್ರೊಸೆಸರ್ ಆಗಿದ್ದು, ಉಡಾವಣಾ ವಾಹನಗಳ ತೀವ್ರ ಪರಿಸ್ಥಿತಿಗಳಲ್ಲಿ ವಿಶ್ವಾಸಾರ್ಹವಾಗಿ ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ.

ಭಾರತದ ಚಿಪ್ ಜಗತ್ತನ್ನೇ ಬದಲಿಸಲಿದೆ: ಚಿಪ್ ಅನ್ನು ಡಿಜಿಟಲ್ ವಜ್ರಕ್ಕೆ ಹೋಲಿಸಿದ ಪ್ರಧಾನಿ ಮೋದಿ, 21ನೇ ಶತಮಾನದ ಶಕ್ತಿಯು ಈಗ ಸಣ್ಣ ಚಿಪ್‌ನಲ್ಲಿ ಕೇಂದ್ರೀಕೃತವಾಗಿದೆ ಎಂದು ಒತ್ತಿ ಹೇಳಿದರು. ತೈಲ ಕಪ್ಪು ಚಿನ್ನವಾಗಿತ್ತು, ಈಗ ಚಿಪ್ ಡಿಜಿಟಲ್ ವಜ್ರಗಳಾಗಿವೆ ಪ್ಲಗ್ ಆ್ಯಂಡ್ ಪ್ಲೇ ಮೂಲಸೌಕರ್ಯ ಮಾದರಿಯಡಿಯಲ್ಲಿ ದೇಶಾದ್ಯಂತ ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಪ್ರಧಾನಿ ಒತ್ತಿ ಹೇಳಿದರು.

ಭಾರತದ ಮೇಲೆ ಅಮೆರಿಕ ವಿಧಿಸಿರುವ ವ್ಯಾಪಕ ಸುಂಕದಿಂದ ಆರ್ಥಿಕ ಸ್ವಾರ್ಥ ಸೃಷ್ಟಿಸಿದ ಸವಾಲುಗಳ ಹೊರತಾಗಿಯೂ, ಭಾರತದ ಜಿಡಿಪಿ ಶೇಕಡಾ 7.8ರಷ್ಟು ಬೆಳವಣಿಗೆಯನ್ನು ಸಾಧಿಸಿದೆ.
-ನರೇಂದ್ರ ಮೋದಿ, ಪ್ರಧಾನಿ

ಭೂಮಿ, ವಿದ್ಯುತ್ ಸರಬರಾಜು, ಬಂದರು ಮತ್ತು ವಿಮಾನ ನಿಲ್ದಾಣ ಸಂಪರ್ಕ ಮತ್ತು ಕೌಶಲ್ಯ ಪೂರ್ಣ ಕಾರ್ಯಪಡೆಗೆ ಪ್ರವೇಶದಂತಹ ಸೌಲಭ್ಯಗಳನ್ನು ಇದು ನೀಡುತ್ತದೆ. ಭಾರತವು ಪೂರ್ಣ ಪ್ರಮಾಣದ ಸೆಮಿಕಂಡಕ್ಟರ್ ರಾಷ್ಟ್ರವಾಗುವತ್ತ ಸಾಗುತ್ತಿದೆ ಎಂದು ದೃಢವಾಗಿ ಹೇಳಿದ ಮೋದಿ, ಭಾರತದ ಚಿಕ್ಕ ಚಿಪ್ ವಿಶ್ವದ ಅತಿದೊಡ್ಡ ಬದಲಾವಣೆಗೆ ಚಾಲನೆ ನೀಡುವ ದಿನ ದೂರವಿಲ್ಲ ಎಂದು ಪುನರುಚ್ಚರಿಸಿದರು. ಮೈಕ್ರಾನ್ ಮತ್ತು ಟಾಟಾದಿಂದ ಪರೀಕ್ಷಾ ಚಿಪ್‌ಗಳು ಈಗಾಗಲೇ ಉತ್ಪಾದನೆಯಲ್ಲಿವೆ. ಈ ವರ್ಷ ವಾಣಿಜ್ಯ ಚಿಪ್ ಉತ್ಪಾದನೆ ಪ್ರಾರಂಭವಾಗಲಿದೆ, ಇದು ಸೆಮಿಕಂಡಕ್ಟರ್ ವಲಯದಲ್ಲಿ ಭಾರತ ಸಾಧಿಸುತ್ತಿರುವ ತ್ವರಿತ ಪ್ರಗತಿಯನ್ನು ಒತ್ತಿಹೇಳುತ್ತದೆ. ಭಾರತವು ದೇಶವನ್ನು ಸ್ವಾವಲಂಬಿ ಮತ್ತು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸುವ ದೃಢವಾದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ರಚಿಸುತ್ತಿದೆ ಎಂದು ಮೋದಿ ಉಲ್ಲೇಖಿಸಿದರು. ನೋಯ್ಡಾ ಮತ್ತು ಬೆಂಗಳೂರಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ವಿನ್ಯಾಸ ಕೇಂದ್ರಗಳು ಶತಕೋಟಿ ಟ್ರಾನ್ಸಿಸ್ಟರ್‌ಗಳನ್ನು ಸಂಗ್ರಹಿಸುವ ಸಾಮರ್ಥ್ಯವಿರುವ ವಿಶ್ವದ ಕೆಲವು ಅತ್ಯಾಧುನಿಕ ಚಿಪ್‌ಗಳ ಮೇಲೆ ಕಾರ್ಯನಿರ್ವಹಿಸುತ್ತಿವೆ ಎಂದೂ ಪ್ರಧಾನಿ ಹೇಳಿದರು.

ಸೆಮಿಕಂಡಕ್ಟರ್ ಚಿಪ್ ಹಸ್ತಾಂತರ

ಕಾರ್ಯಕ್ರಮದಲ್ಲಿ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನ್ ವೈಷ್ಣವ್ ಅವರು ನಾಲ್ಕು ಅನುಮೋದಿತ ಯೋಜನೆಗಳಿಂದ ಮೊದಲ ಮೇಡ್ ಇನ್ ಇಂಡಿಯಾ ಪರೀಕ್ಷಾ ಚಿಪ್‌ಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಸ್ತಾಂತರಿ ಸಿದರು. ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ನಮ್ಮ ಪ್ರಯಾಣ ತಡವಾಗಿ ಪ್ರಾರಂಭವಾಯಿತು, ಆದರೆ ಈಗ ನಮ್ಮನ್ನು ತಡೆಯಲು ಯಾವುದೂ ಸಾಧ್ಯವಿಲ್ಲ. ಸಿ.ಜಿ ಪವರ್‌ನ ಪೈಲಟ್ ಸ್ಥಾವರವು ನಾಲ್ಕೈದು ದಿನಗಳ ಹಿಂದೆ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು.

ಇದು ಇಸ್ರೇಲ್ ನರಮೇಧ ಎಂದ ಹಮಾಸ್

ಗಾಜಾದಲ್ಲಿ ದಾಳಿ: 31 ಸಾವು

ದೀರ್ ಅಲ್ ಬಲಾಹ್: ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಡೆಸಿದ ಹೊಸ ದಾಳಿಗೆ ಸೋಮವಾರ 31 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವಾರ ಗಾಜಾ ನಗರವನ್ನು ಯುದ್ಧ ವಲಯ ಎಂದು ಇಸ್ರೇಲ್ ಘೋಷಿಸಿದಾಗಿನಿಂದ ನಗರದ ಮೇಲೆ ವಾಯು ದಾಳಿಗಳು ಮತ್ತು ಫಿರಂಗಿ ಶೆಲ್ ದಾಳಿಗಳು ಮುಂದುವರೆದಿವೆ. ನಗರದ ಹೊರವಲಯ ಮತ್ತು ಜಬಲಿಯಾ ನಿರಾಶ್ರಿತ ತಾಣದಲ್ಲಿ ಕಟ್ಟಡಗಳ ಮೇಲೆ ರೋಬೋಟ್‌ಗಳು ಧ್ವಂಸ ಮಾಡಿವೆ. ಗಾಜಾ ನಗರದಲ್ಲಿ ಮತ್ತೊಂದು ಘೋರ ರಾತ್ರಿ ಎಂದು ನಗರದ ವಾಯುವ್ಯ ಭಾಗದಲ್ಲಿ ಆಶ್ರಯ ಪಡೆದಿರುವ ಜಬಾಲಿಯಾ ಮೂಲದ ವೈದ್ಯ ಸಯೀದ್ ಅಬು ಇಲ್ಯೆಶ್ ತಿಳಿಸಿದ್ದಾರೆ.

ಸೋಮವಾರದ ಇಸ್ರೇಲ್ ದಾಳಿಯಲ್ಲಿ 31 ಜನ ಸಾವನ್ನಪ್ಪಿದ್ದಾರೆ ಎಂದು ಗಾಜಾ ಆಸ್ಪತ್ರೆ ತಿಳಿಸಿದೆ. ಸಾವನ್ನಪ್ಪಿದವರಲ್ಲಿ

ಅರ್ಧಕ್ಕಿಂತ ಹೆಚ್ಚಿನ ಮಂದಿ ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ. ಗಾಜಾ ನಗರದಲ್ಲಿ 13 ಜನ ಸಾವನ್ನಪ್ಪಿದ್ದಾರೆ. ಕೇವಲ ಉಗ್ರರು ಮತ್ತು ಹಮಾಸ್ ಮೇಲೆ ದಾಳಿ ನಡೆಸುತ್ತಿರುವುದಾಗಿ ಹೇಳಿರುವ ಇಸ್ರೇಲ್, ನಾಗರಿಕರ ಸಾವಿಗೆ ಹಮಾಸ್ ಕಾರಣ ಎಂದು ಆರೋಪಿಸಿದೆ. ಉಗ್ರರ ಗುಂಪು ಗೆರಿಲ್ಲಾ ಸಂಘಟನೆಯನ್ನು ಕಡಿಮೆ ಮಾಡಿ, ಜನರ ನಡುವೆ ಕಾರ್ಯಾಚರಣೆ ನಡೆಸಿದೆ ಎಂದು ಇಸ್ರೇಲ್ ತಿಳಿಸಿದೆ.

ಯುದ್ಧ, ಮತ್ತೊಂದೆಡೆ ಕಾಡುತ್ತಿರುವ ಹಸಿವು

ಯುದ್ಧದಿಂದ ಹಲವು ಬಾರಿ ಗಾಜಾ ನಿವಾಸಿಗಳು ಸ್ಥಳಾಂತರಗೊಳ್ಳುತ್ತಿದ್ದು, ಇದೀಗ ಅವರು ಹಸಿವು ಮತ್ತು ಯುದ್ಧ ಹೀಗೆ ಎರಡೆರಡು ಬೆದರಿಕೆ ಎದುರಿಸುತ್ತಿದ್ದಾರೆ. ಇಸ್ರೇಲ್‌ನ ದಿಗ್ಬಂಧನದಿಂದ ಉಂಟಾದ ಬಿಕ್ಕಟ್ಟಿನಿಂದ ಪದೇ ಪದೇ ಜನರು ಸ್ಥಳಾಂತಗೊಳ್ಳುತ್ತಿದ್ದು, ಆಹಾರ ಉತ್ಪಾದನೆ ಕೂಡಾ ಕುಸಿತ ಕಂಡಿದೆ. ಇದು ಅಲ್ಲಿನ ಜನರನ್ನು ಕಂಗೆಡಿಸುವಂತೆ ಮಾಡಿದೆ. ಇಲ್ಲಿಯವರೆಗೆ ಯುದ್ಧಲ್ಲಿ 63,557 ಪ್ಯಾಲೆಸ್ತೇನಿಯನ್ನರು ಸಾವನ್ನಪ್ಪಿದ್ದು, 1,60,660 ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವರು ತಿಳಿಸಿದ್ದಾರೆ. ಸಾವನ್ನಪ್ಪಿದವರಲ್ಲಿ ಮಹಿಳೆಯರು ಮತ್ತು ಮಕ್ಕಳು ಸತ್ತವರ ಸಂಖ್ಯೆ ಅರ್ಧದಷ್ಟಿದೆ.

ಇಬ್ಬರು ಸರ್ವಾಧಿಕಾರಿಗಳೊಂದಿಗೆ ಮೋದಿ ಮೈತ್ರಿ: ನವರೋ ಕಿಡಿ

ಮೋದಿ ವಿರುದ್ಧ ಅಮೆರಿಕ ವಾಗ್ದಾಳಿ

ವಾಷಿಂಗ್ಟನ್: ಚೀನಾದಲ್ಲಿ ನಡೆದ ಶಾಂಘೈ ಸಹಕಾರ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವದ ಇಬ್ಬರು ದೊಡ್ಡ ಸರ್ವಾಧಿಕಾರಿಗಳೊಂದಿಗೆ ವೇದಿಕೆಯನ್ನು ಹಂಚಿಕೊಂಡಿರುವುದು ನಾಚಿಕೆಗೇಡಿನ ಸಂಗತಿ ಎಂದು ಅಮೆರಿಕ ಟೀಕಿಸಿದೆ.

ಹಲವು ಅಸಂಬದ್ಧ ಹೇಳಿಕೆ ನೀಡಿ ಭಾರತದಲ್ಲಿ ಚರ್ಚೆಗಳನ್ನು ಹುಟ್ಟುಹಾಕುವಂತೆ ಮಾಡಿದ್ದ ಅಮೆರಿಕ ಅಧ್ಯಕ್ಷ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರೋ, ಇದೀಗ ಶಾಂಘೈ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವಿನ ಐಕ್ಯತೆಯ ಪ್ರದರ್ಶನವನ್ನು ಸಮಸ್ಯಾತ್ಮಕ ಎಂದು ಕರೆದಿದ್ದಾರೆ. ಮಾಧ್ಯಮಗಳ ಪ್ರಶ್ನೆಗೆ ಉತ್ತರ ನೀಡಿರುವ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರೋ, ಮೋದಿ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಡುವಿನ ಒಗ್ಗಟ್ಟಿನ ಪ್ರದರ್ಶನ ಸಮಸ್ಯಾತ್ಮಕ ಎಂದು ಬಣ್ಣಿಸಿದ್ದಾರೆ. ವಿಶ್ವದ ಇಬ್ಬರು ದೊಡ್ಡ ಸರ್ವಾಧಿಕಾರಿಗಳಾದ ಪುಟಿನ್ ಮತ್ತು ಕ್ಸಿ ಜಿನ್‌ಪಿಂಗ್ ಅವರೊಂದಿಗೆ ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ನಾಯಕ ಮೋದಿಯವರು

ಕೈ ಜೋಡಿಸುತ್ತಿರುವುದನ್ನು ನೋಡುವುದು ನಾಚಿಕೆಗೇಡಿನ ಸಂಗತಿ, ಇದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಹೇಳಿದ್ದಾರೆ.

ಭಾರತವು ದಶಕಗಳಿಂದ ಚೀನಾದೊಂದಿಗೆ ಶೀತಲ ಸಮರ ನಡೆಸುತ್ತಿದೆ. ಹೀಗಾಗಿ ಮೋದಿ ಯಾವ ರೀತಿ ಯೋಜನೆ ಮಾಡುತ್ತಿದ್ದಾರೆಂಬುದುರ ಕುರಿತು ಖಚಿತತೆಯಿಲ್ಲ. ಆದರೆ ಮೋದಿಯವರು ಈ ವಿಷಯದಲ್ಲಿ ರಷ್ಯಾಗೆ ಬೆಂಬಲ ನೀಡುವ ಬದಲು ಅಮೆರಿಕ, ಯುರೋಪ್ ಹಾಗೂ ಉಕ್ರೇನ್‌ನ ಜೊತೆಗಿದ್ದು, ರಷ್ಯಾ ಬಳಿ ತೈಲ ಖರೀದಿಯನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

3 ಸಾವಿರ ಜನರಿಗೆ ಗಾಯ | ಮುಂದುವರಿದ ರಕ್ಷಣಾ ಕಾರ್ಯ

ಅಫ್ಘನ್ ಭೂಕಂಪ: 1400ರ ಗಡಿ ದಾಟಿದ ಸಾವಿನ ಸಂಖ್ಯೆ

ಕಾಬೂಲ್: ಹಿಂದು ಕುಶ್ ಪರ್ವತ ಶ್ರೇಣಿಗಳು, ಕುನಾರ್ ಕಣಿವೆಯ ಸೊಬಗಿನ ಪೂರ್ವ ಅಫ್ಘಾನಿಸ್ತಾನವು ಭಾನುವಾರ ತಡರಾತ್ರಿ ಸಂಭವಿಸಿದ ಭೀಕರ ಭೂಕಂಪಕ್ಕೆ ತತ್ತರಿಸಿದೆ. ಭೂಕಂಪದಲ್ಲಿ ಜೀವ ಕಳೆದುಕೊಂಡವರ ಸಂಖ್ಯೆ 1,400ಕ್ಕೂ ಹೆಚ್ಚಾಗಿದ್ದು, 3 ಸಾವಿರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಅಪಾರ ಸಂಖ್ಯೆಯ ಜನರು ನಿರಾಶ್ರಿತರಾಗಿದ್ದಾರೆ.

ರಾತ್ರಿ ಜನರು ನಿದ್ರಿಸುತ್ತಿದ್ದ ವೇಳೆ ಭೂಕಂಪ ಸಂಭವಿಸಿದ್ದರಿಂದ ಅಪಾಯದ ಮುನ್ಸೂಚನೆ ತಿಳಿಯದಾಯಿತು. ಮನೆಗಳಿಂದ ಹೊರಗೆ ಓಡಿಬಂದು ಜೀವ ಉಳಿಸಿಕೊಳ್ಳಲು ಹೆಚ್ಚಿನ ಜನರಿಗೆ ಆಗಲಿಲ್ಲ. ಹೀಗಾಗಿ ದೊಡ್ಡ ಸಂಖ್ಯೆಯಲ್ಲಿ ಸಾವು ನೋವು ಸಂಭವಿಸಿದೆ. ಸೋಮವಾರ ಬೆಳಿಗ್ಗೆಯಿಂದ ರಕ್ಷಣಾ ಕಾರ್ಯಾಚರಣೆ ಮುಂದುವರಿಯುತ್ತಿದ್ದು, ಸಾವಿನ ಸಂಖ್ಯೆ ಇನ್ನೂ ಏರಿಕೆಯಾಗಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಮುಂದುವರಿದ ರಕ್ಷಣಾ ಕಾರ್ಯ: ಗಾಯಗೊಂಡವರನ್ನು ರಕ್ಷಿಸಿ ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ. ಕಟ್ಟಡಗಳ ಅವಶೇಷಗಳಡಿ ಸಿಲುಕಿರುವ ತಮ್ಮ ಪ್ರೀತಿ ಪಾತ್ರರನ್ನು ಹುಡುಕುತ್ತಾ ಜನರು ಗೋಳಾಡುತ್ತಿರುವ ದೃಶ್ಯ ಮನ ಕಲಕುವಂತಿತ್ತು. ಕುನಾರ್ಗ್ ಪ್ರಾಂತ್ಯದಲ್ಲಿ ಹೆಚ್ಚಿನ ಮನೆಗಳನ್ನು ಮಣ್ಣಿನ ಇಟ್ಟಿಗೆ ಮತ್ತು ಮರ ಬಳಸಿ ನಿರ್ಮಿಸಲಾಗಿದೆ. ಕಳಪೆ ಗುಣಮಟ್ಟದ ಈ ಮನೆಗಳು ಭೂಕಂಪದಲ್ಲಿ ನಾಮಾವಶೇಷ ಆಗಿವೆ. ಕುನಾರ್ ಪ್ರಾಂತ್ಯದ ನುರ್ಗಲ್ ಜಿಲ್ಲೆಯಲ್ಲಿ ಗರಿಷ್ಠ ಹಾನಿ ಸಂಭವಿಸಿದೆ.

ಭೂಕಂಪದಲ್ಲಿ ಮೃತಪಟ್ಟವರಲ್ಲಿ ಹೆಚ್ಚಿನವರು ಕುನಾರ್ ಪ್ರಾಂತ್ಯಕ್ಕೆ ಸೇರಿದವರು. ಹಾಗಾಗಿ ಉಳಿದೆಡೆಗಿಂತ ಈ ಭಾಗದಲ್ಲಿ ಹೆಚ್ಚಿನ ಜೀವ ಹಾನಿ ಸಂಭವಿಸಿದೆ.
-ಜಬೀಬುಲ್ಲಾ ಮುಜಾಹಿದ್, ತಾಲಿಬಾನ್ ಸರಕಾರದ ವಕ್ತಾರ

ಬಿರುಗಾಳಿಯಂತೆ ಶಬ್ದ: 'ದೊಡ್ಡ ಬಿರುಗಾಳಿ ಸಮೀಪಿಸುತ್ತಿರುವಂತೆ ಶಬ್ದ ಕೇಳಿಬಂತು. ತಕ್ಷಣವೇ ನಿದ್ರೆಯಲ್ಲಿದ್ದ ಮಕ್ಕಳನ್ನು ಎತ್ತಿಕೊಂಡು ಮನೆಯಿಂದ ಹೊರಗೋಡಿದೆ. ತಿರುಗಿ ನೋಡುವಷ್ಟರಲ್ಲಿ ನನ್ನ ಮನೆ, ನನ್ನ ಕಣ್ಣೆದುರೇ ನೆಲಸಮಗೊಂಡಿತು. ಮನೆಯಲ್ಲಿದ್ದವರು ಮಣ್ಣಿನಡಿ ಸಿಲುಕಿದರು' ಎಂದು ಭೂಕಂಪದಲ್ಲಿ ಜೀವ ಉಳಿಸಿಕೊಮಡ ನುರ್ಗಲ್‌ನ ಮಜಾದರ್ ಪ್ರದೇಶದ ಸಿದ್ದಿಕ್ ಹೇಳಿದರು.

2 ಮತದಾರ ಗುರುತಿನ ಚೀಟಿ ಹೊಂದಿರುವ ಆರೋಪ

ಖೇರಾಗೆ ಚುನಾವಣಾ ಆಯೋಗದಿಂದ ಸಮನ್ಸ್

ದೆಹಲಿ: ಎರಡು ಮತದಾರ ಗುರುತಿನ ಚೀಟಿಗಳನ್ನು ಹೊಂದಿರುವ ಆರೋಪದ ಮೇಲೆ ಕಾಂಗ್ರೆಸ್ ನಾಯಕ ಪವನ್ ಖೇರಾ ಅವರಿಗೆ ಭಾರತದ ಚುನಾವಣಾ ಆಯೋಗವು ಸಮನ್ಸ್ ಜಾರಿ ಮಾಡಿದೆ. ಖೇರಾ ಅವ

ರನ್ನು ಸೆಪ್ಟೆಂಬರ್ 8ರಂದು ಬೆಳಗ್ಗ 11 ಗಂಟೆಗೆ ಆಯೋಗದ ಮುಂದೆ ಹಾಜರಾಗುವಂತೆ ಸೂಚಿಸಲಾಗಿದೆ.

ಬಿಜೆಪಿ ನಾಯಕ ಅಮಿತ್ ಮಾಳವಿಯಾ ದೆಹಲಿಯ ಎರಡು ಪ್ರತ್ಯೇಕ ಕ್ಷೇತ್ರಗಳಲ್ಲಿ ಖೇರಾ ಎರಡು ಸಕ್ರಿಯ ಮತದಾರ ಗುರುತಿನ ಚೀಟಿಗಳನ್ನು ಹೊಂದಿದ್ದಾರೆ ಎಂದು ಆರೋಪಿಸಿದ ಕೆಲವೇ ಗಂಟೆಗಳಲ್ಲಿ ಈ ಸಮನ್ಸ್ ಜಾರಿಯಾಗಿದೆ.

ದೆಹಲಿ ಜಿಲ್ಲಾ ಚುನಾವಣಾ ಕಚೇರಿಯ ಸೂಚನೆಯಲ್ಲಿ, 'ನೀವು ಒಂದಕ್ಕಿಂತ ಹೆಚ್ಚಿನ ಕ್ಷೇತ್ರಗಳ ಚುನಾವಣಾ ಪಟ್ಟಿಯಲ್ಲಿ ನಿಮ್ಮ ಹೆಸರನ್ನು ನೊಂದಾಯಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಒಂದಕ್ಕಿಂತ ಹೆಚ್ಚಿನ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯಲ್ಲಿ ಇರುವುದು ಶಿಕ್ಷಾರ್ಹ ಅಪರಾಧ. ಈ ಕಾಯ್ದೆಯಡಿ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದೆಂದು ಕಾರಣ ನೀಡಬೇಕು. ನಿಮ್ಮ ಉತ್ತರವು ಸೆಪ್ಟೆಂಬರ್ 8ರ ಬೆಳಗ್ಗ 11 ಗಂಟೆಯೊಳಗೆ ಈ ಕಚೇರಿಗೆ ತಲುಪಬೇಕು' ಎಂದು ಸೂಚನೆಯಲ್ಲಿ ಹೇಳಲಾಗಿದೆ. ಈ ಆರೋಪಕ್ಕೆ ಪ್ರತಿಕ್ರಿಯಿಸಿರುವ ಖೇರಾ, 'ಇದು ಕಾಂಗ್ರೆಸ್ ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಬಗ್ಗೆ ಎತ್ತಿರುವ ಪ್ರಶ್ನೆಗಳ ಪರಿಣಾಮ' ಎಂದಿದ್ದಾರೆ. ದೆಹಲಿ ಕ್ಷೇತ್ರದಲ್ಲಿ ನನ್ನ ಹೆಸರಿನಲ್ಲಿ ಯಾರು ಮತ ಚಲಾಯಿಸುತ್ತಿದ್ದಾರೆ ಎಂಬುದರ ದೃಶ್ಯಾವಳಿಯನ್ನು ತೆಗೆಯಬೇಕು. ನನ್ನ ಹೆಸರನ್ನು ಪಟ್ಟಿಯಿಂದ ತೆಗೆಯಲು ಎಲ್ಲ ಕಾನೂನು ಕ್ರಮಗಳನ್ನು ಅನುಸರಿಸಿದ್ದರೂ ಆಯೋಗ ಏಕೆ ಇನ್ನೂ ತೆಗೆದಿಲ್ಲ? ಎಂದು ಖೇರಾ ಪ್ರಶ್ನಿಸಿದ್ದಾರೆ.

ಬಿಟಿಎ ಒಪ್ಪಂದ ಮಾತುಕತೆ: ಸಚಿವ ಪೀಯೂಷ್ ಹೇಳಿಕೆ

ದೆಹಲಿ: ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ (ಬಿಟಿಎ) ಸಂಬಂಧಿಸಿದಂತೆ ಭಾರತವು ಅಮೆರಿ

ಕದೊಂದಿಗೆ ಮಾತುಕತೆ ನಡೆಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮಂಗಳವಾರ ಇಲ್ಲಿ ತಿಳಿಸಿದರು. 'ನಮ್ಮ ನಡುವೆ ಬಹಳಷ್ಟು ಮಾತುಕತೆ ನಡೆದಿದೆ. ಇನ್ನಷ್ಟು ಚರ್ಚೆ ನಡೆಯುತ್ತದೆನ್ನುವುದೂ ನಿಜ, ಆದರೂ ಅಮೆರಿಕದೊಂದಿಗೆ ಸಾಗುವ ಪ್ರಯತ್ನವನ್ನು ಮುಂದುವರಿಸಿದ್ದೇವೆ. ಈ ಕಾರಣಕ್ಕೇ ಬಿಟಿಎ ಕುರಿತ ಮಾತುಕತೆ ನಡೆಯಲಿದೆ' ಎಂದು ಸುಸ್ಥಿರತೆಯ ಕುರಿತಂತೆ ಇಂಡಸ್ಟ್ರಿ ಚೇಂಬರ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೇಳಿದರು.

ಓಣಂ ಸಂಭ್ರಮಾಚರಣೆ ವೇಳೆ ಕುಸಿದು ಬಿದ್ದು ವ್ಯಕ್ತಿ ಸಾವು

ತಿರುವನಂತಪುರ: ಕೇರಳ ವಿಧಾನಸಭೆ ಆಯೋಜಿಸಿದ್ದ ಓಣಂ ಆಚರಣೆಯ ಸಂದರ್ಭದಲ್ಲಿ ವೇದಿಕೆಯಲ್ಲಿ ನೃತ್ಯ ಪ್ರದರ್ಶಿಸುತ್ತಿದ್ದಾಗ 45 ವರ್ಷದ ವ್ಯಕ್ತಿಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಮೃತ ವ್ಯಕ್ತಿಯನ್ನು ಜುನೈಸ್ ಎಂದು ಗುರುತಿಸಲಾಗಿದ್ದು, ಈ ಹಿಂದೆ ಮಾಜಿ ಶಾಸಕ ಪಿವಿ ಅನ್ವರ್ ಅವರ ಆಪ್ತ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.

ಅವರನ್ನು ತಕ್ಷಣ ಜನರಲ್ ಆಸ್ಪತ್ರೆಗೆ ಸಾಗಿಸಲಾಯಿತು, ಆದರೆ ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು. ಕೇರಳದ ತಿರುವನಂತಪುರದಲ್ಲಿ ಈ ಘಟನೆ ನಡೆದಿದ್ದು, ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿರುವ ವಿಡಿಯೊದಲ್ಲಿ ಜುನೈಸ್ ಇತರರೊಂದಿಗೆ ವೇದಿಕೆಯಲ್ಲಿ ಪ್ರದರ್ಶನ ನೀಡುವ ದೃಶ್ಯಗಳಿವೆ. ಕೆಲವು ಕ್ಷಣಗಳ ನಂತರ, ವೇದಿಕೆಯಲ್ಲೇ ಕುಸಿದು ಬಿದ್ದಿದ್ದಾರೆ.

ಈ ಹಿಂದೆ ಆಗಸ್ಟ್‌ನಲ್ಲೂ ಇಂಥದ್ದೇ ಒಂದು ಘಟನೆ ನಡೆದಿತ್ತು. ಮಹಿಳೆಯೊಬ್ಬರು ವಿವಾಹ ಸಮಾರಂಭವೊಂದರ ವೇದಿಕೆಯಲ್ಲಿ ನೃತ್ಯ ಪ್ರದರ್ಶನ ಮಾಡುತ್ತಿದ್ದಾಗ ಕುಸಿದು ಬಿದ್ದಿದ್ದರು. ತಮಿಳುನಾಡಿನ ಮಮಲ್ಲಾಪು ರಮ್‌ನಲ್ಲಿ ಈ ಘಟನೆ ನಡೆದಿತ್ತು. ಜೀವಾ ಎಂದು ಗುರುತಿಲಾದ ಮಹಿಳೆಯು ನೃತ್ಯ ಮಾಡುತ್ತಿದ್ದಾಗ ಕುಸಿದುಬಿದ್ದಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತಾದರೂ ಅಷ್ಟರಾಲ್ಲಗಾಲೇ ಅವರು ಸಾವಿಗೀಡಾಗಿದ್ದರು.

ಫ್ಲೋರಿಡಾದಲ್ಲಿ ಮೂರು ದಿನ ನಡೆದಿದ್ದ ಸಮಾವೇಶ | ಕರ್ನಾಟಕದ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗಿ

ಅಮೆರಿಕದಲ್ಲಿ 8ನೇ ನಾವಿಕ ವಿಶ್ವ ಕನ್ನಡ ಸಮ್ಮೇಳನಕ್ಕೆ ಅದ್ದೂರಿ ತೆರೆ

ಬೆಂಕಿ ಬಸಣ್ಣ, ನ್ಯೂಯಾರ್ಕ್

ನ್ಯೂಯಾರ್ಕ್: ಇದೇ ಆಗಸ್ಟ್ 29, 30 ಮತ್ತು 31 ರಂದು ಎಂಟನೇ ನಾವಿಕ ವಿಶ್ವ ಕನ್ನಡ ಸಮ್ಮೇಳನವು ಅಮೇರಿಕಾದ ಫ್ಲೋರಿಡಾ ರಾಜ್ಯದ ಲೇಕ್‌ಲ್ಯಾಂಡ್‌ನ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಆರ್‌ಒಇ ಫಂಡಿಂಗ್ ಕನ್ವೆನ್ಷನ್ ಸೆಂಟರ್‌ನಲ್ಲಿ 'ಉಲ್ಲಾಸ- ಉತ್ಸಾಹ- ಉತ್ಸವ' ಎಂಬ ಟ್ಯಾಗ್‌ಲೈನ್‌ನೊಂದಿಗೆ ಅದ್ದೂರಿಯಿಂದ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿಯ ಸಚಿವರಾದ ಶಿವರಾಜ್ ತಂಗಡಗಿ, ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಶಾಸಕರಾದ ಸಮೃದ್ದಿ ಮಂಜುನಾಥ, ಎ.ಆರ್. ಶ್ರೀನಿವಾಸ, ರವಿಕುಮಾರ ಗಣಿಗ ಮುಂತಾದ ಗಣ್ಯರು ಭಾಗವಹಿಸಿದ್ದರು. ಸಚಿವರಾದ ಶಿವರಾಜ್ ತಂಗಡಗಿ ಸಮಾರಂಭದಲ್ಲಿ ಮಾತನಾಡಿ, 'ಸಾವಿರಾರು ಮೈಲುಗಳ ದೂರವಿರುವ ಅಮೆರಿಕ ದೇಶಕ್ಕೆ ಅನೇಕ ದಶಕಗಳ ಹಿಂದೆ ಬಂದು ನೆಲೆಸಿದರೂ ಕನ್ನಡತನವನ್ನು ಬಿಡದೇ, ಕನ್ನಡ ಸಂಸ್ಕೃತಿ, ಪರಂಪರೆ, ಭಾಷೆಯನ್ನು ಬೆಳೆಸುತ್ತಿರುವ ಅಮೆರಿಕ ಕನ್ನಡಿಗರ ವಿಶ್ವ ಕನ್ನಡ ಸಮ್ಮೇಳನದ ಆಯೋಜನೆಯ ಕಾರ್ಯ ನಿಜಕ್ಕೂ ಶ್ಲಾಘನೀಯ' ಎಂದು ಅಲ್ಲಿದ್ದ ಕನ್ನಡಿಗರನ್ನು ಪ್ರಶಂಸಿಸಿದರು.

ಸ್ಯಾಂಡಲ್‌ವುಡ್‌ನ ಪ್ರಖ್ಯಾತ ನಟರಾದ ರಕ್ಷಿತ್ ಶೆಟ್ಟಿ, ರಮ್ಯಾ, ರಮೇಶ್ ಅರವಿಂದ್, ಪ್ರಣಯರಾಜ ಶ್ರೀನಾಥ್, ವಿನಯ ರಾಜಕುಮಾರ್, ನಿವೇದಿತಾ ಗೌಡ, ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಮುಂತಾದವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಖ್ಯಾತ ಸಂಗೀತ ನಿರ್ದೇಶಕರಾದ ಮನೋಮೂರ್ತಿ ಅವರ ಆಲ್ ಓ.ಕೆ ತಂಡದವರು ಪ್ರೇಕ್ಷಕರನ್ನು ರಸಮಂಜರಿ ಕಾರ್ಯಕ್ರಮದ ಮೂಲಕ ರಂಜಿಸಿದರು.

ನಾಗತಿಹಳ್ಳಿ ಚಂದ್ರಶೇಖರ್ ಸೇರಿದಂತೆ ಗಣ್ಯರಿಂದ ಸಮ್ಮೇಳನ ಉದ್ಘಾಟನೆ.

ನಾವು ವಿಶ್ವ ಕನ್ನಡಿಗರು (ನಾವಿಕ) ಸಂಸ್ಥೆಯು ಫ್ಲೋರಿಡಾ ರಾಜ್ಯದಲ್ಲಿರುವ ನಾಲ್ಕು ಪ್ರಮುಖ ಕನ್ನಡ ಸಂಘಗಳಾದ ಶ್ರೀಗಂಧ ಕನ್ನಡ ಕೂಟ, ಟಾಂಪ, ಒರ್ಲಾಂಡೋ ಕನ್ನಡ ಕೂಟ, ನಂದಿ ಕನ್ನಡಕೂಟ, ಮಿಯಾಮಿ, ಮತ್ತು ಸವಿಕನ್ನಡ ಕೂಟ ಜ್ಯಾಕ್ಸನ್ವಿಲ್ ಸಹಯೋಗದೊಂದಿಗೆ ಈ ಬೃಹತ್ ವಿಶ್ವ ಕನ್ನಡ ಸಮಾವೇಶ ಆಯೋಜನೆಯಾಗಿತ್ತು. ಅಮೆರಿಕ, ಕೆನಡಾ ಮತ್ತು ಕರ್ನಾಟಕದಿಂದ ಆಗಮಿಸಿದ್ದ ಸಾವಿರಾರು ಕನ್ನಡ ಅಭಿಮಾನಿಗಳು ಉತ್ಸಾಹದಿಂದ ಭಾಗವಹಿಸಿದ್ದ ಮೂರು ದಿನಗಳ ನಾವಿಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ನೂರಕ್ಕೂ ಹೆಚ್ಚು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಕಳೆದ ವರ್ಷ ನಿಧನ ಹೊಂದಿದ ನಾವಿಕ ಸಂಸ್ಥೆಯ ಸಹ-ಸಂಸ್ಥಾಪಕಿ ಹಾಗೂ ಪ್ರಥಮ ಮಹಿಳಾ ಅಧ್ಯಕ್ಷೆ ದಿ|| ಡಾ. ರೇಣುಕಾ ರಾಮಪ್ಪ ಅವರಿಗೆ ಆ ಸಲದ ಸಮ್ಮೇಳನವನ್ನು ಅರ್ಪಿಸಲಾಯಿತು.

ಸಮ್ಮೇಳನದಲ್ಲಿ ಸ್ಮರಣ ಸಂಚಿಕೆ 'ಉಜ್ವಲ ' ಮತ್ತು 'ನಮ್ಮೊಳಗೊಂದು ಬೆಂಗಳೂರು' ಪುಸ್ತಕವನ್ನೂ ಬಿಡುಗಡೆ ಮಾಡಲಾಯಿತು. ಇದೇ ಮೊದಲ ಬಾರಿಗೆ ಸಮ್ಮೇಳನದ ಜೊತೆಗೆ ಐದು ದಿವಸಗಳ ನಾವಿಕ ಕ್ರೂಸ್‌ನ್ನು ಬಹಮಾಸ್ ದ್ವೀಪಗಳಿಗೆ ಏರ್ಪಡಿಸಲಾಗಿತ್ತು. ನಾವಿಕ ವಿಶ್ವ ಕನ್ನಡ ಸಮ್ಮೇಳನದ ಭರ್ಜರಿ ಯಶಸ್ಸಿಗೆ ಕಾರಣರಾದವರಿಗೆ ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಮತ್ತು ಸಮ್ಮೇಳನದ ಸಂಚಾಲಕರಾದ ಹರ್ಷಿತ ಗೌಡ ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮದ ಆಯೋಜನೆಯ ನೇತೃತ್ವವನ್ನು ಬೆಂಕಿ ಬಸಣ್ಣ ವಹಿಸಿದ್ದರು.

ಹತ್ತಲವು ಕಾರ್ಯಕ್ರಮಗಳು

ನಾವಿಕ ಸಮಾವೇಶದ ಇತಿಹಾಸದಲ್ಲೇ ಈ ಸಲ ಪ್ರಥಮ ಬಾರಿಗೆ ಅಮೆರಿಕದಲ್ಲಿರುವ ಎಲ್ಲಾ ಕರ್ನಾಟಕ ಕೂಟಗಳ ಅಧ್ಯಕ್ಷರ ಸಭೆಯನ್ನು ಏರ್ಪಡಿಸಿ, ಕನ್ನಡ ಸಂಘಗಳು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಪರಿಹರಿಸುವ ಬಗ್ಗೆ ಚರ್ಚಿಸಲಾಯಿತು. ಡಾ. ಗುರುರಾಜ ಕರ್ಜಗಿ ಅವರು, ನಾಯಕತ್ವದ ಗುಣವನ್ನು ಹೇಗೆ ಬೆಳೆಸಿಕೊಳ್ಳಬೇಕು ಮತ್ತು ಸಂಘ ಸಂಸ್ಥೆಗಳನ್ನು ಹೇಗೆ ಕಟ್ಟಬೇಕು ಎಂಬ ವಿಷಯದ ಬಗ್ಗೆ ಕಾರ್ಯಗಾರದಲ್ಲಿ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ವಿಶ್ವ ಕನ್ನಡ ಕೂಟಗಳ ಕೈಪಿಡಿ ಸಂಚಿಕೆಯನ್ನು ಸಮಾರಂಭದಲ್ಲಿ ಬಿಡುಗಡೆ ಮಾಡಿ, ಅಮೆರಿಕದ ಎಲ್ಲಾ ಕನ್ನಡ ಕೂಟಗಳಿಗೂ ವಿತರಿಸಲಾಯಿತು.

ಸಮಾವೇಶದ ವೈಶಿಷ್ಟ್ಯಗಳು

ಫ್ಲೋರಿಡಾದಲ್ಲಿ ಈ ಸಲ ನಡೆದ ನಾವಿಕ ವಿಶ್ವ ಕನ್ನಡ ಸಮಾವೇಶದಲ್ಲಿ ಮೆರವಣಿಗೆ, ಬಿಸಿನೆಸ್ ಫೋರಮ್, ವುಮೆನ್ಸ್ ಫೋರಮ್, ವೈದ್ಯರ ವೇದಿಕೆ, ಫ್ಯಾಷನ್ ಶೋ, ನಾವಿಕ ಕೋಗಿಲೆ, ಯಕ್ಷಗಾನ, ಬೊಂಬಾಟ್ ಭೋಜನ ಸ್ಪರ್ಧೆ, ನಾಟಕಗಳು, ನೃತ್ಯಗಳು, ಕನ್ನಡ ಕಲಿ, ಸಂಗೀತಾ ಸ್ಪರ್ಧೆಗಳು, ಯೂಥ್ ಫೋರಮ್, ಸಾಹಿತ್ಯ ವೇದಿಕೆ, ದಾರಿ ದೀಪ, ಯುವ ಪ್ರತಿಭೆ, ಚೆಸ್, ಕ್ರಿಕೆಟ್ ಹೀಗೆ ಅನೇಕ ಕಾರ್ಯಕ್ರಮಗಳು ನಡೆದವು. ಈ ಸಮಾವೇಶದಲ್ಲಿ ಅನಿವಾಸಿಯರು ಮಾತ್ರವಲ್ಲದೇ, ಕರ್ನಾಟಕದ ಖ್ಯಾತನಾಮ ಕಲಾವಿದರಿಂದ ವೈವಿಧ್ಯಮಯ ಮನರಂಜನಾ ಕಾರ್ಯಕ್ರಮಗಳು ನಡೆದವು.

ಸಮ್ಮೇಳನದ ಅಂಗವಾಗಿ ನಡೆದ ಆಕರ್ಷಕ ಮೆರವಣಿಗೆ

ಸಮಾಚಾರ ಸಣ್ಣದಲ್ಲ

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಸೆ.4ರ ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್ ನಡೆಯಲಿದೆ ಎಂದು ಮಂಡಳಿ ತಿಳಿಸಿದೆ. ನಗರದ ಪೂರ್ವ-1-1, ಪೂರ್ವ-2-1, ಆಗ್ನೇಯ -1, ಆಗ್ನೇಯ -4, ಪಶ್ಚಿಮ -1-1, ಪಶ್ಚಿಮ -2-1, ವಾಯುವ್ಯ - 1, ವಾಯುವ್ಯ - 3, ಕೇಂದ್ರ-1-1 ಈಶಾನ್ಯ - 1 ಮತ್ತು ಉತ್ತರ-1-1, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ಅಥವಾ ವಾಟ್ಸ್ ಅಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರು ದಾಖಲಿಸಬಹುದು ಎಂದು ತಿಳಿಸಿದೆ.

ವಿಚಾರ ಸಂಕಿರಣ, ಸಾಹಿತ್ಯೋತ್ಸವ ಇಂದು

ಬೆಂಗಳೂರು: ಬೆಂಗಳೂರು ನಗರ ವಿವಿಯ ಜಾಗತಿಕ ಭಾಷಾ ಕೇಂದ್ರ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಸೆ.3 ರಂದು ಬೆಳಗ್ಗೆ 10:30ಕ್ಕೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ವಿಕ್ಟರ್ ಹುಗೋ ಕುರಿತ ವಿಚಾರ ಸಂಕಿರಣ ಮತ್ತು ಸಾಹಿತ್ಯೋತ್ಸವವನ್ನು ಆಯೋಜಿಸಲಾಗಿದೆ. ಗೌರವ ಅತಿಥಿಗಳಾಗಿ ಅಲಿಯಾನ್ಸ್ ಫ್ರಾನ್ಸಿಸ್ ಡಿ ಬೆಂಗಳೂರು ನಿರ್ದೇಶಕ ಜೀನ್-ಮಾರ್ಕ್ ಡಿಪಿಯರ್, ವಿದೇಶಿ ಭಾಷೆಗಳ ಇಲಾಖೆ ಸಂಸ್ಥಾಪಕಿ ಹಾಗೂ ಲೇಖಕಿ ಡಾ. ಸುಮನ್ ವೆಂಕಟೇಶ್, ಫ್ರೆಂಚ್ ಭಾಷಾ ಸಹಕಾರಕ್ಕಾಗಿ ಥಾಮಸ್ ಥಾಮೋಂಟ್, ಮತ್ತು ವೈಜ್ಞಾನಿಕ ಹಾಗೂ ಶೈಕ್ಷಣಿಕ ಸಹಕಾರಕ್ಕಾಗಿ ಅಂಟೋನಿ ಗಿಲ್ಮೆಟ್ ಭಾಗವಹಿಸಲಿದ್ದಾರೆ. ಈ ವೇಳೆ ಫ್ರಾನ್ಸ್ ಸರಕಾರವು ಪ್ರೊ.ಜ್ಯೋತಿ ವೆಂಕಟೇಶ್‌ರಿಗೆ ಫ್ರೆಂಚ್ ಭಾಷಾ ಮತ್ತು ಸಂಸ್ಕೃತಿಯ ಬೆಳವಣಿಗೆ ಮತ್ತು ಪ್ರಚಾರಕ್ಕೆ ನೀಡಿದ ಕೊಡುಗೆಗೆ 'ಶೆವಲಿಯರ್ ಇನ್ ದಿ ಆರ್ಡರ್ ಆಫ್ ಅಕಾಡೆಮಿಕ್ ಪಾಮ್ಸ್ ಬಿರುದನ್ನು ನೀಡಲಾಗುವುದು. ಡಾ. ಸುಮನ್ ವೆಂಕಟೇಶ್ ತಮ್ಮ ಕೃತಿ ವಿಕ್ಟರ್ ಹುಗೋ ಮತ್ತು ಹಿಂದೂ ತತ್ವಶಾಸ್ತ್ರ ಕುರಿತು ಮಾತನಾಡಲಿದದ್ದು,ವಿಕ್ಟರ್ ಹುಗೋ ಅವರ ಕವನಗಳ ಆಧಾರದ ಮೇಲೆ ವೀಡಿಯೊ ಮತ್ತು ಪೋಸ್ಟರ್ ಸ್ಪರ್ಧೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಸಿಇಟಿ ಶುಲ್ಕ ಪಾವತಿ ಅವಧಿ ವಿಸ್ತರಣೆ

ಬೆಂಗಳೂರು: ಎಂಜಿನಿಯರಿಂಗ್, ಆಯುಷ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಸೂಕ್ತ ಛಾಯ್ಸ್ ಆಯ್ಕೆ ಮಾಡುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಸೆ.3ರವರೆಗೆ ದಿನಾಂಕ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಶುಲ್ಕ ಪಾವತಿ ನಂತರ ಸೀಟು ಖಾತರಿ ಚೀಟಿ ಡೌನ್ಲೋಡ್ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಳ್ಳಲು ಸೆ.4ರವರೆಗೆ ದಿನಾಂಕ ವಿಸ್ತರಿಸಲಾಗಿದೆ. ಛಾಯ್ಸ್-1 ಮತ್ತು ಛಾಯ್ಸ್-2 ಆಯ್ಕೆ ಮಾಡಿದವರು ಶುಲ್ಕ ಹಾಗೂ ಛಾಯ್ಸ್-3 ಆಯ್ಕೆ ಮಾಡಿದವರು ಕಾಷನ್ ಡೆಪಾಸಿಟ್ ಪಾವತಿಗೆ ಸೆ.3 ಕೊನೆ ದಿನವಾಗಿದೆ. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ಗಳ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಮತ್ತು ಪ್ರವೇಶ ಪ್ರಕ್ರಿಯೆ ವೇಳಾಪಟ್ಟಿ ಕುರಿತು ಸದ್ಯದಲ್ಲೇ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದು ಎಂದು ತಿಳಿಸಿದರು.

ಸೆ.3ರಿಂದ ಅರ್ಜಿ ಸಲ್ಲಿಕೆ ಆರಂಭ

ಬೆಂಗಳೂರು: ಸ್ನಾತಕೋತ್ತರ ಅಲೈಡ್ ಹೆಲ್ತ್ ಸೈನ್ಸ್ ಸ್ನಾತಕೋತ್ತರ ಕೋರ್ಸ್ ಸೇರಿದಂತೆ ವಿವಿಧ ಕೋರ್ಸು ಗಳಿಗೆ ಪ್ರವೇಶ ಪರೀಕ್ಷೆ ಬರೆಯುವವರು ಸೆ.3ರಿಂದ 14ರವರೆಗೆ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸೋಮವಾರ ಸೂಚಿಸಿದೆ. ಎಂ.ಎಸ್.ಸಿ ನರ್ಸಿಂಗ್, ಎಂ.ಪಿ.ಟಿ, ಎಂ.ಎಸ್.ಸಿ, ಅಲೈಡ್ ಹೆಲ್ತ್ ಸೈನ್ಸ್ ಸ್ನಾತಕೋತ್ತರ ಕೋರ್ಸ್ ಗಳು ಮತ್ತು ಎಂ.ಫಾರ್ಮ ಮತ್ತು ಫಾರ್ಮ-ಡಿ ಕೋರ್ಸ್‌ಗಳಿಗೆ ಪ್ರವೇಶ ಪರೀಕ್ಷೆ ನಡೆಸಲಾಗುವುದು. ಪ್ರಾಧಿಕಾರದ ವೆಬ್ ಸೈಟ್ https://cetonline.karnataka.gov.in/kea ಮೂಲಕ ಸೆ. 3ರಿಂದ (ಬೆಳಗ್ಗೆ 11) 14ರೊಳಗೆ (ರಾತ್ರಿ 11.59) ನೋಂದಾಯಿಸಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸ ಬಹುದು. ಅಭ್ಯರ್ಥಿಗಳು ಕರ್ನಾಟಕ ಸಂಜಾತರಾಗಿದ್ದು, ಆಯಾ ಕೋರ್ಸುಗಳಲ್ಲಿ ಪದವಿ ಪಡೆದು ಅರ್ಹರಿದ್ದಲ್ಲಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆಯಾ ಕೋರ್ಸುಗಳಿಗೆ ವಿವಿಧ ಇಲಾಖೆಯವರು ನಿಗದಿಪಡಿಸಿರುವ ಅರ್ಹತಾ ವಿವರಗಳನ್ನು ಹಾಗೂ ಅಗತ್ಯ ಇರುವ ದಾಖಲೆಗಳು ಇತರೆ ಮಾಹಿತಿಯನ್ನು ಒಳಗೊಂಡ ಮಾಹಿತಿ ಪುಸ್ತಕವನ್ನು ಪ್ರಾಧಿಕಾರದ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಈ ಪರೀಕ್ಷೆಯನ್ನು ಬೆಂಗಳೂರಿನಲ್ಲಿ ಮಾತ್ರ ನಡೆಸಲಾಗುತ್ತಿದ್ದು, ಪರೀಕ್ಷೆಯ ದಿನಾಂಕವನ್ನು ಪ್ರಾಧಿಕಾರದ ವೆಬ್ ಸೈಟ್ ನಲ್ಲಿ ಸದ್ಯದಲ್ಲಿಯೇ ಪ್ರಕಟಿಸಲಾಗುವುದು ಎಂದ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

ನಾಗರಿಕ ಸ್ನೇಹಿ, ಉತ್ತಮ ಆಡಳಿತವೇ ಪ್ರಾಧಿಕಾರದ ಧ್ಯೇಯ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು ಅಭಿವೃದ್ಧಿ ಇನ್ನು ಜಿಬಿಎ ಹೊಣೆ

ಬೆಂಗಳೂರು: ದಶಕಗಳ ಇತಿಹಾಸವಿರುವ ಬಿಬಿಎಂಪಿ ಇತಿಹಾಸದ ಪುಟ ಸೇರಿದ್ದು ಮಂಗಳವಾರದಿಂದ ಅಧಿಕೃತವಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಪೂರ್ವ ಪಾಲಿಕೆ, ಪಶ್ಚಿಮ ಪಾಲಿಕೆ, ಉತ್ತರ ಪಾಲಿಕೆ ಹಾಗೂ ದಕ್ಷಿಣ ಪಾಲಿಕೆ ಹಾಗೂ ಕೇಂದ್ರ ಪಾಲಿಕೆ ಎಂಬ ಐದು ಹೊಸ ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿದ್ದು, ಬಿಬಿಎಂಪಿಯ ಬದಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇನ್ನು ಮುಂದೆ ರಾಜಧಾನಿಯನ್ನು ನಿರ್ವಹಣೆ ಮಾಡಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ವಿವರಣೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬೆಂಗಳೂರಿನಲ್ಲಿ ನಾಗರಿಕ ಸ್ನೇಹಿ ಸೇವೆ, ಉತ್ತಮ ಆಡಳಿತ, ಪರಿಣಾಮಕಾರಿಯಾಗಿ ಯೋಜನೆಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಜಾರಿಗೆ ತಂದು ಐದು ಪಾಲಿಕೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದರು.

ಸೆ.2ರಂದು ಬೆಂಗಳೂರು ಮಹಾನಗರದ ಪಾಲಿಗೆ ವಿಶೇಷವಾದ ದಿನ. ಈ ದಿನದಿಂದ ಬೆಂಗಳೂರಿನಲ್ಲಿ ಐದು ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿವೆ. ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು ಪೂರ್ವ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳನ್ನು ರಚಿಸಲಾಗಿದೆ. ಈ ಪಾಲಿಕೆಗಳನ್ನು ಬೆಂಗಳೂರಿನ ಹೆಸರಿನೊಂದಿಗೆ ರಚಿಸಲು ಕಾನೂನಿನಲ್ಲೇ ತಿಳಿಸಿದ್ದೇವೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆ.26ರಂದು ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರ ಸಮಿತಿ ರಚನೆಯಾಗಿದೆ. ಇದರಲ್ಲಿ 75 ಸದಸ್ಯರನ್ನು ನೇಮಕ ಮಾಡಲಾಗಿದೆ ಎಂದು ಹೇಳಿದರು.

ಎಲ್ಲಾ ವಲಯಗಳಲ್ಲಿ ಆಯಾ ವ್ಯಾಪ್ತಿಯ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಪ್ರತಿ ಪಾಲಿಕೆಯಲ್ಲಿ ಆಡಳಿತಾಧಿಕಾರಿಗಳಾಗಿ ಆಯುಕ್ತರನ್ನು ನೇಮಕ ಮಾಡಲಾಗಿದೆ. ಆಯುಕ್ತರಿಗೆ ನೆರವಾಗಲು, ಹೆಚ್ಚುವರಿ ಆಯುಕ್ತರು, ಜಂಟಿ ಆಯುಕ್ತರು, ಕೆಎಎಸ್ ಅಧಿಕಾರಿಗಳು ಹಾಗೂ ಮುಖ್ಯ ಎಂಜಿನಿಯರ್ ಕಡ್ಡಾಯವಾಗಿ ಇರುತ್ತಾರೆ. ಪ್ರತಿ ಪಾಲಿಕೆಯಲ್ಲಿ ಸರಾಸರಿಯಲ್ಲಿ 100 ವಾರ್ಡ್‌ಗಳಂತೆ ಬೆಂಗಳೂರಿನಲ್ಲಿ ಸುಮಾರು 500 ಹೊಸ ನಾಯಕರುಗಳನ್ನು ಆಯ್ಕೆ ಮಾಡುವ ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಮಹಿಳೆಯರು ಹಾಗೂ ಪುರುಷರು 50:50 ಇರುತ್ತಾರೆ ಎಂದು ತಿಳಿಸಿದರು.

ತೆರಿಗೆ ಸಂಗ್ರಹ ಆರಂಭ: ಜಿಬಿಎ ಜಾರಿಗೆ ಬಂದ ದಿನದಿಂದಲೇ ಆಯಾ ಪಾಲಿಕೆ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ತೆರಿಗೆ ಹಣ ಆಯಾ ಪಾಲಿಕೆಗೆ ಸೇರಲಿದೆ. ಈ ತೆರಿಗೆ ಹಣ ಜಿಬಿಎಗಾಗಲಿ ಅಥವಾ ರಾಜ್ಯ ಸರಕಾರಕ್ಕಾಗಲಿ ಬರುವುದಿಲ್ಲ. ನಾವು ಯಾವುದೇ ರೀತಿಯಲ್ಲಿ ಸಂವಿಧಾನದ 74ನೇ ತಿದ್ದುಪಡಿಗೆ ಧಕ್ಕೆಯಾಗುವುದಿಲ್ಲ. ಪಾಲಿಕೆಗಳಿಗೆ ಸ್ವಾಯತ್ತತೆ ನೀಡಲಾಗಿದೆ. ಮುಂದೆ ಜಿಬಿಎ ಮೂಲಕ ದೊಡ್ಡ ದೊಡ್ಡ ಯೋಜನೆಗಳ ಜಾರಿ, ಉತ್ತಮ ಆಡಳಿತ, ಸೇವೆಗೆ ಮೀಸಲಾಗಿರಲಿದೆ. ಸರಕಾರದಿಂದ ಬಂದ ಹಣ ಜಿಬಿಎ ಹಾಗೂ ಪಾಲಿಕೆಗಳಿಗೆ ಹೋಗಲಿದೆ. ಇನ್ನು ಮುಂದಿನ ದಿನಗಳಲ್ಲಿ ಕಾನೂನು ಚೌಕಟ್ಟಿನಲ್ಲಿ ಚುನಾವಣೆ ನಡೆಯಲಿದೆ. ಸಧ್ಯ ನಗರದ ಜನಸಂಖ್ಯೆ 1.44 ಕೋಟಿ ಎಂದು ಅಂದಾಜಿಸಲಾಗಿದೆ. 2011ರ ಜನಗಣತಿ ಪ್ರಕಾರ ವಾರ್ಡ್ ನಲ್ಲಿ 20 ಸಾವಿರ ಜನಸಂಖ್ಯೆ ಇತ್ತು. ಈಗ 35-40 ಸಾವಿರ ಸರಾಸರಿಯಲ್ಲಿ ವಾರ್ಡ್ ರಚನೆ ಮಾಡಲಾಗುವುದು ಎಂದು ವಿವರಿಸಿದರು.

ಮುಂದಿನ ದಿನಗಳಲ್ಲಿ ಪೂರ್ವ, ಪಶ್ಚಿಮ, ಉತ್ತರ ದಕ್ಷಿಣ ಪಾಲಿಕೆಗಳಿಗೆ ಹೊಸ ಪ್ರದೇಶಗಳು ಸೇರ್ಪಡೆಯಾಗಲು ಅವಕಾಶ ಕಲ್ಪಿಸಿದ್ದೇವೆ. ಕಾನೂನಿಗೆ ತೊಡಕಾಗಬಾರದು ಎಂಬ ಉದ್ದೇಶದಿಂದ ಆ ಬಗ್ಗೆ ಚರ್ಚೆ ಮಾಡುವುದಿಲ್ಲ. ಆಯಾ ಪಾಲಿಕೆಗಳು ಸರಕಾರವನ್ನು ವಿಶ್ವಾಸಕ್ಕೆ ಪಡೆದು ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆಗಳನ್ನು ಮಾಡಿಕೊಳ್ಳಲಿವೆ. ಈಗ ಹಾಲಿ ಇದ್ದ ಪಾಲಿಕೆ ವ್ಯಾಪ್ತಿಗೆ ಜಿಬಿಎ ರಚಿಸಿ, ಐದು ಪಾಲಿಕೆ ಮಾಡಿದ್ದೇವೆ. ಇದನ್ನು ಜಾರಿಗೆ ತರಲು ಸಹಕರಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಆನೇಕಲ್ ಕ್ಷೇತ್ರಕ್ಕೆ ಸೇರಿದ್ದ ಒಂದು ವಾರ್ಡ್ ಬಿಟ್ಟುಹೋಗಿತ್ತು. ಈಗ ಅದನ್ನು ಸರಿಪಡಿಸಿದ್ದೇವೆ ಎಂದು ಹೇಳಿದರು.

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು.

ನಗರ ಪಾಲಿಕೆಯ ಕಚೇರಿಗಳು ಎಲ್ಲಿವೆ?

ಬೆಂಗಳೂರು ಉತ್ತರ
- ವಲಯ-1: ಹಾಲಿ ಯಲಹಂಕ ವಲಯ ಆಯುಕ್ತರ ಕಚೇರಿ
- ವಲಯ-2: ದಾಸರಹಳ್ಳಿ ವಲಯ ಆಯುಕ್ತರ ಕಚೇರಿ ಕಟ್ಟಡ

ಬೆಂಗಳೂರು ಕೇಂದ್ರ
- ವಲಯ-1: ಎಂಜಿ ರಸ್ತೆಯಲ್ಲಿರುವ ಹಾಲಿ ಬಿಬಿಎಂಪಿ ಪೂರ್ವವಲಯ ಕಚೇರಿ
- ವಲಯ-2: ಕೇಂದ್ರ ಕಚೇರಿ ಆವರಣದ ಅನೆಕ್ಸ್ -3 ಕಟ್ಟಡ

- ಈ ಹಿಂದೆ ಇದ್ದ 27 ವಿಭಾಗಗಳನ್ನು 50 ವಿಭಾಗಗಳಾಗಿ ಮಾರ್ಪಾಡು
- 75 ಉಪ ವಿಭಾಗಗಳನ್ನು 150ಕ್ಕೆ ಏರಿಸಲಾಗಿದೆ
- ಪ್ರತಿ ಪಾಲಿಕೆಯಲ್ಲಿ ಗರಿಷ್ಠ 150 ವಾರ್ಡ್‌ಗಳಿಗೆ ಅವಕಾಶ

ಬೆಂಗಳೂರು ಪಶ್ಚಿಮ
- ವಲಯ-1: ಹಾಲಿ ಆರ್‌ಆರ್ ನಗರ ವಲಯ ಆಯುಕ್ತರ ಕಚೇರಿ
- ವಲಯ 2: ಚಂದ್ರಾಲೇಔಟ್ ಪಾಲಿಕೆ ಸೌಧ ಕಚೇರಿ ಕಟ್ಟಡ

ಬೆಂಗಳೂರು ದಕ್ಷಿಣ
- ವಲಯ-1: ದಕ್ಷಿಣ ವಲಯ ಆಯುಕ್ತರ ಕಚೇರಿ
- ವಲಯ-2: ಬೊಮ್ಮನಹಳ್ಳಿಯ ವಲಯ ಕಚೇರಿ ನಿಗದಿಯಾಗಿದೆ.

ಬೆಂಗಳೂರು ಪೂರ್ವ
- ವಲಯ-1: ಹಾಲಿ ಮಹದೇವಪುರ ವಲಯ ಕಚೇರಿ.
- ವಲಯ -2: ಹಾಲಿ ಕೆ.ಆರ್.ಪುರ ಮುಖ್ಯ ಎಂಜಿನಿಯರ್ ಕಚೇರಿ

ಐದು ನಗರಪಾಲಿಕೆಗಳ ಆಯುಕ್ತರ ನೇಮಕ
- ಕೇಂದ್ರ ನಗರ ಪಾಲಿಕೆ - ಆಯುಕ್ತ: ರಾಜೇಂದ್ರ ಚೋಳನ್
- ಪೂರ್ವ ನಗರ ಪಾಲಿಕೆ - ಆಯುಕ್ತ: ರಮೇಶ್ ಜಿ.ಎಸ್ ; ಅಪರ ಆಯುಕ್ತೆ: ಸ್ನೇಹಲ್ ಸುಧಾಕರ್
- ಉತ್ತರ ನಗರ ಪಾಲಿಕೆ - ಆಯುಕ್ತ: ಪೊಮ್ಮಳ ಸುನಿಲ್ ಕುಮಾರ್
- ದಕ್ಷಿಣ ನಗರ ಪಾಲಿಕೆ - ಆಯುಕ್ತ: ರಮೇಶ್ ಕೆ.ಎನ್ ; ಅಪರ ಆಯುಕ್ತ: ಪಾಂಡುರಾಹುಲ್ ತುಕರಾಮ್
- ಪಶ್ಚಿಮ ನಗರ ಪಾಲಿಕೆ - ಆಯುಕ್ತ: ರಾಜೇಂದ್ರ ಕೆ.ವಿ

ಬ್ಯಾಂಕ್ ಖಾತೆ ಮುಚ್ಚುವಂತೆ ಆದೇಶ
ಬಿಬಿಎಂಪಿ ಹೆಸರಲ್ಲಿದ್ದ 291 ಬ್ಯಾಂಕ್ ಖಾತೆಗಳನ್ನು ಮುಚ್ಚುವಂತೆ ಸರಕಾರವ ಆದೇಶ ಹೊರಡಿಸಿದ್ದು, ಮುಂದಿನ ಆದೇಶದವರೆಗೂ ಯಾವುದೇ ರೀತಿ ಹಣ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

ಆಸ್ಟೆರ್ ಸಿಸ್ಟಮ್ಸ್ ಐಪಿಒ ಬಿಡುಗಡೆ: 15.56 ಕೋಟಿ ಬಂಡವಾಳ ಸಂಗ್ರಹ ಗುರಿ

ಬೆಂಗಳೂರು: ಆಸ್ಟೆರ್ ಸಿಸ್ಟಮ್ಸ್ ಲಿಮಿಟೆಡ್ ಆರಂಭಿಕ ಸಾರ್ವಜನಿಕ ಷೇರು ಬಿಡುಗಡೆ (ಐಪಿಒ) ಪ್ರಕಟಿಸಿದ್ದು, 15.56 ಕೋಟಿ ರು. ಬಂಡವಾಳ ಸಂಗ್ರಹ ಗುರಿ ಹೊಂದಿದೆ. ಆಸ್ಟೆರ್ ಸಿಸ್ಟಮ್ಸ್ ಲಿಮಿಟೆಡ್, 2015 ರಲ್ಲಿ ಸ್ಥಾಪನೆಯಾಗಿದ್ದು, ಸಾಫ್ಟ್‌ವೇರ್ ಅಭಿವೃದ್ಧಿ ಸೇರಿದಂತೆ ಹಲವು ಉದ್ಯಮ ಸೇವೆಗಳಲ್ಲಿ ಪರಿಣತಿ ಹೊಂದಿದ್ದು, 28,30,000 ಹೊಸ ಈಕ್ವಿಟಿ ಷೇರುಗಳನ್ನು ವಿತರಿಸುವ ಮೂಲಕ 15.56 ಕೋಟಿ ರು. ಸಂಗ್ರಹಿಸಲು ತನ್ನ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ)ಯನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ.

ಸೆ. 3 ರಂದು ಬಿಡ್/ಕೊಡುಗೆ ತೆರೆಯಲು ಹಾಗೂ ಸೆ.8 ರಂದು ಬಿಡ್/ ಕೊಡುಗೆ ಮುಕ್ತಾಯಗೊಳ್ಳಲಿದೆ. ಬೆಲೆ ಪಟ್ಟಿಯನ್ನು ಪ್ರತಿ ಈಕ್ವಿಟಿ ಷೇರಿಗೆ 52 ರಿಂದ 55 ರು.ಗೆ ನಿಗದಿಪಡಿಸಲಾಗಿದೆ. ಷೇರು ಬಿಡುಗಡೆಯ ನಂತರ, ಷೇರುಗಳನ್ನು ಬಿಎಸ್‌ಇಎಸ್‌ಎಂಇ ವೇದಿಕೆಯಲ್ಲಿ ಪಟ್ಟಿ ಮಾಡಲಾಗುವುದು, ಸೆ.11 ರಂದು ತಾತ್ಕಾಲಿಕ ಪಟ್ಟಿ ದಿನಾಂಕವನ್ನು ನಿಗದಿಪಡಿಸಲಾಗುತ್ತದೆ. ಜಿವೈಆರ್ ಕ್ಯಾಪಿಟಲ್ ಅಡ್ವೈಸರ್ಸ್ ಪ್ರೈವೇಟ್ ಲಿಮಿಟೆಡ್ ಈ ಷೇರು ಬಿಡುಗಡೆಗೆ ಬುಕ್ ರನ್ನಿಂಗ್ ಲೀಡ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದೆ. ಕೆಫ್‌ಐಎನ್ ಟೆಕ್ನಾಲಜೀಸ್ ಲಿಮಿಟೆಡ್ ರಿಜಿಸ್ಟ್ರಾರ್ ಆಗಿ ಕಾರ್ಯನಿರ್ವಹಿಸುತ್ತದೆ. ಈ ಷೇರು ಬಿಡುಗಡೆಗೆ ಮಾರುಕಟ್ಟೆ ತಯಾರಕರಾಗಿ ವೈನಾನ್ಸ್ ಫೈನಾನ್ಶಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಎಸ್‌ಕೆಐ ಕ್ಯಾಪಿಟಲ್ ಸರ್ವೀಸಸ್ ಲಿಮಿಟೆಡ್ ಕಾರ್ಯನಿರ್ವಹಿಸಲಿದೆ.

ಹಂಚಿಕೆಯ ಆಧಾರವು ಸೆ.9 ರಂದು ನಿರೀಕ್ಷಿಸಲಾಗಿದೆ ಮತ್ತು ಈಕ್ವಿಟಿ ಷೇರುಗಳನ್ನು ಸೆ.10 ರಂದು ಡಿಮ್ಯಾಟ್ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ನಿವ್ವಳ ವಿತರಣೆಯ ಶೇ.50 ಕ್ಕಿಂತ ಹೆಚ್ಚಿಲ್ಲದ ಮೊತ್ತವನ್ನು ಅರ್ಹ ಖರೀದಿದಾರರಿಗೆ ಹಂಚಲಾಗುತ್ತದೆ. ನಿವ್ವಳ ವಿತರಣೆಯ ಶೇ.35 ಕ್ಕಿಂತ ಕಡಿಮೆಯಿಲ್ಲದ ಮೊತ್ತವನ್ನು ವೈಯಕ್ತಿಕ ಹೂಡಿಕೆದಾರರಿಗೆ ಕಾಯ್ದಿರಿಸಲಾಗುತ್ತದೆ. ನಿವ್ವಳ ವಿತರಣೆಯ ಶೇ.15 ಕ್ಕಿಂತ ಕಡಿಮೆಯಿಲ್ಲದ ಮೊತ್ತವನ್ನು ಸಾಂಸ್ಥಿಕೇತರ ಹೂಡಿಕೆದಾರರಿಗೆ ಹಂಚಲಾಗುತ್ತದೆ.

ಬಂಟ್ಸ್ ಬಹರೇನ್‌ನ ನೂತನ ಆಡಳಿತ ಮಂಡಳಿಯ ಪದಗ್ರಹಣ ಸಮಾರಂಭ ಇತ್ತೀಚೆಗೆ ಮನಾಮದ 'ಇಂಡಿಯನ್ ಕ್ಲಬ್' ಸಭಾಂಗಣದಲ್ಲಿ ನಡೆಯಿತು. ನೂತನ ಅಧ್ಯಕ್ಷರಾದ ಡಾ. ಮಿಥುನ್ ಭಂಡಾರಿಯವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಂಗಳೂರು ಉತ್ತರ ಕ್ಷೇತ್ರದ ಶಾಸಕರಾದ ಡಾ. ವೈ ಭರತ್ ಶೆಟ್ಟಿ ಮತ್ತು ಅದಾನಿ ಗ್ರೂಪ್ ನ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ ಕಿಶೋರ್ ಆಳ್ವ ಆಗಮಿಸಿದ್ದರು. ಸಲಾರ್ ಸಿನಿಮಾ ಖ್ಯಾತಿಯ ನಟ ವಜ್ರಾಂಗ್ ಶೆಟ್ಟಿ ಉಪಸ್ಥಿತರಿದ್ದರು.

ತೆರಿಗೆ ಬಾಕಿಯಾದವರಿಗೆ ನೋಟಿಸ್ ಜಾರಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾದ ಮೊದಲ ದಿನದಂದೇ ಆಸ್ತಿ ಮಾಲೀಕರಿಗೆ ಬಿಸಿ ಮುಟ್ಟಿಸಿದ್ದು, ತೆರಿಗೆ ಬಾಕಿ ಉಳಿಸಿಕೊಂಡ ಆಸ್ತಿದಾರರಿಗೆ ಜಿಬಿಎ ನೋಟಿಸ್ ಜಾರಿ ಮಾಡಿದೆ.

ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ತೆರಿಗೆ ಪಾವತಿಸದವರಿಗೆ ನೋಟಿಸ್ ಜಾರಿ ಮಾಡಿದ್ದು, ಒಂದು ವೇಳೆ ತೆರಿಗೆ ಪಾವತಿಸದಿದ್ದರೆ ಅಂತಹವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಸುಮಾರು 2.75 ಲಕ್ಷ ತೆರಿಗೆದಾರರಿಂದ ಬರೋಬ್ಬರಿ 786 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಬೇಕಿರುವುದರಿಂದ ಆಸ್ತಿ ಸುಸ್ತಿದಾರರಿಗೆ ಎಲೆಕ್ಟ್ರಾನಿಕ್ ಡಿಮ್ಯಾಂಡ್ ನೋಟಿಸ್ ಕಳುಹಿಸಲಾಗಿದೆ. ಬಾಕಿ ಇರುವ ತೆರಿಗೆಯನ್ನು ಆನ್ ಲೈನ್ ನಲ್ಲಿ ಪಾವತಿಸುವಂತೆ ಸೂಚನೆ ನೀಡಲಾಗಿದ್ದು, ತೆರಿಗೆ ಪಾವತಿ ಮಾಡದಿದ್ದರೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಎಚ್ಚರಿಕೆ ನೀಡಲಾಗಿದೆ.

ಅತಿ ಹೆಚ್ಚು ಬಾಕಿ ತೆರಿಗೆ ಉಳಿಸಿಕೊಂಡವರ ಮಾಹಿತಿ

ವಲಯ	ಆಸ್ತಿ ಮಾಲೀಕರು	ಬಾಕಿ ಉಳಿಕೆ
ಮಹದೇವಪುರ	65040	1,97,90,55,057 ಕೋಟಿ
ದಕ್ಷಿಣ ವಲಯ	25162	1,16,81,67,031 ಕೋಟಿ
ಪೂರ್ವ ವಲಯ	37574	1,15,30,83,768 ಕೋಟಿ
ಬೊಮ್ಮನಹಳ್ಳಿ ವಲಯ	45,293	1,07,26,67,754 ಕೋಟಿ
ಯಲಹಂಕ	28022	80,61,44,875 ಕೋಟಿ
ಪಶ್ಚಿಮ	25321	75,28,89,617 ಕೋಟಿ
ಆರ್ ಆರ್ ನಗರ	38,358	64,84,04,629 ಕೋಟಿ
ದಾಸರಹಳ್ಳಿ	11172	28,82,26,616 ಕೋಟಿ
ಒಟ್ಟು	2,75,942	7,86,86,39,351 ಕೋಟಿ

ಆಯುಕ್ತರು, ಜಂಟಿ ಆಯುಕ್ತರ ನೇಮಕ

ಬೆಂಗಳೂರು: ಮಂಗಳವಾರದಿಂದ ಗ್ರೇಟರ್ ಬೆಂಗಳೂರು ಆಡಳಿತ ಜಾರಿಯಾಗಿದ್ದು, ಬೆಂಗಳೂರನ್ನು ಐದು ಪಾಲಿಕೆಗಳಾಗಿ ವಿಂಗಡಿಸಿ ಆಡಳಿತ ನಡೆಸಲಾಗುತ್ತದೆ.

ಬೆಂಗಳೂರು ಕೇಂದ್ರ ಪಾಲಿಕೆ ಆಯುಕ್ತರಾಗಿ ಹಿರಿಯ ಐಎಎಸ್ ಅಧಿಕಾರಿ ರಾಜೇಂದ್ರ ಚೋಳನ್, ಹೆಚ್ಚುವರಿ ಆಯುಕ್ತರಾಗಿ (ಅಭಿವೃದ್ಧಿ) ರಾಹುಲ್ ಶರಣಪ್ಪ ಸಂಕನೂರು, ಪೂರ್ವ ಪಾಲಿಕೆ ಆಯುಕ್ತರಾಗಿ ರಮೇಶ್ ಡಿ.ಎಸ್, ಹೆಚ್ಚುವರಿ ಆಯುಕ್ತರಾಗಿ (ಅಭಿವೃದ್ಧಿ) ಲೋಕಂಡೆ ಸ್ನೇಹಲ್ ಸುಧಾಕರ್, ಉತ್ತರ ಪಾಲಿಕೆ ಆಯುಕ್ತರಾಗಿ ಪೊಮ್ಮಲ ಸುನೀಲ್ ಕುಮಾರ್, ಹೆಚ್ಚುವರಿ ಆಯುಕ್ತರಾಗಿ (ಅಭಿವೃದ್ಧಿ) ಆರ್.ಲತಾ, ದಕ್ಷಿಣ ಪಾಲಿಕೆ ಆಯುಕ್ತರಾಗಿ ಕೆ.ಎನ್.ರಮೇಶ್, ಹೆಚ್ಚುವರಿ ಆಯುಕ್ತರಾಗಿ (ಅಭಿವೃದ್ಧಿ) ಪಾಂಡ್ವೆ ರಾಹುಲ್ ತುಕಾರಾಮ್, ಪಶ್ಚಿಮ ಪಾಲಿಕೆ ಆಯುಕ್ತರಾಗಿ ರಾಜೇಂದ್ರ ಕೆ.ವಿ, ಹೆಚ್ಚುವರಿ ಆಯುಕ್ತರಾಗಿ (ಅಭಿವೃದ್ಧಿ) ದಿಗ್ವಿಜಯ್ ಬೋಡ್ಕೆ ಅವರನ್ನು ನೇಮಕ ಮಾಡಿ ಆದೇಶಿಸಿದೆ.

ಜಂಟಿ ಆಯುಕ್ತರ ನೇಮಕ: ಬೆಂಗಳೂರು ಕೇಂದ್ರ ಪಾಲಿಕೆಯ ವಲಯ -1ಕ್ಕೆ ಜಂಟಿ ಆಯುಕ್ತರಾಗಿ ರಂಗನಾಥ್ ಕೆ. ನೇಮಕಾವಾಗಿದ್ದು ವಲಯ-2ರಲ್ಲಿ ಹೆಚ್ಚುವರಿ ಪ್ರಭಾರ ಹುದ್ದೆ, ಪೂರ್ವ ಪಾಲಿಕೆಯ ವಲಯ 1ಕ್ಕೆ ದಾಕ್ಷಾಯಿಣಿ ಪ್ರಭಾರವಾಗಿ ನೇಮಕವಾಗಿದ್ದು ವಲಯ 2ಕ್ಕೆ ಜಂಟಿ ಆಯುಕ್ತರಾಗಿದ್ದಾರೆ. ಪಶ್ಚಿಮ ಪಾಲಿಕೆಯ ವಲಯ -1ಕ್ಕೆ ಆರತಿ ಆನಂದ್, ವಲಯ- 2ಕ್ಕೆ ಸಂಗಪ್ಪ, ಉತ್ತರ ಪಾಲಿಕೆಯ ವಲಯ-1ಕ್ಕೆ ಮೊಹಮ್ಮದ್ ನಯೀಮ್ ಮೋಮಿನ್, ವಲಯ-2ಕ್ಕೆ ಹೆಚ್ಚುವರಿ ಪ್ರಭಾರ ಹುದ್ದೆ, ದಕ್ಷಿಣ ಪಾಲಿಕೆ ವಲಯ-1ಕ್ಕೆ ಜಂಟಿ ಆಯುಕ್ತರಾಗಿ ಮಧು ಹಾಗೂ ವಲಯ-2ಕ್ಕೆ ಸತೀಶ್ ಬಾಬು ನೇಮಕವಾಗಿದ್ದಾರೆ. ಕೇಂದ್ರ ಪಾಲಿಕೆಯ ವಲಯ-1ಕ್ಕೆ ರಾಜು ಕೆ. ವಲಯ-2ಕ್ಕೆ ಹೆಚ್ಚುವರಿ ಪ್ರಭಾರ ಹುದ್ದೆ, ಪೂರ್ವದ ವಲಯ-1ಕ್ಕೆ ಶಶಿಕುಮಾರ್ ನೇಮಕವಾಗಿದ್ದು ವಲಯ -2ಕ್ಕೆ ಹೆಚ್ಚವರಿ ಪ್ರಭಾರ ಹುದ್ದೆ, ಪಶ್ಚಿಮ ಪಾಲಿಕೆಯ ವಲಯ-1ಕ್ಕೆ ಅಬ್ದುಲ್ ರಾಬ್ ಹಾಗೂ ವಲಯ-2ಕ್ಕೆ ಮಂಜುನಾಥ್ ಸ್ವಾಮಿ, ಉತ್ತರ ಪಾಲಿಕೆಯ ವಲಯ-1ಕ್ಕೆ ಬಿ.ಕೆ. ಮಮತ ಹಾಗೂ ವಲಯ- 2ಕ್ಕೆ ಮಂಗಳಗೌರಿ, ದಕ್ಷಿಣ ಪಾಲಿಕೆ ವಲಯ-1ಕ್ಕೆ ಗಗನ ಕೆ. ಹಾಗೂ ವಲಯ-2ಕ್ಕೆ ಡಿ.ಕೆ. ಬಾಬು ಅವರನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಲಕ್ಷ್ಮೀ ಸಾಗರ್ ಆದೇಶ ಹೊರಡಿಸಿದ್ದಾರೆ.

ಇಂಗ್ಲಿಷ್ ಭಾಷೆ ಮೇಲೆ ಹಿಡಿತ ಇರದ ವಿದ್ಯಾರ್ಥಿಗಳಿಗೆ ಸಹಕಾರಿ | ಆಂಗ್ಲ ಪ್ರಾವೀಣ್ಯತೆಗೆ ವಿನೂತನ ಯೋಜನೆ

ಬೆಂಗಳೂರು ವಿವಿಯಲ್ಲಿ ಇಂಗ್ಲಿಷ್ ಭಾಷಾ ಲ್ಯಾಬ್

ಅಪರ್ಣಾ ಎ.ಎಸ್

ಬೆಂಗಳೂರು: ಪ್ರತಿಭೆಯಿದ್ದರೂ ಅದನ್ನು ಜಗತ್ತಿನ ಮುಂದೆ ಪ್ರಸ್ತುತ ಪಡಿಸಲು ಇಂದಿನ ಅಗತ್ಯವೆನಿಸಿರುವ ಇಂಗ್ಲಿಷ್ ಭಾಷೆಯಲ್ಲಿ 'ಪ್ರಾವೀಣ್ಯತೆ' ಪಡೆಯದೇ ಸಮಸ್ಯೆಗೆ ಒಳಗಾಗುವ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ವಿನೂತನ ಯೋಜನೆಯೊಂದನ್ನು ಆರಂಭಿಸಿದೆ.

ಇತ್ತೀಚಿನ ದಿನದಲ್ಲಿ ಇಂಗ್ಲಿಷ್ ಭಾಷೆ ಪ್ರಮುಖ ಸಂವಹನ ಮಾಧ್ಯಮವಾಗಿದ್ದರೂ, ಈಗಲೂ ಗ್ರಾಮೀಣ ಪ್ರದೇಶದ ಅನೇಕ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿ ಹಿಡಿತ ಸಾಧಿಸಲು ಹೊಯ್ದಾಡುತ್ತಿದ್ದಾರೆ. ಸಂವಹನಕ್ಕೆ ಅತಿ ಅವಶ್ಯಕವಾಗಿದ್ದರೂ ಸಂವಹನದ ಕೊರತೆಯು ಹೆಚ್ಚಾಗಿದೆ.

ಗ್ರಾಮೀಣ ಭಾಗದಲ್ಲಿ ಅದರಲ್ಲಿಯೂ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ಶೈಕ್ಷಣಿಕವಾಗಿ ಜ್ಞಾನ, ಅಗತ್ಯ ಕೌಶಲ್ಯವಿದ್ದರೂ ಇಂಗ್ಲಿಷ್‌ನ ಸಂವಹನದ ಕೊರತೆಯಿಂದಾಗಿ ಔದ್ಯೋಗಿಕ ರಂಗದಲ್ಲಿ, ಸಾಮಾಜಿಕವಾಗಿಯೂ ಕೀಳರಿಮೆ ಅನುಭವಿಸುವಂತಾಗಿದೆ.

ವಿದ್ಯಾರ್ಥಿಗಳ ಇಂಗ್ಲಿಷ್ ಭಾಷಾ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯವು ತಮ್ಮ ವಿದ್ಯಾರ್ಥಿಗಳಿಗೆ ಅದರಲ್ಲಿಯೂ ಗ್ರಾಮೀಣ ಭಾಗದಿಂದಾಗಮಿಸುವ ವಿದ್ಯಾರ್ಥಿಗಳಿಗೆ ವಿಶೇಷ ಇಂಗ್ಲಿಷ್ ಭಾಷಾ ತರಬೇತಿ ಕಾರ್ಯ ಕ್ರಮವನ್ನು ಆರಂಭಿಸಿದ್ದು, ಈ ಮೂಲಕ ವಿದ್ಯಾರ್ಥಿಗಳ ವೈಯಕ್ತಿಕ ತರಬೇತಿಗೆ ವಿಶ್ವವಿದ್ಯಾಲಯ ಆದ್ಯತೆ ನೀಡುತ್ತಿದೆ.



ಇಂಗ್ಲಿಷ್ ಲಾಂಗ್ವೇಜ್ ಲ್ಯಾಬ್ ಆರಂಭ: ಬೆಂಗಳೂರು ವಿಶ್ವವಿದ್ಯಾಲಯದ ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಭಾಗಕ್ಕೆ ಸೇರಿದವರಾಗಿದ್ದು ಶೈಕ್ಷಣಿಕವಾಗಿ ಓದಿನಲ್ಲಿ ಎಷ್ಟೇ ಮುಂದಿದ್ದರೂ ಇಂಗ್ಲಿಷ್ ಮತ್ತು ಸಂವಹನ ವಿಷಯದಲ್ಲಿ ಮಾತ್ರ ವಿದ್ಯಾರ್ಥಿಗಳು ಹಿಂದುಳಿಯುತ್ತಾರೆ. ಇಂಗ್ಲಿಷ್ ಕಲಿಕೆಯು ಬಿಡಿಸಲಾಗದ ಕಗ್ಗಂಟಿನಂತೆ ಭಾವಿಸುವವರ ಸಂಖ್ಯೆಯು ಹೆಚ್ಚಾಗಿದೆ. ಇಂತಹ ವಿದ್ಯಾರ್ಥಿಗಳ ಕಲಿಕೆ ಮತ್ತು ಇಂಗ್ಲಿಷ್ ಜ್ಞಾನ ಹೆಚ್ಚಿಸಲು ಸೂಕ್ತ ತರಬೇತಿ ಅವಶ್ಯಕವೆಂದು ಭಾವಿಸಿ ವಿಶ್ವವಿದ್ಯಾಲಯದ ವತಿಯಿಂದ ಲ್ಯಾಂಗ್ವೇಜ್ ಲ್ಯಾಬ್ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಒಟ್ಟು 80 ಗಂಟೆಗಳ ವಿಶೇಷ ತರಬೇತಿ ನೀಡಲಾಗುತ್ತಿದ್ದು, ಈ ಲ್ಯಾಬ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ವೃತ್ತಿಪರ ಕ್ಷೇತ್ರಗಳಲ್ಲಿ ಯಶಸ್ವಿಯಾಗಲು ಮೂಲಭೂತ ಸಂವಹನ ಕೌಶಲ್ಯಗಳನ್ನು ಒದಗಿಸುತ್ತದೆ. ಸರಳ ಮತ್ತು ಸುಲಭವಾಗಿ ಇಂಗ್ಲಿಷ್ ಮಾತನಾಡುವ, ಬರೆಯುವ, ಕೇಳುವ ಮತ್ತು ಓದುವ ಸಾಮರ್ಥ್ಯಗಳ ಕುರಿತು ಸಮಗ್ರ ತರಬೇತಿಯನ್ನು ನೀಡಲಾಗುವುದು. ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಭಾಷಾ ಜ್ಞಾನ ಮತ್ತು ಹಿಡಿತ ಸುಧಾರಿಸುವುದು ಮಾತ್ರವಲ್ಲದೆ ವೃತ್ತಿಪರ ಮತ್ತು ಸಾಮಾಜಿಕ ವಲಯದಲ್ಲಿ ಸಂವಹನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಕಾರ್ಯಕ್ರಮದ ನಂತರ ನೀಡಲಾಗುವ ಪ್ರಮಾಣಪತ್ರ ವಿದ್ಯಾರ್ಥಿಗಳ ವೃತ್ತಿಪರ ಕ್ಷೇತ್ರದಲ್ಲಿ ಸಹಕಾರಿಯಾಗಲಿದೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅಭಿವೃದ್ಧಿಗೆ ವಿಶ್ವವಿದ್ಯಾಲಯ ಈ ಕಾರ್ಯಕ್ರಮಗಳನ್ನು ಆರಂಭಿಸಿದ್ದು, ಇವು ವಿದ್ಯಾರ್ಥಿಗಳಿಗೆ ಸಾಕಷ್ಟು ನೆರವಾಗಲಿದೆ. ವಿದ್ಯಾರ್ಥಿಗಳು ಓದಿನಲ್ಲಿ ಮುಂದಿದ್ದರೂ, ಕೌಶಲ್ಯಗಳ ಕೊರತೆಯಿಂದ ಸಮಸ್ಯೆ ಎದುರಿಸುತ್ತಾರೆ. ಇದನ್ನು ಬಗೆಹರಿಸುವ ಉದ್ದೇಶದಿಂದ ಈ ಯೋಜನೆ ಆರಂಭಿಸಲಾಗಿದೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ವಿಶ್ವವಿದ್ಯಾಲಯ ಕ್ರಮ ವಹಿಸಲಿದೆ. ವಿದ್ಯಾರ್ಥಿಗಳ ಅಭಿವೃದ್ಧಿಗೆ ವಿವಿ ಬೆನ್ನೆಲುಬಾಗಿರಲಿದೆ. ವಿದ್ಯಾರ್ಥಿಗಳ ಈ ಕಾರ್ಯಕ್ರಮದ ಲಾಭ ಪಡೆದುಕೊಳ್ಳಬೇಕು.

-ಡಾ.ಜಯಕರ ಎಸ್. ಎಂ,
ಕುಲಪತಿ ಬೆಂಗಳೂರು ವಿವಿ

ಜಾಗತಿಕ ನಿರೀಕ್ಷೆಗಳಿಗೆ ತಕ್ಕಂತೆ ವಿದ್ಯಾರ್ಥಿಗಳು ಸಿದ್ಧರಿರಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಔದ್ಯೋಗಿಕ ದೃಷ್ಟಿಯಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ರೆಸ್ಯೂಮ್ ಬಿಲ್ಡಿಂಗ್ ,ಇಂಗ್ಲಿಷ್ ಫ್ಲೂಯೆನ್ಸಿ ಸೇರಿದಂತೆ ಆರಂಭಿಕ ಹಂತದಿಂದ ಎಲ್ಲವನ್ನೂ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗಪಡಿಸಿಕೊಳ್ಳಬೇಕು.

- ಡಾ.ಎಂ.ಟಿ.ಸೋಮಶೇಖರ್
ನಿರ್ದೇಶಕರು, ಐಟಿ ಸೆಂಟರ್, ಬೆಂಗಳೂರು ವಿವಿ

ಸಮಾಚಾರ ಸಣ್ಣದಲ್ಲ

ವಿಷ್ಣು ಸ್ಮಾರಕ ವಿಚಾರ: ಸಿಎಂ ಜತೆ ಇಂದು ಭಾರತಿ ಚರ್ಚೆ

ಬೆಂಗಳೂರು: ಡಾ.ವಿಷ್ಣುವರ್ಧನ್ ಸ್ಮಾರಕ ವಿಚಾರವಾಗಿ ಬುಧವಾರ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಲಿದ್ದಾರೆ. ಸಿಎಂ ಕಾವೇರಿ ನಿವಾಸದಲ್ಲಿ ಬುಧವಾರ 10:30ಕ್ಕೆ ಸಿಎಂ ಸಿದ್ದರಾಮಯ್ಯ ಅವರನ್ನು ಭಾರತಿ ವಿಷ್ಣುವರ್ಧನ್ ಹಾಗೂ ಅನಿರುದ್ಧ ಭೇಟಿಯಾಗಲಿದ್ದಾರೆ. ಈ ವೇಳೆ ಡಾ.ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣಕ್ಕಾಗಿ ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ ಕನಿಷ್ಠ 10 ಗುಂಟೆ ಜಮೀನನ್ನು ಮೀಸಲಿಡಬೇಕು ಹಾಗೂ ಅಭಿಮಾನಿಗಳು ಗೌರವ ಸಮರ್ಪಿಸಲು ಮೀಸಲಿಡುವಂತೆ ಮನವಿ ಮಾಡಲಿದೆ.

ಸಹೋದ್ಯೋಗಿ ಜತೆ ಪ್ರೀತಿ: ನೆಸ್ಲೆ ಸಿಇಒ ಹುದ್ದೆಗೆ ಕುತ್ತು

ದೆಹಲಿ: ತನ್ನ ಕೈಕೆಳಗೆ ಕೆಲಸ ಮಾಡುವ ಸಹೋದ್ಯೋಗಿ ಜೊತೆ ಪ್ರೇಮ ಸಂಬಂಧ ಇರಿಸಿಕೊಂಡಿದ್ದ ದೂರಿನ ಮೇರೆಗೆ ನೆಸ್ಲೆ ಸಿಇಒ ಲಾರೆಂಟ್ ಫ್ರಿಕ್ಸ್ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಸಹೋದ್ಯೋಗಿ ಜೊತೆಗಿನ ಸಂಬಂಧವನ್ನು ಮುಚ್ಚಿಟ್ಟ ಕಾರಣಕ್ಕೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಲಾರೆಂಟ್ ಅವರು ನೆಸ್ಲೆಯಲ್ಲಿ ನಾಲ್ಕು ದಶಕಗಳಿಂದ ಕೆಲಸ ಮಾಡಿದ್ದಾರೆ. ನೆಸ್ಲೆ ಕಂಪನಿಯಲ್ಲೇ ಹಿರಿಯ ಎಕ್ಸಿಕ್ಯೂಟಿವ್ ಆಗಿರುವ ಫಿಲಿಪ್ ನವ್ರಾಟಿಲ್ ಅವರನ್ನು ನೂತನ ಸಿಇಒ ಆಗಿ ನೇಮಕ ಮಾಡಲಾಗಿದೆ. ಸ್ವಿಟ್ಜರ್‌ಲ್ಯಾಂಡ್ ಮೂಲದ ನೆಸ್ಲೆ ಕಂಪನಿಯಲ್ಲಿ ಸಹೋದ್ಯೋಗಿ ಜೊತೆ ಲಾರೆಂಟ್ ಫ್ರಿಕ್ಸ್ ಅವರಿಗೆ ರೋಮ್ಯಾಂಟಿಕ್ ರಿಲೇಶನ್‌ಶಿಪ್ ಇರುವುದಾಗಿ ರಹಸ್ಯ ದೂರು ದಾಖಲಾಗಿತ್ತು. ಕಂಪನಿಯ ಛೇರ್ಮನ್ ಪೌಲ್ ಬುಲ್ಕೆ ಮತ್ತು ಸ್ವತಂತ್ರ ನಿರ್ದೇಶಕ ಪಾಬ್ಲೊ ಇಸ್ಲಾ ಅವರ ಕಣ್ಗಾವಲಿನಲ್ಲಿ ಆಂತರಿಕ ಮತ್ತು ಬಾಹ್ಯ ತನಿಖೆ ನಡೆಸಲಾಯಿತು. ಅದರಲ್ಲಿ ಲಾರೆಂಟ್ ಅವರು ಸಹೋದ್ಯೋಗಿ ಜೊತೆ ಸಂಬಂಧ ಹೊಂದಿರುವುದು ಗೊತ್ತಾಗಿತ್ತು. ನಂತರ ಅವರನ್ನು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಸಿಇಒ ಸ್ಥಾನದಿಂದ ವಜಾಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಸಿಕೆಲ್ಸ್ ತೀರ ತಲುಪಿದ ಭಾರತೀಯ ಯುದ್ಧನೌಕೆ

ದೆಹಲಿ: ಐಎನ್‌ಎಸ್ ತೀರ, ಐಎನ್‌ಎಸ್ ಶಾರ್ದೂಲ್ ಮತ್ತು ಸಿಜಿಎಸ್ ಸಾರಥಿಯನ್ನೊಳಗೊಂಡ ಭಾರತೀಯ ನೌಕಾಪಡೆಯ ಮೊದಲ ತರಬೇತಿ ನಿರತ ಯುದ್ಧನೌಕೆಗಳ ಸಮೂಹವು (1ಟಿಎಸ್) ಸೀಕೆಲ್ಸ್ ದೇಶದ ವಿಕ್ಟೋರಿಯಾ ಬಂದರಿಗೆ ತಲುಪಿದೆ. ಈ ಯುದ್ಧನೌಕೆಗಳು ಪ್ರಸ್ತುತ ನೈಋತ್ಯ ಹಿಂದೂ ಮಹಾಸಾಗರದಲ್ಲಿ ದೀರ್ಘ ಶ್ರೇಣಿಯ ತರಬೇತಿಯನ್ನು ನಡೆಸುತ್ತಿವೆ ಎಂದು ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ. ಭಾರತದ ನೌಕೆಗಳನ್ನು ಸಿಕೆಲ್ಸ್ ರಕ್ಷಣಾ ಪಡೆಯು ಅದ್ದೂರಿಯಾಗಿ ಬರಮಾಡಿಕೊಂಡಿದೆ. 'ನೌಕಾಪಡೆಯ ಹಿರಿಯ ಅಧಿಕಾರಿ ಕ್ಯಾಪ್ಟನ್ ತಿಜೋಕೆ ಜೋಸೆಫ್ ಅವರು ಸಿಕೆಲ್ಸ್ ಸರಕಾರದ ಪ್ರಮುಖರು, ಹಿರಿಯ ಅಧಿಕಾರಿಗಳು ಮತ್ತು ಭಾರತದ ಕಮಿಷನ್ ಜೊತೆ ಮಾತುಕತೆ ನಡೆಸಲಿದ್ದಾರೆ' ಎಂದು ನೌಕಾಪಡೆಯ ವಕ್ತಾರರು ಹೇಳಿದ್ದಾರೆ.

ಬ್ಯಾಂಕ್ ಸಾಲ ವಂಚನೆ: ಹಲವೆಡೆ ಇ.ಡಿ ದಾಳಿ

ದೆಹಲಿ: 637 ಕೋಟಿ ರು. ಬ್ಯಾಂಕ್ ಸಾಲ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ವರ್ಗಾವಣೆ ತನಿಖೆಯ ಭಾಗವಾಗಿ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಗೋವಾದಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ) ಮಂಗಳವಾರ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಚೆನ್ನೈ ಮೂಲದ ಅರವಿಂದ್ ರೆಮಿಡೀಸ್ ಕಂಪನಿ ಹಾಗೂ ಅದರ ಮಾಲೀಕ ಅರವಿಂದ್ ಬಿ. ಶಾ ವಿರುದ್ಧ ದಾಖಲಾಗಿದ್ದ ದೂರಿನ ಆಧಾರದಡಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಚೆನ್ನೈ, ಕಾಂಚೀಪುರಂ, ಕೋಲ್ಕತ್ತಾ ಮತ್ತು ಗೋವಾದ ಕೆಲವು ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ದಾಳಿ ನಡೆಸಿದ್ದಾರೆ. ಪಂಜಾಬ್ ನ್ಯಾಷನಲ್ ಬ್ಯಾಂಕ್ ನೇತೃತ್ವದ ಸಾಲದಾತರ ಒಕ್ಕೂಟಕ್ಕೆ ರು. 637 ಕೋಟಿ ವಂಚನೆ ಮಾಡಿದ್ದು, ಆರೋಪಿ ಅರವಿಂದ್ ವಿರುದ್ಧ 2021ರಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

ವಿರಾಮ
ಪ್ರತಿ ಭಾನುವಾರ

ತ.ನಾಡು ಅರ್ಜಿ ವಜಾಕ್ಕೆ ಕರ್ನಾಟಕ ಮನವಿ, ವಿಚಾರಣೆಗೆ ಸುಪ್ರೀಂ ಒಪ್ಪಿಗೆ

ಮೇಕೆದಾಟು: ಸುಪ್ರೀಂ ಮುಂದೆ ರಾಜ್ಯ ಅರ್ಜಿ

ದೆಹಲಿ: ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ನೀಡಿರುವ ಒಪ್ಪಿಗೆ ತಡೆ ಹಿಡಿಯಬೇಕು ಎಂದು ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿ ಕರ್ನಾಟಕ ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ. ಸಿಜೆಐ ಬಿ.ಆರ್. ಗವಾಯಿ ನೇತೃತ್ವದ ತ್ರಿಸದಸ್ಯ ಪೀಠದ ಮುಂದೆ ಕರ್ನಾಟಕದ ಪರವಾಗಿ ಎಎಜಿ ನಿಶಾಂತ್ ಪಾಟೀಲ್ ಅವರು ಈ ಅರ್ಜಿಯನ್ನು ಪ್ರಸ್ತಾಪಿಸಿದರು. ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಲು ಸಮ್ಮತಿಸಿದ ನ್ಯಾಯಪೀಠ, ಸೆಪ್ಟೆಂಬರ್ 23ಕ್ಕೆ ವಿಚಾರಣೆ ನಡೆಸುವ ಭರವಸೆ ನೀಡಿದೆ.

2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಮೇಕೆದಾಟು ಯೋಜನೆಗೆ ರೂಪುರೇಷೆ ಸಿದ್ಧಪಡಿಸಿತ್ತು. ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಒಪ್ಪಿಗೆ ಸೂಚಿಸಿತ್ತು. ಆದರೆ, ಇದಕ್ಕೆ ತಮಿಳುನಾಡು ಸರ್ಕಾರ ಅಪಸ್ವರ ತೆಗೆದಿತ್ತು. ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿದ್ದ ಸುಪ್ರೀಂಕೋರ್ಟ್, ಮೇಕೆದಾಟು ಯೋಜನೆಗೆ ತಡೆ ನೀಡುವುದಿಲ್ಲ, ಹಾಗೆಯೇ, ಈ ವಿಷಯದಲ್ಲಿ ತಮಿಳುನಾಡು ಸಹ ಅವಸರ ಪಡುವ ಅಗತ್ಯವಿಲ್ಲ, ಯೋಜನೆ ಸಂಬಂಧ ಕೇಂದ್ರ ಜಲ ಆಯೋಗ ಸಮಗ್ರ ಯೋಜನಾ ವರದಿ (ಡಿಪಿಆರ್) ಕೇಳಿದೆ ಅಷ್ಟೇ. ಡಿಪಿಆರ್ ನಲ್ಲಿ ದೋಷವಿದ್ದರೆ ಆಕ್ಷೇಪಿಸಬಹುದು. ಡಿಪಿಆರ್ ನಲ್ಲಿ

ತಕರಾರಿದ್ದರೆ ಅರ್ಜಿ ಹಾಕಿ, ಈಗಲೇ ಭಯಪಡುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತ್ತು.

ಯೋಜನೆ ವೆಚ್ಚ ಏರಿಕೆ

ರಾಜ್ಯದ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿರುವಂತೆ, 2019ರಲ್ಲಿ ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿದ್ದ ವಿಸ್ತೃತ ಯೋಜನಾ ವರದಿಯಲ್ಲಿ ಯೋಜನೆಗೆ ಸುಮಾರು ₹9,000 ಕೋಟಿ ವೆಚ್ಚ ಅಂದಾಜಿಸಲಾಗಿತ್ತು. ಆದರೆ 2023-24ರ ಲೆಕ್ಕಾಚಾರದ ಪ್ರಕಾರ, ಈ ವೆಚ್ಚವು ಈಗ ₹14,500 ಕೋಟಿಗೆ ಏರಿದೆ. ಹೀಗಾಗಿ ತುರ್ತು ವಿಚಾರಣೆ ಅಗತ್ಯವಿದೆ ಎಂದು ಅವರು ಒತ್ತಾಯಿಸಿದ್ದಾರೆ.

ನ್ಯಾಯಮೂರ್ತಿಗಳ ಪೀಠದ ತೀರ್ಮಾನ: ಹೆಚ್ಚುವರಿ ಅಡ್ವಕೋಟ್ ಜನರಲ್ ನಿಶಾಂತ್ ಪಾಟೀಲ ಅವರ ಮನವಿಯನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಹಾಗೂ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರ ಪೀಠವು ಕರ್ನಾಟಕದ ಅರ್ಜಿಯನ್ನು ವಿಚಾರಣೆಗೆ ಪಡೆಯಲು ನಿರ್ಧರಿಸಿದೆ.

ತಮಿಳುನಾಡಿನ ತಕರಾರು: ಈ ಪ್ರಕರಣದಲ್ಲಿ ತಮಿಳುನಾಡು ಸರ್ಕಾರ ಹಲವು ಬಾರಿ ತಕರಾರು ಅರ್ಜಿಗಳನ್ನು ಸಲ್ಲಿಸಿದೆ. 2023ರ ಸೆಪ್ಟೆಂಬರ್ 21ರಂದು ವಿಚಾರಣೆ ನಡೆದಿದ್ದರೂ, ಆ ಬಳಿಕ ಮುಂದುವರಿಯದೇ ಪ್ರಕರಣ ಬಾಕಿಯಾಗಿದೆ. ಪಾಟೀಲ ಅವರು ಈ ವಿಷಯವನ್ನು ನ್ಯಾಯಪೀಠದ ಗಮನಕ್ಕೆ ತಂದು, ತ್ವರಿತ ವಿಚಾರಣೆ ಅಗತ್ಯವಿದೆ ಎಂದು ತಿಳಿಸಿದರು. ರಾಜ್ಯ ವಕೀಲರು ಯೋಜನೆ ಮಹತ್ವವನ್ನು ವಿವರಿಸುತ್ತಾ, ರಾಜಧಾನಿ ಬೆಂಗಳೂರಿನ ನೀರಿನ ಸಮಸ್ಯೆ ಬಗೆಹರಿಸಲು ಹಾಗೂ ಲಕ್ಷಾಂತರ ಜನರ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಮೇಕೆದಾಟು ಯೋಜನೆ ತುರ್ತು ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸುಪ್ರೀಂ ಕೋರ್ಟ್ ಈಗಾಗಲೇ 4.75 ಟಿಎಂಸಿ ಅಡಿ ನೀರನ್ನು ಕುಡಿಯುವ ನೀರಿನ ಅಗತ್ಯಕ್ಕಾಗಿ ಕರ್ನಾಟಕಕ್ಕೆ ಹಂಚಿಕೆ ಮಾಡಿದ್ದು, ಈ ನೀರನ್ನು ಬಳಸಲು ಮೇಕೆದಾಟು ಯೋಜನೆ ಅನಿವಾರ್ಯ ಎಂದು ರಾಜ್ಯ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು. ಕೇವಲ ಕುಡಿಯುವ ನೀರಿನ ಸಮಸ್ಯೆಯಲ್ಲದೆ, ಯೋಜನೆಯಿಂದ ವಾರ್ಷಿಕವಾಗಿ 400 ಮೆಗಾವಾಟ್ ಜಲವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶವೂ ಇದೆ. ಇದು ರಾಜ್ಯದ ಶಕ್ತಿ ಉತ್ಪಾದನೆಗೆ ದೊಡ್ಡ ಸಹಾಯ ಮಾಡಲಿದೆ ಎಂದು ವಕೀಲರು ಹೇಳಿದರು.

ಧಾರ್ಮಿಕ ಪ್ರಚೋದನಕಾರಿ ಹೇಳಿಕೆ ಸಂಬಂಧ ದಾಖಲಾಗಿದ್ದ ಪ್ರಕರಣ

ಪ್ರಕರಣ ವಜಾ ಕೋರಿ ಯತ್ನಾಳ್ ಹೈ ಮೊರೆ

ಬೆಂಗಳೂರು: ಮುಸ್ಲಿಂ ಯುವತಿಯರನ್ನು ವಿವಾಹವಾಗುವ ಹಿಂದೂ ಯುವಕರಿಗೆ 5 ಲಕ್ಷ ರು. ಕೊಡುವುದಾಗಿ ಹೇಳಿಕೆ ನೀಡಿದ ಆರೋಪದ ಮೇಲೆ ತಮ್ಮ ವಿರುದ್ಧ ಕೊಪ್ಪಳ ಟೌನ್ ಪೊಲೀಸ್ ಠಾಣೆಯಲ್ಲಿ ದಾಖಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ವಿಜಯಪುರದ ಬಿಜೆಪಿ ಉಚ್ಚಾಟಿತ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಯತ್ನಾಳ್ ಅವರು ತಮ್ಮ ಅರ್ಜಿಯಲ್ಲಿ ಕೊಪ್ಪಳ ಟೌನ್ ಠಾಣಾ ಪೊಲೀಸರು ಮತ್ತು ದೂರು ನೀಡಿರುವ ಉಮರ್ ಜುನೈದ್ ಖುರೇಷಿ, ಮೈನುದ್ದೀನ್ ಬೀಳಗಿ ಮತ್ತು ಅಬ್ದುಲ್ ಕಲಾಂ ಅವರನ್ನು ಪ್ರತಿವಾದಿ ಮಾಡಿದ್ದಾರೆ. ಕೊಪ್ಪಳ ನಗರದ ಬಹದ್ದೂರ ಬಂಡಿ ರಸ್ತೆಯಲ್ಲಿ ಗವಿಸಿದ್ದಪ್ಪ ಎನ್ನುವ ಯುವಕನನ್ನು ಅನ್ಯ ಕೋಮಿನ ಯುವಕರು ಆ. 3ರಂದು ಕೊಲೆಯಗೈದಿದ್ದರು. ಕೊಲೆಯಾದ ಯುವಕನ ಕುಟುಂಬದವರಿಗೆ ಸ್ವಾಂತನ ಹೇಳಲು ಆ. 10 ರಂದು ಶಾಸಕ ಯತ್ನಾಳ್ ಕೊಪ್ಪಳಕ್ಕೆ ತೆರಳಿದ್ದರು. ಈ ವೇಳೆ ಅವರು ಪ್ರಚೋದನಕಾರಿಯಾಗಿ ಮಾತನಾಡಿದ್ದರು ಎನ್ನಲಾಗಿದೆ.

> **5 ಲಕ್ಷ ರು. ಕೊಡುತ್ತೇನೆ ಎಂದಿದ್ದ ಯತ್ನಾಳ್**
>
> ಅಬ್ದುಲ್ ಕಲಾಂ ಮತ್ತಿತರರು ನೀಡಿರುವ ದೂರಿನಲ್ಲಿ, ಹಿಂದೂ ಯುವಕರು ಮುಸ್ಲಿಂ ಯುವತಿಯನ್ನು ಮದುವೆಯಾದರೆ 5 ಲಕ್ಷ ರು. ಕೊಡುತ್ತೇನೆ ಎಂದು ಯತ್ನಾಳ್ ಹೇಳಿದ್ದಾರೆ. ಕೊಲೆ ಮಾಡುವ ಮುಸ್ಲಿಮರಿಗೆ ಉತ್ತರ ನೀಡಬೇಕಿದೆ ಎಂದಿದ್ದಾರೆ. ಸದ್ಯ ರಾಜ್ಯದಲ್ಲಿ ಸಾಬರ ಸರಕಾರವಿದೆ ಎಂದಿರುವ ಅವರು ಆ ಮೂಲಕ ಹಿಂದೂ ಮುಸ್ಲಿಮರ ನಡುವೆ ದ್ವೇಷ ಹರಡುವ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ದೂರು ಆಧರಿಸಿ ಕೊಪ್ಪಳ ಟೌನ್ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿ ದ್ದರು. ಅದರ ರದ್ದತಿಗೆ ಕೋರಿ ಯತ್ನಾಳ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಒತ್ತಡಕ್ಕೆ ಒಳಗಾಗಿ ಸಮೀಕ್ಷೆ ಮಾಡುವುದು ಸರಿಯಲ್ಲ: ಸುನೀಲ್ ಕುಮಾರ್

ತರಾತುರಿಯ ಜಾತಿ ಸಮೀಕ್ಷೆ ಬೇಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತರಾತುರಿಯಲ್ಲಿ ಜಾತಿ ಸಮೀಕ್ಷೆ ಬೇಡ ಎಂಬುದಾಗಿ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರನ್ನು ಬಿಜೆಪಿ ನಿಯೋಗ ಒತ್ತಾಯಿಸಿದೆ.

ಬಿಜೆಪಿ ನಿಯೋಗ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿದ ನಂತರ ಮಾತನಾಡಿದ ಶಾಸಕ ವಿ. ಸುನೀಲ್ ಕುಮಾರ್, 15 ದಿನಗಳಲ್ಲಿ ಮತ್ತು ದಸರಾ ಸಂದರ್ಭದಲ್ಲಿ ಸಮೀಕ್ಷೆ ಮುಗಿಸುತ್ತೇವೆ ಎಂಬುದು ಸರಿಯಲ್ಲ. ಯಾವುದೋ ಒತ್ತಡಕ್ಕೆ ಒಳಗಾಗಿ ಸಮೀಕ್ಷೆ ಮಾಡುವುದು ಸರಿಯಲ್ಲ. ಸುಮಾರು ಒಂದೂಮುಕ್ಕಾಲರಿಂದ 2 ಕೋಟಿ ಮನೆಗಳ ಸಮೀಕ್ಷೆ ಸುಲಭ ಸಾಧ್ಯವಲ್ಲ. ಬೇಸಿಗೆ ಕಾಲದಲ್ಲಿ ಸಮೀಕ್ಷೆ ಮಾಡಲು ಒತ್ತಾಯಿಸಿದ್ದೇವೆ ಎಂದರು.

1,400 ಜಾತಿಗಳ ಪಟ್ಟಿ ಪತ್ರಿಕೆಗಳಲ್ಲಿ ಪ್ರಕಟಿಸಿ ಅದರ ಸಂಬಂಧ ಆಕ್ಷೇಪಣೆ ಕೇಳಿದ್ದಾರೆ. ಸರಕಾರದ ಯಾವುದೇ ಜಾತಿ ಪಟ್ಟಿಯಲ್ಲಿ ಇಲ್ಲದ, ಯಾವ ಆಯೋಗದ ಜಾತಿ ಪಟ್ಟಿಯಲ್ಲಿ ಇಲ್ಲದ ಹೊಸ ಜಾತಿಗಳನ್ನು ಸೃಷ್ಟಿಸಿದ್ದಾರೆ. ಕುರುಬ ಕ್ರಿಶ್ಚಿಯನ್, ಮಡಿವಾಳ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಈ ರೀತಿ 107 ಕಡೆಗಳಲ್ಲಿ ಹೊಸ ಜಾತಿ ಪ್ರಕಟಿಸಿದ್ದಾರೆ. ಅವುಗಳಿಗೆ ಕೋಡ್ ನಂಬರ್ ನೀಡಿದ್ದು, ಇದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು ಎಂದರು.

ಸಮೀಕ್ಷೆಗೆ ಸ್ವೀಕೃತಿ ಪತ್ರವನ್ನು ಕಡ್ಡಾಯವಾಗಿ ಕೊಡಬೇಕು. ಕನ್ನಡದ ವ್ಯಾಕರಣ ಮಾಲೆ ಪ್ರಕಾರ 1,400 ಜಾತಿ ಪಟ್ಟಿ ಮಾಡಿದ್ದಾರೆ. ಪ್ರವರ್ಗ ಪ್ರಕಾರ ಇದನ್ನು ಮಾಡಿ ಎಂದು ಕೋರಿದ್ದೇವೆ. ಎಲ್ಲವನ್ನೂ ಶಾಂತವಾಗಿ ಕೇಳಿಸಿಕೊಂಡಿದ್ದಾರೆ. ಆದರೆ, 15 ದಿನದಲ್ಲೇ ಮಾಡುವ ಹಠಮಾರಿತನ ಅವರಲ್ಲಿ ಇದ್ದಂತಿದೆ. ತರಾತುರಿಯಲ್ಲಿ ಇದನ್ನು ಮಾಡಿ ವರದಿ ತಿರಸ್ಕಾರ ಆಗದಂತೆ ನೋಡಿಕೊಳ್ಳಬೇಕು. ಈ ಸಮೀಕ್ಷೆಯೇ ಭವಿಷ್ಯದ ರಾಜ್ಯ ಸರಕಾರಗಳ ಮುಂದಿನ ಕಾರ್ಯಕ್ರಮ ಸಿದ್ಧಪಡಿಸುವ ಭೂಮಿಕೆ ಎಂದರಲ್ಲದೇ ತರಾತುರಿಯಲ್ಲಿ ಸಮೀಕ್ಷೆ ಮಾಡದಿರಲು ಕೋರಿದ್ದಾಗಿ ತಿಳಿಸಿದರು.

ಸಂಸದ ಪಿ.ಸಿ ಮೋಹನ್, ವಿಧಾನಸಭಾ ವಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಎಚ್. ಪಾಟೀಲ್, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನಪರಿಷತ್ ಸದಸ್ಯ ಎಸ್. ಕೇಶವಪ್ರಸಾದ್, ಪಕ್ಷದ ಬಿಜೆಪಿಯ ಹರತಾಳು ಹಾಲಪ್ಪ, ಶರಣು ತಳ್ಳಿಕೇರಿ, ಅಂಬಿಕಾ ಹುಲಿನಾಯ್ಕರ್, ರಘು ಕೌಟಿಲ್ಯ, ನೆ.ಲ. ನರೇಂದ್ರ ಬಾಬು, ಎಂ.ಡಿ. ಲಕ್ಷ್ಮಿನಾರಾಯಣ ಮತ್ತಿತರ ಪ್ರಮುಖರು ಸಹಿ ಮಾಡಿದ ಮನವಿ ಸಲ್ಲಿಸಲಾಯಿತು. ಬಿಜೆಪಿಯ ಪ್ರಮುಖರು ಈ ನಿಯೋಗದಲ್ಲಿ ಇದ್ದರು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯ್ಕ್ ಅವರಿಗೆ ಬಿಜೆಪಿ ನಿಯೋಗವು ಮನವಿ ಪತ್ರವನ್ನು ಸಲ್ಲಿಸಿತು.

> ಕ್ರಿಶ್ಚಿಯನ್ ಎಂದಾಗ 2-3 ಉಪ ಜಾತಿ ಕೇಳಿದ್ದೆವು. ಮುಸ್ಲಿಮರಲ್ಲಿ ಕೆಲವು ಉಪ ಜಾತಿ ಕೇಳಿದ್ದೆವು. ಎಲ್ಲ ಹಿಂದೂ ಉಪ ಜಾತಿಗಳಿಗೆ ಕ್ರಿಶ್ಚಿಯನ್, ಮುಸ್ಲಿಂ ಎಂದು ಹಾಕಿ ಮತ್ತೊಂದು ರೀತಿ ಮತಾಂತರಕ್ಕೆ ಪ್ರೇರಣೆ ಕೊಡುವ ಹುನ್ನಾರ ಸರಕಾರ ಮಾಡಿದೆ. ಇದು ಮತ್ತೊಂದು ಮೀಸಲಾತಿಯ ಹುನ್ನಾರವಾಗಿದ್ದು, ಹೊಸದಾಗಿ ಸೃಷ್ಟಿಸಿದ ಜಾತಿಗಳನ್ನು ಪಟ್ಟಿಯಿಂದ ಕೈಬಿಡಬೇಕು.
>
> ವಿ.ಸುನೀಲ್‌ಕುಮಾರ್, ಶಾಸಕ

> **165 ಕೋಟಿ ನಿರುಪಯುಕ್ತ**
>
> ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಕರ್ನಾಟಕದಲ್ಲಿ ಶೈಕ್ಷಣಿಕ ಆರ್ಥಿಕ ಸಮೀಕ್ಷೆ ಮಾಡಲು ತಯಾರಿ ಮಾಡಿಕೊಂಡಿದೆ. ಈ ಹಿಂದೆ ಮಾನ್ಯ ಕಾಂತರಾಜು ಅವರ ನೇತೃತ್ವದಲ್ಲಿ ಆಯೋಗವು 165 ಕೋಟಿ ವೆಚ್ಚದಲ್ಲಿ ವರದಿ ಸಿದ್ಧಪಡಿಸಿತ್ತು. ಆ ವರದಿ ಸರಕಾರಕ್ಕೆ ಮಂಡಿಸಲಿಲ್ಲ; 165 ಕೋಟಿ ನಿರುಪಯುಕ್ತವಾಗಿತ್ತು. ಬಳಿಕ 110 ಕೋಟಿ ವೆಚ್ಚದಲ್ಲಿ ಒಳ ಮೀಸಲಾತಿ ಕುರಿತು ನ್ಯಾ. ನಾಗಮೋಹನ್ ದಾಸ್ ಅವರ ಸಮೀಕ್ಷೆ ನಡೆಯಿತು. ಆ ಸಮೀಕ್ಷೆಯ ಯಾವ ಅಂಶಗಳನ್ನೂ ಪರಿಗಣಿಸದೇ ಸರಕಾರವು ಯಾವ ರೀತಿ ನಿಲುವು ಪ್ರಕಟಿಸಿದೆ. ಪಕ್ಷವು ರಾಜ್ಯದ ಜನರ ಮನಸ್ಸಿನಲ್ಲಿರುವ ಗೊಂದಲ, ಅನುಮಾನಗಳ ಬಗ್ಗೆ ತಿಳಿದುಕೊಂಡಿದೆ. ಮುಂದಿನ ಸಮೀಕ್ಷೆ ಸರಿಯಾಗಬೇಕು ಎಂದು ಶಾಸಕ ವಿ. ಸುನೀಲ್ ಕುಮಾರ್ ಹೇಳಿದರು.

ವಿದ್ಯಾರ್ಥಿಗಳಿಗೆ ಮೌಲ್ಯವರ್ಧಿತ ಶಿಕ್ಷಣ ಅವಶ್ಯಕ: ನ್ಯಾ.ರಾಜೇಶ್ ರೈ

ಬೆಂಗಳೂರು: ಇಂದಿನ ವಿದ್ಯಾರ್ಥಿಗಳಿಗೆ ಮೌಲ್ಯವರ್ಧಿತ ಶಿಕ್ಷಣ ಅವಶ್ಯಕವಿದೆ. ಸ್ವಯಂ ಪ್ರಯತ್ನದಿಂದ ಹೊಸ ವಿಚಾರಗಳ ಕುರಿತು ತಿಳಿದುಕೊಳ್ಳುವುದು ತುಂಬಾ ಮುಖ್ಯ ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರು ತಿಳಿಸಿದರು.

ನಗರದ ನಾಗರಭಾವಿಯಲ್ಲಿರುವ ಶ್ರೀ ಲಕ್ಷ್ಮಿ ಕಾನೂನು ಕಾಲೇಜಿನಲ್ಲಿ ಕಾನೂನು ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಆಗುತ್ತಿರುವ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ, ಲೈಂಗಿಕ ಕಿರುಕುಳ ಹಲ್ಲೆ ಸೇರಿದಂತೆ ಇನ್ನಿತರ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕಿದೆ. ಸದ್ಯ ಮಹಿಳಾ ನ್ಯಾಯಾಧೀಶರ ಅಗತ್ಯವಿದ್ದು, ಅವರ ಪಾತ್ರ ತುಂಬಾ ಮಹತ್ವ ಪಡೆದಿದೆ. ಪಠ್ಯದ ಜತೆಗೆ ಪ್ರಾಯೋಗಿಕ ಅಧ್ಯಯನಕ್ಕೆ ಒತ್ತು ನೀಡಬೇಕೆಂದು ವಿದ್ಯಾರ್ಥಿಗಳಿಗೆ ಹೇಳಿದರು.

> ವಿದ್ಯಾರ್ಥಿಗಳಿಗೆ ಜೀವನದಲ್ಲಿ ಒಂದು ಗುರಿ ಇರಬೇಕು. ಆಸಕ್ತಿಯಿಂದ ತಮ್ಮ ಇಷ್ಟದ ಕ್ಷೇತ್ರಗದಲ್ಲಿ ತೊಡಗಿಸಿಕೊಳ್ಳಬೇಕು. ವಿಳಂಬವಾದ ನ್ಯಾಯ ಎಂದರೆ ನ್ಯಾಯವಲ್ಲ. ಹಾಗಾಗಿ ವೇಗವಾದ ನ್ಯಾಯಕ್ಕಾಗಿ ಮುಂದಾಗಬೇಕು.
>
> -ಡಾ.ಎನ್. ರಾಮಚಂದ್ರಯ್ಯ, ಶ್ರೀ ಲಕ್ಷ್ಮಿ ಸಮೂಹ ಸಂಸ್ಥೆಗಳ ಅಧ್ಯಕ್ಷ

ಕಾನೂನು ವಿದ್ಯಾರ್ಥಿಗಳು ಯಾವುದೇ ಹಿಂಜರಿಕೆ ಇಲ್ಲದೆ ಕಲಿಕೆಗೆ ಒತ್ತು ನೀಡಿ. ವಿದ್ಯಾರ್ಥಿಗಳ ಕಲಿಕೆಗೆ ಸಹಕಾರಿಯಾಗುವ ಸಲುವಾಗಿ ಬೆಂಗಳೂರು ಭಾಗದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ವೇಳೆ ಹೈಕೋರ್ಟ್‌ಗೆ ಭೇಟಿ ನೀಡಲು ಸೂಚಿಸಿದ್ದೇನೆ. ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಎಲ್ಲಾ ಅಂಶಗಳನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಶ್ರೀಲಕ್ಷ್ಮಿ ಕಾನೂನು ಕಾಲೇಜಿನಲ್ಲಿ ಕಾನೂನು ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರನ್ನು ಅಭಿನಂದಿಸಲಾಯಿತು. ಮಹಾವಿದ್ಯಾಲಯದ ಚೇರ್ಮನ್ ಡಾ. ರಾಮಚಂದ್ರಯ್ಯ, ಎಲ್‌ಎಸ್‌ಎಲ್‌ಜಿಐ ಸಿಇಒ ಶಿವಬಸವಯ್ಯ, ಶ್ರೀ ಲಕ್ಷ್ಮಿ ಕಾನೂನು ಮಹಾವಿದ್ಯಾಲಯದ ನಿರ್ದೇಶಕ ಡಾ.ದರ್ಶನ ಎಲ್. ಗೌಡ, ಆಡಳಿತ ನಿರ್ದೇಶಕ ಪ್ರೊ.ಕೆ.ನಾಗಿರೆಡ್ಡಿ ಇದ್ದರು.

ನ್ಯಾ. ನಾಗಮೋಹನ್‌ದಾಸ್ ಅಥವಾ ಮಾಧುಸ್ವಾಮಿ ವರದಿಗೆ ಅನುಮೋದನೆಗೆ ಕಾರಜೋಳ ಮನವಿ

ರಾಜಕೀಯ ತೇಪೆ ಹಚ್ಚುವ ವರ್ಗೀಕರಣಕ್ಕೆ ಬಿಜೆಪಿ ಆಕ್ಷೇಪ

ಬೆಂಗಳೂರು: ನ್ಯಾ.ನಾಗಮೋಹನ್‌ದಾಸ್ ಅಥವಾ ಮಾಧುಸ್ವಾಮಿಯವರ ನೇತೃತ್ವದ ವರದಿ ಮುಂಬರುವ ಸಚಿವ ಸಂಪುಟದಲ್ಲಿ ಒಪ್ಪಿ ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡಬೇಕೆಂದು ಸಂಸದ ಗೋವಿಂದ ಕಾರಜೋಳ ಸರಕಾರಕ್ಕೆ ಆಗ್ರಹಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಲೆಮಾರಿ ಗುಂಪುಗಳಿಗೆ ಅನ್ಯಾಯವಾಗಿದೆ. ಸಮಾನರು- ಅಸಮಾನರನ್ನು ಒಂದೇ ಪ್ರವರ್ಗದಲ್ಲಿ ತರಬಾರದೆಂಬ ಸುಪ್ರೀಂಕೋರ್ಟಿನ ಸೂಚನೆ ಸರಕಾರ ಪಾಲಿಸಿಲ್ಲ. ನಾಗಮೋಹನ್ದಾಸ್ ವರದಿಯನ್ನೂ ಪರಿಗಣಿಸಿಲ್ಲ. ಇಲ್ಲಿ ರಾಜಕೀಯ ತೇಪೆ ಹಚ್ಚುವ ವರ್ಗೀಕರಣ ಮಾಡಿದ್ದಾರೆ. ರಾಜಕೀಯ ಇಚ್ಛಾಶಕ್ತಿ, ರಾಜಕೀಯ ಲಾಭಕ್ಕಾಗಿ ವರ್ಗೀಕರಣ ಮಾಡಿದ್ದಾರೆ, ಅದನ್ನು ಒಪ್ಪಲಾಗದು. ಸರಕಾರ ತರಾತುರಿಯಲ್ಲಿ ನೇಮಕಾತಿ ಪ್ರಾರಂಭ ಮಾಡಿದೆ. ಕೆಪಿಎಸ್‌ಸಿಗೂ ನಿರ್ದೇಶನ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಈ ಗೊಂದಲದ ನಡುವೆ ಪ್ರಾರಂಭವಾಗಿದ್ದು ಈ ಪ್ರಕ್ರಿಯೆ ನಿಲ್ಲಿಸಬೇಕು. ಉದ್ಯೋಗ, ಶಿಕ್ಷಣ, ಅನುದಾನಕ್ಕೂ ಈ ಆದೇಶ ಅನ್ವಯ ಆಗುವಂತೆ ಮಾರ್ಪಾಡು ಮಾಡಬೇಕೆಂದು ಒತ್ತಾಯಿಸಿದರು.

ಸಿದ್ದರಾಮಯ್ಯ ಸರಕಾರವು ಸರ್ವ ಪಕ್ಷಗಳ ಚುನಾಯಿತ ಜನಪ್ರತಿನಿಧಿಗಳ ವಿಶೇಷ ಸಭೆ ಕರೆಯಬೇಕು. ಈ ಸಭೆಗೆ ಮೀಸಲಾತಿಯ ಜ್ಞಾನ ಇರುವವರು, ನಿವೃತ್ತ ಅಧಿಕಾರಿಗಳನ್ನೂ ಕರೆಯಬೇಕು. ಅಲ್ಲಿ ತೀರ್ಮಾನಿಸಿದರೆ ಎಲ್ಲರಿಗೂ ಒಪ್ಪಿಗೆ ಆಗಲಿದೆ ಎಂದರು.

ಸಂಸದ ಗೋವಿಂದ ಕಾರಜೋಳ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

35 ವರ್ಷಗಳಿಂದ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಬೇಕು. ಎಸ್‌ಸಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಮೀಸಲಾತಿ ಸೌಲಭ್ಯ ಕೊಡಬೇಕು ಎಂಬ ಬೇಡಿಕೆ ಮುಂದಿಟ್ಟು ಹೋರಾಟ ಮಾಡಿದ್ದೆವು. ಇದರ ಪ್ರತಿಫಲ ಮತ್ತು ಆಗಸ್ಟ್ 1, 2024 ರಂದು ಸುಪ್ರೀಂಕೋರ್ಟ್ ಸಂವಿಧಾನ ಪೀಠದ ತೀರ್ಪಿಗೆ ಮಸಿ ಬಳಿಯುವ ಕೆಲಸ ಸಿದ್ದರಾಮಯ್ಯನವರ ಸರಕಾರ ಮಾಡಿದೆ. ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ಸಚಿವರ ರಾಜಕೀಯ ಒತ್ತಡಕ್ಕೆ ಮಣಿದು ಸಿದ್ದರಾಮಯ್ಯ ಅವರು ನಾಗಮೋಹನದಾಸ್ ವರದಿ ಗಾಳಿಗೆ ತೂರಿದ್ದಾರೆ. ವರದಿಯು ಸಂವಿಧಾನಿಕ ಪೀಠದ ಆದೇಶಕ್ಕೆ ಅನುಗುಣವಾಗಿತ್ತು. ಅದು ಅತ್ಯಂತ ವೈಜ್ಞಾನಿಕ ಮಾತ್ರವಲ್ಲದೇ ಸಾಮಾಜಿಕ ಹಿನ್ನೆಲೆ ಒಳಗೊಂಡಿತ್ತು ಎಂದರು.

> ಒಳ ಮೀಸಲಾತಿ ಜಾರಿ ಮಾಡಿದ್ದಾರೆ. ಇದರ ಕುರಿತ ಹೇಳಿಕೆ ದಿಕ್ಕು ದೆಸೆ ಇಲ್ಲದ್ದು ಮತ್ತು ಅರ್ಥಹೀನ. ಮಾದಿಗ ಸಮುದಾಯದ ಮೂರೂವರೆ ದಶಕಗಳ ಹೋರಾಟಕ್ಕೆ ನ್ಯಾಯ ಸಿಗಲಿದೆ ಎನ್ನಲಾಗಿದ್ದರೂ, ಈಗ ಮಾದಿಗರ ಕನಸು, ಹೋರಾಟಕ್ಕೆ ಮಂಕುಬೂದಿ ಎರಚಲಾಗಿದೆ. ಮಾದಿಗರ ಹೋರಾಟಕ್ಕೆ ಮಂಕುಬೂದಿ ಎರಚಿ ದಿಕ್ಕು ತಪ್ಪಿಸಬೇಡಿ. ಈ ಸಚಿವ ಸಂಪುಟದಲ್ಲಿ ನ್ಯಾಯ ಒದಗಿಸಲಿ. ನಮ್ಮ ಬೇಡಿಕೆ ಈಡೇರದೇ ಇದ್ದರೆ ಮತ್ತೊಮ್ಮೆ ಮಾದಿಗರ ಚಳವಳಿ ಆರಂಭ ಆಗಲಿದೆ.
>
> - ಎ. ನಾರಾಯಣಸ್ವಾಮಿ, ಕೇಂದ್ರದ ಮಾಜಿ ಸಚಿವ

ಹಳದಿ ಮಾರ್ಗದಲ್ಲಿ ಸಂಚಾರ ಆರಂಭಿಸಲಿರುವ ನಾಲ್ಕನೇ ರೈಲು

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಸದ್ಯ ಮೂರು ರೈಲುಗಳು ಮಾತ್ರ ಸಂಚಾರ ನಡೆಸುತ್ತಿದ್ದು, ಸೆಪ್ಟೆಂಬರ್ ಎರಡನೇ ವಾರದಲ್ಲಿ ನಾಲ್ಕನೇ ರೈಲಿನ ಸಂಚಾರವು ಆರಂಭವಾಗಲಿದೆ ಎಂದು ನಮ್ಮ ಮೆಟ್ರೋ ಮೂಲಗಳು ತಿಳಿಸಿದೆ.

ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಪ್ರಸ್ತುತ ಮೂರು ರೈಲುಗಳು ಮಾತ್ರ ಸಂಚಾರ ನಡೆಸುತ್ತಿದ್ದು, ಇದರಿಂದಾಗಿ ಪ್ರಯಾಣಿಕರು 25 ನಿಮಿಷಗಳ ಕಾಲ ಕಾಯಬೇಕಾದಂತಹ ಸ್ಥಿತಿಯಿದೆ. ಆದರೆ ಈ ತಿಂಗಳಿನಲ್ಲೇ ನಾಲ್ಕನೇ ರೈಲು ಆಗಮಿಸುವುದರಿಂದ 15 ರಿಂದ 20 ನಿಮಿಷಗಳಿಗೊಮ್ಮೆ ರೈಲು ಸಂಚಾರವು ಆರಂಭವಾಗಲಿದೆ. ಈಗಾಗಲೇ ಕಲ್ಕತ್ತಾದಿಂದ ನಾಲ್ಕನೇ ರೈಲಿನ ಸೆಟ್ ನಮ್ಮ ಮೆಟ್ರೋ ಡಿಪೋಗೆ ಆಗಮಿಸಿದ್ದು, ನಾಲ್ಕನೇ ರೈಲಿನ ಪ್ರಾಯೋಗಿಕ ಸಂಚಾರವೂ ಪೂರ್ಣಗೊಂಡಿದೆ. ಇದರ ಬೆನ್ನಲ್ಲೇ ಅಕ್ಟೋಬರ್‌ನಲ್ಲಿ ಮೆಟ್ರೋಗೆ ಐದನೇ ರೈಲು ಆಗಮಿಸಲಿದೆ ಎನ್ನಲಾಗಿದೆ. ಆಬಳಿಕ ಪ್ರತಿ ತಿಂಗಳು ಒಂದು ಮೆಟ್ರೋ ರೈಲು ಸೆಟ್ ನಮ್ಮ ಮೆಟ್ರೋ ಗೆ ಸೇರ್ಪಡೆಯಾಗಲಿವೆ. ಹೊಸ ರೈಲಿನ ಆಗಮನದಿಂದ 15 ರಿಂದ 20 ನಿಮಿಷಕ್ಕೊಂದು ರೈಲು ಸಂಚಾರ ಮಾಡಲಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಆಗಸ್ಟ್ 11 ರಿಂದ ನಮ್ಮ ಮೆಟ್ರೋದ ಮೂರು ಮಾರ್ಗದಲ್ಲೂ 10 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ಪ್ರತಿ ದಿನ ಪ್ರಯಾಣ ಮಾಡುತ್ತಿದ್ದಾರೆ. ಆದರೆ ಹಳದಿ ಮಾರ್ಗದಲ್ಲಿ ಕೇವಲ ಮೂರು ರೈಲುಗಳಿರುವ ಕಾರಣದಿಂದಾಗಿ, ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿದೆ. 2026ರ ಮಾರ್ಚ್ ವೇಳೆಗೆ ಹಳದಿ ಮಾರ್ಗಕ್ಕೆ ಎಲ್ಲಾ ರೈಲುಗಳು ಆಗಮಿಸಲಿದ್ದು, ಹಸಿರು ಮಾರ್ಗ ಹಾಗೂ ನೇರಳೆ ಮಾರ್ಗದಂತೆ ಐದು ನಿಮಿಷಕ್ಕೊಂದರಂತೆ ರೈಲುಗಳು ಸಂಚಾರ ಮಾಡಲಿವೆ. 25 ನಿಮಿಷಕ್ಕೊಂದರಂತೆ ರೈಲು ಸಂಚಾರ ಮಾಡುತ್ತಿರುವುದರಿಂದ ತುಂಬಾ ಸಮಸ್ಯೆ ಆಗುತ್ತಿದ್ದು, ಹೊಸ ರೈಲು ಆಗಮನದಿಂದ ಪ್ರಯಾಣಿಕರಿಗೆ ಮತ್ತಷ್ಟು ಸಹಾಯವಾಗಲಿದೆ.

ಮುಂಗಾರು ಮಳೆ ಜೂನ್‌ನಲ್ಲೇ ಆರಂಭವಾಗಿರುವ ಕಾರಣ ಉತ್ತಮ ಬೆಳೆ | ಕಳೆದ ವಾರ ಗರಿಷ್ಠ ದರ

ಅಡಕೆ ಧಾರಣೆ ಏರಿಕೆ: ರೈತರ ಮೊಗದಲ್ಲಿ ಮಂದಹಾಸ

ಹೂವಪ್ಪ. ಐ.ಹೆಚ್. ಬೆಂಗಳೂರು

ರಾಜ್ಯದ ದಾವಣಗೆರೆ, ಶಿವಮೊಗ್ಗ, ಶಿರಸಿ, ಸಾಗರ, ಪುತ್ತೂರು ತಾಲೂಕುಗಳಲ್ಲಿ ಅಡಕೆ ಬೆಳೆಯು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಕೆಲವು ತಿಂಗಳಿನಿಂದ ರಾಜ್ಯದಲ್ಲಿ ಅಡಕೆ ಧಾರಣೆಯಲ್ಲಿ ಉತ್ತಮ ಏರಿಕೆ ಕಂಡುಬಂದಿದೆ. ಕಳೆದ ತಿಂಗಳು ಇಳಿಕೆಯತ್ತ ಸಾಗಿದ್ದ ಅಡಕೆ ಧಾರಣೆ ಕಳೆದ ಕೆಲ ದಿನಗಳಿಂದ ಏರಿಕೆಯತ್ತ ಸಾಗುತ್ತಾ ಬಂದಿದೆ. ಕಳೆದ ವಾರ ಕ್ವಿಂಟಾಲ್‌ಗೆ ಗರಿಷ್ಠ ದರ 60,500 ರು. ಗೆ ತಲುಪಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ಕಳೆದ ವಾರ ದಾವಣಗೆರೆ ಜಿಲ್ಲೆಯಲ್ಲಿ ಚನ್ನಗಿರಿಯಲ್ಲಿ ರಾಶಿ ಅಡಕೆಯ ಗರಿಷ್ಠ ದರ ಕ್ವಿಂಟಾಲ್‌ಗೆ 60,500 ರು. ಗಳಾಗಿದ್ದು, ಕನಿಷ್ಠ ದರ 54,012 ರು.ಗಳಾಗಿದ್ದು, ಸರಾಸರಿ ಬೆಲೆ 58,195 ರು.ಗಳಾಗಿದೆ. ಇದು ಕಳೆದ ತಿಂಗಳಿಗೆ ಹೋಲಿಸಿದರೆ ಉತ್ತಮ ಬೆಲೆ ಏರಿಕೆಯನ್ನು ತೋರಿಸುತ್ತದೆ. ಕಳೆದ ತಿಂಗಳಲ್ಲಿ ಅಡಕೆ ಧಾರಣೆ 55,000 ರು. ಕೆಳಗಿತ್ತು, ಆದರೆ ಇದೀಗ ಕ್ವಿಂಟಲ್‌ಗೆ ರು. 60,000 ದಾಟಿದೆ. ಅಡಕೆ ದರ ಏರಿಕೆಯಾಗಿರುವುದು ರೈತರಿಗೆ ಮುಂದಿನ ದಿನಗಳಲ್ಲಿ ಭರವಸೆಯ ರೀತಿಯಲ್ಲಿ ಕಾಣುತ್ತಿದೆ. 2025ರ ಜನವರಿಯಲ್ಲಿ ಕ್ವಿಂಟಾಲ್‌ಗೆ 52,000 ರು. ಗಳಷ್ಟಿದ್ದ ಧಾರಣೆ, ಫೆಬ್ರವರಿಯಲ್ಲಿ 53,000 ರು.ಗಳ ಗಡಿಯನ್ನು ದಾಟಿತ್ತು, ನಂತರ ಏಪ್ರಿಲ್‌ನಲ್ಲಿ 60,000 ರು. ಗಳಿಗೂ ಬಂದು ನಿಂತಿತ್ತು, ಜುಲೈ ಮೊದಲ ವಾರದ ನಂತರ, ಧಾರಣೆಯಲ್ಲಿ ಸ್ಥಿರವಾದ ಏರಿಕೆ ಕಂಡುಬಂದಿದ್ದು, ಆಗಸ್ಟ್‌ನಲ್ಲಿ ಇದು ಗರಿಷ್ಠ ಮಟ್ಟವನ್ನು ತಲುಪಿತು. ಈಗ ಮತ್ತೆ ಬೆಲೆ ಏರಿಕೆಯಾಗುತ್ತಿರುವುದು ರೈತರಿಗೆ ಆರ್ಥಿಕ ಸ್ಥಿರತೆಗೆ ಭರವಸೆ ನೀಡಿದೆ.

ಅಡಕೆ ದರ ಏರಿಕೆಗೆ ಕಾರಣ: ಅಡಕೆ ಧಾರಣೆಯ ಏರಿಕೆಗೆ ಹಲವಾರು ಕಾರಣಗಳಿವೆ. ಮೊದಲಿಗೆ, 2025ರ ಮುಂಗಾರು ಮಳೆಯು ಜೂನ್‌ನಿಂದಲೇ ಆರಂಭವಾಗಿದ್ದು, ಉತ್ತಮ ಫಸಲಿನ ನಿರೀಕ್ಷೆಯನ್ನು ಹುಟ್ಟುಹಾಕಿದೆ. ಈ ಋತುವಿನಲ್ಲಿ ಉತ್ಪಾದನೆಯ ಗುಣಮಟ್ಟವು ಉತ್ತಮವಾಗಿದ್ದು, ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಿದೆ. ಎರಡನೆಯದಾಗಿ, ದಾವಣಗೆರೆಯ ಚನ್ನಗಿರಿ ಮತ್ತು ಹೊನ್ನಾಳಿಯಂತಹ ಪ್ರದೇಶಗಳಲ್ಲಿ ಅಡಕೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದು, ಇದು ಸ್ಥಳೀಯ ಮಾರುಕಟ್ಟೆಯಲ್ಲಿ ಒಂದು ಸ್ಥಿರವಾದ ಪೂರೈಕೆಯನ್ನು ಖಾತರಿಪಡಿಸಿದೆ. ಆದರೆ ಮಾರುಕಟ್ಟೆಯ ಬೇಡಿಕೆಯು ಪೂರೈಕೆಯನ್ನು ಮೀರಿದ್ದರಿಂದ ಧಾರಣೆಯಲ್ಲಿ ಏರಿಕೆ ಕಂಡು ಬಂದಿದೆ. ಇದರ ಜೊತೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಅಡಕೆಗೆ ಬೇಡಿಕೆಯ ಏರಿಕೆಯೂ ಧಾರಣೆಯ ಏರಿಕೆಗೆ ಕಾರಣವಾಗಿದೆ. ಅಡಕೆಯನ್ನು ತಂಬಾಕು ಉತ್ಪನ್ನಗಳು, ಆಹಾರ ಉದ್ಯಮ ಮತ್ತು ಔಷಧೀಯ ಉತ್ಪನ್ನಗಳಲ್ಲಿ ಬಳಸಲಾಗು ತ್ತದೆ, ಇದರಿಂದಾಗಿ ಇದರ ಬೇಡಿಕೆಯು ಸತತವಾಗಿ ಏರುತ್ತಿದೆ ಎನ್ನುತ್ತಾರೆ ದಾವಣಗೆರೆ ಅಡಕೆ ವ್ಯಾಪಾರಿಗಳು.

ಧಾರಣೆ ಏರಿಕೆಯಿಂದ ರೈತರಿಗೆ ಸಂತಸ: ಎರಡು ವರ್ಷಗಳಿಂದ ಏರಿಳಿತದ ಮಧ್ಯೆಯೂ, ಈಗಿನ ಏರಿಕೆಯ ಧಾರಣೆಯಿಂದ ರೈತರು ತಮ್ಮ ಬಂಡವಾಳವನ್ನು ಮರಳಿ ಪಡೆಯುವ ಭರವಸೆಯಲ್ಲಿದ್ದಾರೆ. ಚನ್ನಗಿರಿಯ ರೈತರೊಬ್ಬರು, 'ಕಳೆದ ವರ್ಷ ಧಾರಣೆ ಕಡಿಮೆಯಾದಾಗ ತುಂಬಾ ಚಿಂತೆಯಾಗಿತ್ತು. ಆದರೆ ಈಗ ಧಾರಣೆ ಏರಿಕೆಯಾಗಿರುವುದು ನಮಗೆ ದೊಡ್ಡ ಆಸರೆಯಾಗಿದೆ' ಎಂದು ತಮ್ಮ ಸಂತಸವನ್ನು ಹಂಚಿಕೊಂಡಿದ್ದಾರೆ.

> ಉತ್ತರಭಾರತದ ರಾಜ್ಯದಲ್ಲಿ ಅಡಿಕೆ ಆಧಾರಿತ ಉತ್ಪನ್ನಗಳ ತಯಾರಿ ಹೆಚ್ಚಾಗುತ್ತಿವೆ. ಹೀಗಾಗಿ ಬೇಡಿಕೆ ಹೆಚ್ಚಾಗಿ ಅಡಿಕೆ ದಾಸ್ತಾನು ಕೊರತೆಯಾಗಲು ಕಾರಣ.
>
> ಎನ್.ಎಸ್. ಶಾನಬೋಗ್, ಅಡಕೆ ವ್ಯಾಪಾರಿ, ಕುಮಟ

> **ಮತ್ತಷ್ಟು ದರ ಏರಿಕೆ ನಿರೀಕ್ಷೆ**
>
> ಮುಂದಿನ ದಿನಗಳಲ್ಲಿ ಅಡಕೆ ಧಾರಣೆಯು ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ. ಪ್ರಸಕ್ತ ಸಾಲಿನಲ್ಲಿ ಉತ್ತಮವಾಗಿ ಸುರಿದ ಮುಂಗಾರು ಮಳೆಯಿಂದಾಗಿ ಉತ್ತಮ ಫಸಲಿನ ನಿರೀಕ್ಷೆಯಿದ್ದು, ಇದು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಮತ್ತಷ್ಟು ಹೆಚ್ಚಿಸಬಹುದು. ಆದರೆ ರೈತರು ಮಳೆಗಾಲದಲ್ಲಿ ಅಡಿಕೆಯ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಒಣಗಿಸುವ ತಂತ್ರಜ್ಞಾನ ಮತ್ತು ಸಂಗ್ರಹಣೆ ವಿಧಾನಗಳನ್ನು ಸುಧಾರಿಸುವ ಮೂಲಕ ರೈತರು ತಮ್ಮ ಆದಾಯವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವುದು ಉತ್ತಮ ಎನ್ನುತ್ತಾರೆ ಮಾರುಕಟ್ಟೆಯ ವಿಶ್ಲೇಷಕರು.

ಚಿತ್ತವಿಹಾರ

ನಮ್ಮ ಬಯಕೆಗಳು ಮಿತವಾಗಿರಲಿ

ರವೀಂದ್ರನಾಥ್ ಟ್ಯಾಗೋರ್ ಅವರ ಕಥೆಯಿದು. ಗಾಯಕನೊಬ್ಬ ಒಬ್ಬ ರಾಜನ ಆಸ್ಥಾನಕ್ಕೆ ಹೋಗಿ ಅಲ್ಲಿ ಹಾಡು ಹಾಡಿದ. ಹಾಡು ಕೇಳಿದ ರಾಜ ಅತ್ಯಂತ ಸಂತೋಷ ಗೊಂಡ. ಗಾಯಕನನ್ನು ಹೊಗಳಿದ. ತುಂಬ ಅಭಿಮಾನ ದಿಂದ ಗೌರವಿಸಿದ. ತನ್ನ ಕೊರಳಿನಲ್ಲಿದ್ದ ವಜ್ರದ ಹಾರವನ್ನು ಗಾಯಕನಿಗೆ ತೊಡಿಸಿದ. ಗಾಯಕನಿಗೆ ಬಹಳಷ್ಟು ಸಂತೋಷ ವಾಯಿತು. ಬದುಕಿನ ಬಹು ದೊಡ್ಡ ಸ್ಮರಣೀಯ ಕ್ಷಣವೆಂದು ಹೆಮ್ಮೆ ಪಟ್ಟುಕೊಂಡ. ಆಸ್ಥಾನದಲ್ಲಿದ್ದ ಜನರಿಗೂ ಕೂಡ ತುಂಬ ಸಂತೋಷವಾಯಿತು. ತನ್ನ ಬಂಧು ಬಳಗದವರಿ ಗೆಲ್ಲ ರಾಜ ತನಗೆ ತೊಡಿಸಿದ ವಜ್ರದ ಹಾರವನ್ನು ಹೆಮ್ಮೆಯಿಂದ ತೋರಿ ಸಿದ. ಅವರೆಲ್ಲರೂ ಸಂತೋಷಗೊಂಡರು. ದಾರಿಯಲ್ಲಿ ಸಿಕ್ಕ ಜನರಿ ಗೆಲ್ಲ ತನ್ನ ಕೊರಳಿನಲ್ಲಿ [illegible]



[illegible] ದನ್ನು ಮನದಟ್ಟು ಮಾಡಿ ಕೊಳ್ಳಬೇಕು. ಇದುವೇ ಬದುಕಿನ ಅಂತಿಮ ಸತ್ಯವಾಗಿದೆ ಎಂಬುದು ನಾವೆಲ್ಲ ಒಪ್ಪಿಕೊಳ್ಳಬೇಕಾದ ಮತ್ತು ಅದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಸಂಗತಿಯಾಗಿದೆ.

● ಮಹಾದೇವ ಬಸರಕೋಡ

ಭರತನಾಟ್ಯದಲ್ಲಿ ದಾಖಲೆ!

216 ಗಂಟೆಗಳ ಕಾಲ ನಿರಂತರ ಭರತನಾಟ್ಯವನ್ನು ಮಾಡುವ ಮೂಲಕ ಉಡುಪಿ ಜಿಲ್ಲೆಯ ದೀಕ್ಷಾ ಅವರು ಹೊಸ ದಾಖಲೆ ಬರೆದಿದ್ದಾರೆ.

● ಸಂತೋಷ್ ರಾವ್ ಪೆರ್ಮುಡ

ಭಾರತ ದೇಶದಲ್ಲಿ ಮಹರ್ಷಿಗಳು ತಂದ ನಾಟ್ಯಕಲೆಯಲ್ಲಿ ಇಂದ್ರಿಯಗಳು ಮೆಚ್ಚುವ ಕಲೆ, ಸೌಂದರ್ಯ, ಮುಂತಾದ ಅಂಶಗಳು ಪುಷ್ಕಳವಾಗಿಯೇ ಇದ್ದರೂ ಇದರಲ್ಲಿ ಮನೋರಂಜನೆಯ ಜೊತೆಗೆ ಆತ್ಮರಂಜನೆಗೂ ಬೇಕಾದ ರಸ, ಭಾವಗಳನ್ನು ಸೇರಿಸಲಾಗಿದೆ. ಭಾರತೀಯ ನಾಟ್ಯವು ಮೇಲ್ನೋಟಕ್ಕೆ ಮೈ ಕುಣಿಸುವಂತೆ ಕಂಡರೂ ಅದೇ ಮುಖ್ಯ ಉದ್ದೇಶವಲ್ಲ. ಭರತಮುನಿಗಳು ತಂದ ಈ ನಾಟ್ಯದಲ್ಲಿ ಭಾವ-ರಾಗ-ತಾಳಗಳ ಸಮ್ಮಿಶ್ರಣವಿದ್ದು, ಅದು ನಮ್ಮ ಮೈಮನಗಳನ್ನು ಹದವಾಗಿಸಿ ನಮ್ಮನ್ನು ಧನ್ಯರನ್ನಾಗಿ ಮಾಡುತ್ತದೆ. ಅಂತರಂಗದ ಆನಂದವನ್ನು ನಾಟ್ಯದ ಮೂಲಕ ಹೊರತಂದು, ಅದನ್ನು ಆಸ್ವಾದಿಸುವವರನ್ನು ಅಂತರಂಗಕ್ಕೆ ಒಯ್ಯುವ ಜಾಣ್ಮೆ ಈ ನಾಟ್ಯ ಕಲೆಯಲ್ಲಿದೆ.

ಭರತನಾಟ್ಯ ಕಲಾವಿದರಿಗೆ, ಕಠಿಣ ಮತ್ತು ನಿರಂತರವಾದ ದೈಹಿಕ ತರಬೇತಿಗಳು ಅಗತ್ಯವಿದ್ದು, ಅಗತ್ಯವಿರುವ ಭಾವನೆಗಳನ್ನು ನಿಖರವಾಗಿ ವ್ಯಕ್ತಪಡಿಸುವ ಹಾಗೂ ಆಧುನಿಕತೆಗೆ ಹೊಂದಿಕೊಳ್ಳುವ ಕಲಾತ್ಮಕ ಸವಾಲುಗಳೂ ಇವರಿಗೆ ಇರುತ್ತವೆ. ಇಂತಹ ನಾಟ್ಯವನ್ನು ನುರಿತ ಕಲಾವಿದರು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಅರ್ಧ ಗಂಟೆಯಿಂದ ಹಿಡಿದು ಎರಡು ಮೂರು ಗಂಟೆಯವರೆಗೂ ನಿರಂತರವಾಗಿ ಮಾಡುತ್ತಾರೆ. ಇದಕ್ಕೆ ಹೆಚ್ಚಿನ ದೈಹಿಕ ಸದೃಢತೆಯೂ ಬೇಕಿದೆ.

ಆದರೆ ಇಲ್ಲೊಬ್ಬರು ನಿರಂತರವಾಗಿ 216 ಗಂಟೆಗಳು ಅಂದರೆ ಸತತ 09 ದಿನಗಳ ಕಾಲ ಭರತನಾಟ್ಯವನ್ನು ವಿವಿಧ ಪ್ರಕಾರಗಳಲ್ಲಿ ಮಾಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡನ್ನು ಬರೆದಿದ್ದಾರೆ! ಅವರೇ ವಿದುಷಿ ದೀಕ್ಷಾ ವಿ.

ಹೌದು, ಬಿಡುವಿಲ್ಲದೆ ನಿರಂತರವಾಗಿ ಹಗಲು ಇರುಳೆನ್ನದೇ ಭರತನಾಟ್ಯ ನೃತ್ಯಪ್ರಕಾರದಲ್ಲಿ ಸಾಧನೆ ಮೆರೆಯುವುದು ಎಂದರೆ ಸಣ್ಣ ವಿಚಾರವಲ್ಲ ಮತ್ತು ಅದು ಅಷ್ಟು ಸುಲಭವೂ ಅಲ್ಲ. ಅದಕ್ಕೆ ದೃಢ ನಿರ್ಧಾರ ಮತ್ತು ಅಗತ್ಯ ಕಾರ್ಯಯೋಜನೆಯೂ ಬೇಕು. ನಿರಂತರವಾಗಿ ಒಂಭತ್ತು ದಿನಗಳ ಕಾಲ ಸಾಧನೆಯ ಕಡೆಗೆ ಹೆಜ್ಜೆ ಹಾಕುವುದೆಂದರೆ ನಿಜಕ್ಕೂ ಅದ್ಭುತ. ನೃತ್ಯವನ್ನು ಮಾಡುವಾಗ ದೈಹಿಕ ಮತ್ತು ಮಾನಸಿಕ ಬಳಲಿಕೆ ಆದರೂ ಅದನ್ನು ತೋರಿಸದೆ, ನಗು ನಗುತ್ತಾ ಸಂಭಾಳಿಸಿಕೊಂಡು ನಿರಂತರವಾಗಿ 216 ಗಂಟೆ ನೃತ್ಯ ಮಾಡಿರುವುದು ನಿಜಕ್ಕೂ ಅದ್ಭುತ ಮತ್ತು ಅಸಾಧಾರಣ.

ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಆರೂರು ಗ್ರಾಮದ ದೀಕ್ಷಾ.ವಿ ಅವರದ್ದು ಸಾಂಸ್ಕೃತಿಕ ಕ್ಷೇತ್ರವೇ ಹೆಮ್ಮೆಪಡುವ ಸಾಧನೆ. ಮೂರು ವಾರಗಳ ಹಿಂದೆ 170 ಗಂಟೆಗಳ ನಿರಂತರ ಭರತನಾಟ್ಯ ಪ್ರದರ್ಶನ ಪೂರೈಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧನೆ ಮಾಡಿದ್ದ ಮಂಗಳೂರಿನ ರೆಮೋನಾ ಇವೆಟ್ಟೆ ಪಿರೇರಾ ಅವರ ದಾಖಲೆಯನ್ನು ಮತ್ತೊಬ್ಬ ಕರಾವಳಿಯ ಕನ್ನಡತಿಯೇ ಹಿಂದಿಕ್ಕಿದ್ದಾರೆ. ಈ ಮೂಲಕ ವಿಶ್ವಸಾಂಸ್ಕೃತಿಕ ಭೂಪಟದಲ್ಲಿ ಕರ್ನಾಟಕದ ಹೆಗ್ಗುರುತು ದಾಖಲಿಸುವಲ್ಲಿ ದೀಕ್ಷಾ.ವಿ ಮಹತ್ವದ ಕೊಡುಗೆ ನೀಡಿದ್ದಾರೆ.

ಸಾಧನೆ ಎನ್ನುವುದು ಸಾಧಕನ ಸ್ವತ್ತೇ ವಿನಃ ಸೋಮಾರಿಯ ಸ್ವತ್ತಲ್ಲ ಎನ್ನುವ ಮಾತಿನಂತೆ ಸತತವಾದ ಪ್ರಯತ್ನ ಮತ್ತು ಅದನ್ನು ಸಾಧಿಸುವ ದೃಢ ಮತ್ತು ಅಚಲವಾದ ಸಂಕಲ್ಪಗಳು ಇದ್ದಲ್ಲಿ ಯಾರು ಏನನ್ನು ಬೇಕಿದ್ದರೂ ಸಾಧಿಸಬಹುದು. ಈ ಮಾತಿಗೆ ಪೂರಕ ಎನ್ನುವಂತೆ ಕಾಲುಗಳಲ್ಲಿ ನೋವಿದ್ದರೂ ಕಾಲುಗಳೆರಡಕ್ಕೂ ಬ್ಯಾಂಡೇಜ್ ಸುತ್ತಿಕೊಂಡು ನಿರಂತರವಾಗಿ 216 ಗಂಟೆಗಳ ಕಾಲ ನೃತ್ಯವನ್ನು ಮಾಡಿ ವಿಭಿನ್ನ ಸಾಧಕರ ಸಾಲಿಗೆ ದೀಕ್ಷಾ.ವಿ ಸೇರ್ಪಡೆಯಾಗಿದ್ದಾರೆ.

ಹದಿನೈದು ನಿಮಿಷ ವಿರಾಮ

ಆಗಸ್ಟ್ 21ರಂದು ಪ್ರತಿ ಮೂರು ಗಂಟೆಗಳ ನೃತ್ಯದ ನಂತರ 15 ನಿಮಿಷಗಳ ವಿರಾಮ ತೆಗೆದುಕೊಳ್ಳುವ ನಿಯಮವನ್ನು ಹಾಕಿಕೊಂಡು ಅದರಂತೆ ನವರಸ ದೀಕ್ಷಾ ವೈಭವಂ ಭರತನಾಟ್ಯ ಪ್ರದರ್ಶನವನ್ನು ಉಡುಪಿ ಅಜ್ಜರಕಾಡು ಡಾ.ಜಿ.ಶಂಕರ್ ಮಹಿಳಾ ಪ್ರಥಮ ದರ್ಜೆ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ರಂಗಮಂದಿರದಲ್ಲಿ ವಿದುಷಿ ದೀಕ್ಷಾ ವಿ. ಇವರು ಆರಂಭಿಸಿ ಆಗಸ್ಟ್ 30ರ ಮಧ್ಯಾಹ್ನ 3.30ಕ್ಕೆ ಅಂತ್ಯಗೊಳಿಸಿದರು. ಈ ನೃತ್ಯವನ್ನು ಎರಡು ಕ್ಯಾಮರಾಗಳ ಮೂಲಕ ದಾಖಲೀಕರಣ ಮಾಡಲಾಗಿದೆ.

ಇವರು ಸತತ 216 ಗಂಟೆಗಳ ಕಾಲ ಭರತನಾಟ್ಯ ಪ್ರದರ್ಶನವನ್ನು ಸಂಪನ್ನಗೊಳಿಸಿ ದಾಖಲೆ ಸೃಷ್ಟಿಸುತ್ತಿದ್ದಂತೆ ಅಲ್ಲಿ ನೆರದಿದ್ದ ಗಣ್ಯರು ಪುಷ್ಪವೃಷ್ಟಿ ಮಾಡುವ ಮೂಲಕ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಇದರ ಏಷ್ಯಾ ಹೆಡ್ ಮನೀಶ್ ಬಿಷ್ಣೋಯ್ ಅವರು ವಿದುಷಿ ದೀಕ್ಷಾ ವಿ. ಅವರ ಈ ವಿಶಿಷ್ಟ ದಾಖಲೆಯನ್ನು ಅಧಿಕೃತವಾಗಿ ಘೋಷಿಸಿ ವಿಶ್ವದಾಖಲೆಯ ಪ್ರಮಾಣಪತ್ರವನ್ನು ವಿತರಿಸಿದರು.

ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರೂರಿನ ವಿಠಲ್ ಪೂಜಾರಿ ಮತ್ತು ತಾಯಿ ಶುಭಾ ಅವರ ಮಗಳಾದ ದೀಕ್ಷಾ.ವಿ ಅವರು ಒಂದು ರೀತಿ ಕಲಾತಪಸ್ಸಿನ ಪ್ರತಿರೂಪ ಎನ್ನಬಹುದು. ಇವರ ಪತಿ ರಾಹುಲ್ ಅವರು ಇವರ ಸಾಧನೆಗೆ ಬೆನ್ನೆಲುಬಾಗಿ ನಿಂತಿದ್ದು ಇದು ಇವರಿಗೆ ಹೆಚ್ಚಿನ ಶಕ್ತಿಯನ್ನು ನೀಡಿದ್ದರಿಂದ ಪ್ರತಿ ದಿನವೂ ಕಲೆಯ ಸಾಧನೆಯಲ್ಲಿ ಹೆಜ್ಜೆಯಿಡುತ್ತಿದ್ದಾರೆ. ತನ್ನ ಒಂದನೇ ತರಗತಿಯಲ್ಲೇ ಭರತನಾಟ್ಯ ಕಲಾಕ್ಷೇತ್ರಕ್ಕೆ ಹೆಜ್ಜೆಯಿಟ್ಟ ದೀಕ್ಷಾ ಇವರತ್ತು ಇದನ್ನೇ ತನ್ನ ಬದುಕನ್ನಾಗಿ ಮಾಡಿಕೊಂಡಿದ್ದಾರೆ. ಇವರ ಕಲಾಸೇವೆಯು ಕೇವಲ ಭರತನಾಟ್ಯ ಕ್ಷೇತ್ರಕ್ಕಷ್ಟೇ ಸೀಮಿತವಾಗಿರದೇ ಮೆಹಂದಿ ಆರ್ಟ್, ವೀಣೆ ನುಡಿಸುವಿಕೆ, ಚಿತ್ರಕಲೆ, ಚೆಂಡೆ ಮತ್ತು ಮದ್ದಲೆ ವಾದನ ಹಾಗೂ ಯಕ್ಷಗಾನ ಇತ್ಯಾದಿಗಳಲ್ಲೂ ಪಾಂಡಿತ್ಯವಿದ್ದು, ಇದು ಇವರ ಬಹುಮುಖ ಪ್ರತಿಭೆಗೆ ಹಿಡಿದ ಕೈಗನ್ನಡಿ. ಇವರು ಮೂರನೇ ಸೆಮಿಸ್ಟರ್ ವಿದ್ಯಾಭ್ಯಾಸವನ್ನೂ ಮಾಡುತ್ತಾ ಕಲಾರಾಧನೆಯ ಜತೆಗೆ ವಿಶ್ವದಾಖಲೆಯನ್ನು ನಿರ್ಮಿಸಿದ್ದಾರೆ. ದೀಕ್ಷಾ ಅವರ ಭರತನಾಟ್ಯದ ಸಾಧನೆಯು ನಮ್ಮ ನಾಡು ಹೆಮ್ಮೆ ಪಡಬೇಕಾದ ಸಂಗತಿ.

ಎತ್ತಿನ ಬಂಡಿ ಪಯಣ

● ಎಂ. ಪರಮೇಶ್ವರ ಮದ್ದಿಹಳ್ಳಿ

ನಾವು ಚಿಕ್ಕವರಾಗಿದ್ದಾಗ ಬಂಡಿ ಕಟ್ಟಿಕೊಂಡು ನೆಂಟರ ಊರಿಗೋ ದೇವಸ್ಥಾನಕ್ಕೋ ಹೋಗುತ್ತೇವೆ ಅಂದರೆ ಅದರ ಆನಂದವೇ ಬೇರೆ ಇತ್ತು. ರಾತ್ರಿ ನಿದ್ದೆ ಇಲ್ಲದೇ ಬಂಡಿಯಲ್ಲಿ ಹೋಗ್ತೇವೆ ಅಂತಾ ಖುಷಿ. ಎತ್ತುಗಳನ್ನು ಹಾಗೂ ಎತ್ತಿನ ಬಂಡಿ ಚನ್ನಾಗಿ ತೊಳೆದು ಸಿಂಗಾರ ಮಾಡೋದೇ ಖುಷಿ. ಊರಿಂದ ಊರಿಗೆ ಗಾಡಿಯಲ್ಲಿ ಹೋಗುತ್ತಾ ಕಷ್ಟ ಸುಖ ಊರಿನ ವಿಚಾರ , ಹೊಲ ,ಬೆಳೆ ವಿಚಾರ ಮಾತನಾಡುತ್ತಿದ್ದೆವು. ಪಕ್ಕದೂರಿನ ಪೌರಾಣಿಕ ನಾಟಕಕ್ಕೆ , ಟೂರಿಂಗ್ ಟಾಕೀಸ್ ಸಿನಿಮಾಗೂ ನಮಗೆ ಎತ್ತಿನ ಬಂಡಿ ಬೇಕಿತ್ತು. ಅಷ್ಟೇ ಅಲ್ಲದೆ ಮನೆ ದೇವರ ಜಾತ್ರಗೆ, ಮನೆ ದೇವರ ದೇವಸ್ಥಾನಕ್ಕೆ ನಮಗೆ ಎತ್ತಿನ ಬಂಡಿ ಬೇಕಿತ್ತು. ಸಾಲು ಸಾಲು ಎತ್ತಿನ ಬಂಡಿಗಳು ಹೋಗುತ್ತಿದ್ದರೇ ಊರಿನ ಚಿಕ್ಕ ಮಕ್ಕಳಿಂದ ವೃದ್ಧರವರೆಗೆ ಊರು ಮರೆಯಾಗುವವರೆಗೂ ನೋಡಿದ್ದೇ ನೋಡಿದ್ದು.

ಮದುವೆಯಾದ ಹೊಸ ಜೋಡಿಯನ್ನು ಕರೆದುಕೊಂಡು ಬರುವಾಗ ನಡುವೆ ಯಾವು ದಾದರೂ ಊರು ಬಂದರೆ ಆ ಊರಿನಲ್ಲಿ ಮೆರವಣಿಗೆ ಮಾಡಿಕೊಂಡೇ ಹೋಗಬೇಕು. ಊರಿಂದ ಊರಿಗೆ ಹೋಗಬೇಕಾದರೆ ಹೊಲ ದಿಣ್ಣೆ ಗಳನ್ನು, ಕೆರೆ ,ಝರಿಗಳನ್ನು ದಾಟಿ ಹೋಗುವುದೇ ಒಂದು ಖುಷಿ. ಎಷ್ಟೋ ಭಾರಿ ಚಿಲುಮೆ ನೀರು ಕುಡಿದ್ದದ್ದು ಉಂಟು. ನಡುವೆ ಯಾವುದಾದರೂ ಊರುಗಳು ಸಿಕ್ಕರೇ ಅವರು ಯಾವ ಊರಿಗೆ ಹೋಗ್ತಾ ಇದ್ದೀರಿ ಬನ್ನಿ ಊಟ ಮಾಡಿಕೊಂಡು ಹೋಗಿ ಎಂದು ಕರೆದು ಅಡುಗೆ ಮಾಡಿ ಊಟ ಮಾಡಿಸಿದ್ದೂ ಇದೆ. ಅಳುವ ಮಕ್ಕಳಿದ್ದರಂತೂ ಹಾಲು ಮಜ್ಜಿಗೆ ಕುಡಿಸಿದ್ದು ಉಂಟು. ಈಗಿನಂತೆ ವ್ಯಾಪಾರಿ ಮನೋಭಾವ ಇಲ್ಲದ ಕಾಲ. ಹಸಿದ ಎತ್ತುಗಳಿಗೆ ಹುಲ್ಲನ್ನು ಕೊಟ್ಟು ಕಳಿಸಿದ್ದು ಉಂಟು. ಆಗ ಊರುಗಳಲ್ಲಿ ಎತ್ತು ಕಟ್ಟುವುದೇ ಹೆಮ್ಮೆಯ ಹಾಗೂ ಗೌರವಾನ್ವಿತ ವಿಷಯವಾಗಿತ್ತು. ಎತ್ತುಗಳ ಕೊಂಬಿಗೆ ಗಾಡಿಗಳ ಚಕ್ರಗಳಿಗೆ ಬಣ್ಣ ಹಚ್ಚಿ , ಕಮಾನು ಮಾಡಿ ಸಿಂಗಾರ ಮಾಡುವುದು ಸಾಮಾನ್ಯ.ಈಗ ಎತ್ತಿನ ಬಂಡಿಗಳ ಸ್ಥಾನವನ್ನು ಬೈಕ್, ಕಾರು, ಬಸ್ ಮೊದಲಾದ ಯಂತ್ರಗಳು ತುಂಬಿ, ಮನುಷ್ಯನ ಜೀವನ ಸಹ ಯಾಂತ್ರಿಕವಾಗಿದೆ.

ಮಣ್ಣಿನ ಗಣಪನ ಪರಂಪರೆ

● ಈರಣ್ಣ ಬೆಂಗಾಲಿ ರಾಯಚೂರು



ರಾಯಚೂರಿನ ಬಲರಾಮ ಶಾಲೆಯ ಮಣ್ಣಿನ ಗಣೇಶಕ್ಕೆ ಸುದೀರ್ಘ ಇತಿಹಾಸವಿದ್ದು, ಅಂದಿನಿಂದ ಇಂದಿನವರೆಗೂ ಸಂಪ್ರದಾಯ, ಆಚರಣೆಯನ್ನು ಅನುಸರಿಸುತ್ತಾ ಬಂದಿದ್ದು ತನ್ನದೇ ಆದ ಛಾಪನ್ನು ಮೂಡಿಸಿದೆ. ಮಣ್ಣಿನ ಮಗ ಗಣೇಶನ ಕೂಡಿಸುವಿಕೆ ಮತ್ತು ಭಜನೆಯ ಮೂಲಕ ವಿಸರ್ಜನೆಗೆ ತೆರಳುವ ಮೆರವಣಿಗೆಯು ಗಮನಾರ್ಹ. ಈ ಗಣೇಶನನ್ನು ಆರಂಭದಿಂದಲೂ ದೊಡ್ಡಮನಿ ಮನೆತನವು ತಯಾರು ಮಾಡುತ್ತಾ ಬಂದಿದೆ. ಈ ಹಿಂದೆ ಯಂಕಪ್ಪ, ಪಾಂಡು ಎಂಬುವವರು ಗಣೇಶ ಮಾಡುತ್ತಿದ್ದರೆ ಈಗ ಅವರ ಮಗ ನಂಜುಂಡ ಅವರು ಮಣ್ಣಿನ ಗಣೇಶನನ್ನು ಮಾಡುತ್ತಾ ಬಂದಿದ್ದಾರೆ. ಕೆಂಪುಮಣ್ಣಿನಿಂದ ಈ ಗಣೇಶನನ್ನು ತಯಾರಿಸುತ್ತಿದ್ದು, ಒಂದೇ ರೀತಿಯ, ಒಂದೇ ಗಾತ್ರದಲ್ಲಿ ಪ್ರತಿವರ್ಷದ ಗಣೇಶನನ್ನು ಮಾಡುವುದು ಮತ್ತೊಂದು ವಿಶೇಷ. ಸಾಂಪ್ರದಾಯಿಕವಾಗಿ ಕೂಡಿಸುವ ಇಲ್ಲಿನ ಗಣೇಶವು ರಾಯಚೂರಿನಲ್ಲೇ ಹೆಸರುವಾಸಿಯಾಗಿದೆ. ಹಲವು ವರ್ಷಗಳಿಂದ ಇಲ್ಲಿ ಮಣ್ಣಿನ ಗಣೇಶ ಮೂರ್ತಿಯನ್ನೇ ಕೂಡಿಸುವ ಪರಿಪಾಠವಿದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1			2	■	3	■	4	5
	■	■	6				■	
7	8			■		■	■	
■		■	■	9		10	■	
11		12	■		■	13	14	
	■	15	16		■	■		■
	■	■		■	17			18
	■	19				■	■	
20		■		■	21			

ಎಡದಿಂದ ಬಲಕ್ಕೆ

1. ಸಾಕ್ಷಿ ಹೇಳಲು ಬಂದು ನಿಂತ ಜಾಗ (4)
4. ಹಸಿದಾಗ ತಿನ್ನುವ ಅಶನ ದಿಕ್ಕು ತಪ್ಪಿಸಿ ಬಂದಿದೆ (2)
6. ಮಹಾಭಾರತ ಯುದ್ಧ ನಡೆದ ಸ್ಥಳ (4)
7. ಭೂಮಿಯ ಕೆಳಗಡೆ ಇರುವುದೆಂದು ನಂಬಲಾಗಿರುವ ಲೋಕ (4)
9. ಮನ್ಮಥನ ಪತ್ನಿಯೊಡನೆ ಬಂದಿರುವ ಪತಿವ್ರತೆ (3)
11. ಯಶ ಸಿಗುವ ಬಗ್ಗೆ ಏನು ಗುಮಾನಿ (3)
13. ಕ್ಷಾರ ಅಥವಾ ಉಪ್ಪು (3)
15. ಎಲ್ಲರೂ ಕೊನೆಗೆ ಸೇರಬೇಕಾದ ಸ್ಮಶಾನ (3)
17. ತಿನ್ನುವಾಗ ನಾಲಗೆಯಿಂದ ಸದ್ದುಮಾಡು (4)
19. ಅರದ ನಡುವೆ ನಿಂತಿರುವ ಹೆಬ್ಬಾವು (4)
20. ಸದ್ದು ಎನ್ನಲು ಎರಡಕ್ಷರ ಸಾಕಲ್ಲ (2)
21. ಚತುರ್ಯುಗಗಳಲ್ಲಿ ನಾಲ್ಕನೆಯದು (4)

ಮೇಲಿಂದ ಕೆಳಕ್ಕೆ

1. ಮೃದುವಾಗಿಲ್ಲ, ಬಿರುಸಾದುದು (3)
2. ಪಂಚಪಾಂಡವರಲ್ಲಿ ಒಬ್ಬಾತ (3)
3. ಯಾವ ನಿರ್ದಿಷ್ಟ ರಾಜಕೀಯ ಪಕ್ಷಕ್ಕೂ ಸೇರದವನು (4)
5. ಇನ್ನೊಬ್ಬರನ್ನು ಅನುಸರಿಸಿ ನಡೆಯುವುದು ಎಂದರ್ಥ (5)
8. ಒಟ್ಟಾರೆಯಾಗಿ ವಿಷಯವೊಂದರ ತಿರುಳು (3)
9. ಗಣದ ನಡುವೆ ಮತ್ತೊಂದು ಸಮೂಹ (3)
10. ಎರಡಕ್ಷರದ ಎಳ್ಳು (2)
11. ಹಾಡುಗಾರನಿಗೆ ಮತ್ತೊಂದು ಹೆಸರಿದು (5)
12. ಮೃತ್ಯು ದೇವನಿವನು (2)
14. ಬಳ್ಳಿ ಅಥವಾ ಗೊಂಚಲೂ ಆದೀತು (3)
16. ಯೋಗ್ಯವಾದುದು (4)
17. ನೂಲುವ ಒಂದು ಸಾಧನ (3)
18. ಭೂಮಿಯನ್ನು ಕೊರೆದು ಮಾಡಿದ ದಾರಿ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಕಟಾಂಜನ 4. ನ್ನಅ 6.ಕುರುಕ್ಷೇತ್ರ 7. ರಸಾತಲ 9.ಗರತಿ 11. ಸಂಶಯ 13. ಲವಣ 15. ಮಸಣ 17. ಚಪ್ಪರಿಸು 19. ಅಜಗರ 20. ರವ 21. ಕಲಿಯುಗ

ಮೇಲಿಂದ ಕೆಳಕ್ಕೆ
1. ಕಠೋರ 2. ನಕುಲ 3. ಪಕ್ಷೇತರ 5. ಅನುಸರಣ 8. ಸಾರಾಂಶ 9. ಗಡಣ 10. ತಿಲ 11. ಸಂಗೀತಗಾರ 12. ಯಮ 14. ವಲ್ಲರಿ 16. ಸಮಂಜಸ 17. ಚರಕ 18. ಸುರಂಗ

ಶ್ರೀಮದ್ ಭಾಗವತದ ಮಹಿಮೆ

ಪೂರ್ವದಲ್ಲಿ ತುಂಗಾತೀರದಲ್ಲಿ ಒಂದು ಪಟ್ಟಣ. ಅಲ್ಲಿ ವೇದ ಶಾಸ್ತ್ರ ಪಂಡಿತನಾದ ಆತ್ಮದೇವ ಎನ್ನುವ ಬ್ರಾಹ್ಮಣ ಇದ್ದನು. ಅವನಿಗೆ ಸಂತಾನ ಭಾಗ್ಯವಿರಲಿಲ್ಲ. ಒಮ್ಮೆ ಆ ಊರಿಗೆ ಬಂದ ಯತಿಗಳು ಅವನಿಗೆ ಆಶೀರ್ವದಿಸಿ ಒಂದು ಹಣ್ಣನ್ನು ನೀಡುತ್ತಾರೆ. ಇದನ್ನು ಪತ್ನಿಗೆ ಕೊಡು ಎನ್ನುತ್ತಾರೆ. ಆದರೆ ಆತನ ಪತ್ನಿಗೆ ಅದರಲ್ಲಿ ನಂಬಿಕೆ ಇಲ್ಲದ ಕಾರಣ ಕೊಟ್ಟಿಗೆಯಲ್ಲಿದ್ದ ಗೋವಿಗೆ ಅದನ್ನು ನೀಡಿಬಿಡುತ್ತಾಳೆ. ಬ್ರಾಹ್ಮಣ ದೂರ ದೇಶಕ್ಕೆ ಕೆಲಸದ ನಿಮಿತ್ತ ಹೋಗಿದ್ದಾಗ, ಗರ್ಭಿಣಿಯಾಗಿದ್ದ ತನ್ನ ತಂಗಿಯ ಮಗುವನ್ನೇ ಕೇಳಿ ಪಡೆದು ಗಂಡನನ್ನೂ ಅದೇ ತಮ್ಮ ಮಗುವೆಂದು ನಂಬಿಸುತ್ತಾಳೆ.

ಆ ಮಗುವಿಗೆ ದುಂದುಕಾರಿ ಅಂತ ಹೆಸರನ್ನು ಇಡುತ್ತಾರೆ. ಇತ್ತ ಕೊಟ್ಟಿಗೆಯಲ್ಲಿ ಇದ್ದ ಹಸು ಆ ಹಣ್ಣು ತಿಂದು ಒಂದು ಗಂಡು ಮಗುವಿಗೆ ಜನ್ಮ ನೀಡುತ್ತದೆ. ಅದರ ಕಿವಿ ಆಕಳ ಹಾಗೇ ಇದ್ದ ಕಾರಣ ಅವನಿಗೆ ಗೋಕರ್ಣ ಅಂತ ನಾಮಕರಣ ಮಾಡುತ್ತಾರೆ. ಕಾಲ ಕ್ರಮೇಣ ಇಬ್ಬರು ಬೆಳೆದು, ದೊಡ್ಡವರಾಗಿ ದುಂದುಕಾರಿ ದುಷ್ಟ ಪ್ರವೃತ್ತಿ ಉಳ್ಳವನಾಗಿ ಲೋಕ ಕಂಟಕನಾಗುತ್ತಾನೆ. ಗೋಕರ್ಣ ಒಳ್ಳೆಯ ಪಂಡಿತನಾಗುತ್ತಾನೆ. ತನ್ನ ಮಗನ ದುಷ್ಟ ಕಾರ್ಯಗಳನ್ನು ನೋಡಿ ಮನಸ್ಸು ಬೇಸರವಾಗಿ ಆ ಬ್ರಾಹ್ಮಣ ವಾನಪ್ರಸ್ಥಾಶ್ರಮ ಹೋಗಿ ಶ್ರೀ ಮದ್ಭಾಗವತ ದಶಮ ಸ್ಕಂದ ಪಾರಾಯಣ ಮಾಡುತ್ತಾ ದೇಹತ್ಯಾಗ ಮಾಡಿ ಸದ್ಗತಿ ಪಡೆಯುತ್ತಾನೆ. ಇವನ ದುಷ್ಟ ಕೃತ್ಯ ಗಳನ್ನು ಕಂಡು ಅವನ ತಾಯಿಯು ಸಹ ಪ್ರಾಣತ್ಯಾಗ ಮಾಡುವಳು.

ದುಂದುಕಾರಿ ತನ್ನ ದುಶ್ಚಟಗಳಿಂದಲೇ ಎಲ್ಲ ಕಳೆದುಕೊಂಡು ಸಾವನ್ನಪ್ಪಿ ಪ್ರೇತವಾಗುತ್ತಾನೆ. ಅದರಿಂದ ಬಹಳ ಭಾದಿತನಾಗಿ ತನ್ನ ಮನೆಗೆ ಬಂದು ತನ್ನ ಸಹೋದರ ನಾದ ಗೋಕರ್ಣನ ಮುಂದೆ ಕಾಣಿಸಿಕೊಂಡು ಹಿಂದೆ ಮಾಡಿದ ಪಾಪ ಕೃತ್ಯಗಳಿಂದ ಈ ಜನ್ಮ ಬಂದಿದೆ. ಬಹಳ ಕಷ್ಟವಾಗಿದೆ. ನನಗೆ ಇದರಿಂದ ಮುಕ್ತಿ ಕೊಡಿಸು ಎಂದು ಕೇಳಿಕೊಳ್ಳುತ್ತಾನೆ.

ಅದಕ್ಕೆ ಗೋಕರ್ಣ 'ನಿನ್ನ ಶ್ರಾದ್ಧ ಕರ್ಮಗಳು ಎಲ್ಲಾ ಮಾಡಿದ್ದೇನೆ. ಗಯಾ ಶ್ರಾದ್ಧ ಸಹ ಆಗಿದೆ. ಆದರು ನಿಮಗೆ ಈ ಜನುಮ ಹೋಗಿಲ್ಲ ಅಂದರೆ ವಿಚಾರ ಮಾಡಿ ಹೇಳುವೆ' ಅಂತ ಹೇಳಿ ಬಲ್ಲವರನ್ನು ಕೇಳಲು ಎಲ್ಲರು ಸೂರ್ಯ ದೇವನನ್ನ ಎನ್ನುತ್ತಾರೆ. ಆಗ ಸೂರ್ಯದೇವನ ಕುರಿತು ಗೋಕರ್ಣ ಪ್ರಾರ್ಥನೆ ಮಾಡಿ 'ನನ್ನ ಅಣ್ಣನ ಪ್ರೇತ ಜನ್ಮ ನಿವಾರಣೆ ಬಗ್ಗೆ ಹೇಳಬೇಕು.. ಅಂತ ಕೇಳಿದಾಗ ಶ್ರೀ ಮದ್ ಭಾಗವತ ಸಪ್ತಾಹ ಮಾಡಲು ಸೂರ್ಯದೇವನ ಆಜ್ಞೆ ಆಗುತ್ತದೆ. ಅದರಂತೆ ತನ್ನ ಮನೆಯ ಹತ್ತಿರ ತುಂಗಭದ್ರಾ ತೀರದಲ್ಲಿ ಸಪ್ತಾಹ ಮಾಡುತ್ತಾನೆ. ಎಲ್ಲಾ ಜನರು, ಭಾಗವತ ಕೇಳುವುದಕ್ಕೆ ಬರುತ್ತಾರೆ. ದುಂದುಕಾರಿ ಪ್ರೇತ ಜನ್ಮ ಇದ್ದ ಕಾರಣ ಕೂಡಲು ಆಗದೇ ಗಾಳಿಯ ರೂಪದಲ್ಲಿ ಬಂದು ಅಲ್ಲಿ ಇದ್ದ ಬಿದಿರಿನ ಕೋಲಿನಲ್ಲಿ ಕುಳಿತು ನಿತ್ಯ ಭಾಗವತ ಕೇಳುತ್ತಾ ಇದ್ದ. ಆ ಬಿದಿರಿಗೆ ಏಳು ಗಂಟುಗಳು ಇದ್ದವು. ಒಂದೊಂದು ದಿನ ಭಾಗವತ ಕೇಳಿದಾಗಲೂ ಅದರಲ್ಲಿದ್ದ ಪ್ರತಿ ಗಂಟು ಆ ದಿನ ದೊಡ್ಡ ಶಬ್ದ ಮಾಡಿ ಒಡೆಯುತ್ತಾ ಇತ್ತು. ಏಳನೆಯ ದಿನ ಸಪ್ತಾಹ ಮುಗಿದಾಗ ಏಳನೆಯ ಗಂಟು ಒಡೆದು ತನ್ನ ಪ್ರೇತ ಜನ್ಮವನ್ನು ಕಳೆದುಕೊಂಡು ಸುಂದರವಾದ ದಿವ್ಯ ರೂಪದಿಂದ, ತುಳಸಿ ಮಾಲೆಯನ್ನು ಧರಿಸಿ, ಪೀತಾಂಬರಧಾರಿಯಾಗಿ ಆಭರಣಗಳನ್ನು ಧರಿಸಿದ ದುಂದುಕಾರಿ ಹೊರಬಂದುಎಲ್ಲಾ ರಿಗು ನಮಸ್ಕರಿಸಿ 'ಶ್ರೀ ಮದ್ಭಾಗವತ ಶ್ರವಣ ದಿಂದ ನನ್ನ ಎಲ್ಲಾ ಪಾಪಗಳು, ಪ್ರೇತ ಜನ್ಮ ಹೋಯಿತು' ಅಂತ ಹೇಳಿ ಇದರ ಮಹಿಮೆಯನ್ನು ವರ್ಣಿಸುತ್ತಾನೆ ಮತ್ತು ವಿಷ್ಣು ಲೋಕವನ್ನು ಸೇರುತ್ತಾನೆ. ಈ ರೀತಿ ಶ್ರೀ ಮದ್ಭಾಗವತ ಶ್ರವಣದಿಂದ ಅಜ್ಞಾನದ ಗಂಟು ಒಡೆದು ಹೃದಯದ ಸಂಶಯ ಪರಿಹಾರವಾಗಿ ಸಕಲ ಪಾಪಕರ್ಮಗಳು ಪರಿಹಾರವಾಗಿವ ಹೋಗುತ್ತದೆ ಎನ್ನುತ್ತಾರೆ..ಇದೇ ಶ್ರೀ ಮದ್ಭಾಗವತದ ಮಹಿಮೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಶತಮಾನದ ಹಿಂದಿನ ರಸಮಟ್ಟ

ಒಂದು ಜಾಗದ ಸಮತಳವನ್ನು ಪರಿಶೀಲಿಸಲು ಬಳಸುವ ಸಾಧನ ರಸಮಟ್ಟ. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಇದರ ಉಪಯೋಗ ಅಧಿಕ. ಈ ಚಿತ್ರದಲ್ಲಿರುವ ರಸಮಟ್ಟ ಸುಮಾರು ಒಂದು ಶತಮಾನದಷ್ಟು ಹಿಂದಿನದು. ನಮ್ಮ ತಾತನವರ ಕಾಲದ್ದು. ದಶಕಗಳ ಹಿಂದೆ ನನಗೆ ಬಳುವಳಿಯಾಗಿ ಬಂದ ಈ ಸಾಧನ ಈಗಲೂ ಸುಸ್ಥಿತಿಯಲ್ಲಿದೆ. ಆಯತಾಕಾರದ ಮರದ ತುಂಡಿನ ಒಳಭಾಗವನ್ನು ಕೌಶಲದಿಂದ ಕೊರೆದು, ಅದರಲ್ಲಿ ಪಾದರಸದ ಗುಳ್ಳೆ ಇರವ ಗಾಜಿನ ಕೊಳವೆಯನ್ನು ಅಳವಡಿಸಿ, ಮೇಲ್ಭಾಗವನ್ನು ಕಿಂಡಿಯಿರುವ ಹಿತ್ತಾಳೆಯ ಹಾಳೆಯಿಂದ ಮುಚ್ಚಿ, ನಾಲ್ಕು ಸ್ಕ್ರೂಗಳಿಂದ ಭದ್ರಪಡಿಸಿ ರಚಿಸಲಾಗಿರುವ ಈ ಸರಳ ಸಾಧನ ಆಕರ್ಷಕವಾಗಿದೆ. ಈಗನಷ್ಟು ಸೌಲಭ್ಯಗಳಿಲ್ಲದ ಕಾಲಘಟ್ಟದಲ್ಲಿ ನಯವಾಗಿಯೂ, ನಾಜೂಕಾಗಿಯೂ ನಿರ್ಮಿಸಲಾಗಿರುವ ಉತ್ತಮ ಗುಣಮಟ್ಟದ ಈ ರಸಮಟ್ಟ ಅಂದಿನ ಶ್ರಮಿಕರ ನೈಪುಣ್ಯತೆಯ ನಿದರ್ಶನದಂತಿದೆ. ವಿಕಸಿತ ತಂತ್ರಜ್ಞಾನದ ಫಲವಾಗಿ ನಾನಾ ನಮೂನೆಯ ರಸಮಟ್ಟ ಸಾಧನಗಳು ಆವಿಷ್ಕಾರಗೊಂಡು ಪುರಾತನ ಮಾದರಿಯ ಉಪಕರಣಗಳನ್ನು ನೇಪಥ್ಯಕ್ಕೆ ಸರಿಸಿವೆ. ಈ ರಸಮಟ್ಟ ಈಗ ಪ್ರಾಚ್ಯ ವಸ್ತುವಾಗಿ ಮನೆಯ ತೋರುಗೂಡಿನಲ್ಲಿ ಜೋಪಾನವಾಗಿದೆ.

● ಮಂಜುನಾಥ ಡಿ. ಎಸ್.

ನಿನ್ನ ನೀನು ತಿದ್ದಿಕೊಳ್ಳುವುದ ಕಲಿ!

ತಿದ್ದಿಕೊಳೊ ನಿನ್ನ ನೀಂ; ಜಗವ ತಿದ್ದುವುದಿರಲಿ ।
ತಿದ್ದಿಕೆಗಮೊಂದು ಮಿತಿಯುಂಟು ಮರೆಯದಿರು ॥
ಉದ್ದ ನೀಂ ಬೆರಳನಿತು ಬೆಳೆದೀಯೆ ಸಾಮಿಂದೆ ।
ಸ್ಪರ್ಧಿಯೆ ತ್ರಿವಿಕ್ರಮಗೆ? - ಮಂಕುತಿಮ್ಮ ॥

ಬೇರೆಯವರ ಅವಗುಣಗಳನ್ನ, ಲೋಪದೋಷಗಳನ್ನ ತಿದ್ದುವುದಕ್ಕಿಂತ ಮೊದಲು ನಿನ್ನಲ್ಲಿರುವಂತಹ ಲೋಪದೋಷಗಳನ್ನ, ನಿನ್ನ ಮನಸ್ಥಿತಿಯನ್ನ ನೀನು ತಿದ್ದಿಕೊಂಡು ಬದಲಾಗುವುದು ಒಳ್ಳೆಯದು. ತಿದ್ದಿಕೆಗೂ ಒಂದು ಮಿತಿ ಎಂಬುದು ಇದೆ. ಈ ಜಗತ್ತು ಅದರ ಪಾಡಿಗೆ ಅದು ಸಾಗುತ್ತಿರುತ್ತದೆ. ಜಗತ್ತನ್ನು ತಿದ್ದುವ ಕೆಲಸ ಮಾಡಲು ನೀನೇನು ದೇವರಂತೂ ಅಲ್ಲವೇ ಅಲ್ಲ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ನಿನ್ನನ್ನು ನೀನು ಮೊದಲು ತಿದ್ದಿಕೊಂಡರೆ ಈ ಜಗತ್ತನ್ನೇ ತಿದ್ದಿಕೊಂಡಂತೆ ! ಈ ವ್ಯವಸ್ಥೆ, ಈ ಜಗತ್ತು ಎನ್ನುವುದು ತ್ರಿವಿಕ್ರಮನ ಹಾಗೆ ಬೆಳೆದಿದೆ, ನೀನೋ ಅದರ ಒಂದು ಕಣವಷ್ಟೇ ! ಹಾಗಾಗಿ ಬೇರೆಯವರ ಲೋಪಗಳನ್ನಾಗಲಿ, ಅವಗುಣಗಳನ್ನಾಗಲಿ ಎತ್ತಿಹಿಡಿದು ಅವರನ್ನು ತಿದ್ದುವುಕ್ಕಿಂತ, ನಿನ್ನಾವ ಗುಣಗಳನ್ನ ನೀನು ತಿದ್ದುಕೊಳ್ಳುವುದು ಸೂಕ್ತ ಎಂದು ಹೇಳಿದ್ದಾರೆ. ನಮ್ಮಯ ಅವಗುಣಗಳು ನಮಗೆ ಗೊತ್ತೇ ಆಗುವುದಿಲ್ಲ, ನಾವೊಂದು ರೀತಿಯಲ್ಲಿ ಎಲ್ಲದರಲ್ಲೂ, ಎಲ್ಲಾ ವಿಷಯಗಳಲ್ಲೂ ಸಹ ಸರಿ ಇದ್ದೇವೆ, ನಾನು ಹೇಳುವುದು, ನಾನು ಮಾಡುವುದೇ ಸರಿ ಎಂಬ ಭಾವ ನಮ್ಮ ಮನದಲ್ಲಿ ಮೊಳೆತು, ನಮ್ಮಲ್ಲಿರುವ ಲೋಪದೋಷಗಳನ್ನು ನಾವು ಹಾಗೆಯೇ ಸಾಕಿ ಸಲಹುತ್ತಾ, ಬೇರೆಯವರ ಲೋಪದೋಷಗಳನ್ನು ಎತ್ತಿ ಹಿಡಿಯುತ್ತಾ ನಮ್ಮ ವಿಷಯದಲ್ಲಿ ವಕೀಲಿಕೆ ಮಾಡುವ ನಾವುಗಳು ಬೇರೆಯವರ ವಿಷಯ ಬಂದಾಗ ನ್ಯಾಯಾಧೀಶರಾಗಿ ವರ್ತಿಸುತ್ತೇವೆ. ಗುಲಗಂಜಿಗೆ ತನ್ನ ಕಪ್ಪು ಹೇಗೆ ಅರಿವಿಗೆ ಬರುವುದಿಲ್ಲವೋ ಹಾಗೆಯೇ ನಮ್ಮಲ್ಲಿ ಇರುವಂತಹ ಲೋಪದೋಷಗಳು, ತಪ್ಪುಗಳು, ಅವಗುಣಗಳು ನಮ್ಮ ಅರಿವಿಗೆ ಬರುವುದೇ ಇಲ್ಲ. ನಾವು ಎಲ್ಲದರಲ್ಲೂ ಸರಿ ಇದ್ದೇವೆ ಎಂಬ ಭ್ರಮೆಯಲ್ಲಿ ಮಿಂದೆದ್ದ ಮನಸ್ಥಿತಿಯವರು ನಾವಾಗಿರುತ್ತೇವೆ. ಆದರೆ ವಾಸ್ತವತೆಯ ಸಂಗತಿಗಳೇ ಬೇರೆಯಾಗಿರುತ್ತವೆ. ಆದುದರಿಂದ ನಾವುಗಳು ಬೇರೆಯವರ ತಪ್ಪು ಒಪ್ಪುಗಳನ್ನು ಬೆರಳು ಮಾಡಿ ತೋರಿಸುವುದಕ್ಕಿಂತ ಮೊದಲು ನಮ್ಮಲ್ಲಿಯೇ ಇರುವ

ಲೋಪದೋಷಗಳನ್ನು ನಾವು ಸರಿಪಡಿಸಿಕೊಳ್ಳುವುದು ಬಲು ಉತ್ತಮವಾದ ಕಾರ್ಯವೇ ಆಗಿರುತ್ತದೆ. ಮೊದಲಿಗೆ ಬೇರೆಯವರನ್ನು ತಿದ್ದುವುದಕ್ಕಿಂತ ಮುಂಚೆ ನಮ್ಮನ್ನು ನಾವು ತಿದ್ದಿಕೊಳ್ಳುವಂತಹದಾಗಬೇಕು. ನಮ್ಮ ಆತ್ಮೋದ್ಧಾರ ಮೊದಲಿಗಾಗಬೇಕಲ್ಲದೆ ಈ ಸಮಾಜವನ್ನಾಗಲಿ, ವ್ಯವಸ್ಥೆಯನ್ನಾಗಲಿ ತಿದ್ದಲು ಹೋಗಬಾರದು. ಹಾಗಾಗಿ ಮೊದಲಿಗೆ ನಮ್ಮನ್ನು ತಾವು ತಿದ್ದಿಕೊಳ್ಳುವುದು ಸೂಕ್ತ. ಈ ವ್ಯವಸ್ಥೆಯ, ಈ ಸಮಾಜದ ಒಂದು ಕಣವಷ್ಟೇ ನೀನಾಗಿರುವುದರಿಂದ ಈ ವ್ಯವಸ್ಥೆಯನ್ನು ಬದಲಿಸಲು ನಿನ್ನಿಂದ ಸಾಧ್ಯವೇ? ಎಂದಿಗೂ ಇಲ್ಲ. ಈ ವ್ಯವಸ್ಥೆ ಹಾಗೆಯೇ ಇರುತ್ತದೆ ಹಾಗೂ ಹಾಗೆಯೇ ನಡೆಯುತ್ತಲಿರುತ್ತದೆ. ಈ ವ್ಯವಸ್ಥೆಯನ್ನು ತಿದ್ದಲು ಹೋಗಿ ಗೆದ್ದವರಾದರೂ ಯಾರಿದ್ದಾರೆ? ಈ ವ್ಯವಸ್ಥೆಯನ್ನು ಬದಲಿಸಲು ಪ್ರಯತ್ನಪಟ್ಟಂತವರಿದ್ದಾರೆಯೇ ಹೊರತು ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸಲು ಯಾರಿಂದಲೂ ಸಾಧ್ಯವೇ ಆಗಿಲ್ಲ ಎಂಬುದಂತೂ ಸತ್ಯವೇ ಆಗಿದೆ. ಆದುದರಿಂದ ಈ ವ್ಯವಸ್ಥೆ ಎಂಬುದು, ಈ ಸಮಾಜ ಎಂಬುದು, ಈ ಜಗತ್ತು ಎಂಬುದು ತ್ರಿವಿಕ್ರಮನ ಹಾಗೆ ಬೆಳೆದಿದೆ. ಪುರಾಣ ಪುಣ್ಯ ಕಥೆಯಲ್ಲಿ ವಾಮನನು ತ್ರಿವಿಕ್ರಮನ ಹಾಗೆ ಬೆಳೆದು ನಭದಲ್ಲೊಂದು, ಭೂಮಿಯ ಮೇಲೊಂದು ಪಾದವನ್ನಿಟ್ಟು ಮತ್ತೊಂದು ಪಾದದ ಜಾಗ ಬೇಕೆಂದು ಕೇಳಿದಾಗ ಬಲಿ ಚಕ್ರವರ್ತಿಯು ತನ್ನ ತಲೆಯ ಮೇಲೆಯೇ ಪಾದವನ್ನಿಡಲು ಕೋರಿಕೊಂಡ. ಅಂದರೆ ತ್ರಿವಿಕ್ರಮತೆ ಎಂದರೆ ಸಾರಿಸಾಟಿಯಾಗದಿರುವುದು, ವಿಶ್ವರೂಪಿ ಎಂಬ ಅರ್ಥವಾಗುತ್ತದೆ. ಈ ವ್ಯವಸ್ಥೆ ಎಂಬುದೂ ಸಹ ವಿಶ್ವರೂಪಿಯೇ ಆಗಿರುವಾಗ ನೀನದರಳೊಗೊಂದು ಕಣವಷ್ಟೇ ಆಗಿದ್ದು, ಆ ತ್ರಿವಿಕ್ರಮತೆಯೊಂದಿಗಾದರೂ ಸ್ಪರ್ಧಿಸಲು ಸಾಧ್ಯವಿದೆಯೇ ? ಎಂದಿಗೂ ಇಲ್ಲ. ಆದುದರಿಂದ ಈ ವ್ಯವಸ್ಥೆಯೊಂದಿಗೆ ನೀನು ಸ್ಪರ್ಧೆಗೆ ಇಳಿಯುವುದಕ್ಕಿಂತ 'ನಿನ್ನನ್ನು ನೀನು ತಿದ್ದಿಕೊಂಡರೆ, ಈ ವ್ಯವಸ್ಥೆಯನ್ನೇ ತಿದ್ದಿದಂತೆ' ಎಂದು ಸೂಚ್ಯವಾಗಿ 'ತಿದ್ದಿಕೋಳೋ ನಿನ್ನ ನೀಂ, ಜಗವ ತಿದ್ದುವುದಿರಲಿ' ಎಂದು ಹೇಳಿದ್ದಾರೆ. ಆದುದರಿಂದ ನಮ್ಮ ವ್ಯಾಪ್ತಿಯನ್ನರಿತು, ಇತರರ ಮೇಲೆ ಗುರುತನವ ತಾಳದೆ, ತನ್ನ ತಾನರಿತು ಜೀವನ ಮಾಡುವುದು ಸೂಕ್ತ ಎಂದು ಡಿವಿಜಿಯವರರು ಈ ಪದ್ಯದಲ್ಲಿ ವುವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪಾಕ್ ಕ್ರಿಕೆಟಿಗ ಆಸಿಫ್ ಅಲಿ ನಿವೃತ್ತಿ

ಇಸ್ಲಾಮಾಬಾದ್: ಪಾಕಿಸ್ತಾನದ ಸ್ಫೋಟಕ ಬ್ಯಾಟ್ಸ್‌ಮನ್ ಆಸಿಫ್ ಅಲಿ ತಮ್ಮ 33ನೇ ವಯಸ್ಸಿನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. 2023ರ ನಂತರ ಆಸಿಫ್‌ಗೆ ಪಾಕಿಸ್ತಾನ ಪರ ಆಡಲು

ತಡದಲ್ಲಿ ಅವಕಾಶ ಸಿಕ್ಕಿರಲಿಲ್ಲ. ಅವರು ನಿವೃತ್ತ ಆಟಗಾರರಿಗಾಗಿ ನಡೆಯುವ ಲೀಗ್‌ನಲ್ಲಿಯೂ ಭಾಗವಹಿಸಲು ಪ್ರಾರಂಭಿಸಿದ್ದರು. ಇದೀಗ ಆಸಿಫ್ ಅಲಿ ಅಧಿಕೃತವಾಗಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. 2018 ಮತ್ತು 2023ರ ನಡುವೆ ಅವರು 21 ಏಕದಿನ ಮತ್ತು 58 ಟಿ20 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಪಾಕಿಸ್ತಾನ ತಂಡವನ್ನು ಪ್ರತಿನಿಧಿಸಿದ್ದಾರೆ. ಆಸಿಫ್ ಅಲಿ ತಮ್ಮ ವೃತ್ತಿಜೀವನದಲ್ಲಿ ಹಲವು ಬಾರಿ ವಿವಾದಕ್ಕೆ ಸಿಲುಕಿದ್ದಾರೆ. 2022ರ ಏಷ್ಯಾ ಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವೆ ಪಂದ್ಯ ನಡೆದಾಗ ಅಫ್ಘಾನಿಸ್ತಾನದ ವೇಗದ ಬೌಲರ್ ಫರೀದ್ ಅಹ್ಮದ್ ಅವರನ್ನು ಬ್ಯಾಟ್‌ನಿಂದ ಹೊಡೆಯಲು ಪ್ರಯತ್ನಿಸಿದ್ದರು. ಪಂದ್ಯದ 19ನೇ ಓವರ್‌ನಲ್ಲಿ ಅಹ್ಮದ್ ರೌಫ್ ಬೌಲ್ ಮಾಡಿ ಆಸಿಫ್ ಅಲಿಯನ್ನು ಔಟ್ ಮಾಡಿದರು.ಅದರಿಂದ ಕೋಪಗೊಂಡ ಆಸಿಫ್ ಅಲಿ, ಅಫ್ಘಾನ್ ಬೌಲರ್‌ಗೆ ಡಿಕ್ಕಿ ಹೊಡೆದು ಬ್ಯಾಟ್‌ನಿಂದ ಹೊಡೆಯಲು ಓಡಿ ಹೋಗಿ, ನಂತರ ಪೆವಿಲಿಯನ್‌ಗೆ ಮರಳಿದ್ದರು.

ಜಾಫ್ನಾ: ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ

ಕೊಲಂಬೊ: ಶ್ರೀಲಂಕಾದ ಅಧ್ಯಕ್ಷ ಅನುರ ಕುಮಾರ ದಿಸಾನಾಯಕೆ ಅವರು ಯುದ್ಧಪೀಡಿತ ಜಾಫ್ನಾ ಪ್ರದೇಶದಲ್ಲಿ ಮೊದಲ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದರು. ಸಮಾರಂಭದಲ್ಲಿ ಮಾತನಾಡಿದ ದಿಸಾನಾಯಕೆ, ಅಂತರ್ಯುದ್ಧ, ಆರ್ಥಿಕ ಬಿಕ್ಕಟ್ಟು ಮತ್ತು ಭ್ರಷ್ಟಾಚಾರದಂತಹ ತಪ್ಪು ಕಾರಣಗಳಿಗಾಗಿ ಯಾವಾಗಲೂ ಸುದ್ದಿಯಲ್ಲಿರುತ್ತಿದ್ದ ಶ್ರೀಲಂಕಾ, ಕ್ರಿಕೆಟ್ ಅನ್ನು ಮಾತ್ರ ಒಳ್ಳೆಯ ಸುದ್ದಿ ಒದಗಿಸುವ ಏಕೈಕ ತಾಣವಾಗಿದೆ ಎಂದು ಹೇಳಿದರು. ಕ್ರೀಡಾಂಗಣ ಪೂರ್ಣಗೊಂಡಾಗ, ಅದು ಲಂಕಾದ ಎಂಟನೇ ಕ್ರಿಕೆಟ್ ಸ್ಟೇಡಿಯಂ ಆಗಲಿದೆ. ಈಜುಕೊಳ, ಮಲ್ಟಿ-ಪಾರ್ಲರ್ ಒಳಾಂಗಣ ಕ್ರೀಡಾಂಗಣ, ಸ್ಟಾರ್‌ಕ್ಲಾಸ್ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳ ಜತೆಗೆ ಶಾಪಿಂಗ್ ಮಾಲ್ ಮತ್ತು ಮನರಂಜನಾ ಸೌಲಭ್ಯಗಳು ಸೇರಿದೆ. ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ 80 ಮೀಟರ್‌ಗಳವರೆಗಿನ ಬೌಂಡರಿ ಅಂತರವನ್ನು ಹೊಂದಿರುವ ಹತ್ತು ಸೆಂಟರ್ ವಿಕೆಟ್‌ಗಳನ್ನು ಒಳಗೊಂಡಂತೆ 48 ಎಕರೆಗಳಲ್ಲಿ ಈ ಕ್ರೀಡಾಂಗಣವನ್ನು ನಿರ್ಮಿಸಲಾಗುತ್ತದೆ. 40,000 ಪ್ರೇಕ್ಷಕರ ಸಾಮರ್ಥ್ಯ ವಿರಲಿದೆ. ಈ ಯೋಜನೆಗೆ ಲಂಕಾ ಕ್ರಿಕೆಟ್ ಮಾತ್ರ ಹಣಕಾಸು ನೆರವು ನೀಡುತ್ತಿದ್ದು, ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಲು ಬಯಸುವ ಪ್ರತಿಭಾನ್ವಿತ ಕ್ರಿಕೆಟಿಗರಿಗೆ ಸಮಾನ ಅವಕಾಶಗಳನ್ನು ಒದಗಿಸುತ್ತದೆ ಎಂದೂ ಹೇಳಿದೆ.

ಮೂರು ಏಕದಿನ, 5 ಟಿ20 ಪಂದ್ಯಗಳು | ತಂಡದಿಂದ ಕಮಿನ್ಸ್ ಹೊರಕ್ಕೆ

ಮುಂದಿನ ತಿಂಗಳು ಭಾರತ-ಆಸೀಸ್ ಸರಣಿ

ಸಿಡ್ನಿ: ಆಸ್ಟ್ರೇಲಿಯಾ ತಂಡ ಅಕ್ಟೋಬರ್ 19ರಿಂದ ನವೆಂಬರ್ 6ರ ವರೆಗೆ ಭಾರತದ ವಿರುದ್ಧ ಮೂರು ಏಕದಿನ ಮತ್ತು ಐದು ಟಿ20 ಕ್ರಿಕೆಟ್ ಪಂದ್ಯಗಳನ್ನು ಆಡಲಿದೆ. ಆದರೆ

ಈ ಸರಣಿಗೆ ಮುನ್ನ ಆತಿಥೇಯ ಆಸ್ಟ್ರೇಲಿಯಾದ ವೇಗಿ ತಂಡದಿಂದ ಹೊರಬಿದ್ದಿದ್ದಾರೆ.

ಬೆನ್ನಿನ ಗಾಯದಿಂದಾಗಿ ಪ್ರಮುಖ ವೇಗದ ಬೌಲರ್ ಪ್ಯಾಟ್ ಕಮ್ಮಿನ್ಸ್ ಅವರನ್ನು ಸರಣಿಯಿಂದ ಹೊರಗಿಡಲಾಗಿದೆ. ಇದರಿಂದಾಗಿ ಭಾರತದಂತಹ ಬಲಿಷ್ಠ ಎದುರಾಳಿಯ ವಿರುದ್ಧ ಆಡುವ ಆಸ್ಟ್ರೇಲಿಯಾ ತಂಡಕ್ಕೆ ಬಲವಾದ ಹೊಡೆತ ಬಿದ್ದಂತಾಗಿದೆ ಎಂಬ ವಿಶ್ಲೇಷಣೆ ಆರಂಭವಾಗಿದೆ.

ಭಾರತ-ಆಸೀಸ್ ಮಧ್ಯೆ ಮೊದಲ ಏಕದಿನ ಪಂದ್ಯವು ಅಕ್ಟೋಬರ್-19ರಂದು ಪರ್ತ್‌ನಲ್ಲಿ ನಡೆಯಲಿದೆ. ಎರಡನೇ ಏಕದಿನ ಪಂದ್ಯವು ಅಡಿಲೈಡ್‌ನಲ್ಲಿ ಅಕ್ಟೋಬರ್-23ರಂದು ನಿಗದಿಯಾಗಿದೆ. ಕೊನೆಯ ಏಕದಿನ ಪಂದ್ಯವು ಸಿಡ್ನಿಯಲ್ಲಿ ಅಕ್ಟೋಬರ್-25ರಂದು ಆಯೋಜನೆ ಆಗಲಿದೆ.

ಭಾರತ-ಆಸೀಸ್ ನಡುವಿನ ಮೊದಲ ಟಿ20 ಪಂದ್ಯವು ಅಕ್ಟೋಬರ್-29ರಂದು ಕ್ಯಾನ್‌ಬೆರಾದಲ್ಲಿ ನಡೆಯಲಿದೆ. ಎರಡನೇ ಟಿ20 ಪಂದ್ಯವು ಮೆಲ್ಬರ್ನ್‌ನಲ್ಲಿ ನಿಗದಿಯಾಗಿದೆ. ಮೂರನೇ ಟಿ20 ಪಂದ್ಯವು ನವೆಂಬರ್ 2ರಂದು, ನಾಲ್ಕನೇ ಟಿ20 ಪಂದ್ಯವು ನವೆಂಬರ್ 4ರಂದು ಮತ್ತು ಕೊನೆಯ ಏಕದಿನ ಪಂದ್ಯವು ನವೆಂಬರ್-6ರಂದು ನಿಗದಿಯಾಗಿದೆ.

ಆಸ್ಟ್ರೇಲಿಯಾದ ಮಾಜಿ ನಾಯಕ ಕಮ್ಮಿನ್ಸ್ ಭಾರತ ತಂಡದ ವಿರುದ್ಧ 21 ಏಕದಿನ ಪಂದ್ಯಗಳಲ್ಲಿ 28 ವಿಕೆಟ್ ಗಳಿಸಿದ್ದಾರೆ. ಹೀಗಾಗಿ ಅವರ ಅನುಪಸ್ಥಿತಿ ಆಸೀಸ್ ಗೆ ದೊಡ್ಡ ಹೊಡೆತವಾಗಲಿದೆ. ಅಲ್ಲದೆ ಅವರು ಮುಂಬರುವ ಆ್ಯಶಸ್ ಸರಣಿಯನ್ನೂ ಕಳೆದುಕೊಳ್ಳುವ ಸಾಧ್ಯತೆ ಇದೆ.

ಇತ್ತೀಚೆಗೆ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ನಾಲ್ಕು ಪಂದ್ಯಗಳಲ್ಲಿ 95.1 ಓವರ್‌ಗಳನ್ನು ಬೌಲ್ ಮಾಡಿದ ನಂತರ ಕಮ್ಮಿನ್ಸ್ ಅವರಿಗೆ ಬೆನ್ನುನೋವು ಕಾಣಿಸಿಕೊಂಡಿತ್ತು.

ಕಮ್ಮಿನ್ಸ್ ಕ್ರಿಕೆಟ್ ಸಾಧನೆ

ಕಮ್ಮಿನ್ಸ್ ಇದುವರೆಗೆ 90 ಏಕದಿನ ಪಂದ್ಯಗಳಿಂದ 143 ವಿಕೆಟ್‌ಗಳನ್ನು ಪಡೆದಿದ್ದಾರೆ. ಏಕದಿನ ಪಂದ್ಯದಲ್ಲಿ ಒಂದು ಬಾರಿ ಐದು ವಿಕೆಟ್ ಗೊಂಚಲು ಪಡೆದಿದ್ದಾರೆ. ಟಿ20ಯ 57 ಪಂದ್ಯಗಳಿಂದ 66 ವಿಕೆಟ್‌ಗಳನ್ನು ಪಡೆದಿದ್ದಾರೆ. ಇದರಲ್ಲಿ 3/15 ರ ಅತ್ಯುತ್ತಮ ಬೌಲಿಂಗ್ ಅಂಕಿ-ಅಂಶವಾಗಿದೆ.

ಸೊಂಟದ ಮೂಳೆಯಲ್ಲಿ ಒತ್ತಡ ಹೆಚ್ಚಾಗಿದೆ ಎಂದು ಸ್ಕ್ಯಾನಿಂಗ್ ವರದಿಗಳಿಂದ ತಿಳಿದುಬಂದಿದೆ. ಆ್ಯಶಸ್ ಸರಣಿಗೆ ಮುಂಚಿತವಾಗಿ ಗಾಯಕ್ಕೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದೆ ಎಂದು ಆಸ್ಟ್ರೇಲಿಯಾ ತಂಡ ಹೇಳಿದೆ.

ಬೆನ್ನುನೋವಿನಿಂದ ಚೇತರಿಸಿಕೊಳ್ಳುತ್ತಿದ್ದ ಕಮ್ಮಿನ್ಸ್ ಅವರಿಗೆ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಸೀಮಿತ ಓವರ್‌ಗಳ ಸರಣಿಗೂ ವಿಶ್ರಾಂತಿ ನೀಡಲಾಗಿದೆ.

ಯುಎಸ್ ಓಪನ್: ಕೊಕೊ ಗಾಫ್‌ಗೆ ಸೋಲು

ಒಸಾಕಾ ಕ್ವಾ. ಫೈನಲ್‌ಗೆ

ನ್ಯೂಯಾರ್ಕ್: ಇಲ್ಲಿ ಮಂಗಳವಾರ ನಡೆದ ಯುಎಸ್ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗ ನಾಲ್ಕನೇ ಸುತ್ತಿನ ಪಂದ್ಯದಲ್ಲಿ, ಜಪಾನಿನ ನವೋಮಿ ಒಸಾಕಾ ಅವರು ಟೂರ್ನಿಯ ಅತ್ಯಂತ ಬಲಿಷ್ಠ ಹಾಗೂ ವಿಶ್ವ ಮೂರನೇ ಶ್ರೇಯಾಂಕಿತೆ ಅಮೆರಿಕದ ಕೊಕೊ ಗಾಫ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸುವ ಮೂಲಕ ತನ್ನ ಹಳೆಯ ಲಯ ಕಳೆದುಕೊಂಡರು.

ಗಾಫ್ ವಿರುದ್ಧ ಒಸಾಕ 6-3, 6-2 ನೇರ ಸೆಟ್‌ಗಳ ಗೆಲುವು ಸಾಧಿಸಿ ಬರೋಬ್ಬರಿ 1658 ದಿನಗಳ ಬಳಿಕ ಗ್ರ್ಯಾಂಡ್‌ಸ್ಲಾಮ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಒಟ್ಟು 4 ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಒಸಾಕ ಕೊನೆಯ ಬಾರಿಗೆ 2021ರ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಗೆದ್ದಿದ್ದರು. ಇದಾದ ಬಳಿಕ ಗಾಯ ಮತ್ತು ಫಿಟ್ನೆಸ್ ಸಮಸ್ಯೆಯಿಂದ ಅವರು ಕಳಪೆ ಪ್ರದರ್ಶನ ತೋರುವ ಮೂಲಕ ನಿರಾಸೆ ಎದುರಿಸಿದ್ದರು.

ಆರಂಭದಿಂದಲೇ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಒಸಾಕಾ ತನ್ನ ಹಳೆಯ ಲಯವನ್ನು ಮತ್ತೆ ಪ್ರದರ್ಶಿಸಿದರು. 2023ರ ಚಾಂಪಿಯನ್ ಗೌಫ್ ತನ್ನ ಸರ್ವ್ ಮತ್ತು ಫೋರ್‌ಹ್ಯಾಂಡ್ ಎರಡರಲ್ಲೂ ಹೆಣಗಾಡಿದರು.

ವಿಶ್ವದ 3ನೇ ಹಾಗೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ್ತಿ ಗಾಫ್‌ಗೆ ಬಲವಾದ ಸೋಲಿನ ಪೆಟ್ಟು ನೀಡಿರುವ ಕಾರಣ ಒಸಾಕಾ ಕೂಡ ಪ್ರಶಸ್ತಿ ರೇಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಕಾಮನ್‌ವೆಲ್ತ್ ಕೂಟದ ಆತಿಥ್ಯ: ಭಾರತ-ನೈಜೀರಿಯಾ ಪೈಪೋಟಿ

ಲಂಡನ್: 2030ರ ಕಾಮನ್‌ವೆಲ್ತ್ ಕ್ರೀಡೆಗಳ ಆತಿಥ್ಯದ ವಹಿಸಲು ಭಾರತದ ಜತೆಗೆ ನೈಜೀರಿಯಾ ಕೂಡ ಅಧಿಕೃವಾಗಿ ಬಿಡ್ ಸಲ್ಲಿಸಿದ್ದು, ಹೀಗಾಗಿ ಕ್ರೀಡಾಕೂಟವನ್ನು ಆಯೋಜಿಸಲು ಉಭಯ ದೇಶಗಳ ಮಧ್ಯೆ ಸ್ಪರ್ಧೆ ಏರ್ಪಟ್ಟಿದೆ. ಎರಡೂ ದೇಶಗಳು ತಮ್ಮ ಔಪಚಾರಿಕ ಪ್ರಸ್ತಾವನೆಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸಿವೆ ಎಂದು ಕಾಮನ್‌ವೆಲ್ತ್ ಒಕ್ಕೂಟ ಮಂಗಳವಾರ ಘೋಷಿಸಿದೆ.

ಕಾಮನ್‌ವೆಲ್ತ್ ಕ್ರೀಡಾ ಅಧ್ಯಕ್ಷ ಡಾ. ಡೊನಾಲ್ಡ್ ರುಕರೆ ಎರಡೂ ದೇಶಗಳ ದಿಟ್ಟ ದೃಷ್ಟಿಕೋನವನ್ನು ಶ್ಲಾಘಿಸಿದರು. ಭಾರತ ಮತ್ತು ನೈಜೀರಿಯಾ ಕ್ರೀಡಾ ಶಕ್ತಿ ಕೇಂದ್ರಗಳಾಗಿವೆ ಎಂದು ಅವರು ಹೇಳಿದರು.

ತಜ್ಞರ ಮೌಲ್ಯಮಾಪನ ಆಯೋಗವು ಬಿಡ್‌ಗಳನ್ನು ಪರಿಶೀಲಿಸಿ, ಈ ತಿಂಗಳ ಕೊನೆಯಲ್ಲಿ ಲಂಡನ್‌ನಲ್ಲಿ ಎರಡೂ ದೇಶಗಳೊಂದಿಗೆ ಸಭೆ ಸೇರಲಿದೆ. ಅಂತಿಮ ನಿರ್ಧಾರವನ್ನು ನವೆಂಬರ್‌ನಲ್ಲಿ ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ನಡೆಯುವ ಕಾಮನ್‌ವೆಲ್ತ್ ಕ್ರೀಡಾ ಸಾಮಾನ್ಯ ಸಭೆಯಲ್ಲಿ ತೆಗೆದುಕೊಳ್ಳಲಾಗುತ್ತದೆ.

ಭಾರತವು ಇತ್ತೀಚಿನ ಕ್ರೀಡಾ ಯಶಸ್ಸಿನಿಂದ ಮಿಂಚುತ್ತಿರುವುದರಿಂದ, 2030ರ ಕ್ರೀಡಾಕೂಟವನ್ನು ಆಯೋಜಿಸುವುದು ದೇಶಾದ್ಯಂತದ ಯುವ ಕ್ರೀಡಾಪಟುಗಳು ಮತ್ತು ಕ್ರೀಡಾ ಅಭಿಮಾನಿಗಳಿಗೆ ದಿಕ್ಕನ್ನೇ ಬದಲಾಯಿಸಬಹುದು ಎಂದು ಅಭಿಪ್ರಾಯಪಟ್ಟಿದೆ. ಭಾರತ ಈ ಹಿಂದೆ ಒಮ್ಮೆ 2010ರಲ್ಲಿ ಕಾಮನ್‌ವೆಲ್ತ್ ಕೂಟದ ಆತಿಥ್ಯ ವಹಿಸಿತ್ತು.

ಪಂಜಾಬ್ ಪ್ರವಾಹ: ದುಃಖ ವ್ಯಕ್ತಪಡಿಸಿದ ಗಿಲ್

ಚಂಡೀಗಢ: ಪಂಜಾಬ್‌ನಲ್ಲಿ ಕಂಡುಕೇಳರಿಯದ ಮಳೆಯ ಪ್ರವಾಹಕ್ಕೆ ಉಂಟಾದ ಪರಿಸ್ಥಿತಿಯ ಬಗ್ಗೆ ಭಾರತ ಕ್ರಿಕೆಟ್ ತಂಡದ

ಯುವ ಆಟಗಾರ ಶುಭಮನ್ ಗಿಲ್ ಸಾಮಾಜಿಕ ಮಾಧ್ಯಮದಲ್ಲಿ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ನೈಸರ್ಗಿಕ ವಿಕೋಪದ ವಿರುದ್ಧ ಹೋರಾಡುತ್ತಿರುವ ತಮ್ಮ ರಾಜ್ಯದ ಜನರಿಗೆ ಶಕ್ತಿ ನೀಡಲಿ ಎನ್ನುವ ಭಾವನಾತ್ಮಕ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದಾರೆ. ನನ್ನ ಪಂಜಾಬ್ ಪ್ರವಾಹದಿಂದ ಧ್ವಂಸಗೊಂಡಿರುವುದನ್ನು ನೋಡಿ ಹೃದಯ ವಿದ್ರಾವಕವಾಗಿದೆ. ಪಂಜಾಬ್ ಯಾವಾಗಲೂ ಯಾವುದೇ ಪ್ರತಿಕೂಲ ಪರಿಸ್ಥಿತಿಗಿಂತ ಬಲಿಷ್ಠವಾಗಿರುತ್ತದೆ ಮತ್ತು ನಾವು ಇದರಿಂದ ಮೇಲೇಳುತ್ತೇವೆ. ನನ್ನ ಪ್ರಾರ್ಥನೆಗಳು ಎಲ್ಲಾ ಪೀಡಿತ ಕುಟುಂಬಗಳೊಂದಿಗೆ ಇವೆ. ನನ್ನ ಜನರೊಂದಿಗೆ ಬಲವಾಗಿ ನಿಲ್ಲುತ್ತೇನೆ ಎಂದು ಗಿಲ್ ಎಕ್ಸ್‌ನಲ್ಲಿ ತಮ್ಮ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಟೀಮ್ ಇಂಡಿಯಾ ಪ್ರಾಯೋಜಕತ್ವಕ್ಕೆ ಬಿಡ್

ದೆಹಲಿ: ಡ್ರೀಮ್ 11 ಫ್ಯಾಂಟಸಿ ಸ್ಪೋರ್ಟ್ಸ್ ಕಂಪನಿಯು ತನ್ನ ಒಪ್ಪಂದದಿಂದ ಹಿಂದೆ ಸರಿದ ಬೆನ್ನಲ್ಲೇ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹೊಸ ಪ್ರಾಯೋಜಕತ್ವಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು, ಹಕ್ಕುಗಳಿಗಾಗಿ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ. ಇದೇ ವೇಳೆ ಕ್ರಿಪ್ಟೋ ಮತ್ತು ಆನ್‌ಲೈನ್ ಹಣದ ಗೇಮಿಂಗ್ ಸಂಸ್ಥೆಗಳು ಲೀಡ್ ಪ್ರಾಯೋಜಕತ್ವಕ್ಕೆ ಅರ್ಜಿ ಸಲ್ಲಿಸುವುದನ್ನು ಬಿಸಿಸಿಐ ನಿಷೇಧಿಸಿದೆ. ಬಿಡ್‌ಗಳನ್ನು ಸಲ್ಲಿಸಲು ಸೆಪ್ಟೆಂಬರ್ 16 ಕೊನೆಯ ದಿನಾಂಕವಾಗಿದೆ.

ಆನ್‌ಲೈನ್ ಗೇಮಿಂಗ್ ಮೇಲೆ ಕೇಂದ್ರ ಸರಕಾರ ನಿಷೇಧ ಹೇರಿದ ಬೆನ್ನಲ್ಲೇ ತನ್ನ ಚಟುವಟಿಕೆಗಳನ್ನು ನಿಲ್ಲಿಸಿರುವ ಡ್ರೀಮ್ 11 ಬಿಸಿಸಿಐ ಜತೆ ಮಾಡಿಕೊಂಡಿದ್ದ ರು.381 ಕೋಟಿ ಮೌಲ್ಯದ ಒಪ್ಪಂದ ಮುರಿದು ಬಿದ್ದಿತ್ತು.

ದೇಶದ ಅತಿದೊಡ್ಡ ಆನ್‌ಲೈನ್ ಗೇಮಿಂಗ್ ಪ್ಲಾಟ್‌ಫಾರ್ಮ್ ಆಗಿರುವ ಡ್ರೀಮ್ 11 ಕಂಪನಿಯು 2023ರ ಜುಲೈನಲ್ಲಿ ಮೂರು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿತ್ತು. ಹೀಗಾಗಿ ಭಾರತ ಪುರುಷ ಮತ್ತು ಮಹಿಳಾ ರಾಷ್ಟ್ರೀಯ ತಂಡಗಳ ಆಟಗಾರರ ಜೆರ್ಸಿ ಮೇಲೆ ಡ್ರೀಮ್ 11 ಲೋಗೊ ಮುದ್ರಿಸಲಾಗಿತ್ತು, ಅಲ್ಲದೆ ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಕೆಲ ಫ್ಯಾಂಚೈಸಿಗೂ ಪ್ರಾಯೋಜಕತ್ವ ನೀಡಿತ್ತು.

ಸೆಪ್ಟೆಂಬರ್ 9ರಿಂದ ಪ್ರಾರಂಭವಾಗುವ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಭಾರತೀಯ ಪುರುಷರ ಕ್ರಿಕೆಟ್ ತಂಡವು ಪ್ರಮುಖ ಪ್ರಾಯೋಜಕರಿಲ್ಲದೆ ಆಡಲಿದೆ. ಸೆಪ್ಟೆಂಬರ್ ಮಧ್ಯದಲ್ಲಿ ಹೊಸ ಪ್ರಾಯೋಜಕರು ಆಯ್ಕೆಯಾಗುವ ಸಾಧ್ಯತೆ ಇದೆ. ಸೆ.30ರಿಂದ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿ ಆರಂಭಗೊಳ್ಳಲಿದೆ.

ಮೂಲಗಳ ಪ್ರಕಾರ ಟೊಯೋಟಾ ಮೋಟಾರ್ ಕಾರ್ಪೊರೇಷನ್ ಸೇರಿದಂತೆ ಎರಡು ಕಂಪನಿಗಳು ಪ್ರಾಯೋಜಕರಾಗಲು ಆಸಕ್ತಿ ತೋರಿಸಿವೆ ಎಂದು ತಿಳಿದುಬಂದಿದೆ. ಟೊಯೋಟಾ ಕಂಪನಿ ಪ್ರಸಕ್ತ ಇಂಗ್ಲೆಂಡ್ ಕ್ರಿಕೆಟ್ ತಂಡದ ಜೆರ್ಸಿ ಪ್ರಾಯೋಜಕ ಹೊಂದಿದೆ. ಈ ಮುನ್ನ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಜೆರ್ಸಿ ಪ್ರಾಯೋಜಕತ್ವವನ್ನೂ ಹೊಂದಿತ್ತು.

ಫಿಡೆ ಚೆಸ್ ರ‍್ಯಾಂಕಿಂಗ್ ಪ್ರಕಟ | ಗುಕೇಶ್‌ಗೆ 6ನೇ ಸ್ಥಾನ

ಪ್ರಜ್ಞಾನಂದ: ಜೀವನಶ್ರೇಷ್ಠ ಪ್ರಗತಿ

ದೆಹಲಿ: ನೂತನ ಫಿಡೆ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತದ ಆರ್. ಪ್ರಜ್ಞಾನಂದ ವೃತ್ತಿಜೀವನದ ಗರಿಷ್ಠ 2785 ರೇಟಿಂಗ್ ಹೊಂದಿದ್ದು ಕ್ರಮಾಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ. ಕಳೆದ ತಿಂಗಳು ನಡೆದಿದ್ದ ಸಿಂಕ್ವೆಫೀಲ್ಡ್ ಕಪ್ ಟೂರ್ನಿಯಲ್ಲಿ ಆರು ರೇಟಿಂಗ್ ಪಾಯಿಂಟ್ಸ್ ಪಡೆದು 2ನೇ ಸ್ಥಾನ ಗಿಟ್ಟಿಸಿದ ಹಿನ್ನಲೆಯಲ್ಲಿ ಪ್ರಜ್ಞಾನಂದ ರ‍್ಯಾಂಕಿಂಗ್‌ನಲ್ಲಿ ಪ್ರಗತಿ ಸಾಧಿಸಿದರು. ಭಾರತದ ಗರಿಷ್ಠ ರ‍್ಯಾಂಕ್‌ನ ಕ್ಲಾಸಿಕಲ್ ಆಟಗಾರನೆಂಬ ಹೆಗ್ಗಳಿಕೆಗೂ ಪಾತ್ರರಾದರು. ಭಾರತದ ಇತರ ಆಟಗಾರರಲ್ಲಿ ಅರ್ಜುನ್ ಎರಿಗೈಸಿ 5ನೇ ಸ್ಥಾನ (2771), ಹಾಲಿ ವಿಶ್ವಚಾಂಪಿಯನ್ ಡಿ. ಗುಕೇಶ್(2767) 6ನೇ ಸ್ಥಾನದಲ್ಲಿದ್ದಾರೆ.

ನಾರ್ವೆಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಕಾರ್ಲ್‌ಸನ್ ನಂತರ ಅಮೆರಿಕದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಹಿಕಾರು ನಕಮುರ ಹಾಗೂ ಫ್ಯಾಬಿಯೊ ಕರುವಾನಾ ಕ್ರಮವಾಗಿ 2ನೇ ಹಾಗೂ 3ನೇ ಸ್ಥಾನದಲ್ಲಿದ್ದಾರೆ.

2025ರ ಆವೃತ್ತಿಯ ಚೆನ್ನೈ ಮಾಸ್ಟರ್ಸ್ ಟೂರ್ನಿಯಲ್ಲಿ ಪ್ರಾಬಲ್ಯ ಮೆರೆದಿದ್ದ ಜರ್ಮನಿಯ ವಿನ್ಸೆಂಟ್ ಕೀಮರ್ 21 ರೇಟಿಂಗ್ ಪಾಯಿಂಟ್ಸ್ ಪಡೆದು ರ‍್ಯಾಂಕಿಂಗ್‌ನಲ್ಲಿ ಗಮನಾರ್ಹ ಪ್ರಗತಿಯೊಂದಿಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಟಾಪ್-10ರಲ್ಲಿ ಸ್ಥಾನ ಪಡೆದಿದ್ದಾರೆ. ಸಿಂಕ್ವೆಫೀಲ್ಡ್ ಕಪ್‌ನಲ್ಲಿ ತನ್ನ 2ನೇ ಪ್ರಶಸ್ತಿಯನ್ನು ಜಯಿಸಿದ್ದ ವೆಸ್ಲೆ ಸೋ ಅವರು ಕ್ಲಾಸಿಕಲ್ ರ‍್ಯಾಂಕಿಂಗ್‌ನಲ್ಲಿ ವಿಶ್ವದ 7ನೇ ರ‍್ಯಾಂಕಿಗೆ ಜಿಗಿದಿದ್ದಾರೆ.

ಮಹಿಳೆಯರ ಕ್ಲಾಸಿಕಲ್ ಯಾಂಕಿಂಗ್‌ನಲ್ಲಿ ಹೌ ಯಿಫಾನ್ ತನ್ನ ನಂ.1 ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಭಾರತೀಯ ಚೆಸ್ ತಾರೆ ಕೊನೆರು ಹಂಪಿ ವಿಶ್ವ ಯಾಂಕಿಂಗ್‌ನಲ್ಲಿ 6ನೇ ಸ್ಥಾನ ಪಡೆದಿದ್ದಾರೆ.

ವಿಟಾಕೀಸ್

ಬ್ರದರ್ ಹೇಳಿದ ಹಳೇ ಸನ್ಯಾಸಿ ಹಾಡು

ಕಂಗ್ರಾಜುಲೇಷನ್ಸ್ ಬ್ರದರ್ ಈ ಡೈಲಾಗ್ ಸೋಷಿಯಲ್ ಮೀಡಿಯಾದಲ್ಲಿ ಸಖತ್ ಸದ್ದು ಮಾಡಿತ್ತು. ಈಗ ಇದೇ ಶೀರ್ಷಿಕೆಯಲ್ಲಿ ಸಿನಿಮಾ ಸಿದ್ಧವಾಗಿದೆ. ಕಲ್ಲೂರ್ ಸಿನಿಮಾಸ್, ಪೆನ್. ಎನ್.ಪೇಪರ್ ಸ್ಟುಡಿಯೊಸ್ ಹಾಗೂ ಸ್ಕ್ರೀನ್ ಫಸ್ಟ್ ಪ್ರೊಡಕ್ಷನ್ ಲಾಂಛನದಲ್ಲಿ ಪ್ರಶಾಂತ್ ಕಲ್ಲೂರ್ ನಿರ್ಮಿಸಿರುವ ಈ ಚಿತ್ರವನ್ನು ಪ್ರತಾಪ್ ಗಂಧರ್ವ ನಿರ್ದೇಶಿಸಿದ್ದಾರೆ. ನಟ ರಕ್ಷಿತ್ ನಾಗ್ ನಾಯಕನಾಗಿ ಅಭಿನಯಿಸಿದ್ದು, ಸಂಜನಾ ದಾಸ್ ಮತ್ತು ಅನುಷಾ ನಾಯಕಿಯಾಗಿ ನಟಿಸಿದ್ದಾರೆ. ಹಿರಿಯ ನಟ ಶಶಿಕುಮಾರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯ ಈ ಚಿತ್ರದ ಹಳೇ ಸನ್ಯಾಸಿ.. ಎಂಬ ಹಾಡು ಬಿಡುಗಡೆಯಾಗಿದೆ. ನಟಿ ರಾಗಿಣಿ ದ್ವಿವೇದಿ, ರಾಜವರ್ಧನ್, ವಿಕ್ಕಿ ವರುಣ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ರಕ್ಷಿತ್ ನಾಗ್ ಸಾಹಿತ್ಯ ಬರೆದಿರುವ ಈ ಹಾಡಿಗೆ ಸೂರಜ್ ಜೋಯಿಸ್ ಸಂಗೀತ ಸಂಯೋಜಿದ್ದಾರೆ. ನಿರ್ದೇಶಕ ಜೋಗಿ ಪ್ರೇಮ್ ದನಿಯಲ್ಲಿ ಈ ಹಾಡು ಮಧುರವಾಗಿ ಮೂಡಿಬಂದಿದೆ.

ನನ್ನ ಅಭಿನಯದ ಬಿಚ್ಚುಗತ್ತಿ ಚಿತ್ರಕ್ಕೆ ಸಂತು ಅವರೆ ನಿರ್ದೇಶಕ. ಅವರ ಕಾರ್ಯವೈಖರಿ ನೋಡಿದ್ದೇನೆ. ಅವರೇ ಈ ಸಿನಿಮಾಗೂ ಕಥೆ ಬರೆದಿರುವುದು ಸಿನಿಮಾದ ಬಗ್ಗೆ ಸಹಜವಾಗಿ ಕುತೂಹಲ ಮೂಡಿಸಿದೆ ಎಂದು ನಟ ರಾಜವರ್ಧನ್ ಹೇಳಿದರು.

ಚಿತ್ರದದಲ್ಲಿ ನಟಿಸಿದ್ದು ಖುಷಿಕೊಟ್ಟಿದೆ, ನಮ್ಮ ಸಿನಿಮಾದ ಕಥೆ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರಿಗೂ ಕನೆಕ್ಟ್ ಆಗಲಿದೆ. ಸಿನಿಮಾದ ನೋಡಿ ಹೊರ ಬಂದ ಮೇಲೂ ಕಂಗ್ರಾಜುಲೇಷನ್ಸ್ ಬ್ರದರ್ ಕಾಡಲಿದೆ ಎಂದು ನಟ ರಕ್ಷಿತ್ ನಾಗ್ ತಿಳಿಸಿದರು. ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ಗುರು ಛಾಯಾಗ್ರಹಣ, ಈ ಚಿತ್ರಕ್ಕಿದೆ.

> **ಕಂಗ್ರಾಜುಲೇಷನ್ಸ್ ಬ್ರದರ್ ಈ ಡೈಲಾಗ್ ಸಖತ್ ವೈರಲ್ ಆಗಿತ್ತು, ಹಾಸ್ಯ ಸನ್ನಿವೇಶಗಳಲ್ಲಿ ಈ ಡೈಲಾಗ್ ಹೆಚ್ಚಾಗಿ ಬಳಕೆಯಾಗಿತ್ತು. ನಮ್ಮ ಸಿನಿಮಾದ ಕಥೆಯೂ ಕಾಮಿಡಿಯಲ್ಲಿ ಸಾಗುತ್ತದೆ. ಹಾಗಾಗಿ ಇದೇ ಶೀರ್ಷಿಕೆಯಲ್ಲಿ ಆಯ್ದುಕೊಂಡೆವು. ನಮ್ಮ ಚಿತ್ರ ಮನರಂಜನಾತ್ಮಕವಾಗಿ ಮೂಡಿಬಂದಿದ್ದು, ಎಲ್ಲರಿಗೂ ಹಿಡಿಸಲಿದೆ.**
>
> -ಪ್ರತಾಪ್ ಗಂಧರ್ವ ನಿರ್ದೇಶಕ

ಅಮಲಾಮೃತದ ಸುಮಧುರ ಗಾನ

ಭಕ್ತಿ ಪ್ರಧಾನ ಕಥೆಯ ಅಮಲಾಮೃತ ಸಿನಿಮಾದ ಹಾಡುಗಳು ಬಿಡುಗಡೆಯಾಗಿವೆ. ಪೇಜಾವರಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸಿರಿ ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಎಂ.ಎಸ್. ಗುರುರಾಜರಾವ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕೆ.ಎಸ್.ಗೋವಿಂದರಾಮ ರಾವ್ ಮುಖ್ಯ ಪಾತ್ರದಲ್ಲಿ ನಟಿಸಿದ್ದು, ಬಾಹ್ಲೀಕರಾಜ, ವ್ಯಾಸರಾಜ ಹಾಗೂ ರಾಘವೇಂದ್ರ ಸ್ವಾಮಿಗಳಾಗಿ ಅಭಿನಯಿಸಿದ್ದಾರೆ. ಉಳಿದಂತೆ ವೀರೇಂದ್ರ ಆಚಾರ್ಯ, ಸುಬ್ಬರಾವ್, ಮಾಸ್ಟರ್ ಸುಚೇಂದ್ರ, ಚೈತ್ರಾ ಭಾರದ್ವಾಜ್,

ಯಶಸ್, ಸುಮನ್, ದೀಪಕ್, ಶ್ರೀಕಾಂತ್ ಮುಂತಾದವರು ನಟಿಸಿದ್ದಾರೆ. ಹರಿದಾಸರ ಎಂಟು ಸಾಹಿತ್ಯಕ್ಕೆ ರತ್ನ ಪ್ರಸಾದ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಪ್ರದೀಪ್, ಸಂಕಲನ ಸ್ವಾಮಿ ಅವರದಾಗಿದೆ.

ಈ ಹಿಂದೆ ಪುರಂದರದಾಸರು ಮತ್ತು ಶ್ರೀ ಪಾದರಾಜರ ಸಾಕ್ಷಚಿತ್ರ ಸಿದ್ದಪಡಿಸಿದ್ದೆ. ಇದರ ಅನುಭವದಿಂದಲೇ ಅಮಲಾಮೃತ ಸಿನಿಮಾವನ್ನು ನಿರ್ಮಿಸಿ, ನಿರ್ದೇಶಿಸಿದ್ದೇನೆ. ಅಮಲಾ ಮತ್ತು ಅಮೃತ ಇವರೆಡು ಅ ಅಕ್ಷರದಿಂದ ಕೂಡಿದೆ. ನವ ಭಕುತಿಯ ಜ್ಞಾನಯಜ್ಞದ ಫಲಕ್ಕೆ ಅಮಲ ಅಂತಲೂ, ಸಾರಕ್ಕೆ ಅಮೃತ ಎಂದು ಕರೆಯುತ್ತಾರೆ. ನವಭಕುತಿ ಅಂದರೆ ಸಾಕ್ಷಾತ್ ಭಗವಂತನು ವೈಷ್ಣವ ತತ್ವದಲ್ಲಿ ನೀಡಿದ ಆದೇಶ. ಭಕ್ತಿಯಿಂದ ಅರವತ್ತ ನಾಲ್ಕು ವಿದ್ಯೆಗಳನ್ನು ಕಲಿತವರು ಶ್ರೀರಾಘವೇಂದ್ರ ಸ್ವಾಮಿಗಳು. ಅವರು ಪೂರ್ವಪರದಲ್ಲಿ ಐದು ಅವತಾರಗಳಲ್ಲಿ ಕಾಣಿಸಿಕೊಂಡಿದ್ದರು. ಕರ್ಮಜದೇವತೆ, ಭಕ್ತ ಪ್ರಹ್ಲಾದ, ಬಾಹ್ಲೀಕರಾಜ, ವ್ಯಾಸರಾಜ ಕೊನೆಯದಾಗಿ ಗುರುಸಾರ್ವಭೌಮ. ಇವೆಲ್ಲವು ಹುಟ್ಟಿಕೊಂಡ ಬಗೆ ಹೇಗೆ ಎಂಬುದರ ವಿವರವನ್ನು ತೋರಿಸಲಾಗಿದೆ ಎಂದು ನಿರ್ದೇಶಕ ಗುರುರಾಜರಾವ್ ತಿಳಿಸಿದರು. ರಾಯರ ಸನ್ನಿಧಾನಗಳಾದ ಚನ್ನಪಟ್ಟಣ, ಅಬ್ಬೂರುಪೇಟೆ, ಶ್ರೀರಂಗಂ, ಕುಂಬಕೋಣಂ, ಶ್ರೀ ಮುಷ್ಣಂ, ಮನ್ನಾರ್ ಗುಡಿ, ಚಿಂತಾಮಣಿ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಅಮಲಾಮೃತ ನವೆಂಬರ್‌ನಲ್ಲಿ ತೆರೆಗೆ ಬರಲಿದೆ.

ಬಿಲ್ಲರಂಗ ಭಾಷನ ಹೊಸ ಲುಕ್ ವಾರಿಯರ್ ಅವತಾರದಲ್ಲಿ ಕಿಚ್ಚ

ಕಿಚ್ಚ ಸುದೀಪ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ, ಕಿಚ್ಚನ ಹುಟ್ಟುಹಬ್ಬಕ್ಕೆ ಗಣ್ಯರು, ಅಭಿಮಾನಿಗಳು ಶುಭಕೋರಿ ಸಂಭ್ರಮಿಸಿದ್ದಾರೆ. ಸುದೀಪ್ ಅವರ ಬರ್ತ್‌ಡೇ ಪ್ರಯುಕ್ತ ಅಭಿಮಾನಿಗಳಿಗೆ ವಿಶೇಷ ಉಡುಗೊರೆಯೂ ಸಿಕ್ಕಿದೆ. ಸುದೀಪ್ ಅಭಿನಯದ ಕೆ 47 ಚಿತ್ರದ ಶೀರ್ಷಿಕೆ ರಿವಿಲ್ ಆಗಿತ್ತು. ಮಾರ್ಕ್ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಚಿತ್ರದ ಗ್ಲಿಂಪ್ಸ್ ನೋಡಿ ಸಿನಿಪ್ರಿಯರು ಖುಷಿಯಾಗಿದ್ದರು. ಈಗ ಬಹುನಿರೀಕ್ಷಿತ ಬಿಲ್ಲರಂಗ ಭಾಷ ಚಿತ್ರದ ಪೋಸ್ಟರ್ ಕೂಡ ರಿಲೀಸ್ ಆಗಿದೆ. ಪೋಸ್ಟರ್‌ನಲ್ಲಿ ಕಿಚ್ಚ ವಾರಿಯರ್ ಅವತಾರ ತಾಳಿದ್ದು, ವಿಭಿನ್ನವಾಗಿ ಕಂಗೊಳಿಸಿದ್ದಾರೆ. ಕೈಯಲ್ಲಿ ರಾಕೆಟ್ ಲಾಂಚರ್ ಹಿಡಿದಿದ್ದು, ಬೆನ್ನಿಗೆ ಕತ್ತಿ ಸಿಕ್ಕಿಸಿಕೊಂಡಿದ್ದಾರೆ. ಹಣೆಗೆ ಧರಿಸಿರುವ ಕನ್ನಡಕ, ಮುಂಭಾಗದಲ್ಲಿ ಕೆಂಪು ಬಣ್ಣದ ಬಾವುಟ ಕೂಡ ಗಮನಸೆಳೆಯುತ್ತಿದೆ. ಹಳೆಯ ಕಾಲದ ಯುದ್ಧ ವಿಮಾನವೊಂದರ

ಚಿತ್ರವೂ ಇದೆ. ಇದೆಲ್ಲದರ ಜತೆಗೆ ಪೋಸ್ಟರ್‌ನಲ್ಲಿ ಕ್ರಾಂತಿಕಾರನ ಕೊಲ್ಲಬಹುದು ಕ್ರಾಂತಿಯನಲ್ಲ ಎಂಬ ಸಾಲು ಕುತೂಹಲ ಮೂಡಿಸುತ್ತದೆ. ಇದೆಲ್ಲವನ್ನು ಗಮನಿಸಿದರೆ ನಾಯಕ ಯಾವುದೋ ದೊಡ್ಡ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುವ ಕ್ರಾಂತಿಕಾರಿ ಎಂಬುದು ತಿಳಿಯುತ್ತದೆ. ಇದು ಐವತ್ತು ಅರವತ್ತರ ದಶಕದ ಸ್ಟೋರಿಯಾಗಿದ್ದು, ರೆಟ್ರೋ ಲುಕ್‌ನಲ್ಲಿ ಸಾಗಲಿದೆ ಎಂಬುದು ಮನದಟ್ಟಾಗುತ್ತದೆ. ಸುದೀಪ್ ಈ ಚಿತ್ರದಲ್ಲಿ ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ. ಸದ್ಯ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ಒಂದೇ ಶೇಡ್ ಇದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪೋಸ್ಟರ್ ರಿಲೀಸ್ ಆಗಲಿದೆ.

ವಿಕ್ರಾಂತ್ ರೋಣ ಸಿನಿಮಾದ ಬಳಿಕ ನಿರ್ದೇಶಕ ಅರೂಪ್ ಭಂಡಾರಿ ಹಾಗೂ ಸುದೀಪ್, ಬಿಲ್ಲರಂಗ ಭಾಷ ಚಿತ್ರದ ಮೂಲಕ ಮತ್ತೆ ಒಂದಾಗಿದ್ದು, ಈ ಸಿನಿಮಾ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಬಿಲ್ಲರಂಗ ಭಾಷ ಚಿತ್ರದಲ್ಲಿ ಸುದೀಪ್ ಜತೆಗೆ ದೊಡ್ಡ ತಾರಾಬಳಗವೇ ಇರಲಿದೆ. ಇದು ಹೈಬಜೆಟ್ ಸಿನಿಮಾವಾಗಿದ್ದು ಅದ್ದೂರಿಯಾಗಿ ಮೂಡಿಬರುತ್ತಿದೆ. ಬೆಂಗಳೂರಿನಲ್ಲಿ ಶೂಟಿಂಗ್ ಮುಗಿಸಿದ ಸಿನಿಮಾ ತಂಡ ಹೈದರಾಬಾದ್‌ನಲ್ಲಿ ಬೃಹತ್ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸುತ್ತಿದೆ. ಬಿಲ್ಲರಂಗ ಭಾಷ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗುತ್ತಿದೆ.

ಸೀಟ್ ಎಡ್ಜ್‌ನಲ್ಲಿ ಥ್ರಿಲ್ಲರ್ ಸ್ಟೋರಿ

ಟೈಟಲ್‌ನಲ್ಲಿಯೂ ಕುತೂಹಲ ಮೂಡಿಸಿರುವ ಸೀಟ್ ಎಡ್ಜ್ ತೆರೆಗೆ ಸಿದ್ಧವಾಗುತ್ತಿದೆ. ಡಾರ್ಕ್ ಕಾಮಿಡಿಯ ಜತೆಗೆ ಹಾರರ್-ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬರುತ್ತಿರುವ ಸೀಟ್ ಎಡ್ಜ್ ಸಿನಿಮಾದಲ್ಲಿ ಸಿದ್ದು ಮೂಲಿಮನಿ ನಾಯಕ ನಟನಾಗಿ ನಟಿಸಿದ್ದು, ರವೀಕ್ಷಾ ಶೆಟ್ಟಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ, ರಘು ರಾಮನಕೊಪ್ಪ, ಗಿರೀಶ್ ಶಿವಣ್ಣ, ಮಿಮಿಕ್ರಿ ಗೋಪಿ, ಲಕ್ಷ್ಮಿ ಸಿದ್ದಯ್ಯ, ಕಿರಣ್, ಪುನೀತ್ ಬಾಬು, ತೇಜು ಪೊನ್ನಪ್ಪ, ಮನಮೋಹನ್ ರೈ ಮೊದಲಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಕನ್ನಡದ ಹಲವು ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಚೇತನ್ ಶೆಟ್ಟಿ, ಸೀಟ್ ಎಡ್ಜ್ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.ಎನ್. ಆರ್. ಸಿನಿಮಾ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ಗಿರಿಧರ.ಟಿ.ವಸಂತಪುರ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿರುವ ಸೀಟ್ ಎಡ್ಜ್ ಚಿತ್ರತಂಡ, ವ್ಲಾಗ್-1 ದಿ ಲೂಪ್ ಎಂಬ ಹೆಸರಿನಲ್ಲಿ ಟೀಸರ್ ಮತ್ತು ಕಂಟೆಂಟ್ ಝಲಕ್ ಅನ್ನು ಬಿಡುಗಡೆ ಮಾಡಿದೆ ಚಿತ್ರದ ನಾಯಕ ಯುಟ್ಯೂಬ್ ಬ್ಲಾಗರ್ ಆಗಿದ್ದು, ಏನಾದರೂ ಸಾಧನೆ ಮಾಡಬೇಕೆಂಬ ಪ್ರಯತ್ನದಲ್ಲಿರುತ್ತಾನೆ. ಆದರೆ ತಾನು ಮಾಡುತ್ತಿರುವ ವಿಡಿಯೊಗಳು ಟ್ರೋಲ್ ಆಗಿ ನಗೆಪಾಟಲಿಗೆ ಗುರಿ ಆಗುತ್ತಾನೆ. ಈ ಮಧ್ಯೆ ಒಂದು ಹುಡುಗಿಯ ಜತೆ ಲವ್ ಆಗುತ್ತದೆ, ನಾಯಕ ಮಾಡಿದ ಒಂದು ತಪ್ಪಿನಿಂದ ಲವ್ ಬ್ರೇಕಪ್ ಆಗುತ್ತದೆ, ಒಂದು ಕಡೆ ತಾನು ಪ್ರೀತಿಸಿದ ಹುಡುಗಿಯನ್ನು ಮರಳಿ ಪಡೆಯಬೇಕು ಎಂಬ ಹಠಕ್ಕೆ ಬಿದ್ದ ನಾಯಕ ಘೋಸ್ಟ್ ಸಿಟಿಗೆ ಕಾಲಿಡುತ್ತಾನೆ ಅಲ್ಲಿ ಆತನಿಗೆ ಯಾವೆಲ್ಲಾ ಸಮಸ್ಯೆಗಳು ಎದುರಾಗುತ್ತವೆ ಎಂಬುದನ್ನು ಕಾಮಿಡಿ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಹೇಳಲಾಗಿದೆ.

ನಾನು ಈ ಸಿನಿಮಾದಲ್ಲಿ ಮಧ್ಯಮ ವರ್ಗದ ಕಾಲೇಜು ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನ ಪಾತ್ರ ಎರಡು ಶೇಡ್‌ನಲ್ಲಿ ಸಾಗುತ್ತದೆ. ಘೋಸ್ಟ್ ಹಂಟಿಂಗ್‌ಗೆ ಹೋಗುವ ಯುಟ್ಯೂಬರ್ ಜತೆಗೆ ನಾನು ಕೂಡ ತೆರಳಿ, ತೊಂದರೆಗೆ ಸಿಲುಕಿಕೊಳ್ಳುತ್ತೇನೆ.

> **ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಶೈಲಿಯಲ್ಲಿ ಮೂಡಿಬಂದಿರುವ ಸಿನಿಮಾ. ಈ ಸಿನಿಮಾದಲ್ಲಿ ನಾನು ಯುಟ್ಯೂಬ್ ವ್ಲಾಗರ್ ಆಗಿ ಕಾಣಿಸಿಕೊಂಡಿದ್ದೇನೆ. ಯಾರೂ ಕಾಲಿಡದ ಭಯಾನಕ ಜಾಗವನ್ನು ಪ್ರೇಕ್ಷಕರಿಗೆ ಪರಿಚಯಿಸಬೇಕು ಎಂದು ಹಠಕ್ಕೆ ಬಿದ್ದ ನಾನು, ಘೋಸ್ಟ್ ಟೌನ್‌ಗೆ ಹೋಗಿ ಘೋಸ್ಟ್ ಹಂಟಿಂಗ್ ವೀಡಿಯೊ ಮಾಡಲು ನಿರ್ಧರಿಸುತ್ತೇನೆ. ಅಲ್ಲಿ ಏನೆಲ್ಲಾ ಸಮಸ್ಯೆಗಳು ಕಾಡುತ್ತವೆ ಎಂಬುದನ್ನು ನನ್ನ ಪಾತ್ರದ ಮೂಲಕ ಕಟ್ಟಿಕೊಡಲಾಗಿದೆ.**
>
> -ಸಿದ್ದು ಮೂಲಿಮನಿ ನಟ